# ವಜ್ರದ ಕೊಂಬು

(ವಜ್ರದ ಕೊಂಬು ಮತ್ತು ನೆರಳು ಕಾದಂಬರಿಗಳು)

ಟಿ.ಕೆ. ರಾಮರಾವ್

**ಸೌಮ್ಯ ಎಂ.**

ನಂ. 5/2, 2ನೇ ಮಹಡಿ, 12ನೇ ಕ್ರಾಸ್,

ಶ್ರೀ ರಾಮ ಟೆಂಪಲ್ ಹಿಂದೆ, ಮಾರುತಿ ನಗರ,

ಬೆಂಗಳೂರು – 560 068

***Vajrada Kombu and Neralu*** - two Kannada novels : written by T.K. Ramarao; published by Sowmya M. # 5/2, 2nd Floor, 12th Cross, Behind Sri Rama Temple, Maruthi Nagar, Bangalore - 560 068.

Previous Print : 1983
Present Print : 2015
Copyright © Shakunthala Ramarao

No part of this publication may be reproduced, stored in a retrieval system, or transmitted, in any form or by any means, electronic, mechanical, photo-copying, recording or otherwise, without the prior permission of the publisher.

ಹಿಂದಿನ ಮುದ್ರಣ : 1983
ಪ್ರಸ್ತುತ ಮುದ್ರಣ : 2015
ಉಪಯೋಗಿಸಿದ ಕಾಗದ : 70ಜಿಎಸ್‌ಎಂ ಮ್ಯಾಪ್‌ಲಿಥೊ
ಪುಟಗಳು : 174 ಬೆಲೆ : ರೂ. 125

ಮುಖಪುಟ ವಿನ್ಯಾಸ : ಪಾ.ಸ. ಕುಮಾರ್
ಅಕ್ಷರ ಜೋಡಣೆ : ವಸಂತ ಪ್ರಕಾಶನ
ಮುದ್ರಣ : ಪೂರ್ಣಿಮಾ ಪ್ರಿಂಟರ್ಸ್

# ಪ್ರಕಾಶಕರ ಮಾತು

ಕನ್ನಡದ ಹೆಸರಾಂತ ಕಾದಂಬರಿಕಾರ ಟಿ.ಕೆ. ರಾಮರಾವ್ ಅವರ ಕೃತಿಗಳನ್ನು ಮತ್ತೆ ಓದುಗರಿಗೆ ದೊರಕಿಸಿಕೊಡಬೇಕೆಂಬ ಉದ್ದೇಶ ನಮ್ಮದು. ಪಾತ್ರ ಪುಷ್ಟಿಯಲ್ಲಿ ಕುಶಲತೆ, ಅಪರೂಪದ ಕಥಾವಸ್ತುಗಳ ಆಯ್ಕೆ, ಉದ್ದಕ್ಕೂ ಕುತೂಹಲ ಕಾಯ್ದುಕೊಳ್ಳುವ ಅವರದ್ದೇ ಆದ ವಿಶೇಷ ಬಗೆಯ ನಿರೂಪಣೆ, ಇವುಗಳಿಂದ ಸಾಹಿತ್ಯಪ್ರಿಯರ ನೆನಪಲ್ಲಿ ಆಳವಾಗಿ ನಿಂತವರು ಟಿ.ಕೆ. ರಾಮರಾವ್. ಅವರ 'ಬಂಗಾರದ ಮನುಷ್ಯ' ಕಾದಂಬರಿಯಂತು ಚಲನಚಿತ್ರವಾಗಿಯೂ ಅಪಾರ ಯಶಸ್ಸನ್ನು ಕಂಡಿತಲ್ಲದೆ ಅನೇಕ ಯುವ ಕೃಷಿಕರನ್ನು ಮತ್ತೆ ಕೃಷಿಕಾರ್ಯದತ್ತ ಆಕರ್ಷಿಸಿ ಅವರು ಆ ಕ್ಷೇತ್ರದಲ್ಲಿಯೇ ಅಪಾರ ಯಶಸ್ಸನ್ನು, ಕೀರ್ತಿಯನ್ನು ಗಳಿಸುವಂತೆ ಮಾಡಿತು. ಪತ್ತೇದಾರಿ ಕಾದಂಬರಿ ರಚನೆಯಲ್ಲೂ ರಾಮರಾಯರದು ಸಿದ್ಧಹಸ್ತ.

ಅವರ 'ವಜ್ರದ ಕೊಂಬು' ಮತ್ತು 'ನೆರಳು' ಕಾದಂಬರಿಗಳನ್ನು ಒಟ್ಟಿಗೆ ಇಲ್ಲಿ ನೀಡುತ್ತಿದ್ದೇವೆ.

ವಂದನೆಗಳು.

## ಅರಿಕೆ

## ‘ವಜ್ರದ ಕೊಂಬು’ ಕೃತಿಗೆ

(ಹಿಂದಿನ ಮುದ್ರಣದ ಸಂದರ್ಭದಲ್ಲಿ)

‘ವಜ್ರದ ಕೊಂಬು’ – ಬೊಂಬಾಯಿ ಹಿನ್ನೆಲೆಯಲ್ಲಿ ಶ್ರೀಮಂತ ವರ್ಗದವರ ನಡುವೆ ಸಾಗುವ ಒಂದು ಕುತೂಹಲಕಾರಿ ಮಿನಿ ಕಾದಂಬರಿ. ಇದು 1977ರ ‘ಕರ್ಮವೀರ’ ಸಾಪ್ತಾಹಿಕದ ದೀಪಾವಳಿ ವಿಶೇಷ ಸಂಚಿಕೆಗೆ ಆಹ್ವಾನಿತವಾಗಿದ್ದು, ಅದನ್ನು ಪೂರ್ಣವಾಗಿ ಸಂಚಿಕೆಯಲ್ಲಿ ಪ್ರಕಟಿಸಲು ನೆರವಾದ ವಾರಪತ್ರಿಕೆಯ ಸಂಪಾದಕರಿಗೆ ನಾನು ಕೃತಜ್ಞ. ಪುಸ್ತಕವನ್ನು ಎರಡನೆ ಮುದ್ರಣಕ್ಕೆ ತಂದಿರುವ ಐ.ಬಿ.ಎಚ್. ಪ್ರಕಾಶನದವರಿಗೆ ನನ್ನ ಅಭಿನಂದನೆಗಳು.

**– ಟಿ.ಕೆ. ರಾಮರಾವ್**

## ನನ್ನ ಮಾತು

## ‘ನೆರಳು’ ಕೃತಿಗೆ

(ಹಿಂದಿನ ಮುದ್ರಣದ ಸಂದರ್ಭದಲ್ಲಿ)

‘ನೆರಳು’ ಒಂದು ಕುತೂಹಲಕಾರಿ ಮಿನಿ ಕಾದಂಬರಿ. ಇದು ಕರ್ನಾಟಕದ ಪ್ರಸಿದ್ಧ ಮಾಸಿಕ ‘ಮಯೂರ’ದಲ್ಲಿ ಎರಡು ತಿಂಗಳು ಎರಡು ಅಧ್ಯಾಯಗಳಲ್ಲಿ ಹರಿದು ಬಂದ ಕಿರು ಧಾರಾವಾಹಿ. ಇದನ್ನು ಪ್ರಕಟಿಸಿ ಉಪಕರಿಸಿದ ಪತ್ರಿಕೆಯ ಸಂಪಾದಕರಿಗೆ ನಾನು ಕೃತಜ್ಞ.

ಪುಸ್ತಕಕ್ಕೆ ಎರಡನೆಯ ಮುದ್ರಣ ಕಾಣಿಸಿರುವ ಐ.ಬಿ.ಎಚ್. ಪ್ರಕಾಶನದವರಿಗೆ ನನ್ನ ಅಭಿನಂದನೆಗಳು

**– ಟಿ.ಕೆ. ರಾಮರಾವ್**

# ವಜ್ರದ ಕೊಂಬು

ಮೂವತ್ತು ತಾಸುಗಳ, ಒಂಭೈನೂರು ಮೈಲಿಗಳಿಗೂ ಅಧಿಕವಾದ ಬಿರುಸಿನ ಓಟ ಮುಗಿಸಿದ ಟ್ರೇನ್ ಗುಡ್ಡಗಳ ಮಧ್ಯೆ ದೃಢ ಗಂಭೀರತೆಯ ದೀರ್ಘ ಸಿಳ್ಳು ಹಾಕಿ ಪ್ರಯಾಣಿಕರ ಮಧ್ಯಾಹ್ನದ ನಿದ್ರೆ ಜೊಂಪನ್ನು ಕದಲಿಸಿತು. ಜೂನ್ ತಿಂಗಳ ಸೂರ್ಯನ ಮಧ್ಯಾಹ್ನದ ಪ್ರಖರತೆಯನ್ನು ಬೆನ್ನ ಮೇಲೆ ಹರಡಿಕೊಂಡು ಒಂದೇ ಗತಿಯಲ್ಲಿ ಧಾವಿಸಿತ್ತು, ಹವಾನಿಯಂತ್ರಿತ ಪಂಜಾಬ್ ಮೈಲ್ ರೈಲು ಗಾಡಿ.

ಕಿಟಕಿಯಲ್ಲಿ ಸರಿದ ದೃಶ್ಯಗಳ ಮೇಲೆ ಕಣ್ಣು ಹರಿಸಿ ಬೇಸರಗೊಂಡ ಅರ್ಚನಾ ಹಣೆಯ ಮೇಲೆ ಸರಿದಾಡಿದ ಕೂದಲು ಹಿಂದಕ್ಕೆ ಸರಿಸಿ ಹಳೆಯ ಪತ್ರಿಕೆ ತೆರೆದಳು.

"ಇನ್ನರ್ಧ ಗಂಟೆಯಲ್ಲಿ ಕಲ್ಯಾಣ್ ಸೇರ್ತೀವಿ...ಆಮೇಲೆ ಒಂದು ಗಂಟೆಯಷ್ಟು ಪಯಾಣ ಆದರೆ ಬಾಂಬೆ."

ಕೈ ಗಡಿಯಾರ ನೋಡುತ್ತಾ ಹೇಳಿದ ಎದುರು ಸೀಟಿನವ ಹೊರ ನಡೆದು ಎರಡು ನಿಮಿಷಗಳಲ್ಲಿ ಎರಡು ಕಪ್ ತಣ್ಣನೆಯ ಫ್ರೂಟ್ ಕ್ರೀಮ್ ತಂದು ಅವಳಿಗೊಂದು ನೀಡಿದ.

"ಥ್ಯಾಂಕ್ಸ್... ನಿಮ್ಮಿಂದ ಬಹಳ ಕೆಲಸ, ಬಹಳ ಖರ್ಚು ಮಾಡ್ಸಿದೀನಿ."

ಕೃತಜ್ಞತೆಯ ನಗೆ ಮುಖ ತೋರಿ ಕೈಲಿದ್ದ ಕಪ್ ತಿರುಗಿಸಿದಳು.

"ನನ್ನ ಕೆಲಸದ ಕೂಲಿ ಲೆಕ್ಕ ಹಾಕಿ, ಬೊಂಬಾಯಿ ಸೇರಿದ ಮೇಲೆ ಖರ್ಚಿನ ಪಟ್ಟಿ ಒಪ್ಪಿಸ್ತೀನಿ. ಹಣ ಒಟ್ಟಿಗೆ ಕೊಡುವಿರಂತೆ"

ಎಂದು ಅಣುಕು ಗಾಂಭೀರ್ಯದಲ್ಲಿ ಸೌಜನ್ಯತೆ ಬೆರೆಸಿ ನುಡಿದ ಚೆಂದದ ಮುಖದವನು ಅವಳಿಂದ ಚೆಂದದ ನಗೆ ಹೊರಡಿಸಿದ.

ನವೀನ ದಾಮ್ಲೆ! ಆ ಸಹ ಪ್ರಯಾಣಿಕ ಇಲ್ಲವಾಗಿದ್ದರೆ ಆ ದೀರ್ಘ ರೈಲು ಪ್ರಯಾಣ ಎಷ್ಟು ಬೇಸರಮಯವಾಗುತ್ತಿತ್ತೆಂದು ಕಲ್ಪಿಸಿಕೊಂಡು ಹಣೆ ಒರೆಸಿದಳು.

ನಿನ್ನೆಯ ಬೆಳಿಗ್ಗೆ ಏಳೂವರೆಯ ಹೊತ್ತಿನಲ್ಲಿ ಪ್ರಯಾಣಿಕರ ಪ್ರವಾಹದ ತಲೆಗೆಡಿಸುವ ಗಲಾಟೆ ಆವರಣದ ಡೆಲ್ಲಿ ಜಂಕ್ಷನ್‌ನಲ್ಲಿ ರೈಲು ಏರಿದಾಗಲೇ ಅವನ ಮುಖ, ನಡಿಗೆ ಕಣ್ಣು ಸೆಳೆದಿತ್ತು. ಬೆಲೆ ಬಾಳುವ ಒಂದೇ ಒಂದು ಸೂಟ್‌ಕೇಸು ಹಿಡಿದು ಅವಳ ಎದುರು ಸೀಟಿಗೆ ಬಂದಿದ್ದ. ರೈಲು ಡೆಲ್ಲಿ ಬಿಟ್ಟು ಹದಿನೈದು ನಿಮಿಷಗಳ ನಂತರ ಡೈನಿಂಗ್ ಕಾರ್‌ನಿಂದ ಎರಡು ಲೋಟ ಕಾಫಿ ತಂದು ಚೆನ್ನಾಗಿ ಕಾಣುವ ಭಂಗಿಯಲ್ಲಿ ನಿಂತ.

ಎರಡನೆಯ ಲೋಟ ಯಾರಿಗೆ? ಯೋಚನೆಗೆ ಮೊದಲೇ ಅವನ ಹಿತವಾದ ಒತ್ತಾಯಕ್ಕೆ ಮಣಿದು ಲೋಟ ತೆಗೆದುಕೊಂಡಿದ್ದಳು.

ಕಪ್ಪು ಗೀರುಗಳ ಕಂದು ಪ್ಯಾಂಟು. ತಿಳಿಗೆಂಪಿನ ಅರೆ ತೋಳು ಷರಟು, ತಲೆಯಲ್ಲಿ ಮೆಲ್ಲನೆ ಜಿಗಿದಾಡಿದ ಕೂದಲು. ತಿಳಿಗಪ್ಪು ಕನ್ನಡಕ... ನಡೆ, ನಿಲುವಿಗೆ ಒಪ್ಪುವ ಸೌಜನ್ಯದ ಮಾತುಗಳು.

ಅರ್ಚನಾ ಸೆಳೆತಕ್ಕೆ ಒಳಗಾಗಿ ಉಸಿರೆಳೆದುಕೊಂಡಳು, ಸಿನಿಮಾ ವಾರ ಪತ್ರಿಕೆ ಅವಳಿಗೆ ಕೊಟ್ಟು ಹಾಸ್ಯದಲ್ಲಿ ಹೇಳಿದ್ದ.

"ಸಂಕೋಚಪಡಬೇಡಿ. ಈ ರೈಲು ಬೊಂಬಾಯಿ ಸೇರೊ ಹೊತ್ತಿಗೆ ನೀವೇ ಬೇಸರದಿಂದ ನನ್ನ ಕೆಣಕಿ ಮಾತಾಡಿಸೊ ಹಾಗೆ ಆಗಿಬಿಡ್ತೀರಿ. ಅಷ್ಟು ದೊಡ್ಡ ಪ್ರಯಾಣ ಇದು!"

ಅವಳ ಕಣ್ಣುಗಳು ಮಿನುಗಿದವು.

"ಬೊಂಬಾಯಿಗೆ ಹೋಗ್ತಿದೀನಿ ಅಂತ ಹೇಗೆ ಗೊತ್ತಾಯ್ತು?"

"ಮೇಡಂ, ಯಾವ ದೊಡ್ಡ ಶೋಧನೆ ಅದು ! ಕಂಪಾರ್ಟ್‌ಮೆಂಟ್ ಹೊರಗೆ ಹಾಕಿರೊ ರಿಸರ್ವೇಶನ್ ಪಟ್ಟಿಯಲ್ಲಿ ನಿಮ್ಮ ನಂಬರ್ ಬೊಂಬಾಯಿ ತೋರಿಸ್ತಾ ಇದೆ.. ನಿಮ್ಮ ಹೆಸರು ಅರ್ಚನಾ ಪಾವನ್ ಅನ್ನೋದನ್ನೂ ನಾನು ಕೇಳಿ ತಿಳಿಯೋ ಅಗತ್ಯ ಇಲ್ಲ."

ಅರ್ಚನಾಳ ಕೆನ್ನೆ ಕೆಂಪಾಯಿತು.

"ಹೌದು, ನಾನು ಬೊಂಬಾಯಿಗೆ ಹೋಗ್ತಿದೀನಿ."

"ನನ್ನ ಹೆಸರು ನವೀನ ದಾಮ್ಲೆ. ನಾನೂ ಅಲ್ಲಿಗೇ ಹೋಗ್ತಿರೋದು. ನೀವು ಈ ಏರ್ ಕಂಡೀಷನ್ಡ್ ಮೈಲ್‌ನಲ್ಲಿ ಬರೋದಿಕ್ಕೆ ಬದಲು ಪ್ಲೇನ್‌ನಲ್ಲಿ ಪ್ರಯಾಣ ಮಾಡಬಹುದಿತ್ತು."

ಅವಳ ಮುಖ ನೋಡಿ ಅಂತಸ್ತಿನ ನಾಡಿ ಹಿಡಿಯುವ ಪ್ರಯತ್ನ ಮಾಡಿದ.

"ರೈಲಿನಲ್ಲಿ ಪ್ರಯಾಣ ಮಾಡಿದ್ರೆ ದೇಶ ಚೆನ್ನಾಗಿ ನೋಡಿಕೊಂಡು ಹೋಗಬಹುದು ಅಂತಾರೆ ನೋಡಿ."

ಅವಳು ಶ್ರೀಮಂತೆ ಎಂಬುದು ಅಲ್ಲಗಳೆಯುವಂತಿಲ್ಲ. ನವೀನ ಸಿಗರೇಟು ಹೊತ್ತಿಸಿದ.

"ಬೊಂಬಾಯಿಗೆ ಹೋಗ್ತಿರೋದು ಮೊದಲನೆ ಬಾರಿಗೆ ಅಂತ ತೋರುತ್ತೆ."

"ಹೌದು."

"ನಿಮ್ಮ ಸ್ನೇಹಿತರು, ಬಂಧುಗಳು ಇರಬೇಕು ಅಲ್ಲಿ."

ಮುಖ ಅವನ ಕಡೆ ತಿರುಗಿಸಿದಳು. ಎರಡು ತಾಸುಗಳ ಹಿಂದೆ ಪರಿಚಿತನಾದ ಸಹ ಪ್ರಯಾಣಿಕ. ಉತ್ತರಿಸುವುದು ಸರಿಯೆ?"

"ಅಲ್ಲಿ ಯಾರೂ ಇಲ್ಲ... ಆಫೀಸ್ ಕೆಲಸದ ಮೇಲೆ ಹೋಗ್ತಿದೀನಿ. ನೀವು ಬೊಂಬಾಯಿನಲ್ಲಿ ವಾಸ ಮಾಡ್ತಿರೇನು?"

"ಬೊಂಬಾಯಿಗೆ ತಿಂಗಳಿಗೊಂದು ಸಾರಿಯಾದ್ರೂ ಹೋಗ್ತೀನಿ. ಅಲ್ಲಿ ಸಯಾನ್‌ನಲ್ಲಿ ನನ್ನ ಸೋದರತ್ತೆ ಇದಾಳೆ....ನಾನು ಡೆಲ್ಲಿ, ಮದ್ರಾಸ್, ಕೊಚ್ಚಿನ್ ಅಂತ ಓಡಾಡ್ತಲೇ ಇರ್ತೀನಿ."

ಆಗ್ರಾ ಕಂಟೋನ್ಮೆಂಟ್ ತಲುಪುವುದರಲ್ಲಿ ಎರಡನೆಯ ಕಾಫಿ ತಂದು ಕೊಟ್ಟ. ಹತ್ತಾರು ಸೊಗಸಿನ ಮಾತುಗಳನ್ನಾಡಿದ್ದ.

ಮತ್ತೆ ಅರ್ಧ ಗಂಟೆ ಇಬ್ಬರಲ್ಲೂ ಮಾತು ಬರಲಿಲ್ಲ. ಝಾನ್ಸಿ ನಿಲ್ದಾಣ ಬರುವುದರಲ್ಲಿ ಪರಿಚಯ ಮತ್ತಷ್ಟು ಹದವಾಗಿ ಬೆಳೆದು ಮಧ್ಯಾಹ್ನದ ಊಟ ಮುಗಿಸಿದರು.

ಪತ್ರಿಕೆ ಹಿಡಿದವಳನ್ನು ಆಸಕ್ತಿಯಿಂದ ಗಮನಿಸಿದ ನವೀನ. ಪರಿಚಯವಾಗಿದ್ದರೂ ಕೇಳಲಾಗದ ವಿಷಯಗಳು.

ಅರ್ಚನಾ ಉನ್ನತ ಅಂತಸ್ತಿನ ಯುವತಿ... ಬೊಂಬಾಯಿನಲ್ಲಿ ಅವಳ ಬಂಧುಗಳಿಲ್ಲ... ಆ ಮಹಾ ನಗರಕ್ಕೆ ಪ್ರಥಮ ಬಾರಿಗೆ ಒಂಟಿಯಾಗಿ ಪ್ರಯಾಣ ಮಾಡುತ್ತಿರುವ ಚೆಲುವೆ!

ಕುತೂಹಲ ತಡೆಯದೆ ನಯವಾಗಿ ಮಾತೆತ್ತಿದ.

"ನಿಮ್ಮ ಹೆಸರು ಅರ್ಚನಾ ಪಾವನ್ ಅಂತ ಪಟ್ಟಿಯಲ್ಲಿ ಓದಿದಾಗ ತಲೆಯಲ್ಲಿ ಸ್ವಲ್ಪ ಕೆದಕಿದ ಹಾಗಾಯ್ತು... ಕ್ಷಮಿಸಿ, ನೀವು ದೀಪಕ್ ಪಾವನ್‌ಗೆ ಬಂಧುವಲ್ಲ ಅಂತ ಭಾವಿಸಲೇ?... ಮಾರ್ಚ್‌ನಲ್ಲಿ ಬೊಂಬಾಯಿನ ಯಾವುದೋ ಭಾಗದಲ್ಲಿ ಸತ್ತು ಹೋದ ವ್ಯಕ್ತಿ...?"

ಬೆರಳೆತ್ತಿ ನೆನಪು ಕೆದರಿಕೊಂಡ.

ಅವಳ ಮುಖ ಹಿಂದಕ್ಕೆ ಸರಿಯಿತು. ಕಪ್ಪು ಕಣ್ಣುಗಳು ವಿಶಾಲಗೊಂಡು ಸೊಗಸಿನ ಮುಖದಲ್ಲಿ ರಂಗು ಬದಲಿಸಿತು.

"ದೀಪಕ ಪಾವನ್ ನನ್ನ ಅಣ್ಣ... ಬೊಂಬಾಯಿನಲ್ಲಿ ಸತ್ತಿದ್ದು ಅವನೇ." ಕೈ ಕಂಪಿಸಿತು. ತುಟಿ ಕಚ್ಚಿದಳು.

ಅವನು ಮುಖ ಹಿಂತೆಗೆದ.

"ಮರಣದ ಸುದ್ದಿ ಪತ್ರಿಕೆಯಲ್ಲಿ ಬಂದಿತ್ತು."

"ಅಣ್ಣ ಆತ್ಮಹತ್ಯೆ ಮಾಡಿಕೊಂಡಿದ್ದು ದುರದೃಷ್ಟದ ಸಂಗತಿ. ಅವನಿಗೆ ಅಷ್ಟು ನಿಶ್ಶಕ್ತ ಮನಸ್ಸು ಇತ್ತೊಂತ ನಂಬೋದಿಕ್ಕೆ ಸಾಧ್ಯವಿಲ್ಲ."

ನೋವಿನ ಧ್ವನಿಯೊಂದಿಗೆ ಕಣ್ಣುಗಳ ಹೊಳಪು ಇಳಿಯಿತು. ಮೃದು ತುಟಿಗಳು ಅದುರಿದವು.

"ಆ ಸಂಬಂಧದಲ್ಲಿ ಈಗ ಪ್ರಯಾಣ ಮಾಡ್ತಿದೀರಾ?"

"ಅಣ್ಣ ಸತ್ತು ಮೂರು ತಿಂಗಳಾಯ್ತು. ನನಗೆ ಸುದ್ದಿ ತಿಳಿದಾಗಲೇ ವಿಳಂಬವಾಗಿತ್ತು. ಆಗ ಬರಲಿಕ್ಕೆ ಆಗ್ಲಿಲ್ಲ. ಈಗ ಅವನ ಸಮಾಧಿ ನೋಡಲಿಕ್ಕೆ ಹೋಗ್ತಿದೀನಿ."

ತಲೆ ತಗ್ಗಿಸಿ ಕರವಸ್ತ್ರದಿಂದ ಕಣ್ಣು ಒತ್ತಿದಳು.

ನವೀನ ಪಕ್ಕಗಳಿಗೆ ನೋಡಿದ. ಪ್ರಯಾಣಿಕರಿಗೆಲ್ಲಾ ನಿದ್ರೆಯ ಸೆಳೆತ.

"ನಾನೂ ವಿಷಾದಪಡ್ತೀನಿ, ಮಿಸ್ ಅರ್ಚನಾ... ನೀವು ತಪ್ಪು ತಿಳಿಯೋದಿಲ್ಲವಾದ್ರೆ ನಿಮ್ಮಣ್ಣನ ವಿಷಯದಲ್ಲಿ ಸ್ವಲ್ಪ ವಿವರ ಕೊಡಿ."

ಮುಂದಕ್ಕೆ ಸರಿದು ಕುಳಿತು ಆಸಕ್ತಿ ತೋರಿದ.

"ದೀಪಕ್ ನನಗಿಂತ ಐದು ವರ್ಷ ದೊಡ್ಡೋನು. ತಂದೆ ತೀರಿ ಹೋದಾಗ ನಮಗೆ ಡೆಲ್ಲಿಯಲ್ಲಿ ಆಸ್ತಿ ಬಿಟ್ಟು ಹೋದ್ರು. ಅಣ್ಣನಿಗೆ ಚಿತ್ರಕಲೆಯಲ್ಲಿ ಮೊದಲಿನಿಂದ ಆಸಕ್ತಿ. ನಗರ ಸಾರಿಗೆ ಇಲಾಖೆಯಲ್ಲಿ ದೊಡ್ಡ ಕೆಲಸ ಇತ್ತು. ಬಿಡುವಿಲ್ಲದ ಜವಾಬ್ದಾರಿಯ ಕೆಲಸ. ನನ್ನ ಓದಿಸ್ದ. ನಾನು ಸೆಕ್ರೆಟೇರಿಯಲ್ ಕೋರ್ಸ್ ಮುಗಿಸಿದ್ದು ಅವನ ಇಚ್ಛೆ ಮೇಲೆ..."

ಅವಳಿಗೆ ಆಗ ಡೆಲ್ಲಿಯ ನೆನಪು. ಜನನಿಬಿಡ ಕನ್ನಾಟ್ ಸರ್ಕಸ್ ಹಿಂದೆ ಅಡ್ಡ ರಸ್ತೆಯಲ್ಲಿ ತಿಂಗಳಿಗೆ ಐದು ಸಾವಿರದ ಬಾಡಿಗೆ ತರುವ ನಾಲ್ಕು ಅಂಗಡಿಗಳ ಸಾಲು. ಎರಡು ಅಂತಸ್ತುಗಳ ಒಂದು ದೊಡ್ಡ ಮನೆ... ತಂದೆ ಹೋದ ಮೇಲೆ ದುಃಖದ ಎಳೆ ತಾಕದಂತೆ ನೋಡಿಕೊಂಡ ಅಣ್ಣ. ಪ್ರತಿ ಸಂಜೆಯ ಬಿಡುವಿನಲ್ಲಿ ಅವನೊಂದಿಗೆ ಕಾರಿನಲ್ಲಿ ಸುತ್ತಾಟ. ಪ್ರತಿ ವಾರ ತಂದುಕೊಡುತ್ತಿದ್ದ ಉಡುಗೆಗಳು, ಶೃಂಗಾರದ ವಸ್ತುಗಳು. ತನ್ನ ಓದು, ಸಂತೋಷದ ಬದುಕಿಗಾಗಿ ಬದಿಗಿಟ್ಟ ಚಿತ್ರಕಲೆಯ ಹವ್ಯಾಸ...

"ಹೇಳಿ..."

ನವೀನ ಅವಳಿಗೆ ಮುಂದೆ ಹೇಳಲು ನಯಾವಾಗಿ ಉತ್ತೇಜಿಸಿದ.

"ಅವನಿಗೆ ಬಿಡುವಿಲ್ಲದ ಕೆಲಸ... ಮೂರು ತಿಂಗಳ ಹಿಂದೆ ಸಂಬಳದ ಬಾಕಿ

ಹಣ ಒಟ್ಟಾಗಿ ಬಂದಿತ್ತು. ಅವನಿಗೆ ನೆಮ್ಮದಿ, ವಿಶ್ರಾಂತಿ ಇರಲಿ ಅಂತ ನಾನೇ ಬೊಂಬಾಯಿಗೆ ಹೋಗೋದಿಕ್ಕೆ ಸೂಚಿಸಿದೆ. ನನಗೆ ರಜೆ ಸಿಗ್ಲಿಲ್ಲ... ಬಂಧುವೊಬ್ಬರ ಮನೆಯಲ್ಲಿ ನನ್ನ ಬಿಟ್ಟು ಹದಿನೈದು ದಿನಗಳ ಪ್ರವಾಸದ ಮೇಲೆ ಹೋದ..."

"ಅಮೇಲೆ?" ಕುತೂಹಲ ತೋರಿದ.

"ಬೊಂಬಾಯಿ ಸೇರಿದ ಎರಡು ದಿನಗಳ ಮೇಲೆ ಒಂದು ಕಾಗದ ಬರೆದ...... ಎಲಿಫಾಂಟಾ, ಮಲಬಾರ್‌ಹಿಲ್, ಚೌಪಾಟಿ, ಜುಹುನಲ್ಲಿ ಚಿತ್ರ ಬರೆದದ್ದು ತಿಳಿಸಿದ.... ಆಮೇಲೆ ಕನ್ಹೇರಿ ಗುಹೆಗಳ ಚಿತ್ರ ಬರೆಯೊ ಆಸೆ! ಅವನಿದ್ದ ಹೊಟೇಲಿನಲ್ಲಿ ಯಾರೋ ಹೇಳಿದ್ರಂತೆ ಅದು ಅಗತ್ಯವಾಗಿ ನೋಡಬೇಕಾದ ಸ್ಥಳ ಅಂತ... ಬೋರಿವಿಲಿಯಿಂದ ಬರೆದಿದ್ದ ಕಾಗದ ಅದು... ಬೋರಿವಿಲಿ ಎಲ್ಲಿದೆ?"

"ಬೊಂಬಾಯಿನಲ್ಲೇ ಒಂದು ಬಡಾವಣೆ. ಬಾಂಬೆ ವಿ.ಟಿ. ಸ್ಟೇಷನ್‌ನಿಂದ ಸುಮಾರು ಇಪ್ಪತ್ತು ಮೈಲಿ. ಅಲ್ಲಿಂದಲೇ ಕನ್ಹೇರಿ ಗುಹೆಗಳಿಗೆ ಹೋಗ್ಬೇಕು."

ತಲೆ ಅಲುಗಿಸಿದಳು.

"ಬೋರಿವಿಲಿಯಿಂದ ಬರೆದ ಮೂರನೆ ಕಾಗದವೇ ಕಡೇದು... ಅಲ್ಲಿ ಎರಡು ದಿನ ಕಳೆದು, ಮಹಾಬಲೇಶ್ವರಕ್ಕೆ ಹೋಗಿ, ಪೂನಾ ನೋಡಿಕೊಂಡು ಡೆಲ್ಲಿಗೆ ಹಿಂತಿರುಗೋದು ಅಂತ ತಿಳಿಸಿದ್ದ. ಡೆಲ್ಲಿಗೆ ಇಳಿಯುತ್ತಲೇ ನನಗೊಂದು ಆಶ್ಚರ್ಯದ ಸಂಗತಿ ಕಾದಿದೆ ಅಂತ ಕುತೂಹಲ ಕೆರಳಿಸಿದ್ದ... ಅವನು ಸಾಯೋದಿಕ್ಕೆ ಐದಾರು ದಿನಗಳ ಮೊದಲು ಹಾಗೆಲ್ಲಾ ಬರೆದಿದ್ದು. ಪ್ರವಾಸದಲ್ಲಿ ಅಷ್ಟೊಂದು ಉತ್ಸಾಹ, ಆಸಕ್ತಿ ತೋರಿದೋನು ಏಕಾಏಕಿ ಅತ್ಮಹತ್ಯೆ ಯಾಕೆ ಮಾಡ್ಕೊಂಡ?"

ಅವಳು ಕಂಪಿಸುತ್ತಿದ್ದ ಕೈ ನೋಡಿಕೊಂಡಳು. ನವೀನನ ಬೆರಳು ಅವಳ ಕೈ ತಟ್ಟಿತು. ಉಸಿರು ಬಿಗಿ ಹಿಡಿದು ಕೈ ಮೆಲ್ಲನೆ ಎಳೆದುಕೊಂಡಳು.

ನವೀನ ಅವಳು ಚಕಿತಗೊಳ್ಳುವಂತೆ ಹೇಳಿದ.

"ಅದು ಸಂಭವಿಸಿದಾಗ ನಾನು ಬೊಂಬಾಯಿನಲ್ಲಿದ್ದೆ. ಪತ್ರಿಕೆಗಳಲ್ಲಿ ಸುದ್ದಿ ನೋಡಿದೆ. ನಿಮ್ಮಣ್ಣನ ದೇಹ ಸಿಕ್ಕಿದ್ದು ಕನ್ಹೇರಿ ಗುಹೆಗಳ ತಗ್ಗಿನ ಸಣ್ಣ ಜಂಗಲ್‌ನಲ್ಲಿ. ಅವನ ಪಕ್ಕದಲ್ಲಿ ರಿವಾಲ್ವರ್ ಇತ್ತು. ಅದರ ಮೇಲೆ ಅವನದೇ ಬೆರಳಚ್ಚು... ಈ ವಿವರವೆಲ್ಲಾ ನಾನು ಈಗ ಹೇಳಿದ ಹಾಗೆ... ಹೌದಾ?

"ಹೌದು, ಹೌದು."

ಆಸಕ್ತನನ್ನು ಯಾವುದೋ ಆಸೆಯಿಂದ ನೋಡಿದಳು.

"ಅದು ಆತ್ಮಹತ್ಯೆ ತಾನೆ?"

"ಅಣ್ಣನಿಗೆ ರಿವಾಲ್ವರ್ ಹಿಡಿಯೋದು ಗೊತ್ತಿರಲಿಲ್ಲ."

"ಅದಕ್ಕೆ ಯಾವ ತರಪೇತು, ಅನುಭವ ಬೇಕಿಲ್ಲ. ರಿವಾಲ್ವರ್ ದೇಹದ ಮುಂದೆ

ಹಿಡಿದು ಕೊಕ್ಕೆ ಎಳೆದರೆ ಅಯ್ತು."

ನಿಟ್ಟುಸಿರು ಹಾಕಿದಳು.

"ಹಾಗೆ ಸಾಯೋದಿಕ್ಕೆ ಕನ್ಹೇರಿ ಗುಹೆಗಳ ಹತ್ರಕ್ಕೆ ಯಾಕೆ ಹೋಗಬೇಕಿತ್ತು ಅವನು? ಅವತ್ತು ಯಾರೂ ಪ್ರವಾಸಿಗಳೇ ಇರಲಿಲ್ಲವಂತೆ? ಚಿತ್ರ ಬರೆಯೋದಿಕ್ಕೆ ಹೋದೋನಿಗೆ ಅದು ವಿಕೃತ ಸ್ಫೂರ್ತಿ ಅಂತೀರಾ?"

ಅವಳಲ್ಲಿ ತುಂಬಿದ ಶಂಕೆ ಅವನಿಗೆ ಅರ್ಥವಾಯಿತು.

"ಇವೆಲ್ಲಾ ತಲೆಯಲ್ಲಿ ತುಂಬಿಕೊಂಡು ಬೊಂಬಾಯಿಗೆ ಹೋಗ್ತಿದೀರಿ. ನಿಮಗೆ ಅಲ್ಲಿ ಹೊಸದೇನೂ ಸಿಗೋದಿಲ್ಲ... ಇವೆಲ್ಲಾ ಮುಗಿದು ಮೂರು ತಿಂಗಳಾಗಿವೆ."

ತನಗೆ ಭರವಸೆ ಉಳಿದಿಲ್ಲ ಎನಿಸಿತು. ಸಹಪ್ರಯಾಣಿಕನಿಗೆ ಭಾವೋದ್ರೇಕದಲ್ಲಿ ತನ್ನ ಕಥೆ ಹೇಳಿದುದು ಹೆಡ್ಡತನ. ಸಹಾಯ ಪಡೆಯುವ ಆಸೆಯಲ್ಲಿ ಹಾಗೆ ಹೇಳಿದ್ದಳು.

ಅಣ್ಣ ದೀಪಕನ ಚಿತ್ರ ಸುಳಿದಾಡಿತು. ಹಸಿದ ಕಣ್ಣುಗಳ ಗಂಭೀರ ಮುಖ. ಮಾತಿನೊಂದಿಗೆ ಕೂಡಿ ಒರುವ ಮುಗುಳುನಗೆ....

ಹೊಸಬನಲ್ಲಿ ವಿಷಯ ಬಿಚ್ಚಿಟ್ಟಿದ್ದು ತಪ್ಪು!

ಅವಳ ಚಿಂತೆ, ತುಮುಲಗಳಿಗೆ ಗಮನ ಕೊಡದವನಂತೆ ಅವನು ಸಿಗರೇಟು ಹೊಗೆ ತೋರುತ್ತಿದ್ದ. ರೈಲು ಒಂದೇ ವೇಗದಲ್ಲಿ ಸಾಗಿತ್ತು. ರಾತ್ರಿ ಏರಿದಂತೆ ಮಾತು ಕಡಿಮೆ ಆಯಿತು. ಊಟ ಮುಗಿಸಿದರು.

ಹನ್ನೊಂದೂವರೆಯ ಹೊತ್ತಿಗೆ ಜನನಿಬಿಡ ದೊಡ್ಡ ನಿಲ್ದಾಣದಲ್ಲಿ ರೈಲು ನಿಂತಿತು.

"ಇದು ಇಟಾರ್ಸಿ ಅಂತ... ಕೇಳಿರಬಹುದು. ದೊಡ್ಡ ಜಂಕ್ಷನ್. ಸ್ವಲ್ಪ ಇಳಿಯೋಣವೆ? ಪ್ಲಾಟ್‌ಫಾರಂ ನೋಡಲಿಕ್ಕಲ್ಲ. ನಿಮ್ಮ ಬೇಸರದ ಒಂದು ಪದರ ಕಳಚಿ ಹಾಕಲಿಕ್ಕೆ."

ಮಾತಿಲ್ಲದೆ ಅವನೊಂದಿಗೆ ಇಳಿದಳು. ನಿಜಕ್ಕೂ ಅದು ಭಾರಿ ನಿಲ್ದಾಣ. ರಾತ್ರಿಯ ವಾತಾವರಣವನ್ನು ಮರೆಸುವಂತಹ ರೈಲುಗಳ ಸರಿದಾಟ. ಗಲಭೆಯ ಜನಜಂಗುಳಿ.

ಪುಸ್ತಕಗಳ ಸ್ಟಾಲ್‌ನಲ್ಲಿ ನವೀನ ಮರಾಠಿ ಪತ್ರಿಕೆ ಕೊಂಡ. ಅರ್ಚನಾ ಹುಬ್ಬೇರಿಸಿದಳು. ಸಹ ಪ್ರಯಾಣಿಕ ಬಹುಭಾಷಿ!

ಹತ್ತು ನಿಮಿಷಗಳಲ್ಲಿ ಕಂಪಾರ್ಟ್‌ಮೆಂಟಿಗೆ ಹಿಂತಿರುಗಿದರು.

ರಾತ್ರಿಯ ಗಾಢತೆ, ರೈಲಿನ ವೇಗದೊಂದಿಗೆ ಅವಳಿಗೆ ಚಿಂತೆ, ಭಾವನೆಗಳ ತುಳುಕಾಟ. ಬದುಕಿಗೆ ಅಂಟಿದ ಪರಿಸರ. ರಕ್ಷಣಾವಲಯದಿಂದ ದೂರವಾಗುತ್ತಿರುವೆ ಎಂಬ ತಾಕಲಾಟ. ಬೊಂಬಾಯಿಯಲ್ಲಿ ನಾಲ್ಕು ದಿನ ಉಳಿದು ಹಿಂತಿರುಗುವುದು ವಿಹಿತ ಎನಿಸಿತು. ಶರೀರ ಅಗೋಚರ ಭೀತಿಯಿಂದ ಕಂಪಿಸಿತು.

"ಮುಖ ನೋಡಿದರೆ ಮನಸ್ಸು ಸರಿ ಇಲ್ಲಾಂತ ತೋರುತ್ತೆ. ತಲೆನೋವೆ?"

ನಿಜ ಹೇಳುವ ಸಾಧ್ಯತೆ ಇಲ್ಲದೆ ತಲೆ ಅಲುಗಿಸಿದಳು. ನವೀನ ಸೂಟ್ ಕೇಸಿನಿಂದ ಎರಡು ಗುಳಿಗೆಗಳ ಪಟ್ಟಿ ತೆಗೆದ. ಒಂದು ಗ್ಲಾಸ್ ನೀರು ತಂದು ಕೊಡುವುದನ್ನು ಮರೆಯಲಿಲ್ಲ. ಅವಳಿಗೆ ನಿದ್ರೆ ಹತ್ತಿತು.

ಬೆಳ್ಳನೆ ಬೆಳಗಾದಾಗ ರೈಲು ಭುಸಾವಲ್ ದಾಟಿ ಮನಮಾಡ್ ಕಡೆಗೆ ಧಾವಿಸಿತ್ತು.

"ಗುಡ್ ಮಾರ್ನಿಂಗ್..."

ಬೆಳಗಿನ ಪ್ರಪಂಚಕ್ಕೆ ಅವಳ ಅರಿವು ತಿರುಗಿಸಿದ ನವೀನ. ಉತ್ಸಾಹ ತುಂಬಲು ಸೊಗಸಾದ ನಾಲ್ಕು ಮಾತುಗಳನ್ನಾಡಿದ. ಹೊಸ ದಿನದ ಹುರುಷಿನೊಂದಿಗೆ ದೀಪಕನ ಬಗೆಗೆ ಮಾತು ಹರಿದಾಗ ಪರಿಚಯದ ಹಳೆಯ ಕಾವಿನಲ್ಲಿ ಕೇಳಿದ.

"ದೀಪಕನ ಮರಣ ವಾರ್ತೆ ನಿಮಗೆ ಮೊದಲು ತಿಳಿದಿದ್ದು ಹೇಗೆ?"

ಮುಖ, ಸ್ವರದಲ್ಲಿ ವ್ಯತ್ಯಾಸ ತೋರದೆ ಮರು ನುಡಿದಳು.

"ತಂತಿ, ಪತ್ರ ಯಾವುದೂ ಬರಲಿಲ್ಲ. ಆ ಯೋಚನೆ, ಆಸಕ್ತಿ ಪೋಲೀಸರಿಗೆ ಎಲ್ಲೀದು? ಬಹುಶಃ ನನ್ನ ವಿಳಾಸವೂ ಬೇಗ ಸಿಕ್ಕಿರಲಾರದು... ಎಲ್ಲಾ ಮುಗಿದ ಹದಿನೈದು ದಿನಗಳ ಮೇಲೆ ನನ್ನ ಡೆಲ್ಲಿ ವಿಳಾಸಕ್ಕೆ ಒಂದು ಪೆಟ್ಟಿಗೆ, ಒಂದು ಸರ್ಕಾರಿ ಪತ್ರ ಬಂತು. ಆ ಪತ್ರದ ಆಧಾರದ ಮೇಲೆ ಬೇರೆ ದಾಖಲೆಗಳನ್ನ ಪಡೆಯೊ ಪ್ರಯತ್ನ ನಡೆಸಿದೀನಿ... ಆ ಪತ್ರ ನೋಡ್ತೀರಾ?"

"ನೀವು ವಿಶ್ವಾಸದಿಂದ ತೋರಿಸೋ ತೊಂದರೆ ತೊಗೊಳೊದಾದ್ರೆ ಸಂತೋಷದಿಂದ ನೋಡ್ತೀನಿ."

ವಿನಯಪೂರ್ವಕವಾಗಿ ಹೇಳಿದ ಆಸಕ್ತ.

ಅರ್ಚನಾ ಸೀಟಿನಡಿಯಲ್ಲಿದ್ದ ಪ್ರಯಾಣದ ಕ್ಯಾನ್ವಾಸ್ ಬ್ಯಾಗ್ ಎತ್ತಿ ಅದರ ಜಿಪ್ ಎಳೆದಳು. ಅದೇ ಸಮಯದಲ್ಲಿ ಮೇಲೆದ್ದ ಸಹ ಪ್ರಯಾಣಿಕ ತನಗೆ ಅರಿವಿಲ್ಲದಂತೆ ನಡುವಿನಿಂದ ಬ್ಯಾಗ್ ಸವರಿಕೊಂಡು ಹೊರಕ್ಕೆ ನಡೆದ. ಬ್ಯಾಗ್ ಮುಂದಕ್ಕೆ ಜಾರಿ ಬಿತ್ತು. ಅದನ್ನು ಎತ್ತಿಕೊಳ್ಳುವ ಭರದಲ್ಲಿ ಚೀಲ ಮತ್ತಷ್ಟು ತೆರೆದುಕೊಂಡಿತು. ವಸ್ತುಗಳು ನೆಲದ ಮೇಲೆ ಹರಡಿದವು.

ನವೀನ ಒಡನೆ ಎದ್ದು ವಸ್ತುಗಳನ್ನು ಆರಿಸಿದ. ಪುಸ್ತಕ, ಬಟ್ಟೆ, ಪ್ಯಾಕೆಟ್‌ಗಳೊಂದಿಗೆ ಕೆಲವು ಫೋಟೋಗಳು. ಅವನ ನೀಲಿ ಕಣ್ಣುಗಳು ಚೂಪಾದವು.

"ವರ್ಣಚಿತ್ರಗಳಿಂದ ತೆಗೆದ ಫೋಟೋ. ಬಹುಶಃ ದೀಪಕ್ ಪಾವನ್ ಬರೆದ ಮೂಲ ಚಿತ್ರಗಳು ನಿಮ್ಮಲ್ಲಿರಬೇಕು.

"ಚಿತ್ರಗಳು ಡೆಲ್ಲಿಯಲ್ಲಿವೆ. ಅಣ್ಣ ಬರೆದ ಕಡೇ ಚಿತ್ರಗಳ ಫೋಟೋಗಳು ಇವು. ಪೋಲೀಸ್ ಇಲಾಖೆಯಿಂದ ನನಗೆ ಬಂದ ಪೆಟ್ಟಿಗೆಯಲ್ಲಿ ಆರು ವರ್ಣಚಿತ್ರಗಳು

ಇದ್ದವು... ಇವನ್ನ ನೋಡಿ ಬೊಂಬಾಯಿನ ಯಾವ ಭಾಗಗಳಲ್ಲಿ ಚಿತ್ರಿಸಿದ್ದು ಅಂತ ನೀವು ಹೇಳೋದಿಕ್ಕೆ ಸಾಧ್ಯವಾಗಬಹುದು. ಆ ದೃಶ್ಯಗಳನ್ನ ಕಾಣೋದಿಕ್ಕೆ ನನಗೂ ಕುತೂಹಲ ಇದೆ. ಎಲ್ಲಾ ಹೊರಾಂಗಣದ ದೃಶ್ಯಗಳು... ಒಂದು ಮಾತ್ರ ಬೇರೆ.

ಅವನು ಆರಾಮವಾಗಿ ಕುಳಿತು ಫೋಟೋ ಒಂದೊಂದೇ ನೋಡಿದ. ಹುಬ್ಬುಗಳು ಗಂಟೇರಿದವು, ಇಳಿದವು. ಮೆಚ್ಚಿಗೆಯಿಂದ ಅವಳಿಗೆ ತೋರಿಸಿದ.

“ಇದು ಮಲಬಾರ್ ಹಿಲ್... ಇದು ಚೌಪಾಟಿ ಬೀಚ್.... ಎಲಿಫಾಂಟಾ ಗುಹೆಯ ತ್ರಿಮೂರ್ತಿ.... ಬಹುಶಃ ಫ್ಲೋರಾ ಫೌಂಟನ್ ಹಿಂದಿನ ರಸ್ತೆಗಳು... ಜುಹು ಬೀಚಿನ ತಾಳೆ ಸಮೂಹ. ವರ್ಣಚಿತ್ರದಿಂದ ತೆಗೆದ ಫೋಟೋ ಸ್ವಲ್ಪ ಮಂಕಾಗಿ ಬಂದಿದೆ. ಆದರೆ ಕಲೆಗಾರಿಕೆ ಚೆನ್ನಾಗಿದೆ ಅಂತ ಹೇಳಬಹುದು. ಹದಿನೈದು ದಿನಗಳ ಪ್ರವಾಸದಲ್ಲಿ ದೀಪಕ್ ವೇಗವಾಗಿ ರಚಿಸಿದ್ದರೂ ಕೈ ಚಳಕ ಅದ್ಭುತ...”

ತೆಳು ಕಾಗದದಲ್ಲಿ ಸುತ್ತಿದ್ದ ಆರನೆಯ ಫೋಟೊ ಎಳೆದ. ಅವಳಿಗೆ ನೆಮ್ಮದಿ ತಪ್ಪಿತು. ಕಂಠ ಬಿಗಿದು ಮೌನ ತಾಳಿದಳು.

ತೆಳು ಹಳದಿ ಹಾಕಿದ ಹೆಣ್ಣಿನ ಪಾರ್ಶ್ವ ಮುಖದ ಚಿತ್ರ !

“ಯಾರು ಈ ಹೆಂಗಸು...ಗೊತ್ತೆ ನಿಮಗೆ?”

ಮೊನಚಾಗಿ ಕೇಳಿದ ನವೀನ.

* * *

ಅರ್ಚನಾ ಪಾವನ್ ‘ಗೊತ್ತಿಲ್ಲ’ ಅರ್ಥದಲ್ಲಿ ತುಟಿ ಉಬ್ಬಿಸಿ, ತಲೆ ಕೈ ಆಡಿಸಿದಳು. ಮೂಲ ವರ್ಣಚಿತ್ರಗಳನ್ನು ಡೆಲ್ಲಿಯಲ್ಲಿ ಪಡೆದ ದಿನ ಅವಳು ಚಕಿತಗೊಂಡಿದ್ದಳು.

ಭುಜಮಟ್ಟದ ಮೇಲಿನ ಹೆಣ್ಣಿನ ಮುಖಚಿತ್ರ ! ತೆಳುವಾದ ಅವಕುಂಠನದಲ್ಲಿ ಮುಖದ ಬಲ ಪಾರ್ಶ್ವದ ನೋಟ. ಸೊಗಸಾದ ಕಣ್ಣುಗಳ ಒಂದು ಭಾಗ. ತೀಡು ಹುಬ್ಬು, ನೀಳ ನಾಸಿಕ ಅದರಲ್ಲಿ ಸ್ಫುಟವಾಗಿ ಕಾಣುತ್ತಿದ್ದವು. ಕುತ್ತಿಗೆಯ ತಳದ ಚೆಲುವು ಚಿತ್ರಿಸಿದವನು ಮಾತ್ರ ಬಲ್ಲ!

ಮೂಲ ಕೃತಿಯ ಕ್ಯಾನ್ವಾಸ್‌ನಲ್ಲಿ ಭುಜದ ಉಡುಗೆ ಬೂದು ನೀಲಿ, ಮುಖದ ಪರದೆ ತೆಳು ಹಳದಿ ಇದ್ದಿರಬೇಕು. ಹೆಣ್ಣಿನ ಕಣ್ಣು ರೋಮಾಂಚನಗೊಳಿಸುವಷ್ಟು ಆಕರ್ಷಕ !

“ದೀಪಕನಿಗೆ ಪರಿಚಯವಾದ ಯಾವುದೊ ಹೆಣ್ಣು... ನಾನು ಬೊಂಬಾಯಿನಲ್ಲಿ ಅವಳನ್ನು ಕಾಣೋದಾದ್ರೆ ಸಂತೋಷ, ಅದೃಷ್ಟ.

ಫೋಟೋಗಳನ್ನು ಬ್ಯಾಗ್‌ನಲ್ಲಿಡುವ ಬದಲು ಚರ್ಮದ ಕೈಚೀಲಕ್ಕೆ ಸೇರಿಸಿದಳು.

ನವೀನ ಬೆರಳಾಡಿಸಿದ.

"ನೀವು ಅವಳನ್ನು ಕಾಣುವ ಸಾಧ್ಯತೆ, ಸಂಭವ ಇಲ್ಲ. ನಿಮ್ಮಣ್ಣ ಅವಳನ್ನು ರೂಪದರ್ಶಿಯಾಗಿ ಪಡೆದಿರಬಹುದು. ಅವಳು ಅಂತಾ ಬೃಹತ್ ನಗರದಲ್ಲಿ ನಿಮ್ಮ ಕಣ್ಣಿಗೆ ಬೀಳೋದು ಹೇಗೆ? ಅವಳು ಯಾವ ಸಂಪ್ರದಾಯದೋಳು ಅನ್ನೋದು ಫೋಟೋದಿಂದ ಕಂಡುಹಿಡಿಯೋದು ಕಷ್ಟ. ನೀವು ರಸ್ತೆಯಲ್ಲಿ ಹೋಗುವಾಗ ಅದೇ ಹೆಂಗಸು ಎದುರಿಗೆ ಬಂದರೂ ಗುರ್ತಿಸಲಾರಿರಿ."

"ಆ ಕಣ್ಣುಗಳನ್ನ ಮಾತ್ರ ಎಲ್ಲಿ ಕಂಡರೂ ಗುರ್ತಿಸಬಲ್ಲೆ!"

ಹಾಗೆಂದು ತನ್ನಲ್ಲಿಯೇ ಹೇಳಿಕೊಂಡಳು ಅರ್ಚನಾ. ಅವಳ ಆಸೆ, ಉದ್ದೇಶ ಅವನಿಗೆ ಹಿಡಿಸಲಿಲ್ಲ.

"ಎಷ್ಟು ದಿನ ಇರ್ತೀರಿ ಬಾಂಬೆಯಲ್ಲಿ?" ಏಕಾಏಕಿ ಕೇಳಿದ.

"ಎರಡು ವಾರ... ಅಷ್ಟೇ ರಜೆ ನನಗೆ. ಮತ್ತೆ ಕೆಲಸಕ್ಕೆ ಹಿಂತಿರುಗಬೇಕು."

"ಏನು ಕೆಲಸ ಮಾಡ್ತೀರಿ?"

ಪರಿಚಯ ಹಳೆಯದಾದರೂ ಆ ಪ್ರಶ್ನೆ ನಿರೀಕ್ಷಿಸಿರಲಿಲ್ಲ.

"ಆಫೀಸ್ ಕೆಲಸ..."

ಅವಳು ಯಾವ ಆಫೀಸ್ ಎಂದು ತಿಳಿಸಲಿಲ್ಲ. ಅವನು ಕೇಳುವ ಗೋಜಿಗೆ ಹೋಗಲಿಲ್ಲ.

"ನೀವು ಏನು ಕೆಲಸ ಮಾಡೋದು?"

ತನ್ನ ಬಗೆಗೆ ಹೇಳದವಳು ಅವನನ್ನು ನೇರವಾಗಿ ಕೇಳಿದಳು.

"ನನಗೊಂದು ವಿಚಿತ್ರ ಕೆಲಸ. ಸುಗಂಧ ದ್ರವ್ಯಗಳನ್ನು ಅರಬ್ಬೀ ದೇಶಗಳಿಗೆ ಕಳಿಸಿಕೊಡೋದು. ಅದಕ್ಕಾಗಿ ಹೀಗೆ ದೇಶವೆಲ್ಲಾ ಸುತ್ತಾಡಬೇಕಾಗುತ್ತೆ... ನೀವು ಬೊಂಬಾಯಿಯಲ್ಲಿರೋವಾಗ ನನ್ನ ಅಂಟಿ ಮನೆಗೆ ತಪ್ಪದೆ ಬರಬೇಕು. ನಾನೇ ಬಂದು ಕಾಣ್ತೀನಿ."

"ಆಗಲಿ" ನಿರ್ಯೋಚನೆಯಿಂದ ಸಮ್ಮತಿಸಿದಳು.

ಗುಡ್ಡಗಳ ಮಧ್ಯೆ ರೈಲು ಕರ್ಕಶವಾಗಿ ಸಿಳ್ಳು ಹಾಕಿತು...

ಕಲ್ಯಾಣ್ ದಾಟಿ ಹತ್ತು ನಿಮಿಷ ಕಳೆದ ಮೇಲೆ ಕೈ ಗಡಿಯಾರ ನೋಡುತ್ತಾ ಹೇಳಿದ.

"ಬಾಂಬೆ ಸಮೀಪಿಸ್ತಾ ಇದೆ. ಒಂದೆರಡು ದಿನಗಳಲ್ಲಿ ನಿಮಗೆ ಫೋನ್ ಮಾಡ್ತೀನಿ... ಅದ್ಭುತವಾಗಿ ಕಾಣಬೋದು ನಗರ. ಡೆಲ್ಲಿಗೂ, ಬೊಂಬಾಯಿಗೂ ವಿಪರೀತ ವ್ಯತ್ಯಾಸ. ದೇಶದ ಯಾವ ನಗರವೂ ಇದರ ಹಾಗಿಲ್ಲ. ಇಲ್ಲಿನ ಜೀವನದ ತರಹವೇ ಬೇರೆ. ಸಾವಿರ ವೇಷಗಳ, ಸಾವಿರ ಮನೋಭಾವಗಳ ಜನ. ಅರ್ಥವಾಗದ ವೇಗದ ವಾತಾವರಣ.

ಹಣಕ್ಕೆ ಬೆಲೆಯೇ ಇಲ್ಲ... ಕೀಳು, ಮಹತ್ತರಗಳ ವಿಚಿತ್ರ ಸಂಗಮ."

ಅರ್ಚನಾ ಕಿಟಕಿಯಲ್ಲಿ ದೃಷ್ಟಿ ಏರಿಸಿದಳು. ಉರಿಬಿಸಿಲಿನಲ್ಲಿ ಕಪ್ಪು ಮೋಡಗಳ ಅಲೆಗಳು. ಅಡಿಯಲ್ಲಿ ಬೆಳ್ಳಿ ಹಾಸು.

ಇಸ್ಪೀಟು ಎಲೆಗಳಂತೆ ಕಂಡು ಸರಿದು ಹೋಗುವ ಅಂತಸ್ತು ಸೌಧಗಳ ನಿರಂತರ ಅಲೆಗಳನ್ನು ದಿಟ್ಟಿಸಿ ತಲ್ಲೀನಳಾದವಳನ್ನು ಮೆಲ್ಲನೆ ತಟ್ಟಿ ನುಡಿದ.

"ಬೊಂಬಾಯಿ! ರಹಸ್ಯಗಳ ಕ್ಷುದ್ರ ನಗರವೂ ಹೌದು... ನನ್ನ ಮಾತು ಕೇಳಿ. ನಗರ ಅದ್ಭುತವಾಗಿ, ಸ್ವಾರಸ್ಯವಾಗಿ ಕಾಣೋ ಹಾಗೆ ಮಾಡ್ಕೊಳ್ಳಿ. ಇಲ್ಲಿನ ರಸ್ತೆ, ಅಂಗಡಿ ಸಾಲು, ಜನ ಪ್ರವಾಹ, ಸಮುದ್ರ, ಗುಡ್ಡ, ಬೀಚ್ ಎಲ್ಲದರ ನೋಟ ಅನುಭವಿಸಿ. ನಿಮ್ಮ ಸಮಯ ಸುಗಮವಾಗಿ ಕಳೆಯಲಿ. ಆದರೆ ನಿಮ್ಮಣ್ಣನ ಸಾವಿನ ವಿಷಯದಲ್ಲಿ ತಲೆಕೆಡಿಸಿಕೊಂಡು ವಿವರ ಹುಡುಕೋದಿಕ್ಕೆ ಹೋಗ್ಬೇಡಿ. ಅದು ಮುಗಿದ ಸಂಗತಿ.

ಹಾಗೇಕೆ ಹೇಳಿದನೆಂದು ಅರ್ಥವಾಗಲಿಲ್ಲ. ಅವಳ ಅಭಿಪ್ರಾಯದಲ್ಲಿ ಅದು ಮುಗಿದ ಸಂಗತಿ ಅಲ್ಲ. ಅಣ್ಣನ ಆತ್ಮಹತ್ಯೆಯ ಕಲ್ಪನೆ ಸುಡುಬೆಂಕಿಯಂತೆ!

ಬೊಂಬಾಯಿ ವಿಕ್ಟೋರಿಯಾ ಟರ್ಮಿನಸ್ ನಿಲ್ದಾಣದಲ್ಲಿ ಮೈಲ್ ಬಂಡಿ ನಿಂತಾಗ ಅವಳ ಎದೆಬಡಿತ ಏರಿತು.

"ನಿಮ್ಮನ್ನ ಹೋಟೆಲ್‌ವರೆಗೆ ಬಿಟ್ಟು ಹೋಗ್ತೀನಿ."

ಎಂದು ಅವಳ ಪೆಟ್ಟಿಗೆ, ವಸ್ತುಗಳಿಗೆ ಕೈ ಹಾಕಿದ. ಅವಳು ಬೇಡ ಎನ್ನಲಿಲ್ಲ. ಜನ ಸಮುದ್ರ, ಗಲಭೆ ಗಮನಿಸಿ ದಿಕ್ಕೆಟ್ಟವಳಂತೆ ನಿಂತವಳ ಮುಖದ ತಲ್ಲಣ, ಅತಂಕ ಗ್ರಹಿಸಿ ಮೆಲ್ಲನೆ ಕೇಳಿದ.

"ನೀವು ತಬ್ಬಿಬ್ಬಾಗಿದ್ದೀರಿ. ನನ್ನಲ್ಲಿ ಈಗಲೂ ಮುಚ್ಚುಮರೆ? ನಿಮ್ಮ ರಿಸರ್ವೇಶನ್ ಯಾವ ಹೊಟೇಲಿನಲ್ಲಿ ಆಗಿದೇಂತೆ ಹೇಳಿ."

ಉಗುಳು ನುಂಗಿದಳು. ಜನಸಂದಣಿಯ ದಿಕ್ಕಿಗೆ ಹೂಡಿದ ನೋಟ ಕೀಳದೆ ತಡೆ ತಡೆದು ಹೇಳಿದಳು.

"ನಾನು ಹೊಟೇಲ್ ರಿಸರ್ವೇಶನ್ ಮಾಡಿಸ್ಲಿಲ್ಲ... ಆತುರದಲ್ಲಿ ಬಂದು ಬಿಟ್ಟೆ..."

ತೆರೆದ ಎದೆಗೆ 'ಉಫ್' ಎಂದು ಗಾಳಿ ಊದಿಕೊಂಡು ತನ್ನಲ್ಲಿಯೇ ನಕ್ಕ ನವೀನ.

"ಆಯ್ತು, ಚಿಂತಿಸಬೇಡಿ... ನಿಮ್ಮ ಅಂತಸ್ತಿಗೆ ನಲವತ್ತು, ಐವತ್ತು ರೂಪಾಯಿನ ಕೋಣೆ ಅದೀತು ಅಂತ ಭಾವಿಸ್ತೀನಿ..."

ಸಮ್ಮತಿಯಿಂದ ಮುಖ ಅಲುಗಿತು. ಅವನು ಸಾರ್ವಜನಿಕ ಟೆಲಿಫೋನ್ ಬೂತ್ ಕಡೆಗೆ ನಡೆದು ಐದು ನಿಮಿಷಗಳಲ್ಲಿ ಹಿಂತಿರುಗಿದ.

ಆಟಿಕೆಗಳಂತೆ ಹಿಂದೆ ಮುಂದೆ ವೇಗವಾಗಿ ಸರಿದ ವಾಹನಗಳ ಮಧ್ಯೆ ಟ್ಯಾಕ್ಸಿ ಬಾಂಬೆ ಸೆಂಟ್ರಲ್ ದಿಕಿನ ರಸ್ತೆ ಹಿಡಿಯಿತು. ಭವ್ಯವಾದ "ಹೋಟೇಲ್ ಅಮರ್" ಮುಂದೆ ನಿಂತಾಗ ಹೊಟೇಲಿನ ಆಳು ಇಳಿದು ಬಂದು ಸಾಮಾನು ಹೊತ್ತು ಸ್ವಾಗತದ ವಿಭಾಗಕ್ಕೆ ನಡೆದ.

"ನಾನು ಅಲ್ಲಿಗೆ ಬರೋದು ಬೇಡ. ಎಲ್ಲಾ ತಿಳಿಸಿದೀನಿ. ಯೋಚನೆ ಮಾಡಬೇಡಿ. ಹೇಳಿದ್ದು ನೆನಪಿರಲಿ. ಒಂದೆರಡು ದಿನದಲ್ಲಿ ಫೋನ್ ಮಾಡ್ತೀನಿ. ಅಗತ್ಯಬಿದ್ದರೆ ನನಗೆ ಫೋನ್ ಮಾಡಿ... ಬೈ ಬೈ."

ನವೀನ ಫೋನ್ ನಂಬರಿನ ಚೀಟಿ ನೀಡಿದ.

"ಬೈ ಬೈ... ತುಂಬ ಥ್ಯಾಂಕ್ಸ್."

ಅವನಿಗೆ ಕೈ ಆಡಿಸಿದಾಗ ಅವಳಿಗೆ ಆತ್ಮೀಯನೊಬ್ಬ ಏಕಾಏಕಿ ಸರಿದು ಹೋದಂತಾಯಿತು. ಅವನು ಕುಳಿತ ಟ್ಯಾಕ್ಸಿ ರಸ್ತೆಯ ತಿರುವಿನಲ್ಲಿ ಮರೆಯಾಗುವವರೆಗೆ ನೋಡುತ್ತಾ ನಿಂತು ನಿಟ್ಟುಸಿರು ಹಾಕಿ ಕೌಂಟರಿಗೆ ಬಂದಳು.

ವಿವರಗಳನ್ನು ಪುಸ್ತಕದಲ್ಲಿ ಭರ್ತಿ ಮಾಡುತ್ತಾ ಫಕ್ಕನೆ ತಿರುಗಿದಳು. ಹತ್ತು ಅಡಿಗಳ ದೂರಕ್ಕೆ ಕಂಬ ಒರಗಿದ್ದ ಕಿರು ಮೀಸೆಯ, ಕಪ್ಪು ಕಣ್ಣುಗಳ, ಬೆಲೆ ಬಾಳುವ ಸೂಟಿನ ಮನುಷ್ಯ ತನ್ನ ಕಡೆಗೆ ಗಂಭೀರವಾಗಿ ನೋಡುತ್ತಿದ್ದ!

ಕೌಂಟರ್ ಕ್ಲರ್ಕ್ ವಿನಯವಾಗಿ ಸೂಚಿಸಿದ.

"ಡೈನಿಂಗ್ ಹಾಲ್‌ನಲ್ಲಿ ಇನ್ನೂ ಊಟ ಇದೆ. ಕೋಣೆಗೆ ಬೇಕಾದ್ರೂ ಕಳಿಸಿಕೊಡ್ತೀನಿ."

"ಇಲ್ಲಿಗೇ ಬರ್ತೀನಿ" ಎಂದಳು.

ಆಳು ಹುಡುಗ ಅವಳೊಂದಿಗೆ ಲಿಫ್ಟ್‌ನಲ್ಲಿ ಏರಿ ಕೋಣೆಯಲ್ಲಿ ಅವಳ ವಸ್ತುಗಳನ್ನು ಅಣಿಗೊಳಿಸಿ ಹೋದ. ಅರ್ಚನಾ ಮುಖ ತೊಳೆದು, ತಲೆ ಸರಿಪಡಿಸಿಕೊಂಡು, ಕೈಚೀಲ ತಿರುಗಿಸುತ್ತಾ ಇಳಿದು ಬಂದಳು.

ಹೊಟೇಲಿನ ತಳಭಾಗ ಆಕರ್ಷಣೀಯವಾಗಿತ್ತು. ಸಮಾರಂಭದ ವಿಶಾಲ ಹಜಾರ, ಅಂಚಿನಲ್ಲಿದ್ದ ಬಾರ್ ಕಡೆಗೆ ಇಣಿಕಿ ಡೈನಿಂಗ್ ಹಾಲ್‌ಗೆ ಬಂದಳು. ಮೂವರು ಮಾತ್ರ ಕುಳಿತಿದ್ದ ಹವಾ ನಿಯಂತ್ರಿತ ಹಜಾರ ಅದು. ಮಧ್ಯ ವಯಸ್ಸಿನ ದಂಪತಿಗಳು. ಎಡಬಲ ನೋಡದೆ ಯಾವುದೋ ಭಾಷೆಯಲ್ಲಿ ವಿರಾಮವಾಗಿ ಮಾತು ನಡೆಸಿದವರು... ಅವಳಿಂದ ಒಂದು ಮೇಜಿನ ಆಚೆಗೆ ನೇರವಾಗಿ ಅವಳನ್ನೇ ನೋಡುತ್ತಿದ್ದ ಆಕರ್ಷಕ ವ್ಯಕ್ತಿ!

ಅರ್ಚನಾ ಪ್ರತಿ ಸಾರಿ ತಲೆ ಎತ್ತಿದಾಗಲೂ ಆ ಮನುಷ್ಯನ ಕಣ್ಣುಗಳು ಅವಳ ಕಣ್ಣುಗಳೊಂದಿಗೆ ಸೇರುತ್ತಿದ್ದವು. ಅವಳಿಗೆ ನೆಮ್ಮದಿ ಕೆಟ್ಟಿತು. ಅವ್ಯಕ್ತ ಭೀತಿ ಮೆಲ್ಲನೆ

ದಾಳಿ ಇಟ್ಟಿತು.

ಯಾರದು?... ಅವಳಿಗೆ ನೆನಪು ಕಚ್ಚಿತು. ತಾನು ಕೌಂಟರ್‌ನಲ್ಲಿ ವಿವರ ಭರ್ತಿ ಮಾಡುತ್ತಿದ್ದಾಗ ಕಂಬ ಒರಗಿ ನಿಂತಿದ್ದ ವ್ಯಕ್ತಿ!

ಆ ಕಪ್ಪು ಕಣ್ಣುಗಳಿಂದ ದೂರವಾಗಲು ಊಟ ಬೇಗ ಮುಗಿಸಿ ಹೊರಬಂದಳು. ಹಜಾರದ ಗಡಿಯಾರ ಮೂರುಕಾಲು ಗಂಟೆ ತೋರಿತು. ಅವಳಿಗೆ ಆಯಾಸವಾಗಿತ್ತು. ಲಿಫ್ಟ್ ಕಡೆಗೆ ನಡೆದಾಗ ಅವಳಿಗೆ ತಟ್ಟನೆ ಅರಿವಾಯಿತು... ಡೈನಿಂಗ್ ಹಾಲ್‌ನಲ್ಲಿ ಮರೆತು ಬಂದ ತನ್ನ ಕೈಚೀಲ !

ಹಿಂತಿರುಗಿ ನಾಲ್ಕು ಹೆಜ್ಜೆ ಹಾಕುವುದರಲ್ಲಿ ಕಪ್ಪು ಕಣ್ಣುಗಳ ಯುವಕ ಅವಳ ಕಡೆಗೇ ಬರುತ್ತಿದ್ದ. ಅವನ ಕೈಲಿ ತನ್ನ ಕೈ ಚೀಲ. ಅವನ ಕಣ್ಣುಗಳು ತನ್ನ ನೋಟದೊಂದಿಗೆ ಕೂಡಿದಾಗ ಯಾವುದೋ ಸಮ್ಮೋಹನ ಶಕ್ತಿ ಅವಳನ್ನು ಸೆಳೆದಂತಾಯಿತು.

"ಮಿಸ್ ಅರ್ಚನಾ ಪಾವನ್, ನಿಮ್ಮ ವಸ್ತುವನ್ನು ಹಿಂತಿರುಗಿಸಿದ ಸಂತೋಷ ನನ್ನ ಪಾಲಿಗೆ ಇರಲಿ."

ಚೀಲದ ಮೇಲಿನ ಅವಳ ಹೆಸರು ನೋಡುತ್ತಾ ರಾಗವಾಗಿ ಹೇಳಿದ.

"ಥ್ಯಾಂಕ್ಯು."

ತಗ್ಗಿದ ಧ್ವನಿಯಲ್ಲಿ ಚೀಲ ತೆಗೆದುಕೊಂಡಳು. ಅವನು ತಲೆ ಬಾಗಿದ.

"ನಾನು ಕುಸುಮಾಕರ್. ಮತ್ತೆ ಭೆಟ್ಟಿ ಆಗ್ತೀನಿ... ಗುಡ್ ಡೇ.... ರಾತ್ರಿಗೆ ಸೊಗಸಾದ ಕನಸುಗಳು..."

ಹಾಗೆಂದು ಹಾರೈಸಿ ಮರುನುಡಿಗೆ ಕಾಯದೆ ದೇಹ ಓರೆ ಮಾಡಿ ಸ್ವಾಭಿಮಾನದ ನಡಿಗೆಯಲ್ಲಿ ಹೊರಗಿಳಿದ. ಕಾರು ಹೊರಟ ಸದ್ದು ಬಂತು... ಅರ್ಚನಾ ಬೆವರು ಒರೆಸಿ ಹೆಜ್ಜೆ ಸರಿಸಿದಳು.

ಕೋಣೆಯ ಬಾಗಿಲು ಭದ್ರಪಡಿಸಿ ಹಾಸಿಗೆಯ ಮೇಲೆ ಕುಳಿತಳು. ಸೊಗಸಾದ ಸುಸಜ್ಜಿತ ಕೋಣೆ. ವಿಶಾಲ ಕಿಟಕಿಯ ಕರ್ಟನ್ ಸರಿಸಿದಳು. ಹಿಂದಿನ ಬಾಗಿಲು ತೆಗೆದು ಬಾಲ್ಕನಿಯಲ್ಲಿ ನಿಂತಳು. ದೂರದಿಂದ ಯಾವುದೋ ಸಂಗೀತ ಕೇಳಿಬರುತ್ತಿತ್ತು. ಶೋಕ ಗೀತೆ ! ಬಿಸಿಲು ಇನ್ನೂ ಉಳಿದಿದ್ದು ಬೇಸರ ಸುರಿಯುವ ಧಗೆಯ ರಾಗ.

ಕಿಟಕಿಯ ಕರ್ಟನ್ ಮತ್ತೆ ಎಳೆದು ಹಾಸಿಗೆಯ ಮೇಲೆ ಕುಳಿತು ಕೈಚೀಲ ತೆರೆದಳು. ಅಣ್ಣನ ವರ್ಣಚಿತ್ರಗಳ ಫೋಟೋಗಳು ಮೊದಲು ಕಣ್ಣಿಗೆ ಬಿದ್ದವು. ಕಣ್ಣುಗಳು ಪ್ರಶ್ನೆ ಹಾಕಿದವು. ವಿಶೇಷತೆ ಇಲ್ಲವಾದರೂ ಅದೊಂದು ಅಚ್ಚರಿ. ರೈಲಿನಲ್ಲಿ ಫೋಟೋಗಳನ್ನು ಕೈ ಚೀಲಕ್ಕೆ ಸೇರಿಸಿದಾಗ ಅವಕುಂಠನವತಿಯ ಫೋಟೋ ಮೇಲಿತ್ತು. ಅದು ಚೆನ್ನಾಗಿ ನೆನಪಿದೆ. ಈಗ ಅದು ತಳಕ್ಕೆ ಬಂದಿದೆ !

ಕೈ ಚೀಲ ಅವಳಿಂದ ದೂರವಾಗಿದ್ದುದು ಕೇವಲ ಐದು ನಿಮಿಷಗಳವರೆಗೆ ಅವಳ ಹೊರತಾಗಿ ಅದನ್ನು ಮುಟ್ಟಿದವನು ಕಪ್ಪು ಕಣ್ಣುಗಳ ಆ ಮನುಷ್ಯ ಒಬ್ಬನೇ. ಅಪರಿಚಿತನಿಗೆ ಸಂಬಂಧವಿಲ್ಲದ ಆ ಫೋಟೋಗಳಲ್ಲಿ ಯಾವ ಆಸಕ್ತಿ ?

ನವೀನ ಹೇಳಿದ ಮಾತುಗಳು ಸ್ಮೃತಿಗೆ ಬಂದವು.

ಬೊಂಬಾಯಿ ರಹಸ್ಯಗಳ ಕ್ಷುದ್ರ ನಗರ...! ಅಣ್ಣನ ಸಾವಿನ ವಿಷಯ ಮುಗಿದ ಸಂಗತಿ!

ಬೆಳಿಗ್ಗೆ ಎಚ್ಚರವಾದಾಗ ಕಿಟಕಿಯ ಕರ್ಟನ್ ಉಂಗುರಗಳ 'ಕಡ ಕಡ' ನಾದ ಕೇಳುತ್ತಿತ್ತು. ಜೊತೆಗೆ ಕರೆಗಂಟೆಯ ಸದ್ದು. ಎದ್ದು ಬಾಗಿಲು ತೆರೆದಾಗ ಮಂಪರು ಕಣ್ಣುಗಳಿಗೆ ಹಸನ್ಮುಖದ ಕೆಲಸದ ಹೆಣ್ಣು ಕಾಣಿಸಿದಳು.

"ಗುಡ್‌ಮಾರ್ನಿಂಗ್, ಮೇಮ್ ಸಾಬ್...."

ಹುರುಪಿನ ಧ್ವನಿಯಲ್ಲಿ ವಂದಿಸಿ ಅರ್ಚನಾಳ ಹಿಂದೆಯೇ ಒಳ ಬಂದಳು. ಟವೆಲ್, ಹಾಸಿಗೆ ಹೊದಿಕೆಗಳನ್ನು ಬದಲಾಯಿಸಿದಳು.

"ಮ್ಯಾನೇಜರ್ ಸಾಬ್ ಹೇಳಿದಾರೆ ನಾನು ಈ ಕೋಣೆ ಸರಿಯಾಗಿ ನೋಡಿಕೋಬೇಕೂಂತ... ನಾಲ್ಕು ಗಂಟೆ ಮೇಲೆ ನನ್ನ ಬದಲಿಗೆ ಹೆಣ್ಣಾಳೇ ಬರ್ತಾಳೆ... ಹೊರಗಿನಿಂದ ಏನು ಬೇಕಾದ್ರೂ ಹೇಳಿ. ತಂದುಕೊಡ್ತೀನಿ."

ಮರಾಠಿ ಬೆರೆತ ಸರಳ ಹಿಂದಿ ಭಾಷೆಯಲ್ಲಿ ಹೇಳಿ, ಕೋಣೆ ಸ್ವಚ್ಛಗೊಳಿಸಲು ಆಳು ಕರೆತಂದು ದೂರ ನಿಂತಳು.

"ಇನ್ನು ಇಪ್ಪತ್ತು ನಿಮಿಷ ಆದ ಮೇಲೆ ಕಾಫಿ, ಬ್ರೆಡ್‌ಟೋಸ್ಟ್ ಕಳಿಸಿಕೊಡು" ಗಡಿಯಾರ ನೋಡಿ ಹೇಳಿದಳು ಅರ್ಚನಾ."

ಕಪ್ಪು ಮುಖದ ಚುರುಕಿನ ಹೆಣ್ಣು ಮತ್ತೆ ತಲೆ ಬಾಗಿ ವಂದಿಸಿ ಹೊರಬಿದ್ದಳು.

ಕರ್ಟನ್ ಸರಿಸಿ ಕಿಟಕಿ ತೆರೆದು ಹಾಸಿಗೆಯ ಮೇಲೆ ಕಾಲು ಚಾಚಿದಳು. ಕಿಟಕಿ ತೆರೆದಷ್ಟು ಭಾಗದಲ್ಲಿ ಕಾಣುತ್ತಿದ್ದುದು ಚುಕ್ಕೆ ಇಲ್ಲದ ಪೂರ್ಣ ನೀಲಿ ಆಕಾಶ. ರಾತ್ರಿಯಲ್ಲಿ ಮನ ಹೊಕ್ಕ ಭೀತಿ, ಆತಂಕ ದೂರವಾಗಿದ್ದವು.

ಸ್ನಾನ ಮುಗಿಸಿದ ಮೇಲೆ ರೇಡಿಯೋ ಟ್ಯೂನ್ ಮಾಡಿ ನೀಲಿ ರಂಗಿನ ಸೀರೆ ಉಟ್ಟಳು. ಉಪಾಹಾರ ಮುಗಿಸಿದ ಮೇಲೆ ಕೈ ಚೀಲದಲ್ಲಿ ಕಣ್ಣಾಡಿಸಿ ಲಿಫ್ಟ್ ಹಿಡಿಯದೆ ಮೆಟ್ಟಿಲು ಇಳಿದು ಸ್ವಾಗತದ ಹಜಾರಕ್ಕೆ ಬಂದಳು.

"ಬೋರಿವಿಲಿಗೆ ಹೋಗ್ಬೇಕು."

ಕೌಂಟರ್ ಕ್ಲರ್ಕ್‌ಗೆ ಹೇಳಿ ಚೀಲ ತಿರುಗಿಸುತ್ತಾ ನಿಂತಳು.

"ಟ್ಯಾಕ್ಸಿ?" ನಯವಾಗಿ ಕೇಳಿದ.

"ಇಲ್ಲ, ರೈಲು."

"ಓಕೆ... ಸೆಂಟ್ರಲ್ ಸ್ಟೇಷನ್‌ನಿಂದ ಹೊರಟರೆ ನೇರವಾಗಿ ಬೋರಿವಿಲಿ ಸೇರ್ತೀರಿ. ಅರ್ಧ ಗಂಟೆ ಪ್ರಯಾಣ. ಹೊರಗೆ ಟ್ಯಾಕ್ಸಿ ರೆಡಿ ಇದೆ."

ಹೊಟೇಲಿನ ಆಳು ಅವಳನ್ನು ಹೊರಕ್ಕೆ ಕರೆದೊಯ್ದ. ಟ್ಯಾಕ್ಸಿ ಐದು ನಿಮಿಷಗಳಲ್ಲಿ ಸೆಂಟ್ರಲ್ ಸ್ಟೇಷನ್ ಸೇರಿತು... ಬೋರಿವಿಲಿ ಸೇರಿದಳು. ನಿಲ್ದಾಣದ ಹಿಂಭಾಗದ ಅಂಗಡಿಯಲ್ಲಿ ಉದ್ದನೆಯ ಹೂವಿನ ಸರ ಕೊಂಡು ಮಾಲೆಯಾಗಿ ಗಂಟು ಹಾಕಿದಳು. ಅಣ್ಣ ದೀಪಕನ ಸಮಾಧಿಗೆ ಪುಷ್ಪಮಾಲೆಯ ಅರ್ಪಣೆ !

ಪೊಲೀಸ್ ಠಾಣೆಯ ಅಧಿಕಾರಿ ಅವಳನ್ನು ವಿನಯವಾಗಿ ಬರಮಾಡಿಕೊಂಡು ತಾಳ್ಮೆಯಿಂದ ವಿಷಯ ಕೇಳಿದ. ಸಮಾಧಿ ಎಲ್ಲೆಂದು ಕೇಳಿದಾಗ ಬೇಸರ, ಅಚ್ಚರಿಯಲ್ಲಿ ಕೈ ಎತ್ತಿದ. ರೆಕಾರ್ಡ್ ಹುಡುಕಿ ಹೇಳಿದ.

"ಮೇಡಂ, ಮೂರು ತಿಂಗಳ ಹಿಂದೆ ನಾನು ಇಲ್ಲಿ ಇರ್ಲಿಲ್ಲ. ಆಗಿನ ಆಫೀಸರ್ ರಿಟೈರ್ ಆಗಿದಾನೆ... ನಿಮ್ಮಣ್ಣನ ದೇಹ ಸಿಕ್ಕಿದ್ದು ಕನ್ಹೇರಿ ಗುಡ್ಡದ ಜಂಗಲ್‌ನಲ್ಲಿ. ಅದು ಆತ್ಮಹತ್ಯೆ. ದೇಹದ ಪರೀಕ್ಷೆ ಆದ ಮೇಲೆ ಅದನ್ನ ಕಾರ್ಪೊರೇಷನ್, ಮ್ಯಾಜಿಸ್ಟ್ರೇಟ್ ಅಪ್ಪಣೆ ಪಡೆದು ದಫನ್ ಮಾಡಿಬಿಡ್ತು. ನಮ್ಮಲ್ಲಿ ಅದರ ಫೈಲ್ ಕ್ಲೋಸ್ ಆಗಿದೆ... ದಫನ್ ಮಾಡಿದ ಸ್ಥಳ ನೋಡಬೇಕು ಅಂದ್ರೆ ಕಷ್ಟ... ತಾಳ್ರಿ, ಪ್ರಯತ್ನಪಡ್ತೀನಿ."

ಎಲ್ಲಿಗೊ ಫೋನ್ ಮಾಡಿದ. ಮೂರು ತಿಂಗಳ ಹಿಂದೆ ಶವಸಂಸ್ಕಾರದಲ್ಲಿ ಹಾಜರಿದ್ದ ಕಾನ್ಸ್‌ಟೇಬಲ್‌ನನ್ನು ಹುಡುಕಿ ಕರೆಸಿ ಅವಳೊಂದಿಗೆ ಕಳುಹಿಸಿಕೊಟ್ಟ.

ಬಡಾವಣೆಯ ಆಚೆಗಿದ್ದ ಸಣ್ಣ ಬಯಲು ಭಾಗದಲ್ಲಿ ಸ್ಮಶಾನದ ಹಳೆಯ ಫಲಕವಿತ್ತು. ದಫನ್ ಆದ ಭಾಗವನ್ನು ಪೇದೆ ಸರಿಯಾಗಿ ಗುರ್ತಿಸಲಾಗಲಿಲ್ಲ. ನೆನಪಿಗೆ ಬಂದ ಪ್ರದೇಶ ತೋರಿ ಅಲ್ಲಿಯೇ ಸಂಸ್ಕಾರವಾಯಿತೆಂದು ತಿಳಿಸಿದ.

ಅರ್ಚನಾ ನೆಲದ ಮೇಲೆ ಮೊಳಕಾಲೂರಿ ಕುಳಿತು ಅಣ್ಣನ ದೇಹ ಅಡಗಿರ ಬಹುದಾದ ನೆಲದ ಮೇಲೆ ಹೂಮಾಲೆ ಹರಡಿ ಎರಡು ನಿಮಿಷಗಳ ಮೌನದ ನಂತರ ಕಣ್ಣೊರೆಸಿಕೊಂಡು ಎದ್ದಳು.

ಅಣ್ಣನ ಸಮಾಧಿ ಹೆಸರಿನಲ್ಲಿ ತುಣುಕು ನೆಲ ಕಂಡಾಗಿತ್ತು. ಬೃಹತ್ ನಗರದ ಗರ್ಭದಲ್ಲಿ ಅಡಗಿ ಹೋದ ಪ್ರಕರಣ ಅದು. ನವೀನ ಹೇಳಿದಂತೆ ತಲೆ ಕೆಡಿಸಿಕೊಳ್ಳದೆ ಬೊಂಬಾಯಿನಲ್ಲಿ ನಾಲ್ಕಾರು ದಿನಗಳ ಕಾಲ ಹಗುರ ಮನಸ್ಸಿನಿಂದ ಸುತ್ತಾಡಿ ಡೆಲ್ಲಿಗೆ ಹಿಂತಿರುಗುವುದೇ ಸರಿ... ಅಷ್ಟು ದೂರದಿಂದ ಒಂಟಿಯಾಗಿ ಬಂದು ಮೋಜು ಮಾಡುವ ಅಗತ್ಯವೇನು?

ಹದಿಮೂರು ದಿನಗಳ ರಜೆ ಉಳಿದಿತ್ತು. ಪ್ರಶ್ನೆ ಎದ್ದು ನಿಂತಿತು. ದೀಪಕ ಪಾವನ್ ಆತ್ಮಹತ್ಯೆ ಮಾಡಿಕೊಂಡುದೇಕೆ?

ನಡಿಗೆ ನಿಧಾನವಾಗಿ ಸಾಗಿತು. ಅಂದಗೆಟ್ಟು ಇಕ್ಕಟ್ಟಿನಲ್ಲಿ ಉಜ್ಜುತ್ತಾ ನಿಂತ ಹಳೆಯ ಮನೆ. ಅಂಗಡಿಗಳ ಸಾಲು. ಕಲ್ಲಿದ್ದಲು ಹೊರೆ ಹೊತ್ತು ಚಲಿಸಿದ ಕತ್ತೆಗಳು. ಗಡ್ಡ, ಮಿಾಸೆಗಳ ಒರಟು ಮಾತಿನ ಜನ. ಬೊಂಬಾಯಿನ ನಿಸ್ಸಾರ ಬಡಾವಣೆ ಅದು.

ರಸ್ತೆಯ ಮೂಲೆಯ ಸ್ಟಾಲ್ ಮುಂದೆ ನಿಂತು ಚಹದ ಕಪ್‌ನಲ್ಲಿ ಚಮಚ ಆಡಿಸಿದಾಗ ಭಾವನೆಗಳ ತಾಕಲಾಟ ನಡೆದಿತ್ತು.

ಚಿತ್ರಕಲಾವಿದನ ಮನಸ್ಸು ನಿಶ್ಯಕ್ತಗೊಳಿಸಿದ ಹೆಣ್ಣು! ಪ್ರಣಯಕ್ಕೆ ಆತ್ಮಹತ್ಯೆಯಲ್ಲಿ ಪರ್ಯವಸಾನ !

ಪ್ರೀತಿಯ ಅಣ್ಣನಿಂದ ಬೀಳ್ಕೊಂಡಂತೆ ಹಿಂದಿನ ದಿಕ್ಕಿಗೆ ನೋಡಿ ಕಣ್ಣೊರೆಸಿದಳು. ರೈಲು ನಿಲ್ದಾಣದ ಕಡೆಗೆ ತಿರುಗಿದಳು.

ಹೆಸರಾಂತ ಕನ್ಹೇರಿ ಗುಹೆಗಳ ನೆನಪು ಅವಳಲ್ಲಿ ಸುಳಿದಿರಲಿಲ್ಲ.

* * *

"ನಾವು ಮತ್ತೆ ಭೇಟಿ ಆಗ್ತಿದೀವಿ, ಮಿಸ್ ಅರ್ಚನಾ...."

ಅರ್ಚನಾ ಚಕ್ಕನೆ ತಲೆ ಎತ್ತಿದಳು. ಒಂದು ಕ್ಷಣ ಕಣ್ಣು ಕಿರಿದಾಯಿತು. ಎಲ್ಲಿಯ ಪರಿಚಿತ?

ಅವಳ ಕಣ್ಣುಗಳು ಇನ್ನಷ್ಟು ಸ್ಫುಟವಾಗಿ ಕಾಣಿಸಿದ ಮೂವತ್ತು ವಯಸ್ಸಿನ ಯುವಕ.

"ಗುಡ್ ನೂನ್" ಪರಿಚಯ ಹಿಡಿದ ಚಕಿತತೆಯಲ್ಲಿ ಮರುನುಡಿದಳು.

"ಇಷ್ಟು ದೊಡ್ಡ ದಾಂಧಲೆ ನಗರವಾದರೂ ಜನ ಒಬ್ಬರನ್ನೊಬ್ಬರು ಸೋಜಿಗದಲ್ಲಿ ಭೇಟಿ ನಡೆಸ್ತಾರೆ. ನೀವು ಬೇಸರಪಡೋದಿಲ್ಲವಾದರೆ...."

"ಉತ್ತರಕ್ಕೆ ಕಾಯದೆ ಅವಳ ಪಕ್ಕಕ್ಕೆ ಕುರ್ಚಿ ಎಳೆದು ಕುಳಿತ ಕುಸುಮಾಕರ. ವೈಟರ್‌ಗೆ ಬೆರಳಿನಿಂದಲೇ ಸೂಚನೆ ನೀಡಿ ಅವಳತ್ತ ನಸು ನಗೆ ಬೀರಿದ.

"ನೀವು ನಿನ್ನೆ ಸಿಟಿ ನೋಡಲಿಕ್ಕೆ ಹೋಗಿದ್ರಿ."

"ಬೋರಿವಿಲಿಗೆ ಹೋಗಿದ್ದೆ..."

"ಬೋರಿವ್ಲಿ?"

ವಿಸ್ಮಯಗೊಂಡವನು ನಿಧಾನವಾಗಿ ಕಣ್ಣರಳಿಸಿ ಕೇಳಿದ.

"ಕನ್ಹೇರಿ ಗುಹೆಗಳನ್ನು ನೋಡಲಿಕ್ಕೆ?'

"ನಾನು ಗುಹೆ ನೋಡ್ಲಿಲ್ಲ."

ಅರ್ಥವಾಗದೆ ಕಣ್ಣು ರೆಪ್ಪೆ ಪಟ ಪಟ ಆಡಿಸಿದ.

"ಮತ್ತೆ ಯಾಕೆ ಹೋಗಿದ್ರಿ ಆ ಸತ್ತ ಜಾಗಕ್ಕೆ?"

ಸತ್ತ ಜಾಗ ನೋಡಲಿಕ್ಕೆ ಹೋಗಿದ್ದೆ....

ವಿಚಿತ್ರ ರೀತಿಯಲ್ಲಿ ನಿಜವೆನಿಸುವ ಮಾತು ಅದೇ ಬಂದಿತ್ತು. ಎರಡನೆಯ ಪರಿಚಿತನೊಂದಿಗೆ ಸ್ವಂತ ವಿಷಯ ಚರ್ಚಿಸುವುದು ಬೇಡವೆನಿಸಿತು. ಗಂಭೀರತೆಯನ್ನು ಒಮ್ಮೆಗೇ ತಿದ್ದಿಕೊಂಡಳು.

"ನಿಮಗೆ ಮನಸ್ಸು ಸರಿ ಇಲ್ಲಾಂತ ತೋರುತ್ತದೆ. ಮಾತಿನಿಂದ ಇನ್ನಷ್ಟು ಬೇಸರಪಡಿಸಿದರೆ ನಾನು ಪೂರ್ತಿ ಬೇಡವಾದ ಕೀಳು ಮನುಷ್ಯ ಅನ್ನಿಸ್ಕೊಳ್ತೀನಿ.

"ಛೇ, ಹಾಗೇನೂ ಇಲ್ಲ... ರೈಲಿನಲ್ಲಿ ಎಲ್ಲಿಗೋ ಹೋಗ್ತಾ ಬೋರಿವಿಲಿಯಲ್ಲಿ ತಪ್ಪಿ ಇಳಿದುಬಿಟ್ಟೆ... ಕನ್ಹೇರಿ ನೋಡ್ಲಿಲ್ಲ."

ಅವಳ ಮಾತನ್ನು ಸಂಶಯದಿಂದಲೇ ಗ್ರಹಿಸಿದ.

"ಮತ್ತೆ ನೋಡಿದರಾಯ್ತು. ದೂರದ ಸ್ಥಳವೂ ಅಲ್ಲ. ಸಾಮಾನ್ಯ ನಿಸ್ಸಾರ ಗುಹೆಗಳ ಗುಂಪು... ಬೋರಿವ್ಲಿಯಲ್ಲಿ ನನ್ನದೊಂದು ಮನೆ ಇದೆ."

"ಮನೆ ?" ಕಣ್ಣು ಅರಳಿಸಿದಳು.

"ಆ ಹಳೆ ಕೊಂಪೆಯಲ್ಲಿ ಮನೆ ಅಂದ್ರೆ ನಿಮಗೆ ಆಶ್ಚರ್ಯ ಅಲ್ಲವೆ? ತಂದೆಯ ಕಾಲದ ಹಳೆ ಮನೆ. ಅದನ್ನು ಕೆಡವಿಸಿ ಹೊಸ ಮನೆ ಕಟ್ಟಿಸಬೇಕು."

ವೈಟರ್ ಎರಡು ಗ್ಲಾಸ್ ಬೀರ್ ತಂದಿರಿಸಿದ. ಅವನ ನಿರೀಕ್ಷೆಗೆ ವಿರುದ್ಧವಾಗಿ ಅವಳ ಏನೊಂದೂ ಹೇಳದೆ ಗ್ಲಾಸ್ ಎತ್ತಿದಳು. ಅವಳ ಆರೋಗ್ಯ ಕೋರಿ ಅದಕ್ಕೆ ತನ್ನ ಗ್ಲಾಸ್ ಸಶಬ್ದವಾಗಿ ಸ್ಪರ್ಶಿಸಿದ. ಕಿರುಮೀಸೆ ತುದಿಯ ನಗೆ, ದಟ್ಟ ತಲೆಗೂದಲು ಅವನನ್ನು ಆಕರ್ಷಣೀಯ ವ್ಯಕ್ತಿಯಾಗಿ ತೋರಿದವು.

ಬೋರಿವಿಲಿಯಲ್ಲಿ ಮನೆ!...ದೀಪಕನ ವಿಷಯ ತಿಳಿದಿರಬೇಕು.

"ನೀವು ಪಾನೀಯ ಸ್ವೀಕರಿಸಿದ್ದು ಸಂತೋಷ."

ಅವಳ ಯೋಚನೆಯ ಮಧ್ಯೆ ಸಂತೋಷ ವ್ಯಕ್ತಪಡಿಸಿದ.

"ಆಗಾಗ್ಗೆ ಮಿತವಾಗಿ ತೊಗೊಳ್ತೀನಿ."

ಗ್ಲಾಸ್ ಮೇಲೆ ದೃಷ್ಟಿ ಹೂಡಿ ನುಡಿದಳು.

"ಥ್ಯಾಂಕ್ಸ್.... ಇಂಗ್ಲಿಷ್, ಹಿಂದಿ ಎರಡೂ ಚೆನ್ನಾಗಿ ಆಡ್ತೀರಿ."

"ಅವೆರಡೂ ಗೊತ್ತಿಲ್ಲದೆ ಈ ದೇಶದಲ್ಲಿ ತಿರುಗಾಡೋದು ಹೇಗೆ ?"

ಅವಳಿಗೆ ಧೈರ್ಯ ಮೈಗೂಡಿತ್ತು. ಮೇಜಿನ ಮೇಲೆ ಗ್ಲಾಸ್ ಸುತ್ತಿಸುತ್ತಾ ಕೇಳಿದಳು.

"ಯಾವ ಉದ್ಯೋಗದಲ್ಲಿದ್ದೀರಿ?"

"ಕೊಡೈಕೆನಾಲ್ ಹೆಸರು ಕೇಳಿದೀರಾ, ತಮಿಳುನಾಡಿನಲ್ಲಿ? ಅಲ್ಲಿ ಸ್ವಲ್ಪ ಟೀ

ತೋಟಗಳಿವೆ... ಮದ್ರಾಸಿನಲ್ಲಿ, ಮತ್ತೆ ಇಲ್ಲಿ ಕೆಲವು ವಸ್ತುಗಳ ಸಗಟುವ್ಯಾಪಾರ ವ್ಯಾಪಾರ ನಡೆಸ್ತೀನಿ... ಜೀವನಕ್ಕೆ ಸಾಕು."

ಅಣುಕು ತೃಪ್ತಿ ತೋರಿದ. ಜೀವನದ ನಿರ್ವಹಣೆಗೆ ಅವು ಅತ್ಯಧಿಕ ಎನಿಸಿತು ಅವಳಿಗೆ. ಅವನ ಮಾತು, ಚರ್ಯೆಗಳಲ್ಲಿ ಐಶ್ವರ್ಯವಂತನ ಲಕ್ಷಣ ಚೆನ್ನಾಗಿ ನಿರೂಪಿತವಾಗಿತ್ತು.

"ಕುಸುಮಾಕರ್ ಅನ್ನೋದು ಮರಾಠಿ ಹೆಸರೆ?"

ಏಕಾಕಿ ಹೆಣ್ಣು ದಿಟ್ಟತನದ ಮೆಟ್ಟಲು ಏರುತ್ತಿದ್ದಳು.

"ಹೆಸರಿಗೆ ಜಾತಿ ಇಲ್ಲ... ತಂದೆ ಮಹಾರಾಷ್ಟ್ರೀಯ. ತಮಿಳು ಸೀಮೆಯ ತಾಯಿ."

ಕಣ್ಣುಗಳಲ್ಲೇ ಅವಳನ್ನು ಹೀರುವಂತೆ ನೋಡಿದ. ಅವಳ ಕೆನ್ನೆಯಲ್ಲಿ ಉರಿತ ಕಂಡಿತು.

"ನೀವು ರಜೆ ಮೇಲೆ ಬಂದಿರಬೇಕು. ಇಲ್ಲಿ ಉಳಿದು ಏನು ಮಾಡ್ತೀರಿ?"

ಉಸಿರೇರಿತು. ನವೀನನಿಗೆ ತನ್ನ ಸಂಕ್ಷೇಪ ವಿವರಣೆ ಕೊಟ್ಟಾಗಿದೆ. ಅದೇ ತಪ್ಪು ತನ್ನಿಂದ ಮತ್ತೆ ಜರುಗುವಂತಿಲ್ಲ!

"ಬೀಚ್‌ನಲ್ಲಿ ಹೆಚ್ಚು ಕಾಲ ಕಳೆಯೊ ಇಚ್ಛೆ. ಮರಳು ದಂಡೆ ಬಿಸಿಲಿಗಾಗಿ ಡೆಲ್ಲಿಯಿಂದ ಬಂದೆ."

"ಬಾಂಬೆಗೆ ಪ್ರಥಮ ಭೇಟಿ ಇರ್ಬೇಕು."

"ಹೌದು."

"ಭೇಟಿಗೆ ಆರಿಸಿದ ನಗರವೇನೊ ಸರಿ... ಕ್ಷಮಿಸಿ, ನೀವು ಒಬ್ಬರೇ ಬಂದಿರೋದು ನನಗೆ ಆಶ್ಚರ್ಯ. ಆ ಧೈರ್ಯ ಮೆಚ್ತೀನಿ. ನಿಮಗೆ ಈ ನಗರದ ಎಲ್ಲಾ ಮೂಲೆಯನ್ನೂ ನಾನು ತೋರಿಸ್ತೀನಿ."

"ತುಂಬಾ ಸಂತೋಷ."

ಹಾಗೆಂದುದು ಸಮಯಕ್ಕೆ ಅಗತ್ಯವಾದ ಪೊಳ್ಳು ಸಮ್ಮತಿಯ ಮಾತು. ಎದೆ ರಿಮ ರಿಮ ಬಾರಿಸುತ್ತಿತ್ತು. ಗ್ಲಾಸ್ ಇಳಿಸಿದಳು. ಕುಸುಮಾಕರ ಗಡಿಯಾರ ಹಿಡಿದು ನೋಡುತ್ತಾ ಎದ್ದು ನಿಂತ.

"ಕ್ಷಮಿಸಿ, ಯಾರನ್ನೋ ಕಾಣೋದಿದೆ...ಬೈ ಬೈ"

ಹಿಂದಕ್ಕೆ ನೋಡದೆ ಹಜಾರ ದಾಟಿ ಇಳಿದು ಹೋದ. ಅವನ ಹಳದಿ ಕಾರು ರಸ್ತೆಯಲ್ಲಿ ಮಾಯವಾಯಿತು.

ಬಿಡುಗಡೆ ದೊರೆತಂತಾಯಿತು. ಅವನಲ್ಲಿ ಸೌಜನ್ಯ. ಮಿತಿ ಕಂಡರೂ ಯಾವುದೋ ಸೆಳೆತ, ಗೆಲ್ಲುವ ಶಕ್ತಿ. ಮತ್ತೆ ಅವನನ್ನು ಕಾಣುವ ಸುಪ್ತ ಆಸೆ!

ಮಧ್ಯಾಹ್ನದ ಊಟ ಕೋಣೆಯಲ್ಲೇ ಮುಗಿಸಿ ವಿಶ್ರಾಂತಿಗಾಗಿ ಹಾತೊರೆದಳು. ಕಿಟಕಿ ಮುಚ್ಚಿ, ಫ್ಯಾನ್ ಚಲಾಯಿಸಿ ಹಾಸಿಗೆಯಲ್ಲಿ ಮೈಚಾಚಿದಳು. ಮೊಗಸಾಲೆಯಲ್ಲಿ ಯಾರೋ ಆಡುತ್ತಿದ್ದ ಮಾತುಗಳು ಕೇಳಿದವು. ಅದು ಅಡಗುತ್ತಲೇ ನಿದ್ರೆ ಅವಳ ಮೇಲೆ ತರಂಗಗಳಲ್ಲಿ ಹಾದು ಬಂತು.

ಹಾಸಿಗೆ ಪಕ್ಕದ ಫೋನ್ ಗಂಟೆ ಬಾರಿಸಿದಾಗ ಅವಳಿಗೆ ಎಚ್ಚರವಾಯಿತು. ಅರೆ ನಿಮಿಷ ತಾನೆಲ್ಲಿರುವೆನೆಂಬ ತಬ್ಬಿಬ್ಬಿನಲ್ಲಿ ಎದ್ದು ಕುಳಿತಳು. ಗಡಿಯಾರ ಐದು ಗಂಟೆ ತೋರುತ್ತಿತ್ತು.

ಫೋನ್ ಕಿಂಕಿಣಿನಾದ ಮತ್ತೆ ಮೊಳಗಿತು. ರಿಸೀವರ್ ಎತ್ತಿದಳು. ಮರೆತಿದ್ದ ಪರಿಚಿತ ಕಂಠ.

"ಹಲೊ, ಮರೆತುಬಿಟ್ರಾ?... ನಾನು ನವೀನ ದಾಮ್ಲೆ.... ಒಂದೆರಡು ದಿನ ಹೊರಕ್ಕೆ ಹೋಗ್ತಿದೀನಿ. ಹಿಂದಿರುಗಿದ ಕೂಡಲೇ ರಿಂಗ್ ಮಾಡ್ತೀನಿ."

"ಆಗಬಹುದು." ಅವಳಿಗೆ ನಿರಾಶೆಯಾಗಿತ್ತು.

"ನಾನು ಶನಿವಾರ ವಾಪಸ್ ಆಗ್ತೀನಿ... ಅವತ್ತು ನಾನು, ಆಂಟಿ ನಿಮ್ಮೊಂದಿಗೆ ಊಟ ಮಾಡುವ ಅಂತ. ಸರಿಯೇ?"

"ಸರಿ."

"ಶನಿವಾರ ಸಂಜೆ ಏಳರ ಹೊತ್ತಿಗೆ ಬಂದು ನಿಮ್ಮನ್ನು ಕರೆದೊಯ್ತೀನಿ... ಹೊಟೇಲಿನಲ್ಲಿ ಎಲ್ಲಾ ಸರಿಯಾಗಿದೆ ತಾನೆ?"

"ಚೆನ್ನಾಗಿ ನೋಡಿಕೊಳ್ತಾ ಇದಾರೆ. ಹೊಟೇಲಿನೋರಿಗೆ ನಿಮ್ಮ ಸೂಚನೆ ಬಲವಾಗಿದೆ."

"ದೂರದಿಂದ ಬಂದಿರೋ ಒಂಟಿ ಹೆಣ್ಣಿನ ವಿಷಯ ನೋಡಿ."

"ಮಿಸ್ಟರ್ ದಾಮ್ಲೆ, ಅಷ್ಟು ಚಿಂತೆ ನಿಮಗೆ ಬೇಡ. ನನಗೆ ಯಾರ ಹೆದರಿಕೆಯೂ ಇಲ್ಲ. ಪಾವನ್ ಮನೆತನದ ಹುಡುಗಿ ನಾನು."

"ವೆರಿ ಗುಡ್. ಕೋಪ ಮಾಡ್ಕೋಬೇಡಿ... ಶನಿವಾರದವರೆಗೆ ಗುಡ್ ಬೈ."

ಶನಿವಾರಕ್ಕೆ ಇನ್ನೂ ಎರಡು ದಿನಗಳಿವೆ. ರಿಸೀವರ್ ಇಡುತ್ತಿದ್ದಂತೆ ಹೃದಯದಲ್ಲಿ ನೋವು ಕಾಣಿಸಿತು. ಹೊಟೇಲಿನ ಸಂಗೀತ ಕಾರ್ಯಕ್ರಮ ನೆನಪಿಗೆ ಬಂತು.

ಅರ್ಚನಾ ತಲೆಗೂದಲು ಹೊಳೆಯುವವರೆಗೆ ಬ್ರಷ್ ಮಾಡಿ ಸೀರೆ ಬದಲಿಸಿದಳು. ಮನರಂಜನೆ ಹಜಾರಕ್ಕೆ ಇಳಿದು ಬಂದಾಗ ಜನ ಸೇರಿದ್ದರು. ದೂರದ ಕುರ್ಚಿ ಹಿಡಿದು ಬಲಕ್ಕೆ ತಿರುಗಿದಳು. ಅಡ್ಡ ಸಾಲಿನಲ್ಲಿ ತನ್ನಂತೆ ಒಂಟಿಯಾಗಿ ಕುಳಿತ ಯುವತಿ! ತನ್ನ ಕಡೆಗೇ ಎರಡು ಸಾರಿ ನೋಡಿ ದೃಷ್ಟಿ ಪಕ್ಕಕ್ಕೆ ಹೊರಳಿಸಿದಳು. ಮತ್ತೆ ತಿರುಗಿದಾಗ ತನ್ನತ್ತಲೇ ತಿರುಗಿದ ಕಣ್ಣುಗಳು!

ಮತ್ತಷ್ಟು ದೂರಕ್ಕೆ ಕುಳಿತು ಕೈಲಿದ್ದ ಪುಸ್ತಕ ತೆರೆದಳು ಅರ್ಚನಾ. ಪುಟ ತಿರುವುತ್ತಿದ್ದ ಬೆರಳುಗಳು ಕಂಪಿಸಿದವು. ನಗರದಿಂದ ಹೊರಬೀಳುವುದು ಸರಿ ಎಂದು ಕುರ್ಚಿಯಿಂದ ಅರ್ಧ ಎದ್ದಳು. ಮತ್ತೆ ಭಾರವಾಗಿ ಕುಳಿತಳು.

ಒಳ ದನಿ ಹೇಳುತ್ತಿತ್ತು. ತಾನು ನಗರದಲ್ಲಿ ಯಾರಿಗೂ ಹೆದರದೆ ಉಳಿಯುತ್ತಿರುವುದು ಗತಿಸಿದ ಸೋದರನ ಸಲುವಾಗಿ ಅಲ್ಲ... ನವೀನ ದಾಮ್ಲೆಗಾಗಿ! ಶನಿವಾರದವರೆಗೆ ಹೊರಡುವಂತಿಲ್ಲ.

ಹುಚ್ಚ ಪರಿಚಯ! ನವೀನನ ವಿಷಯ ಏನೂ ತಿಳಿಯದು. ಅವನಿಗೆ ತನ್ನ ಅರ್ಧದಷ್ಟು ಸಂಗತಿಗಳ ಪರಿಚಯ ಆಗಿ ಹೋಗಿದೆ. ನವೀನ ಎರಡು ದಿನ ಬೊಂಬಾಯಿನಿಂದ ಹೊರ ಹೋಗುತ್ತಿದ್ದಾನೆ... ಬಹುಶಃ ಯಾರನ್ನೋ ಪ್ರೀತಿಸುತ್ತಿದ್ದಾನೆ. ಅವಳೊಂದಿಗೆ ಎರಡು ದಿನಗಳ ಮೋಜು...! ಶನಿವಾರ ತನ್ನಲ್ಲಿಗೆ ಬಂದು ಊಟಕ್ಕೆ ಕರೆದೊಯ್ಯುವುದರಲ್ಲಿ ಯಾವ ಅತಿಶಯವೂ ಇಲ್ಲ. ಪರಿಚಯ ಉಳಿಸಿಕೊಳ್ಳುವ ಒಂದು ಸಾಮಾನ್ಯ ಕಾರ್ಯಕ್ರಮ ಅವನದು.

ನವೀನ ಮನದಿಂದ ಹೊರಗಿರುವುದು ಸರಿ. ಅದರ ಸಾಧನೆಗೆ ಡೆಲ್ಲಿಗೆ ಹಿಂತಿರುಗುವುದೇ ದಾರಿ. ಚಂಚಲಚಿತ್ತ ತತ್ಕಾಲದಲ್ಲಿ ಗೆಲುವು ಸಾಧಿಸಿತು... ಸ್ವಾಗತ ವಿಭಾಗಕ್ಕೆ ದೃಢವಾಗಿ ಹೆಜ್ಜೆ ಸರಿಸಿದಳು.

ಅವಳ ಎದುರಿಗೆ ಬರುತ್ತಿದ್ದ ಕುಸುಮಾಕರ!

ಅಷ್ಟು ದೂರದಿಂದಲೇ ಹೇಳಿದ.

"ನಿಮ್ಮನ್ನು ನೋಡೋದಿಕ್ಕೇ ಬಂದೆ...ನಿಮ್ಮ ಕೋಣೆಗೆ ಫೋನ್ ಮಾಡ್ದೆ. ಉತ್ತರವಿಲ್ಲ..."

"ನೀವು ಪತ್ತೆದಾರರ ಹಾಗೆ ಕಾಣ್ತೀರಿ."

ಕಂಠದಲ್ಲೇ ಬಿರುಸು ಅಡಗಿಸಿದಳು. ಅವನ ಮುಖದಲ್ಲಿ ಅದೇ ಮುಗುಳುನಗೆ. ಕೈ ಕಟ್ಟಿ ನಿಂತು ಬೇಡಿಕೆಯ ಪದ ಬಿಡಿಸಿದ.

"ನನಗೆ ವ್ಯವಹಾರದಲ್ಲಿ ಎಣಿಸಿದ್ದಕ್ಕಿಂತ ಹೆಚ್ಚಿಗೆ ಲಾಭ ಬಂದಿದೆ. ನಿಮ್ಮನ್ನ ತಲೆಯಲ್ಲಿ ಇಟ್ಟುಕೊಂಡೇ ಬಂದೆ... ಹೊಟೇಲ್ ಸ್ಕೈಲಾರ್ಕ್‌ನಲ್ಲಿ ನಮ್ಮಿಬ್ಬರ ಊಟ... ಆಮೇಲೆ ಸ್ವಲ್ಪ ದೂರದ ಡ್ರೈವ್."

ದಿಟ್ಟತನದ ಮುಖವಾಡ ಕಳಚಿತು. ಎದೆ ಬಡಿತು ಏರಿತು. ಮೂಲೆಯಲ್ಲಿ ಧೈರ್ಯ ಇಣುಕಿತು. ಒಂಟಿತನ ದೂರಮಾಡಲು ಅದೊಂದು ಅವಕಾಶ. ಆಹ್ವಾನ ನಿರಾಕರಿಸಿ ಇಲ್ಲಿ ಮಾಡುವುದೇನು? ಡೈನಿಂಗ್ ಹಾಲ್‌ನಲಿ ಒಬ್ಬಳೇ ಊಟ ಮಾಡಿ ಮತ್ತೆ ಕೋಣೆ ಸೇರಿ ಹಾಸಿಗೆಯಲ್ಲಿ ದೇಹ ಚಾಚುವುದು... ಆಗ ಏಕಾಕಿತನದ ಪರಿಸರದಲ್ಲಿ ತಪ್ಪದೆ ದಾಳಿ ಇಡುವ ಚಿಂತೆ, ಚಂಚಲತೆ....

"ನೀವು ಇಲ್ಲ ಅಂದರೆ ಈ ಮನಸ್ಸಿಗೆ ತುಂಬ ನೋವು."

ಅವನು ಎದೆಗೆ ಕೈಯಿಟ್ಟು ಹಿತವಾಗಿ ಒತ್ತಾಯಿಸಿದ.

"ಹೊಟೇಲ್ ಸ್ಕೈಲಾರ್ಕ್ ಪಂಚತಾರಾ ಹೊಟೇಲು ಇರಬೇಕು. ನಾನು ಉಡುಗೆ ಬದಲಿಸಿ ಬರ್ತೀನಿ."

"ಈಗಿರೋ ಉಡುಗೆಯಲ್ಲಿ ಚೆನ್ನಾಗಿ ಕಾಣ್ತೀರಿ, ನಡೀರಿ... ನನ್ನ ಕಾರು ಹೊರಗಿದೆ."

ಮುಂದಿನ ಎರಡು ತಾಸುಗಳು ಸುಳಿಯಂತೆ ಸುತ್ತಿ ಹೋದವು.

ಸ್ಕೈಲಾರ್ಕ್ ಹೊಟೇಲಿನ ಭವ್ಯ, ಅಲಂಕೃತ ಲಾನ್. ವಿಶಾಲ ಪೋರ್ಟಿಕೊ. ವರ್ಣ ದೀಪಗಳ ಮಧ್ಯೆ ಪುಟಿದ ಕಾರಂಜಿ. ಬಣ್ಣದ ಜರಿ ವಸ್ತ್ರಗಳ ದ್ವಾರಪಾಲಕರು. ಬಿಳಿಪು ಪೇಟಾ, ಬಿಳುಪು ಸಮವಸ್ತ್ರಗಳಲ್ಲಿ ಹರಿದಾಡುವ ವೈಟರುಗಳು... ಅರೆಗತ್ತಲಿನ ಶೃಂಗಾರ ಲೋಕದಲ್ಲಿ ಸೊಗಸಾದ ಭೋಜನ. ಕಿಟಕಿಯಿಂದ ಕಾಣುವ ಉದ್ಯಾನ. ಅದರಿಂದ ಮುಂದಕ್ಕೆ ಅರಬ್ಬೀ ಸಮುದ್ರದ ಜಲ ರಾಶಿಯ ಕತ್ತಲು ನೋಟ.

ಅವಳ ಮನದಲ್ಲಿ ಸುಳಿದಾಡಿದ ಭೀತಿ, ಶಂಕೆ ಹರಿದು ಹೋದವು. ಕುಸುಮಾಕರ ಸೊಗಸಾದ ಸಂಗಾತಿ. ತನ್ನ ಓದಿನ ನೆನಪು ಅವಳ ಮುಂದೆ ಬಿಚ್ಚಿದ. ವ್ಯವಹಾರಗಳ ತುಣುಕು ವಿವರ ನೀಡಿದ ಅವಳನ್ನು ಪ್ರಶ್ನಿಸಿದ. ರೋಚಕ ಸನ್ನಿವೇಶದ ಕಾವಿನಲ್ಲೂ ಅವಳಿಗೆ ಎಚ್ಚರವಿತ್ತು. ಬೊಂಬಾಯಿಗೆ ಬಂದ ಉದ್ದೇಶ, ಸೋದರ ದೀಪಕನ ವಿಷಯ ಅವನ ಮುಂದೆ ಎತ್ತಲಿಲ್ಲ.

"ಡೆಲ್ಲಿಯಲ್ಲಿ ನಿಮಗೆ ಬಾಯ್‌ಫ್ರೆಂಡ್ ಇಲ್ಲವೆ?'

ಕಾಫಿ ಬಂದ ಮೇಲೆ ಕೇಳಿದ.

"ಇಲ್ಲ"

ಬಿಳುಪು ಸುಳ್ಳು! ನಿರಪಾಯದ ಸ್ನೇಹಿತರೆಂದು ಅಣ್ಣ ಪರಿಚಯ ಮಾಡಿಸಿದವರೊಂದಿಗೆ ತುಸು ಅಧಿಕವಾಗಿಯೇ ಡೆಲ್ಲಿಯಲ್ಲಿ ಸುತ್ತಾಡಿದುದನ್ನು, ಸಮಾರಂಭಗಳಲ್ಲಿ ಭಾಗವಹಿಸಿದುದನ್ನು ಅವಳು ಹೇಳಲಿಲ್ಲ. ಶ್ರೀಮಂತ ಕೂಟದಲ್ಲಿ ಒಮ್ಮೆ ಪಾನಮತ್ತಳಾಗಿ ಕಾಮುಕನ ಕೈಗೆ ಸಿಕ್ಕಿ ನರಳಾಡಿದುದನ್ನು ಬಾಯಿ ಬಿಡುವಂತಿಲ್ಲ.

ಅವಳಿಗೊಂದು ಚೆಂದದ ಬದುಕಿನ ಕನಸು. ತನ್ನ ಮನಕ್ಕೆ ಹಿತವಾದವನೊಬ್ಬ ಬಾಳ ಸಂಗಾತಿಯಾಗಿ ಸೇರಲು ಆತುರವಿಲ್ಲ.

ಮುಖ ಎತ್ತಿದಾಗ ಕುಸುಮಾರನ ದೃಷ್ಟಿ ಅವಳ ಮೇಲಿತ್ತು. ಮನದಲ್ಲಡಗಿರುವುದನ್ನು ಬಿಚ್ಚಿ ಓದುತ್ತಿರುವನೆಂಬ ವಿಚಿತ್ರ ಕಲ್ಪನೆ. ಇಪ್ಪತ್ನಾಲ್ಕು ತಾಸುಗಳಿಗಿಂತ ತುಸು ಹೆಚ್ಚಿನ ಕಾಲದ ಹಿಂದೆ ಆದ ಸ್ನೇಹ ಎಷ್ಟೊಂದು ಗಾಢವಾಗುತ್ತಿದೆ!

"...ಮಲಬಾರ್ ಹಿಲ್‌ನ ಸಣ್ಣ ಕೆಫೆಯಲ್ಲಿ ಆಫ್ರಿಕನ್ ನೃತ್ಯ ನಡೆಯುತ್ತೆ."

ಕುಸುಮಾಕರ ಮೆಲುದನಿಯಲ್ಲಿ ಹೇಳುತ್ತಿದ್ದ. ಹೇಳಿಕೆಯ ಮೊದಲ ಭಾಗ ಅವಳು ಕೇಳಿಸಿಕೊಂಡಿರಲಿಲ್ಲ.

"ಕ್ಷಮಿಸಿ... ನೀವು ಹೇಳಿದ್ದು ಕೇಳಿಸಿಕೊಳ್ಳಲಿಲ್ಲ."

ತಡವರಿಸಿದಳು ಅರ್ಚನಾ.

"ಆಫ್ರಿಕನ್ ಡಾನ್ಸ್ ನೋಡುವ ಅಂತ ಸೂಚಿಸ್ತಿದ್ದೆ."

ನಯವಾಗಿ ಮತ್ತೆ ಹೇಳಿದರೂ ಮುಖಭಂಗವಾಗದ ಛಾಯೆ ಅವನ ಮುಖದಲ್ಲಿ ಕಂಡಿತು.

ಹೊರಬಂದು ಕಾರಿನಲ್ಲಿ ಕುಳಿತರು. ಗುಡ್ಡ ಏರಿ ಎಡ ಬಲ ತಿರುಗಿದರು. ಶ್ರೀಮಂತ ಸೌಧಗಳನ್ನು ದಾಟಿ ಎರಡು ಗೋಡೆಗಳ ನಡುವೆ ಸರಿದರು. ವಾಹನದ ವೇಗ ಕುಗ್ಗಿತು. ಮಧ್ಯೆ ಹರಿದಾಡಿದ ಒಬ್ಬಿಬ್ಬರು ರಸ್ತೆಯ ಅಂಚಿಗೆ ಬಂದು ಕಾರಿನ ಬೆಳಕಿಗೆ ಕೈ ಮುಖಕ್ಕೆ ಮರೆ ಮಾಡಿ ಗೋಡೆ ಒರಗಿ ನಿಂತರು.

ಚಂದ್ರನ ಬೆಳಕಿನಲ್ಲಿ ಕಾರು ನಿಂತಿತು. ಕುಸುಮಾಕರ ಬಲಗಡೆಯ ಎತ್ತರದ ಹಳೆ ಕಟ್ಟಡ ತೋರಿದ.

"ಇಂಗ್ಲಿಷರ ಕಾಲದ ಕಟ್ಟಡ. ಬೆಳಗ್ಗೆ ಹೊತ್ತಿನಲ್ಲಿ ಹೊರಗಿನ ತೋಟ ನೋಡಲಿಕ್ಕೆ ಚೆಂದ."

ಉಸಿರು ಬಿಗಿ ಹಿಡಿದು ಮೈ ಅವಚಿದಳು. ದೀಪಕ್ ಮಲಬಾರ್ ಹಿಲ್‌ನ ವರ್ಣಚಿತ್ರ ರಚಿಸಿದ್ದ!

"ಹೌದು, ಬೆಳಗ್ಗೆ ಹೊತ್ನಲ್ಲಿ ಬಂದು ನೋಡಬೇಕು."

ಇಲ್ಲವಾದ ಕುತೂಹಲ ತೋರಿದಳು. ಅವಳ ತೋಳಿಗೆ ತನ್ನ ತೋಳು ಕೂಡಿಸಿ ನಡೆದ.

"ಎಚ್ಚರಿಕೆ! ಇಲ್ಲಿ ಹಾಸುಗಲ್ಲು ಬಹಳ ನುಣುಪಾಗಿವೆ."

ರಾತ್ರಿಯ ನಿಶ್ಯಬ್ದತೆ ಚೆನ್ನಾಗಿ ಪಸರಿಸಿತ್ತು. ದೂರದಲ್ಲಿ ನಾಯಿಯ ಅಳು ರಾಗ ಕೇಳಿತು. ಇಕ್ಕಟ್ಟಿನ ಭಾಗದಲ್ಲಿ ನಡೆದರು.

"ಈಗ ನಾವು ಹೋಗ್ತಾ ಇರೋದು ಹೊಸ ಕೆಫೆ. ಅದು ಕೆಫೆ ಅಲ್ಲ, ಕ್ಲಬ್ ಅಲ್ಲ. ಮನರಂಜನೆಯ ಸಣ್ಣ ಸ್ಥಳ. ಅದರ ಮಾಲೀಕ ಸೈಫುಲ್ಲಾ ನನ್ನ ಸ್ನೇಹಿತ. ವಿದೇಶೀಯರೇ ಅಲ್ಲಿಗೆ ಹೆಚ್ಚಾಗಿ ಬರೋದು. ನಿಮಗೆ ಅದು ಹಿಡಿಸುತ್ತೆ ಅಂತ ಭಾವಿಸ್ತೀನಿ.

ಅವರು ಮೆಲ್ಲನೆ ಇರಿಸುತ್ತಿದ್ದ ಹೆಜ್ಜೆಗಳ ಟೊಳ್ಳು ಸಪ್ಪಳ ನೀರವತೆಯಲ್ಲಿ ಸ್ಫುಟವಾಗಿ ಕೇಳುತ್ತಿತ್ತು. ಎರಡು ಪಕ್ಕಗಳ ಮನೆಗಳೂ ಕತ್ತಲಿನಲ್ಲಿ ಮುಳುಗಿದ್ದವು....

ಅರ್ಚನಾ ಒಮ್ಮೆಗೇ ಭಯಗೊಂಡಳು. ಕಂಡರಿಯದ ನಿರ್ಜನ, ಕತ್ತಲು ತಾಣದಲ್ಲಿ,

ಕೆಲವು ತಾಸುಗಳ ಪರಿಚಯದ ಮನುಷ್ಯನೊಂದಿಗೆ ತಾನು ಇಲ್ಲಿ ಮಾಡುತ್ತಿರುವುದೇನು?

* * *

ಕುಸುಮಾಕರ ತುಕ್ಕು ಹಿಡಿದ ಕಬ್ಬಿಣದ ಲಾಂದ್ರದ ಅಡಿಯಲ್ಲಿ ನಿಂತು, ಕಮಾನಿನಂತಿದ್ದ ದೊಡ್ಡ ಬಾಗಿಲಿನ ಪಕ್ಕದ ಹಿತ್ತಾಳೆಯ ಗಂಟೆ ಎಳೆದ.

ಒಳಗಡೆ ಕಡಕ್ಕನೆ ಸಲಾಕೆ ಸರಿಯಿತು. ಬಾಗಿಲು ಹಿಂದಕ್ಕೆ ಸರಿದಂತೆ ಮಾತುಗಳು ಕೇಳಿದವು. ಕಪ್ಪು ಮುಖದ ಅಫ್ರಿಕನ್ ದಪ್ಪನೆಯ ಕರ್ಟನ್ ಸರಿಸಿ ಅವರನ್ನು ಒಳಕ್ಕೆ ಬಿಟ್ಟ.

ಅರ್ಚನಾ ತಬ್ಬಿಬ್ಬಾಗಿ ನಿಂತಳು. ಕುಸುಮಾಕರನ ತೋಳು ಅವಳನ್ನು ಮುಂದುವರಿಯುವಂತೆ ಒತ್ತಿ ಸೂಚಿದವು.

ವಿಶಾಲವಾದ ಕೋಣೆ ಅದು. ನೆಲಕ್ಕೆ ಬೆಲೆ ಬಾಳುವ ರತ್ನಗಂಬಳಿ ಹಾಸಿತ್ತು. ಬಿಳುಪು ಗೋಡೆಗಳ ಮೇಲೆ ದೊಡ್ಡ ಪ್ರಮಾಣದ ತೂಗು ಚಿತ್ರಗಳು. ಗೋಡೆಯ ದಿಂಬುಗಳಿಗೆ ತಲೆ ಒರಗಿಸಿ ಕಾಲು ಚಾಚಿದ ಕೆಲವೇ ಮಂದಿ ಪ್ರೇಕ್ಷಕರು. ಅವರೆಲ್ಲರ ಮುಂದೆ ಪ್ರತ್ಯೇಕ, ಸಣ್ಣ ದುಂಡು ಮೇಜುಗಳು.

ಅವಳು ಕಸಿವಿಸಿಗೊಂಡಳು. ಆ ಕೂಟದಲ್ಲಿ ಅವಳೊಬ್ಬಳೇ ಹೆಣ್ಣು! ಕುಳಿತವರೆಲ್ಲಾ ಅವಳ ಕಡೆಗೊಮ್ಮೆ ಕಣ್ಣು ಹರಿಸಿ, ದೃಷ್ಟಿ ಬೀರುತ್ತ ತಿರುವಿದರು.

"ಇಲ್ಲಿ..." ಎಂದು ದಿವಾನೆಯೊಂದನ್ನು ಅವಳಿಗೆ ತೋರಿ ತಾನೂ ಪಕ್ಕಕ್ಕೆ ಕುಳಿತು ಮೆಲ್ಲನೆ ಹೇಳಿದ.

"ಇಲ್ಲಿ ಕಾಫಿ, ಷರಬತ್ತಿನ ಹೊರತು ಮತ್ತೇನೂ ಕೊಡುವುದಿಲ್ಲ."

"ಕಾಫಿ ಸಾಕು" ಎಂದು ಬಾಗಿಲು ಕಡೆ ನೋಡಿದಳು.

ಜರಿ ಹಳದಿಯ ಪೇಟಾ, ದೊಗಳೆ ಪ್ಯಾಂಟು ಧರಿಸಿದ ಮೂವರು ಸಂಗೀತಗಾರರು ಸಜ್ಜಾಗಿ ನಿಂತಿದ್ದರು. ಕೊಳವೆಯಂತಹ ಉದ್ದನೆಯ ಕಪ್‌ಗಳಲ್ಲಿ ಕಾಫಿ ಬಂತು.

"ಹೈ ಅಟ್ಲಾಸ್‌ನಿಂದ ಬಂದಿರೋ ಹುಡುಗಿಯಿಂದ ನೃತ್ಯ."

ಅವಳನ್ನು ಕಿರುಗಣ್ಣಿನಲ್ಲಿ ನೋಡಿ ನಗೆ ಮಿಂಚಿಸಿದ.

ಬಾಗಿಲ ಎದುರುಗಡೆಯ ತೆರೆಗಳು ಇಬ್ಭಾಗವಾದವು. ವಾದ್ಯ, ಸಂಗೀತ ಏರಿತು. ನರ್ತಕಿ ಒಳಕ್ಕೆ ಹೆಜ್ಜೆ ಇರಿಸಿದಳು. ಎರಡು ಭುಜಗಳ ಮುಂದೆ ಇಳಿಬಿದ್ದ ಉದ್ದನೆಯ ಕಪ್ಪು ಕೂದಲು, ಹಾವಿನಂತೆ ಬಳುಕುವ ತೋಳುಗಳು, ಎಡಬಲ ದೃಷ್ಟಿ ಮಿಂಚಿನ, ನಡು ಬಳುಕಿಸಿ ಜಾರಿ ಬಂದಳು.

ಕುಸುಮಾಕರ ಸಂಗಾತಿಯ ಮುಖ ನೋಡಿದ. ಅಶ್ಲೀಲವಾಗಿ ಅಂಗಗಳನ್ನು ಕುಣಿಸುತ್ತಿದ್ದ ನರ್ತಕಿಯ ಮೇಲೆ ತಿರಸ್ಕಾರದ ಕಣ್ಣು ನೆಟ್ಟಿದ್ದಳು.

"ಕಲೆ, ರಂಜನೆ, ಚೆಂದ ಯಾವುದೂ ಇಲ್ಲದ ನೃತ್ಯ. ಅಟ್ಲಾಸ್ ಹುಡುಗಿಯಲ್ಲಿ ವಿಶೇಷತೆ ಇರುತ್ತೇಂತ ಬಂದಿದ್ದು. ಕಾಫಿ ಮುಗಿಸಿ ಹೊರಟುಬಿಡೋಣ" ಮೆಲ್ಲನೆ ಸೂಚಿಸಿದ.

ಬಿಡುಗಡೆ ಬಯಸಿದವಳಂತೆ ತಲೆ ಅಲುಗಿಸಿದಳು. ದಪ್ಪನೆಯ ಪರದೆಗಳು ನಾಲ್ಕು ಕಡೆಗಳಿಂದಲೂ ಇಳಿಬಿದ್ದು ಕೋಣೆಗೆ ಗಾಳಿ ಬರದಂತಾಯಿತು. ಪ್ರೇಕ್ಷಕರು ಕುಡಿಕೆ, ಕೊಳವೆಗಳನ್ನು ಎಳೆದು ಸೇದತೊಡಗಿದರು. ಚಿಮ್ಮಿದ ಬೂದು ಬಣ್ಣದ ಹೊಗೆಯ ಕಟು ವಾಸನೆಯಿಂದ ಅವಳ ಕಣ್ಣುಗಳು ಹಿಗ್ಗಿದವು.

"ಹೊಗೆಸೊಪ್ಪೇನು ಅದು?"

ಅವಳ ಮೆದು ಪ್ರಶ್ನೆಗೆ ನಕ್ಕ.

"ಹಷೀಶ್ ಜಾತಿಯ ಹಾಗೆ... ಗಾಂಜಾ."

ವೈಟರ್ ಸಿಹಿ ತಿಂಡಿಗಳ ಟ್ರೇ ಹಿಡಿದು ಬಂದ. ಕೈ ಆಡಿಸಿ ಅವನನ್ನು ಹಿಂದಕ್ಕೆ ಕಳಿಸಿದ. ಅರ್ಚನಾಗೆ ಅವನು ಆಡುತ್ತಿದ್ದ ಮಾತುಗಳು ಕೇಳದು. ತಲೆಯಲ್ಲಿ ಹೊಗೆ, ಕಣ್ಣುಗಳಲ್ಲಿ ಮಂಪರು ಕವಿದಿತ್ತು.

ಹೊರಬರುತ್ತಲೇ ನೀಳವಾಗಿ ಉಸಿರೆಳೆದುಕೊಂಡಳು. ಬಿಸಿ ವಾತಾವರಣದಲ್ಲಿ ಗಾಳಿ ತಂಪಾಗಿ ಹರಿದುಬಂತು. ಬವಳಿ ಬಂದವಳಂತೆ ಸಂಗಾತಿಯ ತೋಳಿಗೆ ತಲೆ ಒರಗಿಸಿದಳು.

"ಏನಾಗ್ತಿದೆ?... ಮೈ ಸರಿ ಇಲ್ಲವೆ?"

ಅವನ ಪ್ರಶ್ನೆ ಬಹು ದೂರದಿಂದ ಬಂದಂತೆ ಕೇಳಿತು.

"ಏನು ಇಲ್ಲ... ಒಂದೆರಡು ನಿಮಿಷದಲ್ಲಿ ಸರಿ ಹೋಗುತ್ತೆ."

ಪದಗಳನ್ನು ಜೋಡಿಸಲು ಅವಳಿಗೆ ಶ್ರಮವಾಯಿತು. ಏಕಾಏಕಿ ದಾಳಿ ಮಾಡಿದ ಆಯಾಸದೊಂದಿಗೆ ಹೋರಾಡಿದಳು. ತೊಯ್ದ ಹಣೆಯ ಮೇಲೆ ಕೈ ಉಜ್ಜಿದಳು.

"ಸಕೆ ರಾತ್ರಿಯಲ್ಲಿ ನಿಮ್ಮನ್ನು ಕರೆತಂದು ತೊಂದರೆ ಕೊಟ್ಟಿದ್ದಕ್ಕೆ ಕ್ಷಮೆ ಕೇಳ್ತೀದೀನಿ."

ಹಾಗೆಂದು ಅವಳಿಗೆ ಅರಿವಾಗುವ ಮೊದಲೇ ಅವಳನ್ನು ಮಗುವಿನಂತೆ ತೋಳುಗಳಲ್ಲಿ ಎತ್ತಿ ನಡೆದ. ಪಾದಗಳು ನೆಲ ಮುಟ್ಟಿದಾಗ ಅವಳಿಗೆ ಕಾರಿನ ಬಳಿಗೆ ಬಂದಿರುವುದರ ಅರಿವಾಯಿತು.

"ಈಗ ಸರಿಯಾಗಿದ್ದೀರಾ?"

ಅವಳ ಭುಜಗಳಿಗೆ ಕೈ ಹೂಡಿ ನೇರವಾಗಿ ನಿಲ್ಲಿಸಿ ಮಂಪರು ಕಣ್ಣುಗಳನ್ನು ಪ್ರಶ್ನಿಸಿದ, ಆ ಕಣ್ಣುಗಳಿಗೆ ಸಮೀಪಿಸುತ್ತಿದ್ದ ಅವನ ಮುಖ ಮಂಜಾಗಿ ಕಾಣಿಸಿತು. ಚಂದ್ರ ಬೆಳಕಿನಲ್ಲಿ ಮಬ್ಬಾಗಿ ಕಾಣುವ ನಾಲ್ಕಾರು ಚುಕ್ಕೆಗಳ ತೆರೆ!

ಅವನ ತುಟಿಗಳು ಅವಳ ತುಟಿಗಳನ್ನು ಬಲವಾಗಿ ಒತ್ತಿದವು. ಅಂತ್ಯವಿಲ್ಲದಂತಹ ದೀರ್ಘ ಚುಂಬನ!

ಬಿಡಿಸಿಕೊಳ್ಳಲು ಚೈತನ್ಯವಿಲ್ಲದೆ ಅವನ ತೋಳು ಬಂಧನದಲ್ಲಿ ನಿಂತಳು. ದೇಹದ ನಾಳಗಳಲ್ಲಿ ಕುದಿ ನೀರು ಹರಿದಿತ್ತು. ಸೆಣಸಿ ಅವನ ಹಿಡಿತದಿಂದ ಹೊರ ಬಂದಳು. ಅವಳ ತಲೆಗೆ ತುಟಿ ಸ್ಪರ್ಶಿಸಿ ಗೊಣಗಿದ.

"ನಿಮ್ಮನ್ನು ಭ್ರಾಂತಗೊಳಿಸಬೇಕೂಂತ ಇಚ್ಛಿಸಲಿಲ್ಲ... ನಾನು ತಾಳ್ಮೆಯಿಂದ ಕಾಯಬೇಕೂಂತ ಇದ್ದೆ... ಆದರೆ ನೀವು ತುಂಬಾ ಸುಂದರವಾಗಿ ಕಾಣ್ತೀರಿ."

ಚಂದ್ರನ ಕಡೆಗೆ ತಲೆ ಎತ್ತಿದ.

"ನೀವು ಮಾಡಿದ್ದು ತಪ್ಪು" ಉಬ್ಬಸದಲ್ಲಿ ತೊದಲಿದಳು.

"ಹೌದು, ತಪ್ಪು... ಆತುರಪಟ್ಟೆ. ಇನ್ನು ತಾಳ್ಮೆಯಿಂದ ಇರ್ತೀನಿ. ಅದಕ್ಕಿಂತ ಹೆಚ್ಚಾಗಿ ಏನೂ ಹೇಳಲಾರೆ... ಮಾತು ಕೊಡ್ತೀನಿ. ನಾವು ಮತ್ತೆ ಸ್ನೇಹಿತರು, ಕ್ಷಮಿಸ್ತೀರಾ?"

"ಹುಂ,"

ಆ ಪದ ನಿಟ್ಟುಸಿರಿನೊಂದಿಗೆ ಬಂತು. ಶಕ್ತಿ ಉಡುಗಿತ್ತು. ಅವನ ಚುಂಬನ ಅವಳ ಮನಃಶಕ್ತಿಯನ್ನು ಹೀರಿತ್ತು.

ಅವಳನ್ನು ಕಾರಿನಲ್ಲಿ ಕೂಡಿಸಿ ವೀಲ್ ಹಿಡಿದ. ಹೋಟೇಲ್ ಸೇರುವ ಹೊತ್ತಿಗೆ ಅವಳಲ್ಲಿ ಚೇತನ ಕೂಡಿತ್ತು. ಕೈಚೀಲದಿಂದ ಕನ್ನಡಿ ತೆಗೆದು ನೋಡಿಕೊಂಡಳು. ಮುಖದ ಬಣ್ಣ ಕರಗಿದ್ದರೂ ಅಲ್ಲಿ ಶಾಂತತೆ ಉಳಿದಿತ್ತು.

"ನಾನು ಹೋಗ್ತಿದೀನಿ. ನಾಳೆ ಸಮುದ್ರಕ್ಕೆ ಇಳಿಯೋಣ. ಕ್ಷಮೆ ಇರಲಿ ಅಂತ ಮತ್ತೊಮ್ಮೆ ಕೇಳ್ತಿದೀನಿ."

ಗಾಬರಿಪಟ್ಟಿದ್ದು ತನ್ನ ದೌರ್ಬಲ್ಯ ಎನ್ನುವ ಭಾವದಲ್ಲಿ ಅವನತ್ತ ನಗೆ ತೋರಲು ಯತ್ನಿಸಿದಳು... ಅವಳಿಗದು ಪ್ರಥಮ ಚುಂಬನವಲ್ಲ. ಆದರೂ ಅಂತಹ ಸುಡು ಚುಂಬನದ ಅನುಭವವಿಲ್ಲ!

ಅವಳು ಹೊಟೇಲಿನ ಡೆಸ್ಕ್‌ನಲ್ಲಿ ಕೋಣೆಯ ಬೀಗದಕ್ಕೈ ಪಡೆಯುತ್ತಲೇ ಅವನ ಕಾರು ಸರಿದು ಹೋಯಿತು. ಲಿಫ್ಟ್‌ನಿಂದ ಸಿಂಧಿ ಹೆಂಗಸರ ಗುಂಪು ಹಾದು ಬಂತು. ಅರ್ಚನಾಳ ಕಣ್ಣು ಫಕ್ಕನೆ ಅರಳಿತು... ಒಬ್ಬಳ ಕೈಲಿ ಮುತ್ತುಗಳ ಕಂಠಹಾರ. ಅದರ ಮಧ್ಯೆ ತೂಗುಬಿದ್ದ ದಂತದ ಕೊಂಬು!

ಅವರ ಮಾತಿನಿಂದ ತಿಳಿದ ಸಂಗತಿ ಅದು. ಸರದಲ್ಲಿ ಕೊಂಬು ಧರಿಸಿದರೆ ಹೆಣ್ಣಿಗೆ ಶುಭ! ಅದೃಷ್ಟ ತರುವ ಚಿಹ್ನೆ. ದೇವತೆಯ ಆಶೀರ್ವಾದ ಅದು.

ಹೆಣ್ಣನ್ನು ಕೆಟ್ಟದ್ದರಿಂದ ದೂರ ಮಾಡುವ ಯಂತ್ರಪದಕ.

ಅರ್ಚನಾ ಲಿಫ್ಟ್‌ಗೆ ಧಾವಿಸಿದಳು. ಕೋಣೆ ಸೇರಿ ಬಾಗಿಲು ಭದ್ರಪಡಿಸಿ ಸೂಟ್‌ಕೇಸ್ ಬಿಚ್ಚಿದಳು. ಅಡಿಯಲ್ಲಿ ಹಳೆಯ ಮಕಮಲ್ ಒಡವೆ ಪೆಟ್ಟಿಗೆ. ತಾಯಿ ತನಗೆ ಬಿಟ್ಟು ಹೋದ ಅಮೂಲ್ಯವಾದ ಬಳೆ, ಮೂಗುತಿ, ಕಿವಿಯ ಆಭರಣದೊಂದಿಗೆ ಮೂರು ತಿಂಗಳ ಹಿಂದೆ ಸೇರಿದ ವಜ್ರದ ಕಂಠಹಾರ. ಅದಕ್ಕೆ ತೂಗು ಹಾಕಿದ ನೀಲಿ ವಜ್ರದ ಕೊಂಬು! ಅಣ್ಣನ ಮರಣದ ನಂತರ ಪೊಲೀಸರು ತನಗೆ ಕಳುಹಿಸಿದ ಪೆಟ್ಟಿಗೆಯ ವಸ್ತುಗಳಲ್ಲಿ ಅದೂ ಒಂದು. ದೀಪಕ ಬೆಲೆ ಬಾಳುವ ಆ ಕಾಣಿಕೆಯನ್ನು ಯಾರಿಗೆ ಅರ್ಪಿಸಲು ತಂದಿದ್ದನೊ ತಿಳಿಯದು.

ವರ್ಣಚಿತ್ರಗಳ ಫೋಟೋಗಳೊಂದಿಗೆ ವಜ್ರದ ಕೊಂಬನ್ನೂ ತಂದಿದ್ದಳು ಅರ್ಚನಾ. ಅದರಿಂದ ಅಣ್ಣನ ಮರಣದ ವಿವರ ದೊರೆಯಬಹುದೆಂಬ ಆಸೆ.

ಪೆಟ್ಟಿಗೆಯ ತಳಕ್ಕೆ ವ್ರಜದ ನೆಕ್‌ಲೆಸ್ ಸೇರಿಸಿದಳು. ನಿದ್ರೆ ಹತ್ತುವ ಮೊದಲು ಮುಚ್ಚಿದ ಕಣ್ಣುಗಳ ಮುಂದೆ ಎರಡು ದೃಶ್ಯಗಳು.

ದೀಪಕ ಪಾವನ್‌ನ ಹಸಿದ ಕಣ್ಣುಗಳು! ಆ ಕಣ್ಣುಗಳ ಮುಂದೆ ತೂಗಾಡಿದ ಹೊಳಪಿನ ವಜ್ರದ ಕೊಂಬು!

* * *

ಏಡ ಮೊಳ ಕೈ ಆಸರೆಯಲ್ಲಿ ನೀಳವಾಗಿ ದೇಹ ಬಾಚಿ ಬಲಗೈ ಬೆರಳುಗಳ ಮಧ್ಯದಿಂದ ಮರುಳು ಸುರಿಯುತ್ತಾ ಬೇಡಿಕೆ ಸಲ್ಲಿಸಿದ.

“ಈ ಮಧ್ಯಾಹ್ನದಿಂದ ನನಗೆ ಕೆಲಸ ಇದೆ. ನಾಳೆ ರಾತ್ರಿಗೆ ಮತ್ತೆ ಡ್ರೈವ್ ಹೋಗೋಣ.”

ಜುಹು ಬೀಚಿನ ಮರಳಿನ ಮೇಲೆ ಕುಳಿತಿದ್ದರು. ಅರ್ಚನಾ ಸಮುದ್ರದ ನೀರಿನ ಮೇಲೆ ಹಾರಾಟ ನಡೆಸಿದ ಬಿಳುಪು ಪಕ್ಷಿಗಳ ಸಾಲು ನೋಡುತ್ತಿದ್ದಳು. ಅವಳನ್ನು ತಟ್ಟಿ ಮತ್ತೆ ಹೇಳಿದ.

“ನಾನು ಒಳ್ಳೆಯವನು ಅಂತ ಒಂದು ಸಾರಿ ಹೇಳಿ.”

ನಗೆ ತಡೆದಳು. ಬೇಸರದ ಒಂದು ಎಳೆ ಮುಖದಲ್ಲಿ ಕಂಡಿತು.

ಮಲಬಾರ್ ಹಿಲ್‌ನ ಆ ಹೆಸರಿಲ್ಲದ ಕೆಫೆಗೆ ಭೇಟಿ ನೀಡಿದ ಮೇಲೆ ಕುಸುಮಾಕರ ಸೌಜನ್ಯದಿಂದ ವರ್ತಿಸಿದ್ದ. ಆಸಕ್ತಪೂರ್ಣ ಅದ್ಭುತ ವ್ಯಕ್ತಿ! ಅರ್ಥವಾಗದ ಸಂಗಾತಿ! ನವೀನನ ಬಗ್ಗೆ ಅವನಿಗೆ ಒಂದು ಪದ ತಿಳಿಸಿರಲಿಲ್ಲ. ಒಳ ಪ್ರೇರಣೆಯೊಂದು ಇಬ್ಬರು ಯುವಕರನ್ನೂ ಬೇರೆಯಾಗಿ, ಪರಸ್ಪರ ಸಂಬಂಧಿಸದಂತೆ ಇಡಲು ಎಚ್ಚರಿಸಿತ್ತು.

ಕಳೆದ ಎರಡು ದಿನಗಳು ಕುಸುಮಾಕರನ ಜೊತೆಯಲ್ಲಿ ಕಳೆದಿತ್ತು. ಮಲಬಾರ್ ಹಿಲ್‌ಗೆ ಹಗಲು ಹೊತ್ತಿನಲ್ಲಿ ಭೇಟಿ ಕೊಡುವ ಕಾರ್ಯ ಪೂರೈಸಿತ್ತು. ಟಾಚ್ ಕಾಂಟಿನೆಂಟಲ್‌ನಲ್ಲಿ ಕುಳಿತು ಸಮುದ್ರ ನೋಡುತ್ತಾ ಟೀ ಕುಡಿದಾಗಿತ್ತು. ಚೌಪಾಟಿ

ಮರುಳು ದಂಡೆ, ಆರ್ಟ್‌ಗ್ಯಾಲರಿ, ಪೊವಾಯ್ ಮತ್ತು ವಿಹಾರ್ ಸರೋವರಗಳ ವೀಕ್ಷಣೆ ಆಯಿತು... ಪ್ರತಿ ತಾಣದಲ್ಲೂ ಕುಸುಮಾಕರ್ ಸೊಗಸಾದ ಮಾರ್ಗದರ್ಶಿಯಾಗಿದ್ದ. ಅವಳನ್ನು ಸಂತೋಷಗೊಳಿಸುವುದರಲ್ಲಿ ತನ್ನ ಸಂತೋಷ ಕಂಡಿದ್ದ. ಆದರೂ ಅವಳಲ್ಲಿ ಉದ್ವೇಗ, ಆತಂಕ, ತನ್ನನ್ನು ಅವನು ಯಾವ ಗಳಿಗೆಯಲ್ಲಾದರೂ ಮತ್ತೆ ಚುಂಬಿಸುತ್ತಾನೆ ! ತನ್ನನ್ನು ಪ್ರೀತಿಸುವುದಾಗಿ ಹೇಳುತ್ತಾನೆ!

ಕುಸುಮಾಕರ ಎದ್ದು ಕುಳಿತು ಮರಳಿನ ಮೇಲಿದ್ದ ಪ್ಯಾಕ್‌ನಿಂದ ಸಿಗರೇಟು ಎಳೆದು ಹಚ್ಚಿದ. ಅವಳ ನೋಟ ಸ್ಥಗಿತಗೊಂಡಿತು. ಅಗಲೇ ಅವಳು ಪ್ರಥಮ ಬಾರಿಗೆ ಅವನ ಎಡ ಮೊಳಕೈ ಒಳ ಭಾಗದಲ್ಲಿ ಚಿತ್ರ ಗಮನಿಸಿದ್ದು ಜೋಡಿ ಕೊಂಬುಗಳ ಸಣ್ಣ ಹಸಿರು ಗುರುತು!

ಅವಳ ದೃಷ್ಟಿಯಿಂದ ಕಣ್ಣು ಸರಿಸಿದ.

“ನನ್ನ ಕೈ ಗುರುತು ನೋಡ್ತಾ ಇದೀರಾ?... ನಾನು ಏಳು ವರ್ಷದೋನು ಆಗಿದ್ದಾಗ ನನ್ನ ಕೈಗೆ ಬಂತು ಇದು. ನಮ್ಮ ಮನೆ ತೋಟದೋನು ನನ್ನ ರಕ್ಷಣೆ ಗುರುತು ಅಂತ ಹಸಿರು ಹಚ್ಚೆ ಹಾಕಿಸ್ದ... ತಂದೆಗೆ ಕೋಪ ಬಂದು ಅವನ್ನ ಕೆಲಸದಿಂದ ತೆಗೆದ್ರು. ಹೆಂಗಸರೇ ಇದನ್ನ ಹೆಚ್ಚಾಗಿ ನಂಬೋದು. ಧರಿಸೋದು ಫ್ಯಾಶನ್ ಆಗಿದೆ. ನೀವು ಬೇಕಾದಷ್ಟು ನೋಡಿರಬೋದು.”

“ಫುಟ್‌ಪಾತ್ ಅಂಗಡಿಯಲ್ಲಿ ನೋಡ್ದೆ.”

“ಬೆಳ್ಳೀದು ಸಾಮಾನ್ಯ. ಚಿನ್ನದ್ದೂ ಉಂಟು.”

“ವಜ್ರದ್ದೂ ಉಂಟು .”

ಎಂದು ತನ್ನಲ್ಲಿ ಹೇಳಿಕೊಂಡಳು. ಅಣ್ಣ ಉಳಿಸಿಹೋದ ಆಸ್ತಿಗಳಲ್ಲಿ ಅದೂ ಒಂದು. ತನ್ನ ಕೋಣೆಯ ಪೆಟ್ಟಿಗೆಯಲ್ಲೇ ಇದೆ.

“ಈ ಕೋಡಿನ ಚಿತ್ರದಿಂದ ಚಕಿತರಾದ ಹಾಗೆ ಕಾಣ್ತೀರಿ. ನನ್ನಲ್ಲಿ ವಜ್ರದಿಂದ ಮಾಡಿಸಿದ ಕೋಡು ಇದೆ...”

ಅವಳನ್ನು ಪರೀಕ್ಷಿಸುವಂತೆ ನೋಡಿದ. ಅರ್ಚನಾ ಚಕಿತತೆಯ ಪರಮಾವಧಿಯಲ್ಲಿ ಪ್ರತಿಮೆಯಾಗಿ ಕುಳಿತಳು. ನರಗಳಲ್ಲಿ ಮಿಡಿದಾಗ ಭಾವನೆಗಳ ತುಮುಲ ಅಡಗಿಸಿ ಮೆದುವಾಗಿ ಧ್ವನಿಸಿದಳು.

“ಜೊಡಿ ಕೊಂಬು ಸರದಲ್ಲಿ ಧರಿಸೊದು ಫ್ಯಾಷನ್ ಇರಬೋದು...ಆದರೆ ಸಾಮಾನ್ಯವಾಗಿ ಹೆಂಗಸರು ಅದನ್ನು ಹಾಕಿಕೊಳ್ಳೋದಿಲ್ಲ.”

ಇಬ್ಬರೂ ಮೌನವಾಗಿ ಕುಳಿತರು. ಸೂರ್ಯನ ಕಾವು ತೀಕ್ಷ್ಣಗೊಂಡಿತು. ಸಹಸ್ರ ಸೂಜಿಗಳು ಚರ್ಮ ಇರಿದಂತಾಗಿ ಭುಜ ಹೊರಳಿಸಿದಳು.

“ಎರಡು ನಿಮಿಷ ನನ್ನ ಷರಟು ಹೋದ್ದಿರಿ.”

ಅವಳು ತೆರಯುವ ಮೊದಲೇ ಷರಟು ಬೆನ್ನಿನ ಮೇಲೆ ಹರಡಿದ.

"ಇಲ್ಲಿ ಬಿಸಿಲೇ ಜಾಸ್ತಿ."

"ಹಾಗನ್ಬೇಡಿ. ಇನ್ನೊಂದು ತಿಂಗಳಿಗೆ ನೋಡಿ. ಈ ಸಿಟಿ ಮುಚ್ಚಿ ಹೋಗೋಷ್ಟು ಆಕಾಶದ ನೀರೆಲ್ಲಾ ಸುರಿದು ಹೋಗುತ್ತೆ. ಬೊಂಬಾಯಿನ ಮಳೆ, ಬಿಸಿಲು ಎರಡೂ ವಿಪರೀತದ್ದು. ಈಗ ಶಾಲ ಸಹಿಸಿ ನಿಧಾನವಾಗಿ ಕಪ್ಪು ಚರ್ಮ ಮಾಡ್ಕೋಬೇಕು."

ಅವನ ನಗೆ ಮುಖ ಚೆಂದ ಚಿಮ್ಮಿತು. ಸ್ನೇಹದ ಆಳ ಹೆಚ್ಚಿ ಮನದ ಚಳಿ ದೂರವಾಯಿತು.

"ಇನ್ನೊಂದು ಸಾರಿ ನೀರಿಗೆ ಇಳಿಯೋಣವೆ?"

ಸಿಗರೇಟು ಮರಳಿಗೆ ಒತ್ತಿದ. ಅವನ ಬಗೆಗೆ ಆತಂಕ ದೂರವಾಗಿ ಮನಸ್ಸು ಹರ್ಷಗೊಂಡಿತ್ತು. ಉತ್ತರ ನೀಡುವ ಬದಲು ನಗುತ್ತಾ ನೀರಿನ ದಿಕ್ಕಿಗೆ ಓಡಿದಳು.

ಸಂಜೆ ನವೀನನ ಕರೆಗೆ ಕಾಯುತ್ತಾ ಇದ್ದಂತೆ ಕುಸುಮಾಕರ ಅವಳಿಂದ ದೂರವಾದ. ನವೀನನ ಆಂಟಿಯ ಮನೆಗೆ ಭೇಟಿ ಕೊಡುವ ತವಕ.

ನೀಳ ದೇಹ ಹೊರಳಿಸಿ ನಿಲುವುಗನ್ನಡಿಯಲ್ಲಿ ಪ್ರತಿಬಿಂಬ ನೋಡಿಕೊಂಡಳು. ಹೊಳಪಿನ ಬಿಳುಪು ಸೀರೆ, ತೋಳಿಲ್ಲದ ಬಿಳುಪು ಬ್ಲೌಸ್.... ತೋಳುಗಳು ಅಂದವಾಗಿ ಕಾಣಿಸಿದವು. ಆದರೂ ತೃಪ್ತಿ ಇಲ್ಲ. ಉಡುಗೆ ಸರಳವಾಯಿತು!

ಸೂಟ್‌ಕೇಸಿನಿಂದ ವಜ್ರಹಾರ ತೆಗೆದಳು. ವಜ್ರದ ಕೊಂಬಿನ ಪದಕ ಕೆನ್ನೆಗೆ ಒತ್ತಿ ನಯವಾಗಿ ಕುತ್ತಿಗೆಗೆ ಹೊಂದಿಸಿದಳು. ಆದೇ ಉಡುಗೆ ಈಗ ತೃಪ್ತಿಕೊಟ್ಟಿತು. ಏಳು ಗಂಟೆಗೆ ಐದು ನಿಮಿಷ ಉಳಿದಂತೆ ಕೋಣೆಗೆ ಬೀಗ ಹಾಕಿ, ಲಿಫ್ಟ್ ಹಿಡಿಯದೆ ಮೆಟ್ಟಿಲು ಟಕ ಟಕ ಇಳಿದಳು. ಡೆಸ್ಕ್‌ನಲ್ಲಿ ಬೀಗದ ಕೈ ಒಪ್ಪಿಸಿ ತಿರುಗಿದಳು. ನವೀನ ಬರುತ್ತಿದ್ದ. ಆಗಮನದ ತಿಳಿವು ಇದ್ದರೂ ಮೈ ರೋಮಾಂಚನಕ್ಕೆ ಸಿಕ್ಕಿತು.

ನೆನಪಿನಲ್ಲಿ ನಿಂತುದಕ್ಕಿಂತಲೂ ಎತ್ತರದ ತೆಳು ದೇಹದವನು. ತುಟಿಗಳ ಮೇಲೆ ತಾಳ್ಮೆಯ ನಗೆ.

"ವೆರಿ ಗುಡ್. ನಿಮಗೆ ಹೇಗೆ ಗೊತ್ತು? ನಾನು ಕಾಯುವ ಜಾತಿಯೋನಲ್ಲ ಅಂತ."

ಅವಳ ಉಡುಗೆಯ ಮೇಲೆ ಮೆಚ್ಚಿಗೆಯ ಕಣ್ಣು ಹರಿಸಿದ.

"ಸಾಮಾನ್ಯ ಮನಃಶಾಸ್ತ್ರದ ತಿಳಿವಳಿಕೆ."

ಅವನಿಗೆ ಉತ್ಸಾಹ ಹೆಚ್ಚುವಂತೆ ಹೂ ನಗೆ ಅವನೊಂದಿಗೆ ಹೊರಕ್ಕೆ ನಡೆದಳು. ಅವನ ದೃಷ್ಟಿ ಅವಳ ಕುತ್ತಿಗೆಯ ವಜ್ರದ ಕೊಂಬಿನ ಮೇಲಿತ್ತು.

"ಇನ್ನು ನಿಮಗೆ ಅಪಾಯವೇ ಇಲ್ಲ... ನಿಮಗೂ ಇದರ ಗಾಳಿ ಬೀಸಿಬಿಡ್ತೆ?

ಹುಂ, ಬೊಂಬಾಯಿ ಗಾಳಿ! ವಜ್ರದಲ್ಲಿ ಮಾಡಿಸಿ ಹಾಕಿಕೊಳ್ಳೋಷ್ಟು ರಭಸವಾಗಿ ಬೀಸಿದ ಪ್ರಚಂಡ ಬಿರುಗಾಳಿ!... ಈ ಆಭರಣದಲ್ಲಿ ನೀವು ಮೇಲಿನ ಲೋಕದವರ ಹಾಗೆ ಕಾಣ್ತೀರಿ."

ಹಾಸ್ಯದ ನುಡಿ ತರಂಗ ಅವಳ ಎದೆಯಲ್ಲಿ ತಂತಿ ಮೀಟಿತು. ವಜ್ರದ ಕೊಂಬಿನ ವಿಷಯದಲ್ಲಿ ಅವನಿಂದ ಮತ್ತಷ್ಟು ಮಾತುಗಳಿಗೆ ಕಾತರಿಸಿ ಏನೂ ಹೇಳದೆ ನಿಂತಳು.

"ನಿಲ್ಲಬೇಡಿ, ಬನ್ನಿ."

ಅವಳನ್ನು ಎಚ್ಚರಿಸಿ ಟ್ಯಾಕ್ಸಿಗೆ ಚಪ್ಪಾಳೆ ತಟ್ಟಿದ. ವಾಹನ ವಿಶಾಲ ರಸ್ತೆಯ ಜನ ಜಂಗುಳಿಯಲ್ಲಿ ಹಾವಿನಂತೆ ಹರಿಯಿತು.

"ಎರಡು ದಿನ ಏನು ಮಾಡಿದ್ರಿ?"

ಪ್ರಶ್ನೆಯಿಂದ ಉತ್ಸಾಹ ತುಸು ತೂಕಡಿಸಿತು. ಕುಸುಮಾಕರನ ಬಗೆಗೆ ತುಟಿ ಬಿಚ್ಚುವಂತೆ ಮನದ ದನಿ ಮೀಟಿ ಹೇಳಿತು. ಅವಳ ದೌರ್ಬಲ್ಯದ ಕಡೆಗೆ ತಿರಸ್ಕಾರದ ಬೆರಳು ತೋರಿದ ಮತ್ತೊಂದು ದನಿ ನಿಖರವಾಗಿ ಹೇಳಿತು... ಈಗ ಕುಸುಮಾಕರನ ನೆನಪಿಗೂ ತೆರೆ ಎಳೆಯುವುದು ಸೂಕ್ತ!

"ನಗರವೆಲ್ಲಾ ಸುತ್ತಾಡ್ದೆ. ಸಮುದ್ರದಲ್ಲಿ ಈಜಾಡಿದೆ... ಬೋರಿವಿಲಿಗೆ ಹೋದೆ..."

"ಬೋರಿವಿಲಿಗೆ ಯಾಕೆ ಹೋದ್ರಿ?... ಸರಿ."

ಏರಿದ ಕಣ್ಣು ಇಳಿಸಿದ.

"ಅಣ್ಣನ ಸಮಾಧಿ ಅಂತ ಕಂಡ ನೆಲಕ್ಕೆ ಪುಷ್ಪ ಅರ್ಪಿಸಿ ಬಂದೆ. ಪೋಲೀಸರಿಂದ ಪ್ರಯೋಜನ ಆಗ್ಲಿಲ್ಲ. ಅವರು ಅಣ್ಣನ ವಿಷಯದಲ್ಲಿ ಏನೂ ತಿಳಿಸ್ಲಿಲ್ಲ."

ಮುಖದ ಸುಕ್ಕುಗಳು ನೇರವಾದವು. ವಿಷಯ ಹಿಡಿಸದಂತೆ ಗೋಣು ಅಡಿಸಿದ.

"ಅವರು ತಿಳಿಸೋದು ಏನೂ ಉಳಿದಿಲ್ಲ. ನಿಮ್ಮದೂ ವಿಚಿತ್ರ ಹಠ! ಆ ವಿಷಯ ಯಾಕೆ ಬಿಡೋದಿಲ್ಲ?... ನಾನು ಹೇಳಿದ್ದೆ."

ನಸುಗೋಪಕ್ಕೆ ಪ್ರತಿಯಾಗಿ ಅವಳೂ ಸಿಡಿದಳು.

"ಹೇಳಿದ್ರಿ... ನಿಮಗೆ ಹಾಗೆಲ್ಲಾ ಹೇಳೋದು ಸುಲಭ. ಅವನು ನನ್ನ ಅನ್ನ ಅನ್ನೋದು ಯಾಕೆ ಮರೆತ್ರಿ?... ಅವನೊಬ್ಬನೇ ನನಗೆ ಉಳಿದಿದ್ದ ರಕ್ತ ಸಂಬಂಧಿ. ಆ ಸಾವು ನೆನಪಿನಿಂದ ದೂರ ಆಗೋದಿಲ್ಲ.

ಅವನು ತುಟಿ ಬಿಗಿಸಿ ಕುಳಿತ. ವಾಹನ ಸಂಚಾರದ ತಡೆಯಿಂದ ಟ್ಯಾಕ್ಸಿ ನಿಂತಿತು.

"ನೀವು ಬೋರಿವಿಲಿಗೆ ಹೋಗೋದು ತಿಳಿಸಿದ್ರೆ ನಾನೂ ನಿಮ್ಮ ಜೊತೆಗೆ ಬರ್ತಿದ್ದೆ. ಒಬ್ಬರಿಗಿಂತ ಇಬ್ಬರು ಮೇಲು."

"ವ್ಯತ್ಯಾಸ ಏನೂ ಆಗ್ತಿರ್ಲಿಲ್ಲ."

ಕಟುವಾಗಿ ಹೇಳಿದಳು.

"ನಿಮ್ಮ ಅಭಿಪ್ರಾಯಕ್ಕೆ ಎದುರು ಹೇಳೋದಿಲ್ಲ. ವಿಷಯ ಮರೆತು ಬಿಡೋಣ."

ಸರಿ ಎನಿಸಿತು. ಅವನ ಕಡೆಗೆ ತಿರುಗಿದಳು. ನಾಲ್ಕು ಕಣ್ಣುಗಳು ಒಂದಾದಾಗ ಅವಳ ಹೃದಯದ ಬಡಿತ ಏರಿತು. ಟ್ಯಾಕ್ಸಿ ಮುಂದಕ್ಕೆ ಚಲಿಸಿತು.

"ವಿಷಯ ಮರೆತು ಬಿಡೋಣಾಂತ ಹೇಳ್ದೆ... ಮತ್ತೆ ನಾವಿಬ್ರೂ ಸ್ನೇಹಿತರು ತಾನೆ?"

ಅವನ ಹುಡುಗು ಪ್ರಶ್ನೆಯಿಂದ ನಗು ಬಂತು.

"ಮತ್ತೆ ಸ್ನೇಹಿತರು" ಒಪ್ಪಿಗೆ ಸೂಚಿಸಿದಳು.

ಸಯಾನ್ ವಿಭಾಗ ತಲುಪಿದರು. ಮರಗಳ ಸಾಲು ದಾಟಿ ಎರಡು ಅಂತಸ್ತುಗಳ ಮನೆಯ ಮುಂದೆ ವಾಹನ ನಿಂತಿತು.

"ಇಡೀ ಕಟ್ಟಡ ಆಂಟೀದು. ತಳಭಾಗದಲ್ಲಿ ವಾಸ. ಹಿಡಿಸ್ತಾ ಅದು?"

ಹಸಿರು ಬಣ್ಣದ ಕಿಟಕಿಯತ್ತ ಬೆರಳು ಮಾಡಿದ.

"ಫೈನ್!"

ಕಣ್ಣು ಅತ್ತಲಿಂದ ಕೀಳದೆ ಮೆಚ್ಚಿಗೆ ತೋರಿದಳು.

"ಸುಲೋಚನಾ ದಾಮ್ಲೆ ನನ್ನ ಅತ್ತೆ... ನನ್ನ ತಂದೆಯ ಅಕ್ಕ. ನಾನು ಆಂಟಿ ಅಂತ ಕರೆದರೆ ಅವಳಿಗೆ ಬೇಸರ... ಹಿಂದುಗಡೆ ಲಾನ್‌ನಲ್ಲಿ ಅತಿಥಿಗಳು ಇದಾರೆ."

ಅರ್ಚನಾ ಬೆಚ್ಚಿ ನಾಚಿದಳು.

"ಅತಿಥಿಗಳು? ಅಂದರೆ ಇನ್ನೂ ಕೆಲವು ಮಂದಿಯನ್ನು ಕೂಡಿ ಹಾಕಿದೀರಿ."

ತುಟಿ ಕಚ್ಚಿದಳು. ತಾನೊಬ್ಬಳೇ ಅತಿಥಿಯೆ? ಹೆಚ್ಚು ಮಂದಿ ಅಲ್ಲಿರುವುದರಲ್ಲಿ ತಪ್ಪೇನಿದೆ?

"ಅತ್ತೆಗೆ ಅದು ಪ್ರೀತಿಯ ಹವ್ಯಾಸ.. ಶನಿವಾರ ಅಂದ್ರೆ ಅತಿಥಿಗಳು ಬರ್ತಾರೆ... ಆಂಟಿ ಸುಲೋಚನಾ ಮೊದಲು ಚಿತ್ರಗಳಲ್ಲಿ ಸಣ್ಣ ಪಾತ್ರವಹಿಸ್ತಿದ್ಲು. ಅವಳ ಗಂಡ ಪಾರ್ಸಿ. ಅವರು ಹೋದ ಮೇಲೆ ಇಲ್ಲೇ ವಾಸ. ಸ್ವಭಾವದಲ್ಲಿ ಸ್ವಲ್ಪ ಅಧಿಕಾರ ಚಲಾಯಿಸೊ ಚಪಲ. ಅದರ ಕಡೆ ನೀವು ಗಮನಕೊಡಬೇಡಿ.

ಹಿಂಭಾಗದ ಆವರಣಕ್ಕೆ ಕಾಲಿಡುತ್ತಲೇ ಎತ್ತರದ, ಬೆಳ್ಳಿ ತಲೆಗೂದಲಿನ ಅಲಂಕೃತ ಹೆಂಗಸು ಲಗುಬಗೆಯಿಂದ ಎರಡು ಕೈಗಳನ್ನೂ ಮುಂದಕ್ಕೆ ಚಾಚಿ ಬಂದಳು.

"ಅರ್ಚನಾ ಪಾವನ್ ! ನೀವು ನಮ್ಮ ಕಾಕ್‌ಟೈಲ್‌ಗೆ ಬಂದಿದ್ದು ಬಹಳ ಸಂತೋಷ. ನಿಮ್ಮ ಪರಿಚಯ ಮಾಡಿಕೊಟ್ಟಿದಾನೆ ನವೀನ."

ತಾನು ನವೀನನ ಬಂಧು ಸುಲೋಚನಾ ದಾಮ್ಲೆ ಎಂಬುದನ್ನು ತಿಳಿಸಲಿಲ್ಲ ಚುರುಕಿನ ಕಾಲುಗಳ ಹೆಂಗಸು. ನವೀನ ತಲೆ ಕೆರೆದ.

ಸುಲೋಚನಾ ಅವಳನ್ನು ತಬ್ಬಿದಂತೆಯೇ ಮುಂದಕ್ಕೆ ಕರೆದೊಯ್ದು ಹೊಸ ಮುಖಗಳ ಪರಿಚಯ ಮಾಡಿಸಿದಳು.

"ಶ್ರೀಮತಿ ಮತ್ತು ಶ್ರೀ ಅಟ್ಕಿನ್‌ಸನ್... ಕರ್ನಲ್ ಹತ್ವಾರ್... ಶೋಭಾ ಅಪ್ಟೆ......ಗೀತಾ ಬೇನ್..... ಅವರ ಮಗಳು ಸುರಭಿ.......... ಪ್ರೊಫೆಸರ್ ಮಲ್ಹೋತ್ರ...."

ಅರ್ಚನಾ ಪಾವನ್‌ಳ ಹೆಸರನ್ನೇ ಅತಿಥಿಗಳಿಗೆ ಪರಿಚಯಿಸದೆ ಮುರು ಉಂಗುರಗಳಿಂದ ಫಳ ಫಳಿಸಿದ ಹಸ್ತವನ್ನು ಬೀಸುತ್ತಾ ನಡೆದುಬಿಟ್ಟಳು ಗಡಿಬಿಡಿ ಹೆಂಗಸು.

"ನಿಮ್ಮನ್ನ ಎಲ್ಲಿಯೋ ನೋಡಿದ ನೆನಪು... ಕಪ್ಪು ಕಣ್ಣುಗಳನ್ನು ಮರೆಯೊ ಹಾಗಿಲ್ಲ."

ಅರ್ಚನಾಳ ಮುಂದೆ ನಿಂತ ಕರ್ನಲ್ ಹತ್ವಾರ್ ಮೊನಚಾದ ಮೂಗು ಸವರಿಕೊಂಡ.

'ಎಲ್ಲಿಯೂ ನೋಡಿಲ್ಲ. ನಾನು ಬಾಂಬೆಗೆ ಬಂದು ಮೂರೇ ದಿನಗಳು ಆಗಿರೋದು."

ಕಪ್ಪು ಕಣ್ಣುಗಳು ಪಕ ಪಕ ಆಡಿದವು. ಮುಖದ ರಂಗು ಬದಲಾಯಿಸಿತೆಂದು ತಿಳಿದಳು... ತಲೆಯಲ್ಲಿ ಚಳುಕು ಬಂತು. ಕರ್ನಲ್ ತನ್ನನ್ನು ನೋಡಿರಬಹುದು. ಬಹುಶಃ ಮಲಬಾರ್ ಹಿಲ್‌ನ ಕೆಫೆಯಲ್ಲಿ ರಾತ್ರಿ ಕುಸುಮಾಕರನೊಂದಿಗೆ!

ಬಿಳುಪು ಸಮವಸ್ತ್ರದ ಹುಡುಗ ಚಹ, ಬಿಸ್ಕತ್ ತಿನಸುಗಳು ಟ್ರೇ ಹಿಡಿದು ಬೆತ್ತದ ಕುರ್ಚಿಗಳ ಮಧ್ಯೆ ಸುತ್ತಾಡಿದ. ಸುಲೋಚನಾ ಕಾಕ್‌ಟೈಲ್ ಟ್ರಾಲಿಯೊಂದಿಗೆ ನಡೆದು ಅಧಿಕಾರ ಚಲಾಯಿಸುತ್ತಿದ್ದಳು.

" ನೀವು ಬಾಂಬೆಗೆ ಒಬ್ಬಂಟಿಯಾಗಿ ಬಂದಿರೊ ಧೈರ್ಯ ಮೆಚ್ಚತಕ್ಕದ್ದೆ... ನಾನು ನಿಮ್ಮ ಹಾಗೇ...."

ಸುರಭಿ ಅಣಕು ಮೆಚ್ಚಿಗೆಯಲ್ಲಿ ಬಾಲಿಶವಾಗಿ ಹೇಳಿ ಪಾನೀಯದ ಗ್ಲಾಸ್ ನೀಡಿದಾಗ ಹೌಹಾರಿದಳು ಅರ್ಚನಾ. ನವೀನನಿಗಾಗಿ ತಿರುಗಿದಳು. ಅವನು ಕಾಣೆಯಾಗಿದ್ದ. ಮನಸ್ಸು ಹಾಗೆಯೇ ಹದಕ್ಕೆ ಬಂತು.

"ನೀವು ಇಲ್ಲಿನ ನೈಟ್ ಕ್ಲಬ್‌ಗೆ ಭೇಟಿ ಕೊಟ್ಟಿದೀರಾ?"

ಮತ್ತೆ ಬಂತು ಯುವತಿಯ ಪ್ರಶ್ನೆ.

"ಇಲ್ಲ."

ಕುಸುಮಾಕರನೊಂದಿಗೆ ಸೈಫುಲ್ಲಾನ ಕೆಫೆಯಲ್ಲಿ ಸೇವಿಸಿದ ಮಾದಕ ಹೊಗೆಯ

ಘಾಟು ತಲೆಗೇರಿತು.

"ನೈಟ್ ಕ್ಲಬ್ ವಿಷಯದಲ್ಲೇ ಪ್ರಬಂಧ ಬರೀತಾ ಇರೊ ಮನುಷ್ಯ ಇದಾರೆ ಇಲ್ಲಿ... ಅತ್ತ ಕಡೆ ನವೀನನ ಜೊತೆ ಮಾತಾಡ್ತಾ ಇದಾರಲ್ಲ, ಚಂದ್ರನ ಹಾಗೆ ಗುಂಡುಮುಖದೋರು... ಆಗಲೇ ಮೂರು ಗ್ಲಾಸ್ ಖಾಲಿ ಮಾಡಿದಾರೆ. ಪತ್ರಿಕೋದ್ಯಮ ಅವರ ಕಸುಬು."

ಅಸಂಬದ್ಧವಾಗಿ ಅಷ್ಟು ಹೇಳಿ ಸುರಭಿ ಜಿಗಿದು ಹೋದಳು. ಎರಡು ನಿಮಿಷಗಳ ನಂತರ ಅರೆ ಬಕ್ಕತಲೆಯ, ಕೆಂಗಣ್ಣಿನ ಅರವತ್ತರ ಮನುಷ್ಯ ಅವಳ ಸ್ಥಾನ ಹಿಡಿದ.

"ಕಾಕ್‌ಟೈಲ್ ಪಾರ್ಟಿ ಅಂದ್ರೆ ನನಗೆ ತಲೆನೋವು. ಆದರೆ ಸುಲೋಚನಾ ನನ್ನ ಬಿಡಬೇಕಲ್ಲ... ನಾನು ಮಲ್ಹೋತ್ರ. ಪೂನಾ ಯೂನಿವರ್ಸಿಟಿಯಲ್ಲಿ ಇತಿಹಾಸದ ಪ್ರೊಫೆಸರ್ ಆಗಿದ್ದೋನು. ನನ್ನ ಪರಿಚಯ ಮಾಡಿಕೊಂಡೆ. ನಿಮ್ಮ ಹೆಸರನ್ನೆ ತಿಳಿಸಲಿಲ್ಲ ಸುಲೋಚನಾ. ಅವಳಿಗೂ ನನ್ನ ಹಾಗೆ ಮರೆವು.... ಕ್ಷಮಿಸಿ, ಮಿಸ್...."

"ಅರ್ಚನಾ ಪಾವನ್."

ಅವನಲ್ಲಿ ಆಸಕ್ತಿ ಇಟ್ಟು ಹೇಳಿದಳು.

ಕೆಂಗಣ್ಣು ಮತ್ತಷ್ಟು ಕೆಂಪಾಯಿತು. ನಾಲಗೆ ಚಪ್ಪರಿಸಿ ಬಕ್ಕ ತಲೆ ಸವರಿಕೊಂಡ ಪ್ರೊಫೆಸರ್.

"ಪಾವನ್?.... ಪಾವನ್ ! ಎಲ್ಲಿ ಕೇಳ್ದೆ ಆ ಹೆಸರು?... ಹಾಂ, ಹಸಿದ ಕಣ್ಣಿನ ಸಂಭಾವಿತ ತರುಣ. ಬೋರಿವಿಲಿಯಲ್ಲಿ ಕಂಡ ಕಲಾಕಾರ... ಎಂತಾ ದುರಂತ ಅದು! ಅಷ್ಟೊಂದು ಪ್ರತಿಭೆ ಇದ್ದೋನು ಹಾಗೇಕೆ ಸಾಯಬೇಕು? ಅವನು ಬರೆದ ಎರಡು ಚಿತ್ರ ತೋರಿಸ್ದ..."

ಪಾನೀಯದ ಗ್ಲಾಸ್ ಅವನ ಮುಂದೆ ಬಂತು. ಮಲ್ಹೋತ್ರ ಆತುರದಿಂದ ಗ್ಲಾಸ್ ಎತ್ತಿ ಕೂಟದ ಶಿಷ್ಟಾಚಾರಕ್ಕೆ ಲಕ್ಷ್ಯಗೊಡದೆ ಗಟಗಟನೆ ಕುಡಿದು ಬರಿದು ಮಾಡಿದ.

ಅರ್ಚನಾ ನಿಂತ ನೆಲೆ ಮರೆತಿದ್ದಳು. ಅವನ ಪ್ರತಿ ಪದವನ್ನೂ ಉಸಿರು ಕಟ್ಟಿ ಮೈಯೆಲ್ಲಾ ಕಿವಿ ಮಾಡಿ ಕೇಳಿದಳು.

"ಆ ಪಾವನ್ ಬೇರೆ ಅಲ್ಲ... ನನ್ನ ಅಣ್ಣ ಅವನು... ದೀಪಕ ಪಾವನ್... ಇನ್ನಷ್ಟು ಹೇಳಿ ಪ್ರೊಫೆಸರ್."

ಉದ್ವೇಗದಲ್ಲಿ ಅವನ ಕೈಹಿಡಿದು ಅಲುಗಿಸಿದಳು.

"ನಾವು ಬೋರಿವಿಲಿಯ ಅಗ್ಗದ ಹೊಟೇಲಿನಲ್ಲಿ ಇಳಿದುಕೊಂಡಿದ್ವಿ...ಅವನು ಶ್ರೀಮಂತ. ಕನ್ಹೇರಿ ಗುಡ್ಡದ ಕಾಟೇಜಿನಲ್ಲಿ ಉಳಿಯಬಹುದಿತ್ತು.... ತುಂಬಾ ಸರಳ ಸ್ವಭಾವ. ದಿನಕ್ಕೆ ಹತ್ತು ರೂಪಾಯಿನ ಕೋಣೆ ಹಿಡಿದಿದ್ದ. ನಾವು ಆಮ್ಲೆಟ್, ಕಾಫಿ

ತಗೊಂಡ್ವಿ."

"ನಿಜ. ಅವನಿಗೆ ಮೊಟ್ಟೆಯ ಆಮ್ಲೆಟ್ ಅಂದ್ರೆ ಬಹಳ ಇಷ್ಟ."

ದೇಹದ ಎಲ್ಲಾ ಉಸಿರನ್ನೂ ಒಟ್ಟಾಗಿ ಹೊರಹಾಕಿದಳು.

ನವೀನ ಅವರಿಬ್ಬರ ಹಿಂದೆ ತುಸು ದೂರಕ್ಕೆ ಅಚಲನಾಗಿ ನಿಂತಿದ್ದ. ಮತ್ತಷ್ಟು ದೀಪಗಳು ಹೊತ್ತಿದವು. ಪ್ರೊಫೆಸರ್ ಅವಳ ಕೈ ಒತ್ತಿದ.

"ಕ್ಷಮಿಸಿ, ಮಿಸ್ ಪಾವನ್... ಇಂತಾ ಸಂತೋಷ ಕೂಟದಲ್ಲಿ ಏನೇನೋ ಹೇಳಿ ಉದ್ರೇಕಗೊಳಿಸ್ದೆ. ಒಂದೊಂದು ಸಾರಿ ಮರೆವಿನಲ್ಲಿ ಸ್ಥಳ, ಜನರ ಪರಿವೆ ಇಲ್ಲದೆ ಹೀಗೆ ಮಾತಾಡಿಬಿಡ್ತೀನಿ."

ಅನಿರೀಕ್ಷಿತ ಅದ್ಭುತ! ಸಾಮಾಜಿಕ ಕೂಟದಲ್ಲಿ ತಾನು ಅರಸಿ ಬಂದ ಸಂಗತಿ ಅದಾಗಿ ಸರಿದು ಬಂದಿತ್ತು. ಕುತೂಹಲ ತಡೆಯದಂತಾಗಿತ್ತು. ಹಿಂದೆ ನಿಂತ ನವೀನನನ್ನು ಮರೆತು ಬೇಡಿದಳು.

"ನೀವು ಹೇಳಿದ್ದೆಲ್ಲಾ ನನಗೆ ಮಹತ್ತರ. ಇಲ್ಲಿಗೆ ಬಂದ ಮೇಲೆ ನಮ್ಮಣ್ಣನ ವಿಷಯದಲ್ಲಿ ಇಷ್ಟು ವಿವರ ಸಿಕ್ಕಿದ್ದು ನಿಮ್ಮೊಬ್ಬರಿಂದಲೇ... ನಾನು ಬೊಂಬಾಯಿಗೆ ಬಂದಿದ್ದು ಇದಕ್ಕೇ."

ಪ್ರೊಫೆಸರ್ ನಿಸ್ಸಹಾಯಕನಂತೆ ತಲೆ ಅಲುಗಿಸುತ್ತಿದ್ದ.

"ನಾನು ಹೆಚ್ಚಾಗಿ ಹೇಳೋದೇನೂ ಇಲ್ಲ. ನಿಮ್ಮಣ್ಣನ ಭೇಟಿ ಮಾಡಿದ್ದು ಕೇವಲ ಆಕಸ್ಮಿಕ. ನಾನು ಕೆನ್ಹೇರಿ ಗುಹೆಗಳ ವಿವರ ಸಂಗ್ರಹಿಸಲಿಕ್ಕೆ ಹೋಗಿದ್ದೆ. ಅವನು ಅವುಗಳ ಚಿತ್ರ ಬರೆಯೋದಿಕ್ಕೆ ಬಂದಿದ್ದ. ಬೋರಿವಿಲಿ ಹೋಟೇಲಿನಲ್ಲಿ ಅವನದು ನನ್ನ ಪಕ್ಕದ ಕೋಣೆ. ತಿಂಡಿಗೆ, ಊಟಕ್ಕೆ ಟೇಬಲ್ ಬಳಿ ಸೇರ್ತಿದ್ವಿ.... ಅಷ್ಟೆ."

ಪ್ರೊಫೆಸರ್ ಮತ್ತಷ್ಟು ಪಾನೀಯಕ್ಕಾಗಿ ಮುಖ ಎತ್ತಿ ಕೈ ಸನ್ನೆ ಮಾಡಿದ. ಅರ್ಚನಾ ತಾನೇ ಹೊಗಿ ಗ್ಲಾಸ್ ತಂದುಕೊಟ್ಟಳು.

"ಮಿಸ್ಟರ್ ಮಲ್ಹೋತ್ರ, ಇದನ್ನ ಗುರ್ತಿಸ್ತೀರಾ?"

ಕೊರಳಿನ ನೆಕ್‌ಲೆಸ್‌ನಲ್ಲಿ ತೂಗಾಡಿದ ವಜ್ರದ ಕೊಂಬು ಹೊರಗೆಳೆದು ತೋರಿದಳು.

ಅಚ್ಚರಿ ತೋರದೆ ಕಣ್ಣು ಮುಚ್ಚಿ ವರದಿ ಕೊಟ್ಟ.

"ಚೆನ್ನಾಗಿ ಗುರ್ತಿಸ್ತೀನಿ. ನಿಮ್ಮಣ್ಣನ ಕೊಂಬಿನ ಪ್ಲಾಸ್ಟಿಕ್ ಮಾದರಿ ತಂದು ಅದರ ಹಾಗೆ ಚಿನ್ನದಲ್ಲಿ ಮಾಡಿಸಬೇಕು ಅಂದ. ದಾದರ್‌ನಲ್ಲಿ ನನಗೆ ಗೊತ್ತಿದ್ದ ಒಡವೆ ಅಂಗಡಿಗೆ ಅವನ್ನ ಕರೆದೊಯ್ದೆ. ಅಲ್ಲಿ ವಜ್ರದ ನೆಕ್‌ಲೇಸ್ ಇತ್ತು. ದೀಪಕ ಅದಕ್ಕೆ ವಜ್ರದ ಕೊಂಬು ಸರಿ ಅಂತ ತೀರ್ಮಾನಿಸ್ದ. ಅಂಗಡಿಯೋರು ಒಂದೇ ದಿನದಲ್ಲಿ ವಜ್ರದ ಕೊಂಬು ಮಾಡಿಕೊಟ್ರು.'

ಅರ್ಚನಾ ಹೊಳಪಿನ ಕೋಡು ನೋಡುತ್ತಾ ನಿಂತಳು. ನವೀನ ನಿಂತಲ್ಲಿಂದ ಎರಡು ಹೆಜ್ಜೆ ಸರಿದ. ಅವರಿಬ್ಬರ ಮಾತುಗಳು ಅವನಿಗೆ ಕೇಳಿಸುವಷ್ಟು ದೂರ!

"ಇದನ್ನ ಯಾರಿಗೋಸ್ಕರ ಮಾಡಿಸ್ದ ಅಂತ ಹೇಳ್ತೀರಾ? ನಿಮಗೆ ತಿಳಿದಿರಬಹುದು. ಅಣ್ಣ ಹೋದ ಮೇಲೆ ನನಗೆ ಬಂದ ವಸ್ತುಗಳಲ್ಲಿ ಇದೂ ಇತ್ತು."

ಮಲ್ಹೋತ್ರ ಕಸಿವಿಸಿಗೊಂಡು ತುಟಿ ಚಪ್ಪರಿಸಿದ. ಧ್ವನಿ ತಗ್ಗಿತು.

"ಸಿಲೋನಿ ನರ್ತಕಿಗೋಸ್ಕರವೇ ಇರಬೇಕು. ಅವಳನ್ನ ಯಾವುದೋ ಕ್ಲಬ್‌ನಲ್ಲಿ ನೋಡಿದ್ನಂತೆ. ಅವಳ ಚೆಲುವಿಗೆ ಸೋತು, ಅವಳ ಚಿತ್ರ ರಚಿಸೋವರೆಗೆ ಹೋಯ್ತು ಸ್ನೇಹ. ಅವಳು ಸುಲಭವಾಗಿ ಒಪ್ಪಿಲ್ಲ...."

"ಹೇಳಿ"

ಪಕ್ಕದಲ್ಲಿ ನೋಡಿ ಒತ್ತಾಯಿಸಿದಳು.

"ಮಾರನೆ ದಿನ ನನಗೆ ಹೆಮ್ಮೆಯಿಂದ ಹೇಳ್ದ, ಅವಳು ಚಿತ್ರಕ್ಕೆ ಎರಡು ತಾಸುಗಳಷ್ಟು ಕಾಲ ಕೊಡ್ತೀನಿ ಅಂತ ಒಪ್ಪಿದ್ದು. ಮುಖ ಪರದೆ ಧರಿಸಿರೊ ಹಾಗೆ ಚಿತ್ರ ಬರೆಯೋ ಯೋಜನೆ...... ಅವಳು ಸಿಂಹಳಿ ತಂದೆ, ಮದ್ರಾಸಿ ತಾಯಿಯ ಮಗಳಂತೆ."

ಮಾತು ಮುಗಿಸಿದಂತೆ ಕೈ ಕೊಡವಿ ಕನಸು ಕಾಣುವಂತೆ ನಿಂತ. ಅವಳ ಸಹನೆಗೆ ಚಗುಳಿ ಇಟ್ಟಂತಾಗಿತ್ತು.

"ದೀಪಕ ಮತ್ತೇನೂ ಹೆಚ್ಚಿಗೆ ಹೇಳಲಿಲ್ಲವೆ?"

ಅವಳೂ ಮಾತಿನ ಪೂರೈಕೆಗೆ ಬಂದು ಕೇಳಿದಳು.

ಪ್ರೊಫೆಸರ್ ಕನಸಿನಿಂದ ಎಚ್ಚೆತ್ತ.

"ಹಾಂ! ಮಿಸ್ ಪಾವನ್... ನನಗೆ ಆ ಡ್ಯಾನ್ಸ್ ಹುಡುಗಿ ಹೆಸರು ನೆನಪಿಗೆ ಬರ್ತಿದೆ. ಅವಳ ಹೆಸರು... ಕಾಮಿನಿ ರತ್ನೆ! ಅದೇ ಹೆಸರಲ್ಲಿ ಅವಳು ಕ್ಲಬ್‌ಗಳಲ್ಲಿ ನೃತ್ಯ ನಡೆಸ್ತಾ ಇದ್ದಿದ್ದು. ಬಹುಶಃ ಈ ವ್ರಜದ ಕೊಂಬು ಅವಳಿಗೆ ಕಾಣಿಕೆ ಕೊಡೋದಿಕ್ಕೆ ತೆಗೆದಿರಬಹುದು... ದೀಪಕ ತೀರಿಹೋದ ಒಂದು ವಾರದ ಮೇಲೆ ಯಾರೋ ಹೇಳಿದ್ದು ಕಾಮಿನಿ ರತ್ನ ಯಾವನೊ ಇಟಾಲಿಯನ್‌ನೊಂದಿಗೆ ಮದುವೆ ನಿಶ್ಚಯ ಮಾಡಿಕೊಂಡಳು ಅಂತ."

ಕಾಮಿನಿ ರತ್ನೆ ! ಎರಡು ಸಾರಿ ತನ್ನಲ್ಲೇ ಆ ಹೆಸರು ಹೇಳಿಕೊಂಡು ವಜ್ರದ ಕೋಡು ಕುತ್ತಿಗೆಗೆ ಹೊಂದಿಸಿದಳು.

ನವೀನ ಅಲ್ಲಿರಲಿಲ್ಲ. ತಲೆಯಲ್ಲಿ ಗೊಂದಲ ಎದ್ದಿತು. ಪ್ರೊಫೆಸರ್ ಅವನು ಕೇಳಿಸಿಕೊಂಡಿರುವುದು ನಿಜ....

ಸುಲೋಚನಾ ಗಟ್ಟಿಯಾಗಿ ಹೇಳುತ್ತಿದ್ದಳು.

"ಯಾರೊ ನೆಪ ಹೇಳಿ ಹೋಗಕೂಡದು. ಬಫೆ ಊಟ ಸಿದ್ಧವಾಗಿದೆ."

ಅರ್ಚನಾ ತಲೆ ಭಾರದಲ್ಲಿ ಯಾಚಿಸಿದಳು.

"ನಾನು ಹೋಗ್ತೀನಿ, ಶ್ರೀಮತಿಜಿ..."

"ಸಾಧ್ಯವೇ ಇಲ್ಲ. ಯಾರು ಬೇಕಾದ್ರೂ ಹೊಗಬೋದು. ನೀವು ಮಾತ್ರ ಇರಲೇಬೇಕು."

ಉಂಗುರಗಳ ಹಸ್ತ ಅವಳ ಭುಜ ಒತ್ತಿ ಕೂಡಿಸಿತು.

ಅರ್ಚನಾ ಎಲ್ಲರಿಂದ ದೂರವಾಗಿ ಬತ್ತದ ಕುರ್ಚಿಯಲ್ಲಿ ಕುಳಿತಳು. ಮಲ್ಹೋತ್ರ ಹೇಳಿದ ವಿವರಗಳು ತಲೆಯಲ್ಲಿ ಸುರುಳಿ ಹಾಕುತ್ತಿದ್ದವು.

ನವೀನ ಅತಿಥಿಗಳೊಂದಿಗೆ ಹರಿದಾಡುತ್ತಿದ್ದ. ಹೊರಕ್ಕೆ ಹೋಗಿ ಬರುತ್ತಿದ್ದ. ಅರ್ಚನಾ ತಲೆಗೆ ಕೈ ಹಚ್ಚಿದಳು.

ನವೀನ ಶ್ರೀಮಂತ ! ತನಗಿಂತಲೂ ಅಧಿಕ ಅಂತಸ್ತಿನವ ! ಇಬ್ಬರಿಗೂ ಮಧ್ಯೆ ಅಗಾಧ ಅಂತರ.

ಅಂತರದ ಪ್ರಮಾಣ ಕಲ್ಪಿಸಿಕೊಳ್ಳುವ ಚಪಲವೇಕೆ ? ತನಗೆ ಅವನಲ್ಲಿ ಪ್ರೀತಿಯೆ?

* * *

ನವೀನ ದಾಮ್ಲೆ ಗಡಿಯಾರ ನೋಡಿದ. ಹನ್ನೊಂದು ದಾಟಿತ್ತು. ಸುಲೋಚನಾಳ ಉಲ್ಲನ್ ಕೋಟು ತಂದು ಅರ್ಚನಾಳ ಹೆಗಲಿಗೆ ಹಾಕಿ ಹೇಳಿದ.

"ಚಳಿ ಜಾಸ್ತಿ ಆಗ್ತಿದೆ. ಹೊರಡೋಣ."

ಇಬ್ಬರೂ ಹೊರಬಂದರು. ಯಾವುದೊ ಕಾರಿನಲ್ಲಿ ಅವಳನ್ನು ಕೂಡಿಸಿ ವೀಲ್ ಹಿಡಿದ. ಮುಖದಲ್ಲಿ ಉತ್ಸಾಹ, ನಗೆ ಇರಲಿಲ್ಲ... ಪೂರ್ಣ ಗಂಭೀರತೆ !

"ಪ್ರೊಫೆಸರ್ ಮಲ್ಹೋತ್ರನ ಜೊತೇಲಿ ಬಹಳ ಮಾತಾಡ್ತಿದ್ರಿ. ಬಹುಶಃ ನಿಮಗೆ ತೃಪ್ತಿ ಆಗಿರಬೋದು."

"ತೃಪ್ತಿ ಅಂದ್ರೆ?"

"ನನ್ನ ಮಾತನ್ನು ನೀವು ಎರಡನೆ ಸಾರಿಗೆ ಗಾಳಿಗೆ ತೂರಿದ್ದು... ಮತ್ತೆ ಹೇಳ್ತೀನಿ, ಆ ವಿಷಯ ಅಲ್ಲಿಗೇ ಬಿಡಬಾರದೆ?"

ಅವಳ ಕಡೆ ಬಿರುಸಾಗಿ ನೋಡಿದ. ಅರ್ಚನಾ ಮೈ ಸೆಟೆಸಿದಳು. ಉತ್ತರ ಸಿಡಿದು ಬಂತು.

" ಅದು ನಿಮಗೆ ಸಂಬಂಧಿಸಿದ ವಿಷಯ ಅಲ್ಲ... ಪ್ರೊಫೆಸರ್ ನನ್ನ ಅಣ್ಣನ ಬೋರಿವಿಲಿಯಲ್ಲಿ ಭೇಟಿ ಆಗಿದ್ದು, ಅವರೊಂದಿಗೆ ಮಾತಾಡಿದ್ದು, ವ್ಯವಹಾರ ಮಾಡಿದ್ದು ಇವೆಲ್ಲಾ ನನಗೆ ಆಸಕ್ತಿ ತರೋ ವಿಷಯಗಳು. ನನೂ ಧರಿಸಿರೊ ಕಂಠಹಾರದ

ವಜ್ರದ ಕೊಂಬನ್ನು ಅವರು ಗುರುತು ಹಿಡಿದ್ರು. ಇದನ್ನು ಅಣ್ಣ ಸಿಂಹಳಿ ನರ್ತಕಿಗೆ ತಂದಿದ್ದು ಅಂತ ಅವರ ಅಭಿಪ್ರಾಯ."

"ಇವೆಲ್ಲಾ ಹೇಳ್ಬೇಡಿ. ಅಲ್ಲೇ ಕೇಳಿಸಿಕೊಂಡಾಗಿದೆ."

ಅವಳ ಮಾತನ್ನು ಅಡಗಿಸುವಂತೆ ಸರಕ್ಕನೆ ತಿರುವಿನಲ್ಲಿ ಕಾರು ಹಾಯಿಸಿದ ಮುಖದ ಬಣ್ಣ ಇಳಿದಿತ್ತು. ರಸ್ತೆಯ ಮೇಲೆ ಗಮನವಿಟ್ಟು ಮತ್ತೆ ಗಡುಸಾಗಿ ನುಡಿದ.

"ಈ ಕೆಟ್ಟ ನಗರದಲ್ಲಿ ನಿಮಗೆ ಏನಾದ್ರು ತೊಂದರೆ ಆದೀತು ಅನ್ನೋದಿಕ್ಕೆ ಇಷ್ಟು ಹೇಳ್ತಿದೀನಿ... ಪ್ರೊಫೆಸರ್ ಕೊಟ್ಟ ವಿವರದಿಂದ ಒಂದು ಕಥೆ ಕಲ್ಪನೆ ಮಾಡ್ಕೊಳ್ಳಿ. ನಿಮ್ಮಣ್ಣ ಕನಸುಗಾರ ಇರಬೋದು. ಅವನೂ ನಿಮ್ಮ ಹಾಗೇ ಅವತ್ತು ಬೊಂಬಾಯಿಗೆ ಪ್ರಥಮ ಬಾರಿಗೆ ಬಂದಿದ್ದು. ಅವನು ಕಲಾಕಾರ. ಸೌಂದರ್ಯಕ್ಕೆ ಮಾರುಹೋಗೊ ಜಾತಿ ಅದು. ಡ್ಯಾನ್ಸಿಂಗ್ ಹುಡುಗಿಯರಲ್ಲಿ ಹೆಚ್ಚು ಮಂದಿಗೆ ಶೀಲ, ನೀತಿ ಇರೋದಿಲ್ಲ. ನಿಮ್ಮಣ್ಣ ಆಳ, ಪರಿಣಾಮ ತಿಳಿಯದೆ ಪ್ರಣಯದ ಹೊಂಡದಲ್ಲಿ ಕಾಲಿಟ್ಟಿರಲಿಕ್ಕೆ ಸಾಧ್ಯ."

ಅಶ್ಲೀಲ ನರ್ತಕಿಯೊಂದಿಗೆ ಅಣ್ಣನ ಪ್ರಣಯ !

ಕೋಪದ ಸ್ವರದಲ್ಲಿ ಬುಸುಗುಟ್ಟಿದಳು.

"ಹಾಗೆಂದಿಗೂ ಇಲ್ಲ! ನೀವು ಹೇಳಿದ ಮಾತಿನಿಂದ ನಾನು ತಲೆ ಕೆಡಿಸಿ ಕೊಳ್ಳೋದಿಲ್ಲ....ಬೇಗ ಹೊಟೇಲಿಗೆ ಬಿಡಿ ಸಾಕು."

ಅವನಿಗೆ ತಾಳ್ಮೆ ಉಳಿದಿತ್ತು.ಕಾರು ರಸ್ತೆಯ ಅಂಚಿಗೆ ನಿಲ್ಲಿಸಿದ.

"ನಿಮಗೆ ಯಾವ ತೊಂದರೆಯೂ ಆಗಬಾರದು ಅನ್ನೋ ಉದ್ದೇಶದಿಂದ ಹಾಗೆ ಹೇಳ್ದೆ. ನಿಮ್ಮಣ್ಣನ ಮೇಲೆ ನಿಮಗೆ ಒಳ್ಳೆ ಅಭಿಪ್ರಾಯ ಇರೋದು ಸ್ವಾಭಾವಿಕ. ನಿಮಗೆ ಮತ್ತಷ್ಟು ಬೇಸರ, ಕೋಪ ಬಂದ್ರೂ ಸರಿ. ನಿಮ್ಮ ಹಿತದೃಷ್ಟಿಯಿಂದ ಹೇಳ್ತಿದೀನಿ... ದೀಪಕನ ವಿಷಯ ತಲೆಯಿಂದ ದೂರ ಮಾಡಿ ಸಂತೋಷವಾಗಿರಿ. ಬೊಂಬಾಯಿಗೆ ಭೇಟಿ ಕೊಟ್ಟ ಸಂತೋಷದ ನೆನಪು ನಿಮ್ಮ ಪಾಲಿಗೆ ಬಹಳ ದಿನ ಉಳಿಯೊ ಹಾಗೆ ಆಗಲಿ.

ಅವಳು ಸಿಡಿಯಲಿಲ್ಲ. ತಲೆ ತಗ್ಗಿಸಿದಳು.

"ಆಡಿದ ಮಾತುಗಳಿಗೆ ವಿಷಾದಪಡ್ತೀನಿ."

ಅವಳ ಕುತ್ತಿಗೆಯಲ್ಲಿ ಅಳು ಎದ್ದಿತು. ಆ ಮುಖದಲ್ಲಿ ಆಕರ್ಷಕವಾಗಿ ಕಂಡಳು. ಅವಳ ಭುಜಗಳನ್ನು ತೋಳಿನಿಂದ ಬಳಸಿದ. ಕೆನ್ನೆಗೆ ಕೆನ್ನೆ ಒತ್ತಿತು. ತುಟಿಗಳು ತುಟಿಗಳನ್ನು ಅರಸಿದವು. ಆ ಚುಂಬನ ಎಲ್ಲವನ್ನೂ ಮರೆಸಿತು.

ಅವನು ನೀಳವಾಗಿ ಉಸಿರೆಳೆದುಕೊಂಡ.

"ಕ್ಷಮಿಸಿ, ನಾನು ಹೀಗೆ ಮಾಡಬಾರದಿತ್ತು.... ತಾಳ್ಮೆಯಿಂದ ಕಾಯಬೇಕೂಂತ

ಇದ್ದೆ... ಆದರೆ ನಿಮ್ಮ ಚೆಲುವಿನ ಸೆಳೆತ!"

ಅವಳಿಗೆ ರೋಮಾಂಚನದಲ್ಲಿ ಅಚ್ಚರಿ. ಕುಸುಮಾಕರನೂ ಹಾಗೆಯೇ ಹೇಳಿದ್ದ.

ನಿಂತಿದ್ದ ಕಾರಿನ ಯಂತ್ರಕ್ಕೆ ಜೀವ ಕೊಟ್ಟು ಸಾವಧಾನವಾಗಿ ಹೇಳಿದ ನವೀನ.

"ನಿಮ್ಮಂತ ಹುಡುಗಿಗೆ ನಾನು ಸರಿಯಾದ ಹುಡುಗ ಅಲ್ಲ. ನಾನು ಮದುವೆ ಆಗೊ ಮನೋವೃತ್ತಿಯ ಮನುಷ್ಯ ಅಲ್ಲ. ನನ್ನ ಆಂಟಿನ ಕೇಳಿದ್ರೆ ಹೇಳ್ತಾಳೆ."

ಕಾರು ಮುಂದಕ್ಕೆ ಚಿಮ್ಮಿತು.

* * *

ಚೀಣಿ ಸಂಪ್ರದಾಯದ "ಥೌಸಂಡ್ ಅಂಡ್ ಒನ್" ರೆಸ್ಟೋರೆಂಟಿನಲ್ಲಿ ನೀರವತೆ ಹರಡಿತ್ತು. ಸನ್ನಿವೇಶಕ್ಕೆ ವಿರುದ್ಧವಾಗಿ ಅರ್ಚನಾಳ ಹೃದಯದಲ್ಲಿ ಸಮರ ಕೋಲಾಹಲ. ಅಚ್ಚುಕಟ್ಟಾಗಿ ಉಡುವು ಧರಿಸಿದ ಯುರೋಪಿಯನ್ನರೇ ಅಧಿಕವಾಗಿ ಕಾಣುತ್ತಿದ್ದ ಹಜಾರ.

"ಸುಮ್ಮನೆ ಕುಳಿತಿದೀರಿ. ನಿಮಗೆ ಊಟದ ಬದಲಾವಣೆ ಇರಲಿ ಅಂತ ಇಲ್ಲಿಗೆ ಕರೆತಂದೆ."

ಪಕ್ಕದಲ್ಲಿ ಕುಳಿತ ಕುಸುಮಾರ ಅವಳ ಭಾವನೆ, ಯೋಚನೆ ಕೆಡದಂತೆ ನಯವಾಗಿ ಹೇಳಿದ.

"ಸ್ವಲ್ಪ ತಲೆನೋವು."

ಹಣೆಯ ಮೇಲೆ ಬೆರಳಾಡಿಸಿದಳು. ವೈನ್‌ಗ್ಲಾಸ್ ಅವಳ ಕಡೆಗೆ ಸರಿಸಿದ.

"ನಿಮ್ಮ ಕಣ್ಣುಗಳ ತಳದಲ್ಲಿ ನಿಂತಿರೊ ನೆರಳು ಹಾಗೆ ಹೇಳ್ತಾ ಇದೆ... ನಿಮಗೆ ಸೊಗಸಾದ ದುಂಬಿ ಕಣ್ಣುಗಳಿವೆ. ಇಂತಾ ಕಣ್ಣುಗಳು ರಹಸ್ಯ ಕಾಪಾಡಲಾರವು.

ಮಾತಿನ ಅಣಕು ಅವಳನ್ನು ತಟ್ಟಿ ಎಬ್ಬಿಸಿತು. ಕುಸುಮಾಕರ ತನ್ನ ದೌರ್ಬಲ್ಯಕ್ಕೆ ಬೆರಳು ಮಾಡಿದ್ದ. ಅವನಿಗೆ ತನ್ನ ಅಣ್ಣನ ಸಂಗತಿ ತಿಳಿಸಿಲ್ಲ. ತನ್ನ ಬಗೆಗೆ ಹೆಚ್ಚಾಗಿ ತಿಳಿಸಲೆಂದು ಅವನ ಆಗ್ರಹ. ಅವನ ತೃಪ್ತಿಗಾಗಿ ರೆಸ್ಟೋರೆಂಟಿಗೆ ಬರಲಿಲ್ಲ. ಹೊಟೇಲ್ ಕೋಣೆಯಲ್ಲಿ ಏಕಾಕಿಯ ಮನ ಹಿಂಡುವ ಯೋಚನೆಗೆ ಹೆದರಿ ಬಂದವಳು.

ಯೋಚನೆ ಅಲ್ಲಿಯೂ ತಪ್ಪದು. ರಾತ್ರಿಯೆಲ್ಲಾ ನಿದ್ರೆಗೆಡಿಸಿ ತಲೆಯಲ್ಲಿ ಪ್ರತಿಧ್ವನಿಸುತ್ತಿರುವ ಮಾತು ಅದು.

"ನಾನು ಮದುವೆ ಆಗೊ ಮನೋವೃತ್ತಿಯ ಮನುಷ್ಯ ಅಲ್ಲ...."

ನವೀನನ ಅಹಂಭಾವದ, ನಿರ್ಲಕ್ಷ್ಯತೆಯ ಹೇಳಿಕೆ!

ಹೃದಯ ಹಿಡಿ ಗಾತ್ರಕ್ಕೆ ಬಂದು ಮುಷ್ಟಿ ಬಿಗಿಯಿತು. ಅವನ ತುಟಿಗಳ ಕಾವು ಇನ್ನೂ ಉಳಿದಿತ್ತು. ಚುಂಬನವನ್ನು ತಾನು ವಿರೋಧಿಸಲಿಲ್ಲವೇಕೆ? ಅವನಿಗದು

ಕ್ಷಣಿಕ ಮೋಜು!....

"ಹಾರಿಸೊ ಮಾತಿಗೆ ಎಷ್ಟೊಂದು ಗಲಿಬಿಲಿ ತಂದುಕೊಂಡಿದೀರಿ."

ಅರ್ಚನಾ ಅವನ ಕೆಣಕು ಮಾತಿನಿಂದ ಯೋಚನೆ ಚದುರಿಸಿ ಕೃತಕ ನಗೆ ತೋರಿದಳು.

ಪ್ರವೇಶದ ಎಡ ಪಕ್ಕದಲ್ಲಿ ತಗ್ಗಿನ ವೇದಿಕೆ ಮೇಲೆ ನಾಲ್ವರು ವಾದ್ಯಗಾರರು ಕುಳಿತರು. ಲಘು ಸಂಗೀತ ಎರಡು ನಿಮಿಷ ಹರಿದ ಮೇಲೆ ಕರತಾಡನ ಕೇಳಿತು. ಮೇಲಿನ ಕೋಣೆಯಿಂದ ನರ್ತಕಿ ಮೆಟ್ಟಿಲು ಇಳಿಯುತ್ತಾ ಬಂದಳು.

ಷಾಂಗೈನಿಂದ ಬಂದ ನರ್ತಕಿ ಚೆಂದದ ರೂಪಿನಲ್ಲಿ ಕಂಡಳು. ವಾದ್ಯಗಳ ಸ್ತರಕ್ಕೆ ಕೂಡುವಂತೆ ಅವಳ ನಡು, ತೋಳು, ಕಾಲುಗಳು ನಲುಗಿದವು ಪ್ರೇಕ್ಷಕರು ಪಾನೀಯ, ತಿನಿಸು ಮರೆತು ನೃತ್ಯ ನೋಡುತ್ತಿದ್ದರು.

"ಅವತ್ತಿನ ಆಫ್ರಿಕನ್ ನೃತ್ಯದ ಹಾಗೆ ಇದೂ ನಿಮಗೆ ಹಿಡಿಸಲಾರದು. ಇದನ್ನು ಮೆಚ್ಚುವ ಕಣ್ಣುಗಳೇ ಬೇರೆ" ಎಂದ ಕುಸುಮಾಕರ.

"ನನಗೆ ಹಿಡಿಸಲಿಲ್ಲ, ನಿಜ ನಿಮ್ಮ ಕಣ್ಣುಗಳಿಗೆ ಮೆಚ್ಚಿಗೆ ಆವರಿಸ್ತಾ ಇದೆ.'

"ಹಾಗೇನಿಲ್ಲ. ಯಾರಾದರೂ ಜೊತೆ ಇದ್ದಾಗ ಬದಲಾವಣೆಗೆ ಇದನ್ನು ನೋಡ್ತೀನಿ. ಇಂಥಾ ಕುಣಿತಕ್ಕೆ ಅಮೆರಿಕನ್ನರು ಏನಂತಾರೆ ಗೊತ್ತೆ? ಇದು ಪ್ರವಾಸಿಗರಿಗೆ ಹಾಕೋ ಗಾಳವಂತೆ !"

ವಿಶಾಲ ಭುಜ ಏರಿಸಿ ಉದ್ದನೆಯ ಚುಟ್ಟಾ ಹೊತ್ತಿಸಿ ಅರೆ ಮುಚ್ಚಿದ ಕಣ್ಣುಗಳಿಂದ ಹೊಗೆ ನೋಡುತ್ತಾ ಕುಳಿತ.

ಅರ್ಚನಾ ಎಚ್ಚರಿಕೆಯಿಂದ ಹೇಳಿದಳು.

"ಕೆಲವು ನೈಟ್ ಕ್ಲಬ್ ನೃತ್ಯಗಳು ಚೆನ್ನಾಗಿರುತ್ತವೆ ಅಂತ ಹೇಳ್ತಾರೆ.... ನಿನ್ನೆ ಯಾರೊ ಒಬ್ಬ ಪ್ರಸಿದ್ಧ ನರ್ತಕಿಯ ಹೆಸರು ಹೇಳಿದ್ರು –ಅವಳ ಹೆಸರು ಕಾಮಿನಿ ರತ್ನೆ..."

ಅವಳ ನಿರೀಕ್ಷೆ ಮೀರಿತ್ತು ಅವನ ವರ್ತನೆ. ತುಟಿಯ ಕಡೆಗೆ ಸರಿಯುತ್ತಿದ್ದ ಚುಟ್ಟಾ ಹಾಗೆಯೇ ಗಾಳಿಯಲ್ಲಿ ನಿಂತಿತ್ತು. ಮುಖ ಸುಕ್ಕುಗಟ್ಟಿತು. ಕಣ್ಣು ಗುಡ್ಡೆಗಳು ಗೋಲಿಗಳಂತೆ ಆಡಿದವು.

ಮೀಸೆಯ ಅಂಚಿನಲ್ಲಿ ನಗೆ ಮಿಂಚಿತು. ಭುಜ ಏರಿಸಿ ಚುಟ್ಟಾ ತುಟಿಗಿಟ್ಟು ಮತ್ತೆ ಕೂಡಲೇ ತೆಗೆದ.

"ಕಾಮಿನಿ ರತ್ನ? ಸಿಂಹಳಿ ಹೆಣ್ಣು ಇರಬೇಕು. ಕ್ಲಬ್ ನರ್ತಕಿಯರ ವಿಷಯದಲ್ಲಿ ನನಗೆ ಆಸಕ್ತಿ ಕಡಿಮೆ... ಅವಳ ಹೆಸರು ನಿನ್ನ ಕೇಳಿದೆ ಅಂದ್ರಾ?.... ಎಲ್ಲಿ?"

"ಕಾಕ್‌ಟೈಲ್ ಪಾರ್ಟಿಯಲ್ಲಿ."

ಅವಳನ್ನು ಇರಿಯುವಂತೆ ನೋಡಿದ.

"ಬೆಳಗ್ಗೆ ಬೀಚ್‌ನಲ್ಲಿ ನನಗೆ ಕಾಕ್‌ಟೈಲ್ ಪಾರ್ಟಿಯ ವಿಷಯ ಹೇಳ್ಲಿಲ್ಲಾ!... ನಿಮಗೆ ಈ ಸಿಟಿಯಲ್ಲಿ ನನ್ನ ಹೊರತಾಗಿ ಯಾರೂ ಗೊತ್ತಿಲ್ಲಾಂತ ತಿಳಿದಿದ್ದೆ."

'ಕೇವಲ ಒಬ್ಬ ವ್ಯಕ್ತಿಯ ಪರಿಚಯ... ನವೀನ ದಾಮ್ಲೆ ಅಂತ. ನಾನು ಡೆಲ್ಲಿಯಿಂದ ಬರೋವಾಗ ನನ್ನ ಜೊತೆಯಲ್ಲೇ ಬಂದೋರು."

ನಿರರ್ಗಳವಾಗಿ ಹತೋಟಿ ಮೀರಿ ಬಂದಿತ್ತು ವಿಷಯ. ತಾನು ಒಂಟಿಯಾದರೂ ತನ್ನಲ್ಲಿನ ಒಂದು ಆಯುಧ ಎಂಬಂತೆ ನವೀನನ ಹೆಸರು ತಿಳಿಸಿದ್ದಳು. ಪಕ್ಕದಲ್ಲಿ ಕುಳಿತ ಬಲಶಾಲಿಯನ್ನು ಹತೋಟಿಯಲ್ಲಿಡಲು ಆತ್ಮರಕ್ಷಣೆಗಾಗಿ ಬಳಸಿದ ಪದ... ನವೀನ ದಾಮ್ಲೆ!

ಪ್ರಯೋಗಿಸಿದ ಅಸ್ತ್ರ ತನ್ನ ಕಡೆಗೇ ತಿರುಗಿದಂತಾಯಿತು.

ಇರಿತದ ಕಣ್ಣುಗಳನ್ನು ವಿಶಾಲಗೊಳಿಸಿದ.

"ನವೀನ ದಾಮ್ಲೆ!"

"ಹುಂ, ನಿಮಗೆ ಅವರ ಪರಿಚಯ ಇದೆಯೆ?"

ಕುಸುಮಾಕರ ಗಹಗಹಿಸಿದ.

"ಆ ಹೆಸರು ಕೇಳಿದೀನಿ. ಪರಿಚಯ ಇಲ್ಲ... ಅ ಹೆಸರಿನಲ್ಲಿ ಒಬ್ಬ ಸ್ಮಗ್ಲರ್ ಕೂಡ ಇದಾನೆ... ಇವನು ಅವನು ಬೇರೆ ಇರಬಹುದು... ಸರಿ, ಪಾರ್ಟಿಯಲ್ಲಿ ಬೇರೆ ಯಾರು ಭೇಟಿ ಆದ್ರು? ನರ್ತಕಿಯ ಹೆಸರು ಹೇಳಿದ್ದು ಯಾರು?

"ನೆನಪಿಲ್ಲ."

ಭೀತಿಯಿಂದ ಪ್ರೊಫೆಸರ್ ಹೆಸರು ಹೇಳಲಾಗದೆ ಮುಖ ತಿರುಗಿಸಿದಳು. ಸಂಮೋಹನದ ಆ ಕಣ್ಣುಗಳನ್ನು ಎದುರಿಸದಾದಳು.

ಕುಸುಮಾಕರ ತನ್ನ ಭಾರವಾದ ಕೈ ಅವಳ ಕೈಮೇಲೆ ಇಟ್ಟ.

'ಸಂಬಂಧವಿಲ್ಲದ ವಿಷಯಕ್ಕೆಲ್ಲಾ ನಾವು ತಲೆಕೆಡಿಸಿಕೊಳ್ಳೋದು ಬೇಡ. ಕ್ಲಬ್ ನರ್ತಕಿ, ಸ್ಮಗ್ಲರ್ ಇವರ ಹೆಸರು ಎತ್ತೋದು ನಮ್ಮ ಘನತೆಗೆ ತಕ್ಕದ್ದಲ್ಲ. ನಮ್ಮಿಬ್ಬರ ವಿಷಯ ಮಾತ್ರ ಪರಸ್ಪರರಿಗೆ ಬೇಕಾಗಿರೋದು."

ಮುಖ ಎತ್ತಿದಳು. ಪುನಃ ಪಕ್ಕಕ್ಕೆ ತಿರುಗಿಸಿದಳು. ಅವನಿಂದ ಆಕರ್ಷಿತಳಾಗಿದ್ದಳು.... ಭೀತಳೂ ಆಗಿದ್ದಳು.

ನೃತ್ಯದ ಹಂತ ಏರಿತ್ತು. ಅರ್ಚನಾ ದೃಷ್ಟಿ ಪಕ್ಕಕ್ಕೆ ತಿರುಗಿಸಿದಾಗ ದ್ವಾರಪಾಲಕ ಯಾರನ್ನೊ ಸ್ವಾಗತಿಸಲು ಬಾಗಿಲಿಗೆ ನಡೆದಿದ್ದ.

ನರಗಳಿಗೆ ಷಾಕ್ ತಟ್ಟಿತು... ಕನಸಲ್ಲ, ನವೀನ ! ಅವನ ಹೆಸರು ಇಲ್ಲಿ ಎತ್ತಿದ್ದರಿಂದ

ಅವನು ಅದ್ಭುತ ರೀತಿಯಲ್ಲಿ ಬಂದನೆ!

ನವೀನ ಸ್ವಾಗತಕ್ಕೆ ಪ್ರತಿಕ್ರಿಯೆ ತೋರಿ ನಿಶ್ಯಬ್ದವಾಗಿ ಒಳ ಬಂದ. ಮೇಜುಗಳ ಮಧ್ಯೆ ಚಲಿಸಿ ಬಾರ್ ಕಡೆಗೆ ನಡೆದ. ಕುಸುಮಾಕರ ಅವನನ್ನು ಗಮನಿಸಿರಲಿಲ್ಲ.

ನವೀನ ತನ್ನನ್ನು ನೋಡಿದನೆ? ಚಿಂತೆ ಇಲ್ಲ... ರಾತ್ರಿ ಅವನು ಹಾಗೆ ವರ್ತಿಸಿದ ಮೇಲೆ ತಾನು ಅವನಿಗೆ ಹೆದರುವುದೇನಿದೆ? ತಾನು ಕುಸುಮಾಕರನೊಂದಿಗೆ ಕುಳಿತಿರುವುನ್ನು ನವೀನ ನೋಡಲಿ!

'ಮಹಾಬಲೇಶ್ವರದಲ್ಲಿರೊ ನನ್ನ ಮನೆ ನೋಡಬೇಕು ನೀವು. ಆಗ ನನ್ನ ಮೇಲೆ ನಿಮಗೆ ಅಭಿಪ್ರಾಯ ಬದಲಾಯಿಸುತ್ತೆ."

"ಅರ್ಥ ಆಗ್ಲಿಲ್ಲ."

'ನಿಮ್ಮಂತ ಚುರುಕು ಹುಡುಗಿ ಅರ್ಥ ವಿವರಣೆ ಪಡೆಯಬಾರದು."

ಅರ್ಚನಾಗೆ ಅರ್ಥವಾಗಿತ್ತು... ಪ್ರಣಯದ ದೃಢ ಹೆಜ್ಜೆ!

ವೈಟರ್ ಅವರ ಮೇಜು ಖಾಲಿ ಮಾಡಿ ಎರಡು ಗ್ಲಾಸ್ ಬ್ರಾಂದಿ ತಂದಿಟ್ಟ. ಮಾತಿಲ್ಲದೆ ಎರಡು ಗುಟುಕು ಸೇವಿಸಿದಳು.

ನವೀನ ಯಾವ ಗಳಿಗೆಯಲ್ಲಾದರೂ ತನ್ನ ಮುಂದೆ ನಿಲ್ಲಬಹುದು! ಭಯವಿಲ್ಲ... ಅಣ್ಣನ ವಿಷಯದ ಶೋಧನಿಗೆ ಧೃತಿಗೆಡಿಸುವ ನಿರುತ್ಸಾಹದ ಗೆಳೆಯ. ಕುಸುಮಾಕರನ ಸ್ನೇಹದಲ್ಲಿ ಕಾಮಿನಿ ರತ್ನೆಯನ್ನು ಕಾಣುವ ಸಂಭವವಿದೆ...

"ನನ್ನ ಮಾತಿಗೆ ಏನೂ ಹೇಳ್ಲಿಲ್ಲ ನೀವು."

ಪಿಸು ಸ್ವರದಲ್ಲಿ ಕೇಳಿದ.

ಹೇಳುವುದೇನು? ತನ್ನ ರಕ್ಷಣೆ ತನಗೆ ಕಷ್ಟವಲ್ಲ.

ವೈಟರ್ ಕುಸುಮಾಕರನತ್ತ ವಿನಯದಿಂದ ಬಾಗಿ ಕಿವಿಯಲ್ಲಿ ಏನೊ ಹೇಳಿದ. ಸಂಗಾತಿಯ ಮುಖ ಮ್ಲಾನಗೊಂಡು ಎದ್ದು ನಿಂತ.

"ಎರಡು ನಿಮಿಷದಲ್ಲಿ ಬರ್ತೀನಿ, ಕ್ಷಮಿಸಿ... ಫೋನ್ ಕರೆ... ವ್ಯವಹಾರದ ತುರ್ತು ವಿಷಯ."

ವೇಗವಾಗಿ ಬಾಗಿಲು ಸರಿಸಿ ಹೋದವನು ನೋಡಿ ಮತ್ತೆ ಬಾರ್ ಕಡೆಗೆ ನೋಟ ತಿರುಗಿಸಿದಳು.

ನವೀನ ನೇರವಾಗಿ ಅವಳನ್ನೇ ನೋಡುತ್ತಿದ್ದ!

ದೃಷ್ಟಿಗಳು ಕೂಡಿದಾಗ ಯಾವುದೊ ಬಲವಾದ ಪಂಜ ಅವಳ ಹೃದಯವನ್ನು ಹರಿದಂತಾಯಿತು.

ಮುಖ ಇಳಿಸಿದಳು. ಮೇಜಿನ ಮೇಲೆ ಕುಸುಮಾಕರ ಇರಿಸಿ ಹೋದ ಬೆಲೆ

ಬಾಳುವ ಚಿನ್ನದ ಲೈಟರ್‌ಗೆ ಕೈ ಹಾಕಿದಳು. ಅದನ್ನು ಎತ್ತುವ ಮೊದಲೇ ಕುಸುಮಾಕರ ಅವಳ ಕೈ ಹಿಡಿದ.

"ನಾನು ತಡ ಮಾಡಲಿಲ್ಲಾಂತ ಭಾವಿಸ್ತೀನಿ. ಈ ರಾತ್ರಿ ನನಗೆ ಬಹಳ ಕೆಲಸ ಇದೆ" ಎಂದು ಕುಳಿತ.

ರೆಸ್ಟೋರೆಂಟಿಗೆ ಜನ ಬರತೊಡಗಿದರು. ನಾಲ್ಕು ಮಂದಿಯ ಗುಂಪಿನ ಹಿಂದೆ ಪಿಳಿಪಿಳಿ ಕಣ್ಣಾಡಿಸುತ್ತಾ ಬಕ್ಕತಲೆಯವ ಬರುತ್ತಿದ್ದ... ಪ್ರೊಫೆಸರ್ ಮಲ್ಹೋತ್ರ!

ಸುತ್ತಲೂ ನೋಡಿದವನಿಗೆ ದೃಷ್ಟಿದೋಷ ಇರಬೇಕು. ಅರ್ಚನಾಳ ನರಗಳು ಸೆಟೆಯುತ್ತಿದ್ದಂತೆ ಅವನು ಬಾರ್ ಕಡೆಗೆ ನಡೆದ. ನವೀನನಿಗೆ ಹೇಳುತ್ತಿದ್ದುದು ಕೇಳಿಸಿತು.

"ನಿನ್ನ ಕಾಯಿಸ್ತಾ ನಿಲ್ಲಿಸಿದ್ದಕ್ಕೆ ಸಾವಿರ ಕ್ಷಮೆ ಇರಲಿ, ಮೈ ಡಿಯರ್ ಬಾಯ್."

ಕುಸುಮಾಕರ ಅವಳ ತೋಳಿಗೆ ಕೈ ಹಚ್ಚಿ ಬಾಗಿಲಿಗೆ ಒಯ್ದ. ಡೋರ್‌ಮನ್ ಕಾರಿನ ಬಾಗಿಲು ತೆರೆದು ನಿಂತಿದ್ದ. ಬಂದ ರಸ್ತೆಯಲ್ಲಿ ಹಿಂದಕ್ಕೆ ಸಾಗಿತು ಕಾರು.

ಅವಳ ತಲೆಯಲ್ಲಿ ನವೀನ ಹರಡಿಕೊಂಡಿದ್ದ. ಕನಸಿನಲ್ಲಿ ಬಂದವನಂತೆ..... ಮತ್ತೆ ಸರಿದು ಹೋದವನಂತೆ.

ಸಿಕ್ಕಿದವ!... ಕಳೆದು ಹೋದವ!

ಕುಸಮಾಕರ ಹೇಳಿದಂತೆ ಈ ರಾತ್ರಿಯಲ್ಲಿ ಅವನಿಗಿರುವ ಬಹಳ ಕಲಸ ಯಾವುದು?

ಅರ್ಧ ರಾತ್ರಿ ಮೀರಿತ್ತು. ಕಾರು ಹೊಟೇಲ್ ಮುಂದೆ ನಿಂತಿತು.

"ನಾನು ಡೆಸ್ಕ್‌ವರೆಗೆ ಬರೋದು ಬೇಡ. ಬೆಳಗ್ಗೆ ಭೇಟಿ ಆಗೋಣ..... ಆಗ ನನ್ನ ಮಹಾಬಲೇಶ್ವರದ ಮನೆಗೆ ಬರೋ ವಿಷಯದಲ್ಲಿ ನಿಮ್ಮ ಉತ್ತರ ಸಿದ್ಧವಾಗಿರಲಿ."

ಕುಸುಮಾಕರ ಅವಳ ಕೈ ಎತ್ತಿ ಮೃದು ಬೆರಳುಗಳನ್ನು ಚುಂಬಿಸಿದ. ಜೊರಗುಟ್ಟಿ ಹೋದ ಕಾರಿನ ಸದ್ದಿನೊಂದಿಗೆ ಮತ್ತೊಂದು ಸದ್ದು ಕೇಳಿತು.

ಪಕ್ಕಕ್ಕೆ ತಿರುಗಿದಳು. ಉದ್ದನೆಯ ವಿದೇಶೀ ಕಾರು ತಗ್ಗಿಗೆ ಇಳಿಯಿತು. ಅದರಲ್ಲಿ ಇಬ್ಬರು ಕುಳಿತುದು ಕಾಣಿಸಿತು.

ಯಾರೋ ಸೆರಗು ಹಿಡಿದು ಎಳೆದರು!

ಅರ್ಚನಾ ಪಕ್ಕದಲ್ಲಿ ನಿಂತ ಭಿಕ್ಷುಕಿಯನ್ನು ಒಮ್ಮೆಗೇ ನೋಡಿ ಬೆಚ್ಚಿದಳು. ಹಣಕ್ಕಾಗಿ ಭಿಕ್ಷುಕಿಯ ಕೈ ಮುಂದೆ ಬಂತು.

ಬ್ಯಾಗ್‌ನಲ್ಲಿ ಕೈ ಹಾಕಿ ಅವಳನ್ನೇ ಆಳವಾಗಿ ನೋಡಿದಳು.

ಹೆಂಗಸಿನ ತಲೆ ಬಾಗಿತ್ತು. ಮುಖ ಮುಚ್ಚಿತ್ತು. ನುಣುಪಾದ ಯುವತಿಯ ಕೈ..... ಶುದ್ಧವಾದ ಬಿಳುಪು ಹಸ್ತ !

ಮರುಕ್ಷಣ ಕೈ ಉಡುಪಿನ ಮಡಿಕೆಗಳಲ್ಲಿ ಸೇರಿಹೋಯಿತು. ಹೊಟೇಲಿನ ಪೋರ್ಟರ್ ಕೋಪದಿಂದ ಗದರಿಸಿದ. ಭಿಕ್ಷುಕಿ ಹಣ ಪಡೆಯದೆ ವೇಗದ ನಡಿಗೆಯಲ್ಲಿ ಸರಸರ ಹೊರಟು ಹೋದಳು. ಪೋರ್ಟರ್ ಕೈ ಹಿಸುಕಿ ಹೇಳುತ್ತಿದ್ದ.

"ಭಿಕ್ಷುಕರೆಲ್ಲಾ ಕಳ್ಳರು..."

ಅರ್ಚನಾ ನಿಧಾನವಾಗಿ ಡೆಸ್ಕ್ ಕಡೆಗೆ ಬಂದಳು. ಅವಳ ತಲೆಯಲ್ಲಿ ನಿಂತುದು ಯುವತಿಯ ಶುದ್ಧ ಹಸ್ತ... ಭಿಕ್ಷೆ ಬೇಡುವ ಹೆಂಗಸರು ಸಾಮಾನ್ಯವಾಗಿ ತರುಣಿಯರಲ್ಲ. ಅವರ ಕೈ ಕೊಳಕಾಗಿರಬೇಕು.

ಆ ಹೆಂಗಸನ್ನು ಮೊದಲೊಮ್ಮೆ ನೋಡಿದ ನೆನಪು. ಅವಳು ಬೇರೆಯೆ? ನಿನ್ನೆ ರಾತ್ರಿ ನವೀನ ತನ್ನನ್ನು ಇಲ್ಲಿ ಬಿಟ್ಟು ಹೋದಾಗ ಇದೇ ಸ್ಥಳದಲ್ಲಿ ಕುಳಿತಿದ್ದಳು.

ಡೆಸ್ಕ್‌ನಲ್ಲಿದ್ದ ಚೀಟಿ ಎತ್ತಿಕೊಟ್ಟ. ತೆರೆದು ಓದಿದಳು. ಸುರಭಿಯ ಬರಹ:

"ನಾಳೆ ಬೆಳಗ್ಗೆ ನಮ್ಮ ತಾಯಿ ಗೀತಾಬೇನ್ ಒಂದು ಪಾರ್ಟಿ ಕೊಡ್ತಿದಾಳೆ.... ಸಿಟಿಯಿಂದ ದೂರ. ತಪ್ಪದೆ ಬರಬೇಕು. ಕಡೇ ಹೊತ್ತಿನಲ್ಲಿ ಹೇಳ್ತಿದೀನಿ, ಕ್ಷಮಿಸಿ. ನಾನು ಬೆಳಗ್ಗೆ ಬಂದು ನಿಮ್ಮನ್ನು ಕರಕೊಂಡು ಹೋಗ್ತೀನಿ."

ಬೆಳಗ್ಗೆ ಹೊತ್ತಿನ ಪಾರ್ಟಿ.... ಸಿಟಿಯಿಂದ ದೂರ.

ಸುರಭಿ! ನವೀನನ ಕುಟುಂಬ ಸ್ನೇಹಿತೆ. ಅವಳ ಪಾರ್ಟಿಗೆ ನವೀನ ಬರ್ತಾನೆ!

ಮಲಗುವವರೆಗೆ ಅವಳಿಗೆ ಅದೇ ಯೋಚನೆ. ಬೆಳಗ್ಗೆಯ ಪಾರ್ಟಿಗೆ ಹೋಗುವುದೆ? ಅಲ್ಲಿಗೆ ನವೀನ ಹಾಜರು. ನಿನ್ನೆಯ ಅವನ ಆಲಕ್ಷ್ಯದ ಮಾತಿನ ನಂತರ ಅವನನ್ನು ಮತ್ತೆ ನೋಡುವುದೆ?

ಪಾರ್ಟಿಗೆ ಹೋಗುವುದಿಲ್ಲವಾದರೆ ಇಲ್ಲಿಗೆ ಕುಸಮಾಕರ ಹಾಜರು. ಮತ್ತೆ ಅವನದು ಅದೇ ಪ್ರಶ್ನೆ. ಅವನ ಮಹಾಬಲೇಶ್ವರದ ಮನೆಗೆ ಹೋಗುವ ಬಗೆಗೆ ತನ್ನ ಉತ್ತರ?

ಅವನು ತನ್ನನ್ನು ಮದುವೆಯಾಗುವ ಇಚ್ಛೆ ಪ್ರಕಟಿಸುತ್ತಾನೆ ! ಯಾವ ಹುಡುಗಿಗೂ ಅಂತಹ ಬೇಡಿಕೆ ಹೆಮ್ಮೆ ಪುಟಿಸುವ ಸಂಗತಿ... ನವೀನ ಮದುವೆ ವಿಷಯದಲ್ಲಿ ಅಹಂಭಾವದ ಮಾತು ಆಡಿದ!

ಬೇಸರ ತನ್ನ ಬಗೆಗೆ ಬಂತು. ಮದುವೆಯ ವಿಷಯದಲ್ಲಿ ತಾನು ಯಾರಿಗೂ ಉತ್ತರಿಸಲು ಬದ್ಧಳಲ್ಲ. ಪ್ರಣಯ, ಮದುವೆ ಅಸಂಬದ್ಧ! ಅಣ್ಣ ದೀಪಕನ ಮರಣದ ವಿವರ ಅರಿಯಲು ಬಂದವಳಿಗೆ ಇವೆಲ್ಲಿಯ ಕೋಟಲೆ?

ದೀಪಕನ ವಿಷಯದಲ್ಲಿ ಕುಸುಮಾಕರನಿಗೆ ಏನೊಂದು ಹೇಳಿಲ್ಲವಾದರೂ ಅವನಿಂದ ತನಗೆ ಸಹಾಯ ದೊರೆಯಲಿದೆ... ಕಾಮಿನಿ ರತ್ನೆಯ ಹೆಸರು ಕೇಳುತ್ತಲೇ ಗರಬಡಿದು ಕುಳಿತ. ಅವನಿಗೆ ಆ ನರ್ತಕಿಯ ಪರಿಚಯವಿದೆ, ಇಲ್ಲವೆ ಅವಳ

ಹೆಸರು ಕೇಳಿರಬೇಕು.

ಪ್ರೊಫೆಸರ್ ಮಲ್ಹೋತ್ರ ತಡವಾಗಿ ಬಂದುದಕ್ಕೆ ರೆಸ್ಟೋರೆಂಟಿನಲ್ಲಿ ನವೀನನ ಕ್ಷಮೆ ಕೇಳಿದ. ನವೀನ ಅವನನ್ನು ಅಲ್ಲಿಗೆ ಕರೆಸಿದುದೇಕೆ? ಇಬ್ಬರಲ್ಲೂ ನಡೆದಿರುವುದೇನು? ತಾನು ಕುಸುಮಾಕರನೊಂದಿಗೆ ಕುಳಿತಿರುವುದನ್ನು ಅವರು ನೋಡಿರಬೇಕು.

ಕವಲು ಯೋಚನೆ ಅವಳನ್ನು ಕುಟುಕಿತು. ಅರ್ಧ ತಾಸಿಗೆ ಮೊದಲು ಕುಸುಮಾಕರ ತನ್ನಿಂದ ಬೀಳ್ಕೊಂಡಾಗ ಮತ್ತೊಂದು ಕಾರು ತಗ್ಗಿಗೆ ಹರಿಯಿತು. ಅದರಲ್ಲಿದ್ದವರಿಬ್ಬರು ಅಸ್ಪಷ್ಟ ಆಕಾರದವರು. ಅತ್ತ ಸರಿಯಾಗಿ ಕಣ್ಣ ಹೂಡುವುದರಲ್ಲಿ ಭಿಕ್ಷುಕಿ ತನ್ನ ಸೆರಗು ಹಿಡಿದು ಎಳೆದಿದ್ದಳು... ಆ ಕಾರಿನ ಚಾಲಕ ನವೀನ ಅವನ ಪಕ್ಕದಲ್ಲಿದ್ದವನು ಪ್ರೊಫೆಸರ್ ಆಗಿರಬಹುದು! ತನ್ನನ್ನು ಹಿಂಬಾಲಿಸಿ ಗಮನಿಸುವ ಸಂಚು!

ಬಹು ಹೊತ್ತಿನ ಮೇಲೆ ನಿದ್ರೆಯ ಜೊಂಪಿನಲ್ಲಿ ದೂರದ ಮನೆಯ ಛಾವಣಿಯಿಂದ ಹುಂಜದ ಕುಕೂರವ ಕೇಳಿತು.

* * *

ಕೊಲ್ಲಿಯಲ್ಲಿ ಸೇರಿದ್ದ ಸಣ್ಣ ಅತಿಥಿ ಗುಂಪಿನ ಕಡೆಗೊಮ್ಮೆ, ಸಮುದ್ರ ಕಡೆಗೊಮ್ಮೆ ನೋಡಿ ನಡುವಿಗೆ ಕೈಯಿಟ್ಟು ನಿಂತಳು ಗೀತಾಬೇನ್.

"ನವೀನ, ಸುಲೋಚನಾ ಇಬ್ಬರು ಮಾತ್ರ ಬರಬೇಕು. ಲಂಚ್‌ಗೆ ಮೊದಲು ಸಮುದ್ರ ಸ್ನಾನ ಹೇಗೆ ಅಂತ."

ಅವಳು ಕೊಟ್ಟ ಸಲಹೆಗೆ 'ಓಕೆ' ಎಂದಿತು ಗುಂಪು.

ಸುರಭಿ ಸ್ಪ್ರಿಂಗ್‌ನಂತೆ ಎದ್ದು ನಿಂತಳು.

"ಅಜಿತ್, ಏಳು.... ಅರ್ಚನಾ, ನೀವೂ ಅಷ್ಟೆ, ಅಲೆಗಳು ಸೊಗಸಾಗಿ ಕಾಣ್ತಿವೆ." ಎಂದು ಪಕ್ಕದವರನ್ನು ಎಬ್ಬಿಸಿದಳು.

"ನೀರಿನಲ್ಲಿ ದೂರ ಹೋಗ್ಬೇಡ... ಈ ಕೊಲ್ಲಿಯಲ್ಲಿ ಅಪಾಯ."

ಓಡುತ್ತಿದ್ದ ಮಗಳಿಗೆ ಕೂಗಿ ಹೇಳಿದಳು ಗೀತಾಬೇನ್.

ಅರ್ಚನಾ ನಿಧಾನವಾಗಿ ನೀರಿನಲ್ಲಿ ಹೆಜ್ಜೆ ಸರಿಸಿದಳು. ದೃಷ್ಟಿ ಹಾಯುವವರೆಗೆ ಹರಡಿತ್ತು ಅರಬ್ಬೀ ಸಮುದ್ರದ ಬಿರುಸಿನ ಜಲಪದರ. ಕಪ್ಪು ಬಂಡೆಗಳಿಗೆ ಅಪ್ಪಳಿಸಿದ ಅಲೆಗಳು ಬಿಳುಪು ನೊರೆಯ ಮೇಲೆ ತುಂತುರು ಬಲೆಯಲ್ಲಿ ಕಾಮನಬಿಲ್ಲನ್ನು ಸೃಷ್ಟಿಸಿದ್ದವು. ಹಿಂದಕ್ಕೆ ಬಂಡೆಗಳ ಗುಡ್ಡದ ಸಾಲಿನ ರಸ್ತೆ. ಅತ್ತಲಿಂದಲೇ ನಾಲ್ಕು ಕಾರುಗಳು ಕೊಲ್ಲಿಗೆ ಬಂದಿದ್ದವು... ಒಂದು ತಾಸಿನ ಹಿಂದೆ ಬಿಟ್ಟುಬಂದ ನಗರ ಬಹು ದೂರವೆಂಬ ಪ್ರತ್ಯೇಕತೆಯ ನಿರ್ಜನ ವಾತಾವರಣ ಪಸರಿಸಿತ್ತು.

ಬಿಸಿಲಿನ ಪರಿವೇ ಇಲ್ಲವೆ ನಡೆದವು ಅರ್ಚನಾ. ಸುರಭಿಯ ಫೋನು ಕರೆಯಂತೆ ಬೆಳಿಗ್ಗೆ ಎಂಟೂವರೆಗೆ ಹೊಟೇಲು ಹಜಾರಕ್ಕೆ ಕುಸುಮಾಕರ ಅವಳಿಗಾಗಿ ಕಾದು

ನಿಂತಿದ್ದ.

ಪರಿಸ್ಥಿತಿಯಿಂದ ಪಾರಾಗುವುದು ಹೇಗೆಂದು ತಲ್ಲಣಿಸಿದಳು.

"ನಾನು ಪುಣೆಗೆ ಜರೂರು ಪ್ರಯಾಣ ಮಾಡಬೇಕಾಗಿದೆ. ಈ ರಾತ್ರಿ ಅಲ್ಲೇ ಇದ್ದು ನಾಳೆ ಬರ್ತೀನಿ. ತಪ್ಪಿದರೆ ನಾಡದ್ದು... ಅದು ಹೇಳಲಿಕ್ಕೆ ಬಂದೆ. ನಮ್ಮ ಮಹಾಬಲೇಶ್ವರದ ಭೇಟಿ ಮುಂದಕ್ಕೆ ಹೋಯ್ತು."

ತೊಡಕಿನಿಂದ ಅವಳು ಪಾರಾಗಿದ್ದಳು.

" ಆ ಭೇಟಿ ಇನ್ನೂ ಯೋಚೆ ಮಾಡ್ಲಿಲ್ಲ" ಎಂದಳು.

"ಅದನ್ನು ತಪ್ಪಿಸೋಹಾಗಿಲ್ಲ. ನಾನು ಬೇಗ ಬಂದುಬಿಡ್ತೀನಿ."ಆಸೆ ತುಂಬಿದ ಕಣ್ಣುಗಳಿಂದ ನೋಡಿ ಹೊರಟು ಹೋಗಿದ್ದ...

ಅಲೆಗಳು ಅವಳ ಮೊಳಕಾಲುಗಳನ್ನು ಅಪ್ಪಳಿಸಿ ಹೋಗುತ್ತಿದ್ದವು.

ಕುಸುಮಾಕರನ ಸ್ನೇಹ ತಾನು ಗಳಿಸಿಕೊಳ್ಳಬೇಕು. ದೀಪಕ ರಚಿಸಿದ ಅವಕುಂಠನವತಿಯನ್ನು ಅವನಿಂದಲೇ ಶೋಧಿಸುವೆ...

ನಡುಮಟ್ಟದ ನೀರಿನಲ್ಲಿ ತೂರಾಡಿ ನಿಂತಳು. ಅವಳಿಂದ ತುಸು ದೂರಕ್ಕೆ ಸುರಭಿ, ಅವಳ ಗೆಳೆಯ ನೀರು ಎರಚಾಡುತ್ತಿದ್ದರು.

"ಹುಷಾರ್, ಅರ್ಚನಾ !... ಮುಂದೆ ಹೋಗ್ಬೇಡಿ. ಗಾಳಿ ಜೋರಾಗಿ ಬೀಸ್ತಿದೆ... ದೊಡ್ಡ ಅಲೆಗಳು ಬರ್ತಾ ಇವೆ."

ಸುರಭಿ ಕೂಗಿ ಹೇಳಿದಳು. ಅರ್ಚನಾ ತಾನು ಸುರಕ್ಷಿತಳೆಂದು ಅವರಿಗೆ ಕೈ ಬೀಸಿದಳು. ತಣ್ಣನೆಯ ನೀರಿನ ಬಡಿತ. ಭುಜಗಳಿಗೆ ಸೂರ್ಯನ ಇರಿತ.

ನೀರು ಬಿಟ್ಟು ದಂಡೆಗೆ ಬಂದಾಗ ಕಾರು ಗುಡ್ಡದ ರಸ್ತೆಯಲ್ಲಿ ಇಳಿದು ಬಂತು.

"ಓ, ಸುಲೋಚನಾ ! ಅವಳೊಬ್ಬಳೇ ಬರ್ತಾ ಇರೋದು."

ಗುಡ್ಡದತ್ತ ಬೆರಳುಮಾಡಿ ನಿರಾಶೆಯಲ್ಲಿ ಕೂಗಿದಳು ಸುರಭಿ. ಸುಲೋಚನಾ ಎಚ್ಚರಿಕೆಯಿಂದ ಒರಟು ರಸ್ತೆಯಲ್ಲಿ ಕಾಲಿಟ್ಟಳು. ಬೀಚ್ ಛತ್ರಿಯನ್ನು ಸರಿಪಡಿಸಿ ಗೀತಾಬೇನ್ ಅವಳ ಬಳಿಗೆ ಹೋದಳು.

ಸುರಭಿ ಮತ್ತೆ ಮುದ್ದಾಗಿ ಹೇಳಿದಳು.

"ನವೀನ ಬರಲಿಲ್ಲ. ಫೋನ್ ಮಾಡಿದಾಗ ಒಪ್ಪಿದ್ರು. ಇವತ್ತು ಸೋಮವಾರ. ಯಾವುದೊ ಆಫೀಸಿಗೆ ಹೋಗಲೇಬೇಕಂತೆ. ಸ್ವಲ್ಪ ಬೇಗ ಕೆಲಸ ಮುಗಿಸಿದರೆ ಚೆಂದ."

ಅರ್ಚನಾಗೂ ನಿರಾಶೆಯಾಗಿತ್ತು. ಅವನನ್ನು ಕಾಣಬೇಕೆಂಬ ಹಂಬಲ. ಈ ಚೆಂದದ ವಾತಾವರಣದಲ್ಲಿ ತಮ್ಮಿಬ್ಬರ ಸ್ನೇಹಕ್ಕೆ ಹೊಸ ತಿರುವು ಬಂದೀತೆಂಬ ಆಸೆ.

ಸುರಭಿಯ ಕಡೆ ಕಣ್ಣು ಹೊರಳಿತು. ಸಣ್ಣ ಬಿಕಿನಿಯಲ್ಲಿ ಅವಳ ಸುಂದರ

ದೇಹದ ಪ್ರತಿ ಭಾಗ ಕೊರೆದು ಕಾಣುತ್ತಿತ್ತು. ಬೆಳಗ್ಗೆ ಕೊಲ್ಲಿಗೆ ಇಳಿದಾಗ ಅವಳು ತನ್ನ ವಯಸ್ಸು ಹದಿನೆಂಟು ಎಂದು ಹೇಳಿದಳು. ಈ ಚುರುಕಿನ ಚೆಲುವೆಗೆ ನವೀನನ ಮೇಲೆ ಪ್ರೀತಿ ? ನವೀನನ ಹೆಸರು ಕೇಳಿದಾಗ ಅವಳ ತೆಳುಧ್ವನಿ ಆಳವಾಗುತ್ತಿತ್ತು.

ಅರ್ಚನಾಗೆ ತಲೆ ಸುತ್ತಿತ್ತು... ಹೆಣ್ಣು ಮತ್ಸರ!

ಸುರಭಿಗೆ ಅಂಕುಶವಿಲ್ಲ. ಅವಳ ಸ್ವಚ್ಛಂದಕ್ಕೆ ತಡೆ ಇಲ್ಲ. ಡೆಲ್ಲಿಗಿಂತಲೂ ಸೊಗಸಾದ ಬೊಂಬಾಯಿನಲ್ಲಿ ನಲಿದವಳು. ನವೀನನನ್ನು ಮದುವೆಗೆ ಒಪ್ಪಿಸಬಲ್ಲಳು!

ಸುರಭಿ ಬಾಲೆಯಂತೆಯೇ ತುಂಟ ನಡಿಗೆ ಹಾಕಿದ್ದಳು. ಕಾಲಿನಿಂದ ಮರಳು ತೂರಿದಳು.

ಸುಲೋಚನಾ ದೊಡ್ಡ ಛತ್ರಿಯ ಕೆಳಗೆ ಕ್ಯಾನ್ವಾಸ್ ಕುರ್ಚಿಯಲ್ಲಿ ಕುಳಿತು ಬ್ಯಾಗ್‌ನಿಂದ ಬಣ್ಣದ ಬೀಸಣಿಗೆ ತೆಗೆದು ಗಾಳಿ ಹಾಕಿಕೊಂಡಳು. ಬೆರಳುಗಳ ಉಂಗುರಗಳು ಫಳಫಳ ಹೊಳೆದವು.

"ಡಾರ್ಲಿಂಗ್..." ಎಂದು ಸುರಭಿಗೆ ಕೈಬೀಸಿ, ಅರ್ಚನಾಗೆ ಕೂಗಿದಳು.

"ಮಿಸ್ ಪಾವನ್, ಹೇಗಿದೆ ಪಿಕ್ನಿಕ್ ತಾಣ?"

"ಸೊಗಸಾಗಿದೆ."

ಅವಳ ಉತ್ತರದಿಂದ ತೃಪ್ತಳಾಗಿ ಎದ್ದು ಗೀತಾಬೇನ್ ಜೊತೆ ಸೇರಿದಳು.

ಬಂಡೆಯ ನೆರಳಿನಲ್ಲಿ ಕುಳಿತ ಅರ್ಚನಾ ಹಿಂದಕ್ಕೆ ಒರಗಿದಳು. ಅವಳ ಹೃದಯದಲ್ಲಿ ಸೀಸ ತುಂಬಿದಷ್ಟು ಭಾರ. ತಲೆಯ ಮೇಲೆ ನೇರವಾಗಿ ನಿಂತಿದ್ದ ಸೂರ್ಯ. ಆ ಸಣ್ಣ ಗುಂಪಿನ ಹೊರತಾಗಿ ಕೊಲ್ಲಿ ನಿರ್ಜನವಾಗಿತ್ತು.

ಬಂಡೆ ಗುಡ್ಡಗಳ ಇಳಿಜಾರು ರಸ್ತೆಯಲ್ಲಿ ಸದ್ದು ಬಂತು. ಚಾಕಲೇಟು ರಂಗಿನ ಕಾರು ಇಳಿಯಿತು... ನವೀನ!

ಅರ್ಚನಾ ತಲೆ ಎತ್ತಿ ನೋಡಿದಳು. ನೀಲಿ ಆಕಾಶದ ಹಿನ್ನೆಲೆಗೆ ನೆರಳಿನಂತೆ ನಡೆದು ಬರುತ್ತಿದ್ದ ನವೀನ. ಮೈಯಲ್ಲಿ ನವಿರೆದ್ದಿತು.

"ನಿಮ್ಮನ್ನೆಲ್ಲಾ ಕಾಯಿಸ್ದೆ.. ಕ್ಷಮಿಸಿ, ಮೇಡಂ ಗೀತಾಬೇನ್... ಹಲೋ, ಸುರಭಿ. ನೀನು ಜಲಕನ್ಯೆ ಹಾಗೆ ಕಾಣ್ತಿದೀಯ... ಓ, ಅರ್ಚನಾ..."

ಮುಂದೆ ಅರ್ಚನಾಗೆ ಏನೊ ಹೇಳಿದ. ಅವಳಿಗೆ ಅದು ಕೇಳದು.

ಐದು ನಿಮಿಷಗಳ ತರುವಾಯ ನೀಲಿ ರಂಗಿನ ಈಜು ಉಡುಗೆಯಲ್ಲಿ ಕಾಣಿಸಿಕೊಂಡು ಸಮುದ್ರದಲ್ಲಿ ಮುಳುಗಿದ. ಹಿಂದಕ್ಕೆ ಬಂದು ಸುರಭಿ ನೀಡಿದ ತಂಪು ಪಾನೀಯ ಹೀರಿ ಮರಳಿನ ಮೇಲೆ ಸೂರ್ಯನಿಗೆ ಬೆನ್ನು ಮಾಡಿ ದೇಹ ಹರಡಿದ.

ಪಿಕ್ನಿಕ್ ಸೊಗಸಾಗಿತ್ತು. ಎಲ್ಲರಿಗೂ ಮೆಚ್ಚಿಗೆಯಾಗಿದ್ದ ಊಟ... ಸುರಭಿ ಹಾಗೂ ಸುಲೋಚನಾಳ ಮಧ್ಯೆ ಕುಳಿತ ನವೀನ ಅರ್ಚನಾಳ ದೃಷ್ಟಿಗೆ ಪ್ರಧಾನವಾಗಿದ್ದ. ಮೌನವಾಗಿ ನಿಂತ ತಲೆಗೂದಲಿನಲ್ಲಿ ಅವನು ಸಣ್ಣ ಹುಡುಗನಂತೆ ಕಾಣುತ್ತಿದ್ದ. ಸುರಭಿ ಅವನ ತಲೆ ಸರಿಪಡಿಸಿ ಭುಜಗಳ ಮೇಲೆ ಬೆರಳು ಹರಿಸುತ್ತಿದ್ದಳು. ನಗೆ ತರಂಗ ಏಳುತ್ತಿತ್ತು.

ಮದುವೆಯಾಗುವ ಮನೋವೃತ್ತಿಯ ಮನುಷ್ಯನಲ್ಲ! ಹದಿನೆಂಟರ ಸುರಭಿ ಅವನನ್ನು ಬದಲಿಸುವುದು ಕಷ್ಟವಲ್ಲ.

ಊಟದ ಗಲಾಟೆ ಮುಗಿದಿತ್ತು. ಸುಲೋಚನಾ, ಗೀತಾಬೆನ್ ಮೆಲ್ಲನೆಯ ಸ್ವರದಲ್ಲಿ ಹರಟುತ್ತಾ ಛತ್ರಿಯ ನೆರಳಿನಲ್ಲಿ ಕುಳಿತಿದ್ದರು. ನವೀನ ಆರಾಮವಾಗಿ ಎದ್ದು ಅರ್ಚನಾ ಬಳಿಗೆ ಬಂದ. ಅವನ ಚಾಚಿದ ಹಸ್ತದಲ್ಲಿ ಅಡಿಕೆ ಸುತ್ತಿದ ವೀಳೆಯದೆಲೆ.

"ಥ್ಯಾಂಕ್ಸ್" ಎಂದು ನಿರಾಕರಿಸಿ ಮುಖ ತಿರುವಿದಳು. ಅವನು ಸಿಗರೇಟು ತುಟಿಗಿಟ್ಟ, ಲೈಟರ್ ಉರಿಯಿತು. ಸೂರ್ಯನ ಬೆಳಕಿನಲ್ಲಿ ಅದರ ಉರಿ ವಿಲೀನವಾಯಿತು.

ಅವಳ ಪಕ್ಕದಲ್ಲಿ ತೋಳಿಗೆ ತೋಳು ಒತ್ತುವಂತೆ ಕುಳಿತು ಅವಳಿಗಷ್ಟೇ ಕೇಳುವಂತೆ ಮೆಲ್ಲನೆ ಬೇಡಿಕೆಯಲ್ಲಿ ನುಡಿದ.

"ನಿಮ್ಮೊಂದಿಗೆ ಮಾತಾಡಬೇಕು... ಸ್ವಲ್ಪ ದೂರ ಹಾಗೇ ಹೆಜ್ಜೆ ಹಾಕೋಣ. ತಲೆಗೆ ಏನಾದ್ರು ಧರಿಸಿ. ಹಾಗೇ ಚಪ್ಪಲಿ ಮರೇಯಬೇಡಿ."

ಪಕ್ಕದಲ್ಲಿ ಬಿಟ್ಟಿದ್ದ ಚಪ್ಪಲಿ ಹಾಕಿಕೊಂಡು ತಾಳೆಗರಿಯ ಹ್ಯಾಟ್ ತಲೆಗೇರಿಸಿದಳು. ಮರಳಿನ ಮೇಲೆ ಇಬ್ಬರೂ ನಡೆದು ಹೋದುದನ್ನು ಯಾರೂ ಗಮನಿಸಲಿಲ್ಲ.

ನೇರವಾಗಿ ಮಾತಿಗಿಳಿದ ನವೀನ.

"ಮೊದಲು ಕ್ಷಮೆ ಬೇಡ್ತೀನಿ. ಆ ಸಂಜೆ ಹಾಗೆ ವರ್ತಿಸಲಿಕ್ಕೆ ನನಗೆ ಏನಾಗಿತ್ತೋ ಗೊತ್ತಿಲ್ಲ."

ಅವಳಿಗೆ ಕುತ್ತಿಗೆ ಬಿಗಿದು ಬಂತು. ಅವನಿಂದ ಅಂತಹ ಮಾತು ಬೇಕು ಎನಿಸಿತು.

"ಅದನ್ನು ಮರೆತುಬಿಡೋಣ" ಮತ್ತೆ ಹೇಳಿದ.

ಅವಳು ಮರೆಯುವಂತಿಲ್ಲ. ಆ ತುಟಿಗಳ ಸ್ಪರ್ಶ!

ನೊರೆಗಟ್ಟಿದ ಜಲವನ್ನು ಕಾಲಿನಿಂದ ಹಾರಿಸಿದ. ಬಂಡೆಯ ಮತ್ತೊಂದು ಪಾರ್ಶ್ವಕ್ಕೆ ಸರಿದು ಇತರರ ದೃಷ್ಟಿಯಿಂದ ಮರೆಯಾದರು.

ನವೀನ ಅವಳನ್ನೇ ನಿಟ್ಟಿಸಿದ್ದ. ಅವಳು ನೇರವಾಗಿ ಮುಂದಕ್ಕೆ ನೋಡುತ್ತಿದ್ದಳು. ಮಧ್ಯಾಹ್ನದ ಉರಿ ಬಿಸಿಲಿನೊಂದಿಗೆ ಕಲೆತ ವಿಶಾಲ ಮರಳು ಹಾಸು.

"ಮತ್ತೆ ನಾವಿಬ್ಬರು ಸ್ನೇಹಿತರು ತಾನೆ?" ನಮ್ರವಾಗಿ ಕೇಳಿದ.

"ಮತ್ತೆ ಸ್ನೇಹಿತರು."

ಮನಸ್ಸು 'ಬೇಡ' ಎಂದು ಕೂಗಿದರೂ ನಯವಾಗಿ ಹೇಳಿದ್ದಳು.

ಅವನ ದೊಡ್ಡ ನಡಿಗೆಯೊಂದಿಗೆ ಹೆಜ್ಜೆ ಹೊಂದಿಸಲು ಅವಳಿಗೆ ಶ್ರಮವಾಯಿತು.

"ನಿನ್ನ ರಾತ್ರಿಯ ವಿಷಯದಲ್ಲಿ ಸ್ವಲ್ಪ ಹೇಳಬೇಕಾಗಿದೆ."

ಚಕ್ಕನೆ ನಿಂತಳು.

"ನಿನ್ನೆ ರಾತ್ರಿ ?... ಏನು ಹಾಗಂದ್ರೆ?"

ಅವನು ಗಂಭೀರತೆ ಇಳಿಸಲಿಲ್ಲ.

"ನಿಮಗೇ ಗೊತ್ತು... ನೀವು 'ಥೌಸಂಡ್ ಅಂಡ್ ಒನ್' ರೆಸ್ಟೋರೆಂಟ್‌ನಲ್ಲಿದ್ರಿ..."

"ಹೌದು, ನನ್ನ ಸ್ನೇಹಿತನೊಂದಿಗೆ ಅಲ್ಲಿ ಊಟಕ್ಕೆ ಹೋಗಿದ್ದೆ. ನನ್ನ ನೋಡ್ಲಿಲ್ಲ ನೀವು ಅಂತ ಭಾವಿಸಿದ್ದೆ."

ಸ್ವಾಭಾವಿಕ ಧ್ವನಿ ಮೂಡಿಸಲು ಯತ್ನಿಸಿದಳು.

"ನಾನು ಅಲ್ಲಿ ನಿಮ್ಮನ್ನ ಮಾತಾಡಿಸ್ಲಿಲ್ಲ. ನಿಮ್ಮ ಸ್ನೇಹಿತರನ್ನು ಭೇಟಿ ಆಗೋ ಇಚ್ಛೆ ನನಗಿರಲಿಲ್ಲ."

"ಯಾಕೆ? ಅವರಿಗೆ ನಿಮ್ಮ ಪರಿಚಯ ಇಲ್ಲ."

ಕೋಪದಿಂದ ಹೇಳಿದಳು. ಅವಳ ತೋಳು ಹಿಡಿದ.

"ನಾನು ಅಲ್ಲಿ ನಿಂತಿದ್ದನ್ನು  ನೀವು ಅವನಿಗೆ ಹೇಳಿರಬೇಕು."

"ಹೇಳ್ಲಿಲ್ಲ. ನಿಮ್ಮನ್ನು ಭೇಟಿಯಾಗಿದ್ದು ಮಾತ್ರ ಅವರಿಗೆ ಹೇಳ್ದೆ. ಅವರು 'ನವೀನ' ಅನ್ನೊ ಹೆಸರು ಕೇಳಿದೀನಿ ಅಂದ್ರು...ನೀವು ಸಣ್ಣ ವಿಷಯಾನ ದೊಡ್ಡದು ಮಾಡ್ತಿದೀರಿ."

"ದೊಡ್ಡ ವಿಷಯ ಅಂತಲೇ ಭಾವಿಸ್ತೀನಿ... ನನ್ನ ವಿಷಯದಲ್ಲಿ ಅವನು ಏನು ಹೇಳಿದ ಅನ್ನೋದು ತಿಳಿಸಿ."

ನವೀನ ಬಿಗಿ ಬಿಡದೆ ಕೇಳಿದ. ಅವಳೂ ಬಿಗಿ ತಪ್ಪಿಸದೆ ಉತ್ತರಿಸಿದಳು.

"ಅದು ಅಷ್ಟು ಪ್ರಾಮುಖ್ಯವಾದದ್ದು ಅಂತ ನಾನು ಭಾವಿಸಿಲ್ಲ. ಶನಿವಾರ ಸಂಜೆ ಎಲ್ಲಿದ್ರಿ ಅಂತ ಕೇಳಿದ್ರು. ನಿಮ್ಮ ಕಾಕ್‌ಟೈಲ್‌ಗೆ ಹೋಗಿದ್ದು ಹೇಳ್ದೆ. ನೀವು ಡೆಲ್ಲಿಯಿಂದ ಬಾಂಬೆಯವರೆಗೆ ಸಹ ಪ್ರಯಾಣಿಕರಾಗಿ ಬಂದಿದ್ದೂ ತಿಳಿಸ್ದೆ.'

ಕುಸುಮಾಕರ ಮಹಾಬಲೇಶ್ವರಕ್ಕೆ ಆಹ್ವಾನಿಸಿದ್ದು ನೆನಪಿಗೆ ಬಂತು

"ಅಷ್ಟೇನೆ?"

ಅವನ ಯೋಚನೆ ಕತ್ತರಿಸಿತು ಪ್ರಶ್ನೆ.

"ನಿಮ್ಮ ವಿಷಯದಲ್ಲಿ  ಅಷ್ಟೆ."

ಫಕ್ಕನೆ ತಲೆಯಲ್ಲಿ ಮಿಂಚಿತು ಮಾತು. ನವೀನನ ಹೆಸರಿನಲ್ಲಿ ಒಬ್ಬ ಸ್ಮಗ್ಲರ್!

ನವೀನ ಏಕಾಏಕಿ ಕೇಳಿದ.

"ಏನು ಆ ನಿಮ್ಮ ಸ್ನೇಹಿತನ ಹೆಸರು?"

"ಕುಸುಮಾಕರ"

ಪರಿಚಯ ಹಿಡಿದವನಂತೆ ತಲೆ ಅಲುಗಿಸಿದ. ತೀರ್ಪು ಕೊಡುವಂತೆ ಮೊನಚಾಗಿ ಹೇಳಿದ.

"ಅರ್ಚನಾ ನನ್ನ ಮಾತು ಕೇಳಿ... ಕುಸುಮಾಕರನಿಂದ ದೂರ ಇರಿ. ಅವನು ನಿಮ್ಮ ಸ್ನೇಹಕ್ಕೆ ಅರ್ಹ ಅಲ್ಲ."

ಮೃದುವಾಗಿ ವಿರೋಧಿಸಿದಳು.

"ಅದಕ್ಕೆ ಕಾರಣ ಹೇಳಿ... ಕುಸುಮಾಕರ ನಿಮ್ಮ ಬಗ್ಗೆಯೂ ಹಾಗೆ ಹೇಳಬೋದು. ಅವರ ವಿಷಯ ನಿಮಗೆ ಸಂಬಂಧಿಸಿದ್ದಲ್ಲ."

ಅವನು ಸೋಲಿನ ಕಡೆಗೆ ಜಾರುತ್ತಿದ್ದ.

"ಸಂಬಂಧಿಸಿಲ್ಲ, ನಿಜ. ನೀವು ಆಮೇಲೆ ಪಶ್ಚಾತ್ತಾಪಪಡೋದು ನನಗೆ ಇಷ್ಟವಿಲ್ಲ."

ಒಬ್ಬರನ್ನೊಬ್ಬರು ನೋಡಿದರು. ಇಬ್ಬರು ನಡುವೆ ಕೋಪ ತೂಯ್ದಾಡಿತು.

ನವೀನ ತನ್ನನ್ನು ಪ್ರೀತಿಸುವುದಿಲ್ಲವೆಂದು ಪರೋಕ್ಷವಾಗಿ ನಿರೂಪಿಸಿದ್ದಾಗಿದೆ. ಅವನಿಗೆ ತನ್ನ ಮತ್ತೊಬ್ಬ ಸ್ನೇಹಿತನ ಬಗೆಗೆ ಕಾರಣವಿಲ್ಲದ ಈರ್ಷ್ಯೆ! ನವೀನ ತನ್ನ ಸ್ವಂತ ವಿಷಯದಲ್ಲಿ ತಲೆ ಹಾಕಿದ್ದಾನೆ!

"ನಿಮಗೆ ನನ್ನ ಎರಡನೆ ಸ್ನೇಹಿತನ ಪರಿಚಯ ಇಲ್ಲ. ನಾನು ಅವರೊಂದಿಗೆ ಸ್ನೇಹ ಹೊಂದಿರೋದು ನೀವು ಸಹಿಸೋದಿಲ್ಲ. ನನ್ನ ಎಚ್ಚರಿಕೆಯಲ್ಲಿ ನಾನಿದ್ದೀನಿ... ಅವರು ಮಹಾಬಲೇಶ್ವರಕ್ಕೆ ನನ್ನ ಆಹ್ವಾನಿಸಿದ್ದಾರೆ... ನಾನು ಅದಕ್ಕೆ ಒಪ್ಪಿದೀನಿರಿ.

ದಿಟ್ಟತನದಿಂದ ಹಾಗೇ ಹೇಳಿದುದು ಅವಳಿಗೇ ಅಚ್ಚರಿ, ಅವನು ಅವಳನ್ನು ಗಾಯಗೊಳಿಸಿದ್ದ. ಅವಳಿಗೂ ಅವನನ್ನು ಗಾಯಗೊಳಿಸುವ ಹುಚ್ಚು ಇಚ್ಛೆ!

ಹಾಗೆ ಹೇಳಬಾರದಿತ್ತೆಂದು ಕ್ಷಣ ಮರುಗಿದಳು.

ಅವನ ಮುಖ ನಿಸ್ತೇಜವಾಯಿತು. ಸೋಲು, ಗಾಬರಿಯಲ್ಲಿ ಕೇಳಿದ.

"ನೀವು ಅವನೊಂದಿಗೆ ಮಹಾಬಲೇಶ್ವರಕ್ಕೆ ಹೋಗ್ತೀರಾ? ನಿಮಗೆ ಹುಚ್ಚು!"

"ಹುಚ್ಚಲ್ಲ! ನೀವು ಹೇಳಿದ್ರಿ, ಅಣ್ಣ ದೀಪಕನ ವಿವರ ಇಲ್ಲಿ ಸಿಗೋಲ್ಲಾಂತ. ಆ ವಿಷಯ ಮರೆಯೋದಿಕ್ಕೂ ಹೇಳಿದ್ರಿ. ನನಗೆ ಸಹಾಯ ಮಾಡೋದಿಕ್ಕೆ ನೀವು ತಯಾರಿಲ್ಲ.. ಆದರೆ ನನಗೆ ಸ್ವಲ್ಪ ವಿವರ ಸಿಕ್ಕಿದೆ. ಇನ್ನಷ್ಟು ಸಿಗುವ ಸಂಭವ ಇದೆ.

"ಪ್ರೊಫೆಸರ್ ಹೇಳಿದ್ದಕ್ಕಿಂತ ಹೆಚ್ಚಾಗಿ ಏನೂ ನಿಮಗೆ ಸಿಗಲಾರದು. ಸಿಂಹಳಿ

ನರ್ತಕಿಯ ಹೆಸರು ಕೇಳಿ ನಿಮ್ಮಲ್ಲಿ ಕಲ್ಪನೆ ಸಾಗ್ತಿದೆ. ಬೊಂಬಾಯಿನಲ್ಲಿ ಸಾವಿರ ನರ್ತಕಿಯರು."

"ನನಗೆ ಬೇಕಾಗಿರೋಳು ಒಬ್ಬಳೇ ನರ್ತಕಿ.. ಕಾಮಿನಿ ರತ್ನೆ ! ಕುಸುಮಾಕರನಿಗೆ ಅವಳ ವಿಷಯ ತಿಳಿದಿದೆ."

"ಹಾಗಂತ ಅವನು ಹೇಳಿದ್ನೆ?"

" ಇಲ್ಲ, ಅವರಿಗೆ ಗೊತ್ತಿದೆ ಅಂತ ನಾನು ಗ್ರಹಿಸಿದೆ.'

"ನರ್ತಕಿಯ ಹೆಸರು ನೀವೇ ಅವನಿಗೆ ಹೇಳಿರಬೇಕು."

"ಹೌದು."

"ನಿಮ್ಮಣ್ಣನ ವಿಷಯ ತಿಳಿಸಿದ್ರಾ?"

ಮುಖ ಕಾತರದಿಂದ ಮುಂದೆ ತಂದ.

"ಅದು ಮಾತ್ರ ಹೇಳ್ಲಿಲ್ಲ. ದೀಪಕನ ಹೆಸರೇ ಎತ್ತಲಿಲ್ಲ. ಅವನು ನನ್ನ ಮಹಾಬಲೇಶ್ವರಕ್ಕೆ ಒಯ್ದಾಗ ಅವರಿಗೇ ಗೊತ್ತಾಗದ ಹಾಗೆ ಮುಂದಿನ ವಿವರ ನಾನು ಗೊತ್ತುಮಾಡಿಕೊಳ್ತೀನಿ."

ಅವನು ಕುಚೋದ್ಯದ ನಗೆ ನಕ್ಕ. ಅವಳಿಗೆ ಸುಡು ಬಿಸಿಲಿನಲ್ಲೂ ಚಳಿ ತಟ್ಟಿತು.

ಸ್ನೇಹ ಹೀಗೇಕಾಯಿತು? ಇಬ್ಬರೂ ಭೇಟಿಯದಾಗ ಬಿಸಿ ಚರ್ಚೆ ಇಬ್ಬರ ಮಧ್ಯೆ ದಿಪಕ ಪಾವನ್‌ನ ಮರಣದ ವಿಷಯ ನೆರಳಾಗಿ ಉಳಿದಿದೆ.

ನವೀನ ಹಣೆ ಬೆವರು ಒರೆಸಿದ.

"ಆ ನಿಮ್ಮ ಸ್ನೇಹಿತನಿಗೇ ವಿಷಯ ಗೊತ್ತಿಲ್ಲದಿರೋವಾಗ ನೀವು ಶೋಧನೆಯಲ್ಲಿ ಒಂದು ಹೆಜ್ಜೆಯೂ ಮುಂದಕ್ಕೆ ಇಡದ ಹಾಗೆ ಆಗುತ್ತೆ.'

"ನಾವು ಈ ವಿಷಯದಲ್ಲಿ ಇನ್ನೇನೂ ಮಾತಾಡೋದೂ ಬೇಡ.'"

ಕಣ್ಣಿರು ಪುಟಿಸುವ ಹಂತದಲ್ಲಿ ಅಳುಕಿದಳು.

ನವೀನನಿಗೆ ತನ್ನಲ್ಲಿ ಆಸ್ಥೆ ಇದೆಯ ಎಂಬ ಜಿಜ್ಞಾಸೆ. ಅವನು ತನ್ನಿಂದ ದೂರ...ಅವನು ಸುರಭಿಗೆ ಸಮಿಪಾಪ! ಊಟಕ್ಕೆ ಅವಳ ಪಕ್ಕದಲ್ಲಿ ಕುಳಿತಾಗ ಚಕ್ಕಂದ, ನಗೆ...ಅವರಿಬ್ಬರೂ ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡಿದ್ದಾರೆ. ಒಂದು ದಿನ ಅವರಿಬ್ಬರೂ... ಏನು?

ಮದುವೆ ಆಗೊ ಮನೋವೃತ್ತಿಯ ಮನುಷ್ಯನಲ್ಲ!

ಅವಳ ಕಣ್ಣುಗಳಿಂದ ಹೊಮ್ಮುವ ನೋವು, ಈರ್ಷ್ಯೆ, ಸ್ವಾರ್ಥದ ಜಲ ಅವನು ನೋಡುವುದು ಬೇಡ...

ಅರ್ಚನಾ ಅವನಿಂದ ಸರಿದು ಭ್ರಮಾಧೀನಳಂತೆ ಅಲೆಗಳ ದಿಕ್ಕಿಗೆ ಧಾವಿಸಿದಳು.

ಮರಳು ಹಾರಿಸಿದ ಚಪ್ಪಲಿಗಳು ಪಾದಗಳಿಂದ ಕಳಚಿ ಹೋದವು. ತಾಳೆಗರಿಯ ಹ್ಯಾಟ್ ಗಾಳಿಗೆ ತೂರಿ ಹೋಯಿತು.

ದೇಹ ಎಳೆಯುತ್ತಾ ನಡುಮಟ್ಟದ ನೀರಿನಲ್ಲಿ ಸರಿದಳು. ಗಾಳಿಯ ಹೊಡೆತದೊಂದಿಗೆ ಬಿಮ್ಮನೆ ಬಂದ ಮೊದಲನೆ ಅಲೆಯನ್ನು ಸಿಡಿದು ಬಾರಿಸಿದಳು... ಎರಡನೆಯದಕ್ಕೂ ಅದೇ ಬಿರುಸು ಹೊಡೆತ... ಮೂರನೆಯ ಅಲೆ ಭೋರಿಟ್ಟು ಬಂದಾಗ ನಿಲುಗಡೆಯ ಸಮತೋಲ ತಪ್ಪಿ ಉರುಳಿದಳು.

ನಿಲ್ಲಲು ಪ್ರಯತ್ನಿಸಿದಂತೆ ಜಲಶಕ್ತಿ ಏರಿತು. ಅಲೆಗಳು ಅವಳನ್ನು ಒತ್ತಿ ಹಾಕಿದವು. ಉಸಿರಾಟಕ್ಕೆ ಹಾತೊರೆದಳು.

ಹತಾಶಳಂತೆ ಕೈಗಳನ್ನು ಬಡಿದಳು. ಬಲಿಷ್ಠ ಜಲ ತರಂಗಗಳು ಅವಳನ್ನು ಮುಂದಕ್ಕೆ ಸೆಳೆದವು... ಹಿಂದಕ್ಕೆ ತಳ್ಳಿದವು.

ಭುಜಗಳು ಮರುಗಟ್ಟಿ ಶ್ವಾಸಕೋಶಗಳು ಹರಿದುಹೋದಂತಾದವು.

"ಕೈ ಕಾಲು ಆಡಿಸ್ಬೇಡಿ!... ಅಲ್ಲಾಡದೆ ನಿಲ್ಲಿ!'

ನವೀನ ಅವಳಿಗೆ ಅರಚಿ ಹೇಳಿದ. ಅವಳಿಗದು ಕೇಳಿಸಲಿಲ್ಲ.

ಕೈ ಕಾಲು ಆಡಿಸಿದಳು. ನಿಲುಗಡೆ ದೊರೆಯದೆ ದೇಹ ಹೊರಳಿಸಿದಳು.

ಅಲೆಗಳು ಬೃಹತ್ ಗಾತ್ರದಲ್ಲಿ ಏರಿದವು. ನೀರಿನ ಮೇಲೆ ಕಾಣುತ್ತಿದ್ದ ಅವಳ ದೇಹ ಭಾಗ ಒಮ್ಮೆಗೇ ಕಣ್ಮರೆಯಾಯಿತು.

* * *

ಅರ್ಚನಾಗೆ ಅರಿವು ಹತ್ತಿದಾಗ ನೆತ್ತಿ ಮೇಲಿನ ಬೆಂಕಿ ಸೂರ್ಯ ಕಣ್ಣು ಇರಿಯುತ್ತಿತ್ತು. ನಿಧಾನವಾಗಿ ಎಲ್ಲಿಗೊ ಸರಿಯುತ್ತಿರುವಂತೆ ಭಾಸವಾಯಿತು... ನವೀನನ ಬಲಿಷ್ಠ ತೋಳುಗಳಲ್ಲಿ ತೂಗಿ ಹೋಗುತ್ತಿರುವೆ!

ನವೀನ ಮೊಳಕಾಲು ಆಸರೆಯಲ್ಲಿ ಅವಳನ್ನು ಬಿಸಿ ಮರಳಿನ ಮೇಲೆ ಇಳಿಸಿದ.

ತಲೆಗೂದಲಿಗೆ ತುಟಿಯಿಟ್ಟು ಅವನು ಹಾಗೆಂದುದು ಕೇಳಿಸಿತು. ಕಣ್ಣು ತೆರೆಯಲು ಕಷ್ಟವಾಗಿತ್ತು. ಅವನನ್ನು ಒರಗಿ ಹಾಗೆಯೇ ಇನ್ನಷ್ಟು ಕಾಲ ಕಣ್ಣು ಮುಚ್ಚುವಷ್ಟು ಜಡತ್ವ.

"ಹುಚ್ಚು ಹೆಣ್ಣು!... ಹಠವಾದಿ ಹುಡುಗಿ !"

ತಲೆಗೂದಲನ್ನು ತುಟಿಗಳು ಹೂವಿನಂತೆ ಮತ್ತೆ ಸ್ಪರ್ಶಿಸಿದಾಗ ಅವಳು ಕಣ್ಣು ಬಿಚ್ಚಿ ನಿಟ್ಟುಸಿರು ಹಾಕಿದಳು.

"ನನ್ನ ಗಾಬರಿಗೊಳಿಸಿಬಿಟ್ರಿ... ನಿಮಗೆ ಯಾರೂ ಎಚ್ಚರಿಕೆ ಕೊಟ್ಟಿರಲಿಲ್ಲವೆ?" ಮೃದು ಸಿಡುಕಿನಲ್ಲಿ ಕೇಳಿದ.

"ಗೀತಾಬೇನ್ ಹೇಳಿದ್ರು. ನನಗೆ ಏನಾಯ್ತೋ ಗೊತ್ತಿಲ್ಲ. ಹುಚ್ಚಳ ಹಾಗೆ ಅಲ್ಲಿಗೆ ಹೋದೆ.

ಮರುಳಿನಲ್ಲಿ ಬೆರಳಾಡಿಸುತ್ತಾ ಕುಳಿತು ನಸುನಗಲು ಪ್ರಯತ್ನಿಸಿದಳು. ಅವನು ಎದ್ದು ನಿಂತ.

"ನಡೆದು ಬರೋದಿಕ್ಕೆ ಸಾಧ್ಯವೇ ನೋಡಿ. ಇಲ್ಲವಾದ್ರೆ ಮತ್ತೆ ಹೊತ್ತುಕೊಂಡು ಹೋಗ್ತೀನಿ."

"ಓ, ಬೇಡಿ... ನಾನು ಸರಿಹೋಗಿದೀನಿ."

ಗಾಬರಿಯಿಂದ ತೂರಾಡುತ್ತಾ ನಿಂತು ಅವನ ಕೈಹಿಡಿದು ನಡೆದಳು. ಕಳಚಿ ಹೋಗಿದ್ದ ಚಪ್ಪಲಿ ಹುಡುಕಿ ತಂದುಕೊಟ್ಟ. ತಾಳೆಗರಿಯ ಹ್ಯಾಟ್ ತಲೆಗೆ ಹಾಕಿದ.

"ಹೆಣ್ಣುಗಳ ಸ್ವಭಾವ ಹೀಗೇ. ಸಣ್ಣ ವಿಷಯಕ್ಕೆ ಅತೃಪ್ತಿ, ಅಸಮಾಧಾನ... ಕೋಪ ನನ್ನ ಮೇಲೊ ಅಥವಾ ನಿಮ್ಮ ಆ ಬಾಯ್‌ಫ್ರೆಂಡ್ ಮೇಲೊ?"

ಉಕ್ಕಿದ ಕೋಪ ತಡೆದಳು.

"ಅವರು ಬಾಯ್‌ಫ್ರೆಂಡ್ ಅಲ್ಲ. ನಿಮ್ಮ ಹಾಗೇ ಒಬ್ಬ ಸಂಗಾತಿ. ನನ್ನ ಜೊತೇಲಿ ನಿಮ್ಮನ್ನು ನೋಡಿದರೆ ನಿಮ್ಮ ಹಾಗೇ ಹೇಳಬಹುದು... ನನ್ನ ಒಂಟಿತನ ತಪ್ಪಿಸೋದಕ್ಕೆ ಅವರೊಂದಿಗೆ 'ಥೌಸಂಡ್ ಅಂಡ್ ಒನ್' ರೆಸ್ಟೋರೆಂಟಿಗೆ ಹೋದೆ."

"ಧಾರಾಳವಾಗಿ ಹೋಗಿ ಅಂದೆ."

ಅರ್ಧ ಗಂಟೆಯ ನಂತರ ಅವಳು ವೀಲ್ ಹಿಡಿದ ನವೀನನ ಪಕ್ಕದಲ್ಲಿ ಕುಳಿತು ನಗರದ ಕಡೆಗೆ ಸಾಗಿದ್ದಳು. ದೈಹಿಕ ದಣಿವಿನೊಂದಿಗೆ ಮಾನಸಿಕ ವೇದನೆ. ಸೋದರನ ಸಲುವಾಗಿ ನಡೆಸಿರುವ ಒಂಟಿ ಹೋರಾಟಕ್ಕೆ ಮತ್ತೊಬ್ಬನ ಸಹಾಯವಿಲ್ಲ. ಕುಸುಮಾಕರನ ಸಹಾಯ ಹಸ್ತಕ್ಕೆ ನವೀನನ ಮೆದುವಾದ ಆಕ್ಷೇಪಣೆ... ಅವನು ಸ್ನೇಹಕ್ಕೆ ಅರ್ಹನಲ್ಲವೆಂಬ ಅಭಿಪ್ರಾಯ! ಪರಿಚಯವಿಲ್ಲದ ಕುಸುಮಾಕರನ ಬಗೆಗೆ ನವೀನನ ಅತೃಪ್ತಿ ಏಕೆ? ರಕ್ತ ಸಂಬಂಧಿಯ ಸಾವಿನ ವಿವರಕ್ಕೆ ಹಾತೊರೆಯುವ ತನ್ನ ಮೇಲೂ ಅಸಡ್ಡೆ!

ಹೊಟೇಲಿನ ಮುಂದೆ ಅವಳನ್ನು ಬಿಟ್ಟು ಹೊರಟಾಗ ನವೀನ ಮತ್ತೆ ಕಾಣುವೆನೆಂಬ ಮಾತು ಬಳಸಲಿಲ್ಲ. ವಿಶ್ರಾಂತಿ ಪಡೆಯುವಂತೆ ಎರಡು ಸಾರಿ ಹೇಳಿ ಹಿಂದಕ್ಕೆ ನೋಡದೆ ಸರಿದುಹೋದ.

ನಿದ್ರೆಯಿಂದ ಎಚ್ಚರವಾದಾಗ ಆರು ಗಂಟೆ ಆಗಿತ್ತು. ಅರೆ ತಾಸಿನ ಹೊರ ಗಾಳಿ ಬೇಕೆನಿಸಿತು. ಮುಖ ತೊಳೆದು ಸೀರೆ ಬದಲಿಸಿ ಹೊರಟಳು... ನಡೆಯಬೇಕೆನಿಸಿತು. ಮಾತುಂಗದಲ್ಲಿ ಟ್ಯಾಕ್ಸಿ ಇಳಿದು ಅಂಗಡಿಯ ಷೋಕೇಸ್‌ನಲ್ಲಿ ಸೀರೆಗಳ ಪ್ರದರ್ಶನ ಕಂಡು ಒಳ ಹೊಕ್ಕಳು. ಭಾರಿ ವ್ಯಾಪಾರದ ವಿಶಾಲ ಅಂಗಡಿ. ಮಾರಾಟದ ವಿಭಾಗಗಳ ಮಧ್ಯೆ ನಡೆದು ಕನ್ನಡಿಯಲ್ಲಿ ನೋಡಿಕೊಂಡಳು. ಗುಲಾಬಿ ರಂಗಿನ ಸೀರೆ, ಕುಪ್ಪಸದಲ್ಲಿ

ತನಗೇ ವಿನೂತನವಾಗಿ ಕಾಣುವ ಚೆಲುವು. ಕಣ್ಣು ಚೆಲುವಿನಿಂದ ತುಸು ಪಕ್ಕಕ್ಕೆ ಅಲುಗಿತು.

ಬಲಭುಜದ ಹಿಂದೆ ಹತ್ತು ಅಡಿಗಳಷ್ಟು ದೂರದಲ್ಲಿ ನಿಂತು ತನ್ನನ್ನೇ ಗಮನಿಸುತ್ತಿರುವ ಬಿಳುಪು ತಲೆಗೂದಲಿನ ಮನುಷ್ಯ! ಸಿಡುಬಿನ ಕಲೆಗಳು ಮುಖ!

ಮೆಲ್ಲನೆ ಹಿಂದಕ್ಕೆ ತಿರುಗಿದಳು ಅರ್ಚನಾ. ಅವನು ಮೆಟ್ಟಿಲು ಇಳಿದು ಹೋಗುತ್ತಿದ್ದ. ಅಂಗಡಿಯ ಸಹಸ್ರಾರು ಸೀರೆಗಳು ನಿಸ್ಸಾರವಾಗಿ ಕಂಡವು.

ಹೊಟೇಲಿಗೆ ಹಿಂತಿರುಗಿದಳು. ಡೆಸ್ಕ್‌ನಲ್ಲಿದ್ದ ಹುಡುಗ ಸುಗಂಧ ಲೇಪಿತ ಸಣ್ಣ ಚೀಟಿ ನೀಡಿದ. ಕುಸುಮಾಕರನ ಬರಹ:

'ಸಮುದ್ರ ದಂಡೆಯ ಪಾರ್ಟಿ ಹರ್ಷದಾಯಕವಾಗಿತ್ತೆಂದು ಭಾವಿಸುವೆ. ನಾಳೆ ಸಂಜೆಗೆ ತಪ್ಪದೆ ಹಾಜರಾಗುವೆ.'

ಚೀಟಿಯ ಪರಿಮಳ ಕೋಣೆಯೆಲ್ಲಾ ತುಂಬಿತು. ಕರ್ಟನ್ ಸರಿಸಿ ಕಿಟಿಕಿ ತೆರೆದಳು. ಚೀಟಿ ಚೂರಾಗಿ ಬುಟ್ಟಿ ಸೇರಿದರೂ ಸುಗಂಧದ ಪ್ರಭಾವ ಇಳಿಯಲಿಲ್ಲ.

ಕುಸುಮಾಕರ ತನ್ನ ಕಾರ್ಯಕ್ಕೆ ಸಹಾಯ ನೀಡಲು ಸಂತೋಷದಿಂದ ಸರಿದು ಬರುತ್ತಾನೆ. ಅವನಿಗೆ ದೀಪಕನ ಹೆಸರನ್ನೂ ತಾನು ತಿಳಿಸಿಲ್ಲ! ಅವನ ನೆರವು ಪಡೆದು ವಿವರ ಪಡೆದ ಮೇಲೆ ಅವನೊಂದಿಗೆ ಭೇಟಿ ಸಾಕು. ಕನಸಿನಲ್ಲಿ ಬಂದವನಂತೆ ಸರಿದು ಹೋಗುವ ವ್ಯಕ್ತಿ... ಸಮ್ಮೋಹನದ ಕಣ್ಣುಗಳ ಮನುಷ್ಯ! ಅಷ್ಟ ಸುಲಭವಾಗಿ ಸ್ಮೃತಿಯಿಂದ ಕಳಚಿ ಹೋಗುವನೆ?

ರಾತ್ರಿಯ ಊಟಕ್ಕೆ ತಳಭಾಗಕ್ಕೆ ಬಂದಾಗ ಕಂಡುದು ಬಹುತೇಕ ಹೊಸ ಮುಖಗಳು. ಅವಳ ಕಡೆಗೆ ನಗೆ ಕಣ್ಣು ಆಡಿಸುತ್ತಿದ್ದ ಉತ್ಸಾಹಿ ಪಂಜಾಬಿ ದಂಪತಿಗಳು ಇರಲಿಲ್ಲ. ಮದ್ರಾಸಿನ ನಾಲ್ಕು ಮಂದಿಯ ಕುಟುಂಬದವರು ತಮ್ಮ ಸ್ಥಾನ ತಪ್ಪಿಸಿರಲಿಲ್ಲ.

ಅರ್ಚನಾ ಸುತ್ತಲೂ ಕಣ್ಣು ಹೊರಳಿಸಿದಳು. ಎದುರಿನ ಬಲ ಪಾರ್ಶ್ವದ ಮೇಜಿನ ಮೇಲೆ ದೃಷ್ಟಿ ನೆಟ್ಟಿತು. ಅವಳು ಹೊಟೇಲಿಗೆ ಬಂದ ದಿನ ಮಧ್ಯಾಹ್ನ ಕುಸುಮಾಕರನನ್ನು ಅಲ್ಲಿಯೇ ಕಂಡುದು...

ಅದೇ ಸ್ಥಾನದಲ್ಲಿ ಈಗ ಕುಳಿತ ವ್ಯಕ್ತಿಯ ನೋಟ ಅವಳ ಉಸಿರಿಗೆ ತಡೆಹಾಕಿತು. ತೆಳು ದೇಹದ, ಬಿಳುಪು ತಲೆಗೂದಲಿನ, ಸಿಡುಬು ಕಲೆ ಮುಖದವ!

ಹಾಂ! ಮರೆಯುವಷ್ಟು ಹೆಚ್ಚು ಸಮಯ ಕಳೆದಿಲ್ಲ. ಮೂರು ತಾಸುಗಳ ಹಿಂದೆ ಸೀರೆ ಅಂಗಡಿಯ ನಿಲುವುಗನ್ನಡಿಯಲ್ಲಿ ಆ ಮುಖ ಪ್ರತಿಫಲಿತವಾಗಿತ್ತು.... ತನ್ನನ್ನು ಹಿಂಬಾಲಿಸುತ್ತಿರುವುದು ನಿಸ್ಸಂಶಯ!

ಓಹ್, ತನ್ನದೂ ವಿಪರೀತ ಕಲ್ಪನೆ. ಸೀರೆಯ ಅಂಗಡಿಯಲ್ಲಿ ಕಂಡವನು, ಈ ಹೊಟೇಲಿನ ಅತಿಥಿಯಾಗಿ ಊಟಕ್ಕೆ ಬರುವುದು ನೋಜಿಗವೆ?

ಬೇರು ಬಿಟ್ಟ ಚಿಂತೆ ದೂರವಾಗದು. ಕೋಣೆ ಸೇರಿ ಬಾಗಿಲು ಮುಚ್ಚುವವರೆಗೆ ಸದ್ದು ಮಾಡಿ ಮೈ ಚಳಿ ಬಿಡಿಸಿತು.

"ನಿಮ್ಮ ರಜೆ ಒಂದು ವಾರದಷ್ಟು ಮುಂದುವರಿಸೋದಕ್ಕೆ ಸಾಧ್ಯವೆ?

ನವೀನ ಬೇರಾವ ವಿಷಯವೂ ಎತ್ತದೆ ನೇರವಾಗಿ ಆ ಪ್ರಶ್ನೆ ಹಾಕಿದ್ದ.

"ಸಾಧ್ಯವಿಲ್ಲ... ಬೊಂಬಾಯಿನಲ್ಲಿ ಇನ್ನು ಹೆಚ್ಚಾಗಿ ಉಳಿಯೋ ಅಗತ್ಯ ನನಗೆ ಕಾಣ್ತಾ ಇಲ್ಲ... ಆಸಕ್ತಿಯೂ ಇಲ್ಲ."

ಬಿಗುಮಾನ ಅವಳಿಗಿನ್ನೂ ತಪ್ಪಿರಲಿಲ್ಲ.

"ನಿಮ್ಮ ಉದ್ದೇಶ ಇಲ್ಲಿ ನೆರವೇರಲಿಲ್ಲಾಂತ ನಗರ, ನಗರದ ಜನ ಎಲ್ಲರ ಮೇಲೆ ಜಿಗುಪ್ಸೆ ಬಂದ ಹಾಗೆ ಕಾಣುತ್ತೆ... ಆಲ್‌ರೈಟ್, ಎರಡು ದಿನ ಮುಖ್ಯವಾದ ಕೆಲಸದ ಮೇಲೆ ಹೋಗ್ತಿದೀನಿ. ಇಲ್ಲದಿದ್ರೆ ಸುರಭಿ ನನ್ನ ಸಂಗಡ ಮಾತು ನಿಲ್ಲಿಸಿ ಬಿಡ್ತಾಳೆ.

ಸುರಭಿ! ಅವಳಿಗೆ ಕೋಪ ಉಮ್ಮಳಿಸಿ ಅದು ಒಡನೆ ಅಳುವಿಗೆ ತಿರುಗಿತು. ಸುರಭಿಗೆ ನವೀನನನ್ನು ಸೆಳೆದು ತನ್ನ ಕಾರ್ಯ ಪೂರೈಸಿಕೊಳ್ಳುವ ಸ್ವಾರ್ಥ! ನವೀನನನ್ನೇ ಸೆಳೆದುಕೊಂಡಾಗಿದೆ... ತನಗೆ ಸಂಬಂಧಿಸಿದ ವಿಷಯ ಇದು.

"ಮಾತು ಯಾಕೆ ನಿಲ್ಲಿಸಿದ್ರಿ?"

ಅತ್ತಲಿಂದ ನವೀನ ಅವಳನ್ನು ಕದಲಿಸಿದ.

"ಎರಡು ದಿನ ಯಾಕೆ ಎರಡು ವಾರ ಹೋಗಿ ಬನ್ನಿ... ನಾನು ಯಾವ ದೊಡ್ಡ ವ್ಯಕ್ತಿ ಅಂತ ನಿಮ್ಮ ಸ್ವಂತ ವಿಷಯ ಇಲ್ಲಿ ಹೇಳ್ತಾ ಇದೀರಿ."

ಅತ್ತಲಿಂದ ನಿಟ್ಟುಸಿರು ಬಂತು.

"ನಾನು ಯಾವ ದೊಡ್ಡ ವ್ಯಕ್ತಿ ಅಂತ ರೈಲಿನಲ್ಲಿ ನಿಮ್ಮ ಸ್ವಂತ ಸಂಗತಿ ಹೇಳಿದ್ರಿ?... ನೋಡಿ, ಅರ್ಚನಾ ನಾನು ಬರೋವರೆಗೆ ನೀವು ಎಲ್ಲೂ ತಿರುಗಾಡದೆ ಇರೋದು ಒಳ್ಳೇದು. ಮಹಾಬಲೇಶ್ವರಕ್ಕೆ ಹೋಗೋದೂ ಬೇಡ. ನಿಮ್ಮ ಬಗ್ಗೆ ನನಗೆ ಅಸ್ಥೆ, ಆಸಕ್ತಿ, ಆತಂಕ ಎಲ್ಲಾ ಇದೆ."

"ಸಾಕು, ಬಣ್ಣದ ಮಾತು... ಗುಡ್ ಬೈ."

ಫೋನ್ ಟಪ್ಪನೆ ಅಡಿಗಿಟ್ಟಳು.'

ಆಸ್ಥೆ, ಆಸಕ್ತಿ, ಆತಂಕ... ಸೋಗಿನ ಪದಗಳು. ತನ್ನ ಮೇಲೆ ಅಧಿಕಾರ! ಸ್ವಾರ್ಥ!

ಅತ್ತಲಿಂದ ಮತ್ತೆ ಫೋನ್ ಕರೆ ಬರಲಿಲ್ಲ. ಒಳದನಿ ತಟ್ಟಿ ಹೇಳಿತು. ತನ್ನ ಅತೃಪ್ತಿಯಲ್ಲಿ ಸೌಜನ್ಯದ ರೇಖೆ ದಾಟುತ್ತಿರುವೆ.

ಬೆಳಗ್ಗೆ ಎಂಟು ದಾಟುತ್ತಲೇ ತಲೆ ಹಗುರಗೊಳಿಸಲು ಗುರಿ ಇಲ್ಲದೆ ಟ್ಯಾಕ್ಸಿಯಲ್ಲಿ ಹೊರಟಳು. ಬೈಕುಳ ಬ್ರಿಡ್ಜ್ ದಾಟಿ ರುಸ್ತುಂ ಬಾಗ್ ಸಮೀಪಿಸಿದಾಗ ಕಾರಣವಿಲ್ಲದೆ

ಇಳಿದಳು. ಆ ಸಣ್ಣ ಉದ್ಯಾನದಲ್ಲಿ ಹತ್ತು ನಿಮಿಷಗಳ ವಿರಾಮ ಬೇಕೆನಿಸಿತು.

ಹುಲ್ಲುಹಾಸಿನ ಮೇಲೆ ಕಾಲು ಚಾಚಿ ಮುಖ ಎತ್ತಿದಳು. ಮೇಲೆ ಎಳೆ ಬಿಸಿಲು ಸುರಿಯುವ ನೀಲಿ, ಬಿಳುಪು ಮಚ್ಚೆಗಳ ಆಕಾಶ. ಸುತ್ತಲೂ ವಾಹನಗಳ ದಾಂಧಲೆ. ವೇಗದ ಬದುಕಿನ ನಗರದಲ್ಲಿ ಬೆಳಗಾಗುತ್ತಲೇ ಬುದ್ಧಿಗೆಟ್ಟವಳಂತೆ ಜಡತ್ವದಲ್ಲಿ ಪಾರ್ಕ್‌ಗೆ ಬಂದಿರುವ ತನ್ನ ಹೊರತಾಗಿ ಅಲ್ಲ ಮತ್ತೊಂದು ಬೇರೆ ವ್ಯಕ್ತಿ ಇಲ್ಲ.

ತಲೆ ಬಿರಿಯುವಂತೆ ತುಂಬಿ ನಿಂತ ದೀಪಕ ಪಾವನ್. ತುಟಿ ಬಿಗಿಸಿ ಮೈ ಮುದುರಿಕೊಂಡಳು.

ಅಪ್ರಮಾಣಿಕ ಸೋದರಿ! ಅಣ್ಣನಿಗೆ ವಂಚನೆ ಮಾಡುತ್ತಿರುವೆ. ಸಮುದ್ರ, ಸಂತಸದ ಕೂಟ, ರಾತ್ರಿಯ ಕ್ಲಬ್ ನೃತ್ಯಗಳ ಸಡಗರದಲ್ಲಿ ಮರಣಿಸಿದವನ ನೆನಪು ದೂರ ಮಾಡಿರುವೆ...

"ಮೇಮೆ ಸಾಬ್, ಆ ಹೆಂಗಸು ನಿಮ್ಮನ್ನು ನೋಡಬೇಕು ಅಂತಾಳೆ."

ಹನ್ನೆರಡು ವರ್ಷದ ಬಾಲಕನ ಮಾತು ಅವಳ ಯೋಚನೆ ಚದುರಿಸಿತು. ಸಾವರಿಸಿಕೊಂಡು ಕುಳಿತಳು.

"ಹೆಂಗಸು!... ಎಲ್ಲಿ?"

ಗಾಬರಿಯಿಂದ  ಪಕ್ಕಗಳಿಗೆ ನೋಡಿದಳು.

"ಆ ಮರದ ಪಕ್ಕದಲ್ಲಿ ನಿಂತಿರೋಳು. ಹೆಸರು ಹೇಳಲಿಲ್ಲ."

ಮರದ ದಿಕ್ಕಿಗೆ ಕೈ ತೋರಿ ಹೊರಟು ಹೋದ. ಅರ್ಚನಾ ಎದ್ದು ನಿಂತಳು. ಅತ್ತ ಅಚಲವಾಗಿ ನಿಂತ ಶರೀರದಲ್ಲಿ ಭೀತಿ ತುಂಬಿಸಿತು. ಕಾಲುಗಳು ಸರಿಯಲಿಲ್ಲ.

ಯುವತಿ ಹಿಂದಕ್ಕೆ ನೋಡುತ್ತಾ ಅವಳತ್ತಲೇ ಬಂದಳು. ಸರಿಸುಮಾರು ಅರ್ಚನಾಳ ವಯಸ್ಸಿನ, ತಲೆಯ ಹಿಂಭಾಗಕ್ಕೆ ಸೆರಗು ಹೊದ್ದ, ಕಪ್ಪು ಸೀರೆ, ಕಪ್ಪು ಕನ್ನಡಕ ಧರಿಸಿದ ಅಪರಿಚಿತೆ.... ನರ್ತಕಿಯ ನಡಿಗೆ.

ಸಮೀಪಕ್ಕೆ ಬರುತ್ತಲೇ ಬಿಸಿಲು ಕನ್ನಡಕ ತೆಗೆದಳು. ಬಾದಾಮಿ ಆಕಾರದ ಚೆಂದದ ಮುಖದಲ್ಲಿ ತುಟಿ ಅರಳಿತು.

ಅರ್ಚನಾ ಸೆಳೆತಕ್ಕೆ ಸಿಕ್ಕಿದಳು.

ಆಕರ್ಷಕ ತೀಕ್ಷ್ಣ ಕಣ್ಣುಗಳು. ತೀಡು ಹುಬ್ಬು. ನೀಳ ನಾಸಿಕ. ಅವಕುಂಠನವಿಲ್ಲದ ಮರೆಯದ ಮುಖ!

ಸಂಶಯವಿಲ್ಲ. ಅಣ್ಣ ದೀಪಕ ಪಾವನ್ ಚಿತ್ರಿಸಿದ ಮುಸುಕು ಮುಖದ ಹೆಣ್ಣು!

"ಕಾಮಿನಿ ರತ್ನೆ...!" ಬಾಯಾರಿದವಳಂತೆ ಉದ್ಗರಿಸಿದಳು,

"ನೀನೇ ಗುರುತಿಸಿದ್ದು ಒಳ್ಳೇದಾಯ್ತು... ನೀನು ಹೊಟೇಲ್ ಅಮರ್‌ಗೆ ಬಂದ

ಕೂಡಲೇ ನಾನು ನಿನ್ನ ಗುರ್ತಿಸಿಕೊಂಡೆ. ದೀಪಕ ನಿನ್ನ ಫೋಟೋ ತೋರಿಸಿದ್ದ.... ನಿನ್ನ ಭೇಟಿ ಮಾಡೋದಿಕ್ಕೆ ಎಷ್ಟು ಸಾರಿ ಪ್ರಯತ್ನಪಟ್ಟೆ. ಅಬ್ಬಾ! ಡೆಲ್ಲಿ ಹುಡುಗೀರು ರಾತ್ರಿಯೂ ಬಿಡುವಿಲ್ಲದೆ ಇಷ್ಟೊಂದು ಸುತ್ತಾಡ್ತಾರೆ ಅಂತ ನಾನು ತಿಳಿದಿರಲಿಲ್ಲ. ಮೀನು ಹೊಟೇಲಿನಲ್ಲಿ ಯಾವ ಹೊತ್ತಿನಲ್ಲೂ ಸಿಗ್ಲಿಲ್ಲ. ಭಿಕ್ಷುಕಿ ಹಾಗೆ ಬಂದು ಕಾಣಿಸ್ದೆ. ಆಮೇಲೆ ಎರಡು ಸಾರಿ ಎಚ್ಚರಿಕೆ ಕೊಡೋಣಾಂತ ಬಂದೆ. ಸಾಧ್ಯವೇ ಆಗ್ಲಿಲ್ಲ. ಏನಾದರೂ ಒಂದು ಅಡಚಣೆ. ಆ ಇಬ್ಬರಲ್ಲಿ ಯಾರಾದ್ರೂ ಒಬ್ಬರು ನಿನ್ನ ಜೊತೇಲಿ ಇರ್ತಿದ್ರು...."

ಅರ್ಚನಾ ಮಂತ್ರಮುಗ್ಧಳಂತೆ ಅವಳ ಸವಿಯಾದ ಮಾತು ಕೇಳಿದಳು. ನಸು ಚುಕ್ಕೆ, ಎಳೆ ರೇಖೆಯೂ ಇಲ್ಲದೆ ಕಾಣುತ್ತಿತ್ತು ನರ್ತಕಿಯ ಸುಂದರ, ನುಣುಪು ಮುಖ.

"ನನಗೆ ಎಚ್ಚರಿಕೆ?... ಯಾರಿಂದ?"

ಅವಳಲ್ಲಿ ಆಸಕ್ತಳಾದವಳು ಆತಂಕ ತೋರದೆ ಕೇಳಿದಳು.

ಕಾಮಿನಿ ರತ್ನೆ ಉತ್ತರಿಸುವ ಬದಲು ಅವಳ ಕುತ್ತಿಗೆಯ ಮೇಲೆ ಕಣ್ಣಾಡಿಸಿದಳು.

" ಎಲ್ಲಿ ಆ ವಜ್ರದ ಕೊಂಬಿನ ನೆಕ್‌ಲೇಸ್?"

"ಹೊಟೇಲು ಕೋಣೆಯಲ್ಲಿದೆ... ನಮ್ಮಣ್ಣ ಅದನ್ನ ನಿನಗೆ ಕಾಣಿಕೆ ಕೊಡಬೇಕೂಂತ ಇದ್ದಿರಬೇಕು."

ನರ್ತಕಿ ನೊಂದವಳಂತೆ ಕಣ್ಣು ಮುಚ್ಚಿ ತೀವ್ರವಾಗಿ ಉಸಿರು ಹಾಕಿದಳು.

"ವಜ್ರದ ಕೊಂಬು ನನ್ನ ಸ್ವತ್ತು. ನನಗೆ ಒಪ್ಪಿಸಿಬಿಡು."

ಅವಳಲ್ಲಿ ಆಸಕ್ತಿ ನಶಿಸಿ ಮೈ ಕಾವು ಏರಿತು.

"ನಮ್ಮಣ್ಣನ್ನ ನಾನು ಚೆನ್ನಾಗಿ ಬಲ್ಲೆ. ಅವನಿಗೆ ಪ್ರಣಯ, ಪ್ರೇಮ ಒಂದೂ ಗೊತ್ತಿರಲಿಲ್ಲ. ದಿನಕ್ಕೆ ಹನ್ನೆರಡು ತಾಸು ದುಡೀತಾ ಇದ್ದ ಅಧಿಕಾರಿ. ನೀನು ಮೋಡಿ ಹಾಕಿ ಅವನ್ನ ಬಲೆಗೆ ಸೇರಿಸ್ದೆ... ಅಮೇಲೆ ವಂಚನೆ ಮಾಡಿದೀಯ. ಅವನು ಭಗ್ನ ಪ್ರೇಮಿ ಆಗಿದಾನೆ. ನೀನು ಅವನ ಆತ್ಮಹತ್ಯೆಗೆ ಕಾರಣ ಆದೋಳು!.... ರೂಪ ರಾಕ್ಷಸಿ!"

ಆವರಣ ಮರೆತು ತುಸು ಗಟ್ಟಿಯಾಗಿ ಒದರಿದಳು.

"ಯಾಕೆ ಕೂಗ್ತೀಯಾ? ಇದು ಡೆಲ್ಲಿಯ ಹಾಗೆ ಸತ್ತ ನಗರ ಅಲ್ಲ.... ಸದಾ ಕುದಿತದಲ್ಲಿರೊ ಸಣ್ಣ ಪ್ರಪಂಚ.... ದೀಪಕನ ಆತ್ಮಹತ್ಯೆಗೆ ನಾನು ಕಾರಣ ಅಲ್ಲ... ಆದದ್ದೇ ಬೇರೆ...."

ಅವಳ ಮಾತು ತಟಕ್ಕನೆ ನಿಂತಿತು. ನೀಳ ಶರೀರ ಹಿಂದಕ್ಕೆ ಸರಿದು, ದೃಷ್ಟಿ ಅರ್ಚನಾಳ ಬೆನ್ನು ದಿಕ್ಕಿಗೆ ಬಾಣದಂತೆ ತೂರಿತು.

"ಪೋಪ್ಲ...!"

ಹಿಸುಕಿದ ಕುತ್ತಿಗೆಯಿಂದ ಹೊರಡುವ ಕ್ಷೀಣ ಚೀತ್ಕಾರದಂತೆ ಸ್ವರ ಬಂತು. ಯುವತಿ ಹಾವಿನಂತೆ ಸರಿದು ಹೋದಳು.

ಅರ್ಚನಾ ಏನೊಂದೂ ಅರ್ಥವಾಗದೆ ಹಿಂದಕ್ಕೆ ನೋಡಿದಳು. ಪೊದೆಯ ಪಕ್ಕದಲ್ಲಿ ಪದೇ ಪದೆ ಹಿಂದಕ್ಕೆ ನೋಡುತ್ತಾ ಸಿಡುಬಿನ ಕಲೆ ಮುಖದವನು ನಿಂತಿದ್ದ! ದುಃಸ್ವಪ್ನದಂತೆ ಕಾಡಿದವನು!

"ಪೋಪ್ಲ!" ಅವನ ಹೆಸರು ಎರಡು ಸಾರಿ ತನ್ನಲ್ಲೇ ಹೇಳಿಕೊಂಡಳು. ಎರಡು ಕ್ಷಣ ಅವನನ್ನು ನಿರುಕಿಸಿದ ಅರ್ಚನ ಯುವತಿಯನ್ನು ನೆನೆಸಿಕೊಂಡು ಓಡಿದಳು. ರಸ್ತೆ ತಲುಪುವುದರಲ್ಲಿ ಕಾಲ ಮಿಂಚಿತ್ತು. ಮೆದು ಚಲನೆಯಲ್ಲಿದ್ದ ಕೆಂಪು ಕಾರಿಗೆ ತೂರಿ ಕುಳಿತಳು ಕಾಮಿನಿ ರತ್ನೆ. ವಾಹನಗಳ ಸರಿದಾಟ, ಜನಸಂದಣಿಯಿಂದ ಆ ಕಾರು ಮಾಯವಾಯಿತು.

ಬೆಳಕಿನ ಹಾದಿಗೆ ಬಂದಿದ್ದ ಪ್ರಕರಣ ಮತ್ತೆ ಕತ್ತಲಿಗೆ ಸರಿದಿತ್ತು.

ಅರ್ಚನಾ ಅತೀವ ನಿರಾಶೆಯಲ್ಲಿ ಹಿಂದಕ್ಕೆ ತಿರುಗಿದಳು.

ಪಾರ್ಕಿನ ಪ್ರವೇಶದಲ್ಲಿ ನಿಂತ ಪೋಪ್ಲ!

ಚೀರುವಂತೆ ಮುಖ ಕೆಡಿಸಿ ಬಾಯಿಗೆ ಕೈ ಹಚ್ಚಿದಳು. ಅವನು ಎರಡು ಕೈ ಎತ್ತಿ ಧೈರ್ಯ ನೀಡಿದ.

'ಮೆಂಡಾ, ಕೂಗ್ಬೇಡಿ!... ನನ್ನಿಂದ ತೊಂದರೆ ಇಲ್ಲ. ಓಡಿಹೋದ ಆ ಹೆಂಗಸು ಖತರ್‌ನಾಕ್!"

ಅರ್ಚನಾ ಎರಡು ಸಾರಿ ನೀಳವಾಗಿ ಉಸಿರೆಳೆದುಕೊಂಡು ಶಕ್ತಿಗೂಡಿಸಿಕೊಂಡಳು.

"ಅವಳು ಖತರ್‌ನಾಕ್ ಅಂತ ಗೊತ್ತಾಯ್ತು. ನೀನು ಅಪಾಯಕಾರಿ ಅಲ್ಲಾಂತ ಹೇಗೆ ನಂಬೋದು?"

ಆಯಾಸದಲ್ಲೇ ಗಡುಸಾಗಿ ಕೇಳಿದಳು.

"ನನ್ನ ಈ ಕೆಟ್ಟ ಮುಖ ನೋಡಿದ್ರೆ ಯಾರಿಗೂ ಅದೇ ಭಾವನೆ ಬರೋದು. ಅದು ನನ್ನ ದುರಾದೃಷ್ಟ."

ಸಿಡುಬಿನ ಮುಖ ಅರ್ಧ ಮುಚ್ಚುವಂತೆ ಕರವಸ್ತ್ರ ಹರಡಿಕೊಂಡ ಪೋಪ್ಲ.

"ನನ್ನಿಂದ ಏನಾಗ್ಬೇಕು? ನನ್ನ ಹಿಂಬಾಲಿಸ್ತಾ ಇರೋದು ಯಾಕೆ?" ಅಧಿಕಾರಯುತವಾಗಿ ಕೇಳುವಷ್ಟು ಕೆಚ್ಚು ಮೈಗೂಡಿತ್ತು.

"ಆ ಹೆಂಗಸಿನ ಹಾಗೆ ನಾನೂ ನಿಮ್ಮನ್ನ ಭೇಟಿ ಆಗೋದಿಕ್ಕೆ ಒಂದೇ ಸಮ ಕಾಯ್ತಾ ಇದೀನಿ. ನೀವು ನನಗೆ ಹೆದರಿ ಹೋಗ್ತಾ ಇದೀರಿ. ಈಗ ನೀವು ಮಾತಾಡೋದಿಕ್ಕೆ

ಅವಕಾಶ ಕೊಡದೆ ಇದ್ರೆ ಬಹುಶಃ ಇನ್ನು ಭೇಟಿ ಸಾಧ್ಯವೇ ಇಲ್ಲಾಂತ ತೋರುತ್ತೆ.... ನಿಮಗೆ ಅಪಾಯ ಕಾದಿದೆ ಅಂತ ತಿಳಿಸೋದಿಕ್ಕೆ ನಿಮ್ಮಣ್ಣನ ವಿಷಯದಲ್ಲಿ ನನಗೆ ತಿಳಿದಿರೊ ಸಂಗತಿ ಹೇಳೋದಿಕ್ಕೆ ಒಪ್ಪಿಗೆ ಕೊಡ್ತೀರಾ?.... ನನ್ನಲ್ಲಿ ವಿಶ್ವಾಸ ಇಡಿ."

"ನಮ್ಮಣ್ಣ?... ನಿನಗೆ ಅದೆಲ್ಲಾ ಹೇಗೆ ಗೊತ್ತು?"

"ಅವೆಲ್ಲಾ ಹೇಳೋದಿಕ್ಕೇ ಇಷ್ಟು ಸಾಹಸಪಟ್ಟಿದ್ದು."

ಮುಖದಿಂದ ಕರವಸ್ತ್ರ ಸರಿಸಿ ಬಿಳುಪು ಕೂದಲು ಸವರಿಕೊಂಡ ಪೋಪ್ಲ. ಅವಳಿಗೆ ಭೀತಿ, ಸಂಶಯ ದೂರವಾಗಿ ಕುತೂಹಲ ಕೆರಳುತ್ತಿತ್ತು. ದೀಪಕನ ವಿವರ ತಿಳಿಯುವ ಅವಕಾಶ ಅನಿರೀಕ್ಷಿತವಾಗಿ, ಅದಾಗಿ ಬಂದಿತ್ತು. ಪೋಪ್ಲನ ಮಾತು ಬೇಕಿತ್ತು.

ಸುತ್ತಲೂ ನೋಡಿದಳು.

"ಈ ಜನದ ದೊಂಬಿಯಿಂದ ದೂರ ಹೋಗ್ಬೇಕು... ಬೋರಿವಿಲಿಗೆ ಹೋದರೆ ಹೇಗೆ?"

ಅವನು ಕೇಳಿಕೆಗೆ ಎದುರು ಹೇಳಲಿಲ್ಲ. ಮುಂದಕ್ಕೆ ನಡೆದು ಬರುವಂತೆ ಅವಳಿಗೆ ವಿನಯವಾಗಿ ಕೈ ತೋರಿದ.

"ನೀವು ಬೋರಿವಿಲಿ ಅಂದಿದ್ದು ಉದ್ದೇಶಪೂರ್ವಕವೋ ಅಥವಾ ಆಕಸ್ಮಿಕವೋ ಹೇಳಲಾರೆ. ನಾನೂ ಅಲ್ಲಿಗೇ ಹೋಗೋಣಾಂತ ಹೇಳೋದ್ರಲ್ಲಿದ್ದೆ.... ನಿಮ್ಮಣ್ಣನ್ನ ನಾನು ಕಂಡಿದ್ದು ಬೋರಿವಿಲಿಯಲ್ಲಿ. ಕನ್ಹೇರಿ ಗುಹೆಗಳಿಗೆ ಅವರನ್ನು ಕರೆದೊಯ್ದಿದ್ದು ನನ್ನ ವಾಹನದಲ್ಲಿ."

ಅವಳು ನಿಂತಳು. ಗಾಳಿಗೆ ಹಣೆಯ ಮೇಲೆ ಸರಿದಾಡಿದ ಮುಂಗುರುಳು ತಿದ್ದಿಕೊಂಡಳು.

"ನಿನಗೆ ಕಾರು ಇದೆಯೆ?"

ಅವನ ಸಾಮಾನ್ಯ ಉಡುಪಿನ ಮೇಲೆ ಶಂಕೆಯ ಕಣ್ಣು ಹರಿಸಿದಳು.

"ನಾನು ಟ್ಯಾಕ್ಸಿ ಡ್ರೈವರ್..."

ಎಂದು ಅವಳ ಸಂಶಯ ನಿರ್ಮೂಲವಾಗುವಂತೆ ವಿಕಾರ ಮುಖದಲ್ಲಿ ಒಣ ನಗೆ ಹರಡಿಕೊಂಡ. ಅರ್ಚನಾ ಹಸನ್ಮುಖದಲ್ಲಿ ಮತ್ತೊಮ್ಮೆ ಸಮಾಧಾನದ ಉಸಿರು ಎಳೆದುಕೊಂಡಳು.

* * *

ಬೋರಿವಿಲಿ ರೈಲು ನಿಲ್ದಾಣದ ಹಿಂದೆ ಮೂರು ನಿಮಿಷಗಳ ನಡೆ ದೂರದಲ್ಲಿದ್ದ ಸಾಮಾನ್ಯ ದರ್ಜೆಯ 'ಬೋರಿವಿಲಿ ಲಾಡ್ಜ್' ಮುಂದೆ ಟ್ಯಾಕ್ಸಿ ನಿಂತಿತು. ಪೋಪ್ಲ ಅವಳಿಗೆ ಕುಳಿತಲ್ಲಿಂದಲೇ ತೋರಿದ.

"ದೀಪಕ ಪಾವನ್ ಅದೇ ಹೊಟೇಲಿನಲ್ಲಿ ಇಳಿದುಕೊಂಡಿದ್ದು. ಅವರ ಜೊತೇಲಿ ಇನ್ನೊಬ್ಬ ವಯಸ್ಸಾದೋರು ಇದ್ರು... ನುಣ್ಣನೆಯ ತಲೆ..."

"ಪ್ರೊಫೆಸರ್ ಮಲ್ಹೋತ್ರ...?" ಆತುರದಿಂದ ಕೇಳಿದಳು.

"ಹೆಸರು ಗೊತ್ತಿಲ್ಲ... ಕನ್ಹೇರಿ ಗುಹೆಗಳಿಗೆ ಭಾನುವಾರ ಮಾತ್ರ ಸರ್ಕಾರಿ ಬಸ್ ಇದೆ. ಬಾಕಿ ದಿನ ಟ್ಯಾಕ್ಸಿಯಲ್ಲೇ ಹೋಗ್ಬೇಕು. ನನಗೆ ಚೆನ್ನಾಗಿ ನೆನಪಿದೆ. ಅವತ್ತು ಗುರುವಾರ. ಪ್ರವಾಸಿಗರು ಒಬ್ಬರೂ ಇರಲಿಲ್ಲ. ಅವರಿಬ್ಬರೂ ನನ್ನ ಟ್ಯಾಕ್ಸಿ ಗೊತ್ತುಮಾಡಿಕೊಂಡ್ರು.'

"ದೀಪಕನ ಜೊತೇಲಿ ಆ ಪ್ರೊಫೆಸರ್?"

"ಹೌದು, ಪ್ರೊಫೆಸರ್ ಕೈಲಿ ಒಂದು ನೋಟ್‌ಬುಕ್ ಇತ್ತು. ದೀಪಕ್ ಒಯ್ದಿದ್ದು ಒಂದು ಬ್ರೀಫ್‌ಕೇಸ್, ಪೇಪರ್ ಸುತ್ತಿದ ಒಂದು ದೊಡ್ಡ ರಟ್ಟು."

"ಅವು ಚಿತ್ರ ಬರೆಯೊ ಕ್ಯಾನ್ವಾಸ್, ವಸ್ತುಗಳು."

ಟ್ಯಾಕ್ಸಿ ಪೂರ್ವ ದಿಕ್ಕಿಗೆ ಚಲಿಸಿತು. ವಿಶಾಲ ಬೇಲಿಯ ಹೆಬ್ಬಾಗಿಲು ದಾಟಿ ಸಣ್ಣ ಮನೆಯ ಮುಂದೆ ನಿಂತಿತು. ಪೋಪ್ಲ ಇಳಿದು ಹೋಗಿ ಎರಡು ನಿಮಿಷಗಳಲ್ಲಿ ಹಿಂತಿರುಗಿದ.

"ಅದು ಗೇಟ್ ಮನೆ. ಇಲ್ಲಿಗೆ ಬಂದು ಹೋಗೋ ವಾಹನಕ್ಕೆ ಎರಡು ರೂಪಾಯಿ ಪ್ರವೇಶ ಧನ ತೊಗೊಳ್ತಾರೆ. ವಾಹನದ ನಂಬರು ಗುರುತು ಹಾಕಿಕೊಳ್ತಾರೆ... ಅವತ್ತು ನಾನು ಬೇರೆ ಟ್ಯಾಕ್ಸಿ ತಂದಿದ್ದೆ. ಅದರ ನಂಬರು ಅಲ್ಲಿ ದಾಖಲೆ ಆಗಿದೆ. ವಾಪಸ್ ಬರೋವಾಗ ಅವತ್ತಿನ ತಾರೀಖು ಗುರುತು ಹಾಕ್ಕೊಳ್ಳಿ. ಟ್ಯಾಕ್ಸಿ ನಂಬರ್ ನಾನು ಹೇಳ್ತೀನಿ."

ಅವನು ಹಾಗೆ ಹೇಳಿದುದೇಕೆಂಬುದು ಅರ್ಥವಾಗಲಿಲ್ಲ. ತನಿಖೆಯ ಉತ್ಸಾಹ ಅವಳಲ್ಲಿ ಏರಿತು. ಏನೂ ಹೇಳದೆ ಕುಳಿತಳು.

ನ್ಯಾಷನಲ್ ಪಾರ್ಕಿನ ಮರಗಳ ಗುಂಪಿನ ಮಧ್ಯೆ ಸಿಮೆಂಟ್ ಹಾದಿಯಲ್ಲಿ ವಾಹನ ಗುಡ್ಡ ಏರಿತು. ಪೋಪ್ಲ ಹೇಳುತ್ತಿದ್ದ.

"ಅವರಿಬ್ಬರೂ ಬಹಳ ಮಾತಾಡ್ತಾ ಇದ್ರು. ನಾನು ಸುಮ್ಮನೆ ಡ್ರೈವ್ ಮಾಡ್ತಿದ್ದೆ. ದೀಪಕ ಯಾವುದೊ ಹೆಂಗಸಿನ ವಿಷಯ ಹೇಳಿದ್ರು. ಜೇಬಿನಿಂದ ಭಾರೀ ಬೆಲೆಯ ಒಂದು ಸರ ತೆಗೆದು ಪ್ರೊಫೆಸರ್‌ಗೆ ತೋರಿಸಿದ್ರು... ಹೊಳಪಾದ ನೀಲಿ ವಜ್ರದ ಸರ. ನನ್ನ ಮುಂದಿನ ಕನ್ನಡಿಯಲ್ಲಿ ಅದು ಚೆನ್ನಾಗಿ ಕಾಣಿಸ್ತು.

"ವಜ್ರದ ಕೊಂಬಿನ ನೆಕ್‌ಲೇಸ್ ಅದು."

"ಇರಬೇಕು... ಗುಡ್ಡದ ಮೇಲು ಭಾಗದಲ್ಲಿ ಅವತ್ತು ಒಬ್ಬನೇ ಒಬ್ಬ ಸರ್ಕಾರಿ ನೌಕರ ಇದ್ದದ್ದು.. ಅವರಿಬ್ಬರೂ ಗುಹೆಗಳ ಕಡೆಗೆ ಹೋದ್ರು... ಪ್ರೊಫೆಸರ್ ಎರಡು

ನಿಮಿಷದಲ್ಲಿ ಹಿಂದಕ್ಕೆ ಬಂದ್ರು... ಆಗ ಮೇಲಿನ ಕಾಟೇಜ್‌ನಿಂದ ಒಬ್ಬ ಹೆಂಗಸು, ಒಬ್ಬ ಗಂಡಸು ಇಳಿದುಬಂದು ಪ್ರೊಫೆಸರ್ ಜೊತೆ ಮಾತಾಡಿದ್ರು... ಆ ಹೆಂಗಸೇ ರುಸ್ತುಮ್ ಬಾಗ್‌ನಲ್ಲಿ ಬೆಳಗ್ಗೆ ನನ್ನ ನೋಡಿ ಓಡಿ ಹೋದೋಳು."

"ಕಾಮಿನಿ ರತ್ನೆ!.... ಆ ಗಂಡಸು ಯಾರು?"

ಅತೀವ ತವಕದಲ್ಲಿ ಅವನ ಭುಜ ಒತ್ತಿದಳು. ಪೋಪ್ಲ ವಾಹನದ ವೇಗ ಇಳಿಸಿದ. ಟ್ಯಾಕ್ಸಿ ಗುಡ್ಡದ ಮೇಲು ಭಾಗ ತಲುಪಿತು.

ತೆರೆದ ಭಾಗದಲ್ಲಿ ವಾಹನ ನಿಲ್ಲಿಸಿ ಬಿಳಿ ತಲೆಯಲ್ಲಿ ಕೈ ಆಡಿಸಿ ಪೋಪ್ಲ ಕಾತರಿಸಿದವಳಿಗೆ ಮರು ನುಡಿದ.

"ಆ ಗಂಡಸಿನ ಹೆಸರು ಗೊತ್ತಿಲ್ಲ. ನೋಡಿದರೆ ಗುರುತು ಹಿಡಿತೀನಿ. ಮಿಂಚಿನ ಹಾಗೆ ಸುಳಿದು ಹೋಗ್ತಾನೆ. ಪ್ಲೇನ್‌ನಲ್ಲಿ ಸುತ್ತಾಡೋ ರಹಸ್ಯದ ಮನುಷ್ಯ... ನಿಮಗೆ ಅವನ ಪರಿಚಯ ಇದೆ ಮೇಡಂ..."

ತುದಿಗಣ್ಣಿನಲ್ಲಿ ಅವಳನ್ನು ನೋಡಿದ.

"ನನಗೆ ಪರಿಚಯ?"

ಅನಿಶ್ಚಿತ ಸ್ಥಿತಿಯ ಪರಮಾವಧಿಯಲ್ಲಿ ಕೈ ಹಿಸುಕಿಕೊಂಡಳು.

"ಲಕ್ಷಣವಾದ ಯುವಕ... ಸಯಾನ್‌ನಲ್ಲಿ ಅವನದೊಂದು ಮನೆ ಇದೆ... ಆ ಮನೆಯ ಕಾಕ್‌ಟೈಲ್ ಪಾರ್ಟಿಗೆ ನೀವು ಹೋಗಿದ್ರಿ..."

ತವಕ, ಕುತೂಹಲಗಳ ಸಂಗ್ರಹ ಕೋಶ ಸಿಡಿದುಹೋಯಿತು. ಅರ್ಚನಾ ತಲ್ಲಣಿಸಿದಳು... ನವೀನ ದಾಮ್ಲೆ!

ತಲೆಯಲ್ಲಿ ನಕ್ಷತ್ರಗಳು ಸಿಡಿದೇಳುತ್ತಿದ್ದವು.

ಮಲ್ಹೋತ್ರ... ಕಾಮಿನಿ ರತ್ನೆ...ನವೀನ.

"ಆ ಮೇಲೆ?" ಪ್ರಶ್ನೆಯ ಸ್ವರ ಕ್ಷೀಣಿಸಿತು.

"ಆ ಹೆಂಗಸು ಕೈಚೀಲದಿಂದ ಕಪ್ಪುವಸ್ತು ತೆಗೆದು ತೋರಿದಳು. ಬಹುಶಃ ಅದು ರಿವಾಲ್ವರ್ ಅಂತ ತಿಳಿತೀನಿ...ಮೂವರೂ ಗುಹೆಗಳ ಕಡೆ ಹೋಗಿ ದೀಪಕನ್ನ ಸೇರಿದ್ರು..."

"ಆ ಮೇಲೆ ?.... ಆಮೇಲೆ?"

ಮುಳ್ಳಿನ ಮೇಲೆ ನಿಂತವಳಂತೆ ನೆಮ್ಮದಿಗೆಟ್ಟು ಕೇಳಿದಳು.

"ಆ ಮೇಲೆ ಹೇಳ್ತೀನಿ...ಅಲ್ಲಿ ನೌಕರ ನಿಂತಿದಾನೆ."

ಪ್ರವಾಸಿಗರಿಲ್ಲದ ಆ ದಿನವೂ ಉಸ್ತುವಾರಿ ಒಬ್ಬನೇ ಮನುಷ್ಯ ಅಲ್ಲಿ ನಿಂತಿದ್ದ. ಕುತೂಹಲದ ಘಟ್ಟದಲ್ಲಿ ಮಾತು ನಿಲ್ಲಿಸಿದ ಪೋಪ್ಲ ಬೀಡಿ ಹಚ್ಚಿ ಹೇಳಿದ.

"ನೀವು ಕನ್ಹೇರಿ ನೋಡಿ ಬನ್ನಿ, ಮೇಡಂ. ಅರ್ಧ ಗಂಟೆ ಸಾಕು. ಗೈಡ್ ಬೇಕಿಲ್ಲ.

ಗುಹೆಗಳ ಮೇಲೆ  ನಂಬರ್ ಇದೆ.'

ಅರ್ಚನಾ ಕೀಲುಗೊಂಬೆಯಂತೆ ಹೆಜ್ಜೆ ಹಾಕಿದಳು. ನೂರಾರು ವಿಹಂಗಮಗಳ ಸಾಮೂಹಿಕ ಕರ್ಕಶ ಸದ್ದು ಒಮ್ಮೆಗೇ ಕೇಳಿದಂತಾಗಿ ಬೆಚ್ಚಿ ನಿಂತಳು. ಪ್ರವೇಶಿಸಲು ಅಸಾಧ್ಯವೆನಿಸಿತ್ತು. ಮೊದಲನೆಯ ವಿಶಾಲ, ಕತ್ತಲುಗುಹೆ. ಅಪೂರ್ಣವಾಗಿ ಕಡೆದ ಗುಹೆಯ ಒಳ ಸೇರಿದ ಸಹಸ್ರಾರು ಬಾವಲಿ, ಕಪಟಗಳ ಭೀಷಣ ಶಬ್ದ ಕಠೋರವಾಗಿ ಕೇಳುತ್ತಿತ್ತು. ಹೊರಕ್ಕೆ ತಳ್ಳುವಂತೆ ಮೂಗು ಅಡರುತ್ತಿತ್ತು ಅಸಹ್ಯ ದುರ್ವಾಸನೆ.

ಬೃಹತ್ ಕಂಬಗಳ ಬುದ್ಧನ ಸ್ತೂಪಗಳ ಎರಡು ಗುಹೆಗಳ ಹೊರತಾಗಿ ಉಳಿದೆಲ್ಲವೂ ನಿಸ್ಸಾರ ಶಿಲ್ಪಗಳು. ಅಜಂತಾ, ಎಲ್ಲೋರಾ ಗುಹೆಗಳನ್ನು ನೋಡಿದವಳಿಗೆ ಅವೆಲ್ಲವೂ ಅತಿ ಸಾಧಾರಣ, ಸತ್ವಹೀನ ಶಿಲಾ ರಚನೆ. ನೂರ ಒಂಬತ್ತು ಗುಹೆಗಳಲ್ಲಿ ಬಹುತೇಕ ಅಪೂರ್ಣ.

ನಿರ್ಜನ, ಹಾಳು ಸುರಿಯುವ ಶಿಲೆಯ ಗೂಡುಗಳ ಸಮುದಾಯದಲ್ಲಿ ನಿಧಾನವಾಗಿ ಸಾಗುತ್ತಿದ್ದಂತೆ ಕಲ್ಪನೆಯ ಕಣ್ಣು ಆ ತಾಣ ಅರಸುತ್ತಿತ್ತು.... ದೀಪಕ ಮರಣಿಸಿದ ತಾಣ ಎಲ್ಲಿ?

ಮರೆಯಾದ ಬಂಡೆ ಗೋಡೆಗಳ ಮಧ್ಯೆ ದಿಣ್ಣೆ ಏರಿದಳು. ತಗ್ಗಿಗೆ ಇಳಿದಳು. ಮಧ್ಯೆ ಇಕ್ಕಟ್ಟಾದ ಹಾದಿ. ಅಡಿಯಲ್ಲಿ ಹೆಸರಿಲ್ಲದ ಮರಗಳ ಸಣ್ಣ ಕಾಡು... ಮೃತನ ಸುಳಿವೂ ಅಲ್ಲಿ ದೊರೆಯಲಾರದು.

ಅರ್ಚನಾ ಹಿಂತಿರುಗಿದಳು. ಅವಳಿಗೆ ಪೋಪ್ಲನ ಮುಂದಿನ ಹೇಳಿಕೆ ಬೇಕಿತ್ತು.

ಕನ್ಹೇರಿಯಿಂದ ವಾಹನ ಇಳಿತದಲ್ಲಿ ಸಾಗಿದಾಗ ಅವಳ ತಲೆಯಲ್ಲಿ ಸಾಲು ಚಿತ್ರ ನಿಂತಿತು.

ಕಾಮಿನಿ ರತ್ನೆ... ಮಲ್ಹೋತ್ರ... ನವೀನ....

ಆ ಮೂವರು ಧೂರ್ತರಲ್ಲಿ ಯಾರಲ್ಲೊ ಅಡಗಿದ ತುಂಬಿದ ರಿವಾಲ್ವರ್! ಮೂವರಿಗೂ ಬೆನ್ನು ಹಾಕಿ ಕೃತ್ರಿಮ ಅರಿಯದೆ ಮುಂದೆ ನಡೆದ ದೀಪಕ ಪಾವನ್!

ಪೋಪ್ಲ ಹೇಳುತ್ತಿದ್ದ.

"ಬಹುಶಃ ಆ ಮೂವರಲ್ಲಿ ಯಾರಿಗೂ ಗುಹೆಗಳ ಮೇಲೆ ಆಸಕ್ತಿ ಇರಲಿಲ್ಲ ಸುಮಾರು ಒಂದು ತಾಸು ಕಳೆದ ಮೇಲೆ ಅದೇ ಮೂವರು ಮಾತ್ರ ಹಿಂದಕ್ಕೆ ಬಂದರು... ದೀಪಕ ಬರಲಿಲ್ಲ! ಆ ಹೆಂಗಸು, ಗಂಡಸು ಕಾಟೇಜ್‌ಗೆ ಹಿಂದಿರುಗಿ ಹೋದ್ರು. ನುಣ್ಣನೆಯ ತಲೆಯ ಪ್ರೊಫೆಸರ್ ಮಾತ್ರ ಟ್ಯಾಕ್ಸಿಗೆ ಬಂದ್ರು. ಇನ್ನೊಬ್ಬರು ಎಲ್ಲಿ ಅಂತ ನಾನು ಕೇಳ್ಲಿಲ್ಲ... ನಾಲ್ಕು ದಿನ ಆದ ಮೇಲೆ ಪೇಪರ್ನಲ್ಲಿ ಸುದ್ದಿ ನೋಡ್ದೆ. ಕನ್ಹೇರಿ ಗುಹೆಗಳ ತಳದ ಜಂಗಲ್‌ನಲ್ಲಿ ದೀಪಕ ಪಾವನ್ ರಿವಾಲ್ವರ್‌ನಿಂದ ಆತ್ಮಹತ್ಯೆ ಮಾಡಿಕೊಂಡರು ಅಂತ..... ಅದು ಆತ್ಮಹತ್ಯೆ ಅಲ್ಲಾಂತ ಬಲ್ಲೆ. ಆದರೆ ತುಟಿ ಬಿಚ್ಚೋ

ಹಾಗಿಲ್ಲ. ಆ ಮೂವರೂ ಒಳ್ಳೆ ಶ್ರೀಮಂತರು  ಅಂತ ತಿಳಿತೀನಿ. ಪೊಲೀಸ್‌ಗೆ ಏನಾದ್ರು ಹೇಳಿದ್ರೆ ನನ್ನ ಮೇಲೆ ತನಿಖೆ ಶುರು ಆಗುತ್ತೆ. ಆ ಮೂವರು ನನ್ನ ಮುಗಿಸಿ ಬಿಡ್ತಾರೆ... ನಾನು ಗರೀಬ, ಮೇಡಂ."

ಬಿಗಿ ಹಿಡಿದ ಉಸಿರು ಹೊರ ಹಾಕಿದಳು.

'ನಿನಗೆ ಇನ್ನೂ ಹೆಚ್ಚಿನ ವಿಷಯ ಗೊತ್ತಿದೆ, ಪೋಪ್ಲ...ನನಗೆ ಹೇಳ್ತಾ ಇಲ್ಲ ನೀನು... ದೀಪಕ ನನ್ನ ಅಣ್ಣ ಅನ್ನೋದು ನಿನಗೆ ಯಾರು ಹೇಳಿದ್ದು, ಅದು ಹೇಳು....."

ಪೋಪ್ಲ ವಾಹನದ ವೇಗ ಹೆಚ್ಚಿಸಿದ. ಎರಡು ನಿಮಿಷಗಳ ಮೌನದ ನಂತರ ಉತ್ತರಿಸಿದ.

"ಅದೆಲ್ಲಾ ನಿಧಾನವಾಗಿ ಹೇಳಬೇಕು... ನೀವು ಹೇಳಿದ್ದು ಸರಿ... ನನಗೆ ಸ್ವಲ್ಪ ಹೆಚ್ಚಿನ ವಿಷಯ ಗೊತ್ತಿದೆ. ದೀಪಕ ಆತ್ಮಹತ್ಯೆ ಮಾಡ್ಕೊಳ್ಳೋ ಮನುಷ್ಯ ಆಗಿರಲಿಲ್ಲ... ಕ್ಷಮಿಸಿ, ಮೇಮ್ ಸಾಬ್. ನಾನು ಮುಂದೆ ಹೇಳೋದಿಕ್ಕೆ ಹೆದರ್ತೀನಿ. ನನಗೆ ರಕ್ಷಣೆ ಇಲ್ಲ. ಇಗ ಮೂರು ತಿಂಗಳು ಕಳೆದ ಮೇಲೆ ಪೊಲೀಸ್‌ಗೆ ತಿಳಿಸೋದು ನನಗೆ ಅಪಾಯ. ನಾನು ವಿಪರೀತ ಬಡವ. ನನ್ನ ಸ್ಥಿತಿ ಹೇಳಿ ನಿಮಗೆ ಬೇಸರ ತರೋದು ಬೇಡ.'

ನಾನು ಹಣ ಕೊಡ್ತೀನಿ. ಎಷ್ಟು ಬೇಕು ಅಂತ ಹೇಳು. ಇದನ್ನು ನಾನು ಪೊಲೀಸ್‌ಗೆ ತಿಳಿಸೋದಿಲ್ಲ. ನಾನು ಯಾರನ್ನೂ ಪ್ರಶ್ನೆ ಮಾಡೋದಿಲ್ಲ... ನನಗೆ ಬೇಕಾಗಿರೋದು ಒಂದೇ ಸಂಗತಿ. ಕನ್ಹೇರಿಯಲ್ಲಿ ದೀಪಕನಿಗೆ ಏನಾಯ್ತು ಅನ್ನೋ ನಿಜವಾದ ವಿವರ. ಈಗ ಹೇಳು. ಅದು ತಿಳಿಸೋದಕ್ಕೆ ನೀನು ಕೇಳೊ ಹಣ ಎಷ್ಟು?"

ಪೋಪ್ಲ ಕಸಿವಿಸಿಯಲ್ಲಿ ಪದ ಬಿಡಿಸಿದ.

"ಕೆಲವು ಸಾವಿರ... ಸಂಜೆಗೆ ನಿಮ್ಮ ಹೊಟೇಲಿಗೆ ನಾನೇ ಫೋನ್ ಮಾಡಿ ಬರ್ತೀನಿ. ನನಗೆ ಇನ್ನೂ ಭಯ ತಪ್ಪಿಲ್ಲ. ಪೊಲೀಸ್‌ಗೆ ಹೇಳಿ ನನ್ನ ಹಿಡಿಸಿಬಿಡ್ತೀರಿ ನೀವು."

ಅವನ ಭುಜ ಮುಟ್ಟಿ ಆಶ್ವಾಸನೆ ನೀಡಿದಳು.

"ನನ್ನ ಮಾತು ನಂಬು... ಹಣ ಕೊಡ್ತೀನಿ. ಯಾರಿಗೂ ಇದರ ಸೂಚನೆ ನಾನು ಕೊಡೋದಿಲ್ಲ. ಇವತ್ತು ಸಂಜೆ ನಿನ್ನ ಫೋನ್ ಕರೆಗೆ ಕಾದಿರ್ತೀನಿ... ಇದು ನಿನ್ನಲ್ಲಿರಲಿ.

ನೂರರ ಎರಡು ನೋಟು ನೀಡಿ. ಹೊಟೇಲಿನ ಫೋನ್ ನಂಬರ್, ತನ್ನ ಕೋಣೆಯ ನಂಬರ್ ಬರೆದುಕೊಟ್ಟಳು.

* * *

ಅರ್ಚನಾ ಹೊಟೇಲ್ ಪೋರ್ಟರ್ ಕಡೆ ಮುಗುಳು ನಗೆ ಬೀರಿ ಡೆಸ್ಕ್ ಬಳಿಗೆ ಬಂದು ಕೇಳಿದಳು.

"ನನಗೆ ಯಾವುದಾದರೂ ಚೀಟಿ, ಸೂಚನೆ ಇದೆಯೆ?"

ಕ್ಲರ್ಕ್ ಹಿಂದಕ್ಕೆ ತಿರುಗಿ ಗೂಡಿನ ರಂಧ್ರಗಳಲ್ಲಿ ನೋಡಿ ತಲೆ ಆಡಿಸಿದ.

"ಚೀಟಿ ಯಾವುದು ಇಲ್ಲ... ಆದರೆ ಏನೊ ಇತ್ತು..." ಎಂದು ತಲೆಗೆ ಬೆರಳು ಬಡಿದು ಜ್ಞಾಪಿಸಿಕೊಂಡ.

"ಒಬ್ಬ ಹೆಂಗಸು ನಿಮ್ಮನ್ನು ಕೇಳಿಕೊಂಡು ಬಂದಿದ್ರು... ಸುಮಾರು ಒಂದು ಗಂಟೆ ಹಿಂದೆ. ಹೆಸರು ಹೇಳಲಿಲ್ಲ."

ಹುಬ್ಬೇರಿಸಿದಳು ಅರ್ಚನಾ.

"ಒಂದು ಗಂಟೆ ಹಿಂದೆ ಇರಲಾರದು. ಬಹುಶಃ ನಿನ್ನೆ ಇರಬೇಕು... ನಾನು ಅವಳನ್ನು ಈ ಬೆಳಗ್ಗೆ ಭೇಟಿ ಮಾಡಿದ್ದೆ."

"ಚೆನ್ನಾಗಿ ನೆನಪಿದೆ, ಮೇಡಂ. ಆ ಹೆಂಗಸು ಎರಡನೆ ಸಾರಿ ಇಲ್ಲಿ ಬಂದು ವಿಚಾರಿಸಿದ್ದು.

ಬೆಳಗ್ಗೆ ಕಾಣಿಸಿಕೊಂಡ ಕಾಮಿನಿ ರತ್ನೆ ಮತ್ತೆ ಬಂದಿದ್ದಾಳೆ! ಅವಳಿಗೆ ಏನೋ ಹೇಳುವುದಿದೆ. ಬೆಳಗ್ಗೆ ಅದನ್ನು ಹೇಳಲಾಗಲಿಲ್ಲ... ಅವಳಿಗೆ ತನ್ನಲ್ಲಿರುವ ವಜ್ರದ ಕೊಂಬು ಬೇಕಾಗಿದೆ!

ಕೋಣೆ ಸೇರಿದ ಐದು ನಿಮಿಷಗಳಲ್ಲಿ ಫೋನ್ ಸದ್ದು ಮಾಡಿತು. ಅವಳಿಗೆ ಬೇಸರ. ತಾನು ಕೋಣೆ ಸೇರುವುದನ್ನೇ ಕಾದಿರುವ ವ್ಯಕ್ತಿಯಿಂದ ಕರೆ!

ಫೋನ್ ಎತ್ತಿದಳು. ನಿಧಾನವಾಗಿ ಪರಿಚಯಕ್ಕೆ ನವೀಕರಣ ಕೊಟ್ಟ ಧ್ವನಿ.

"ಹಲೋ, ನಾನು ಮಲ್ಹೋತ್ರ. ಯಾರಿಗೂ ಸಾಮಾನ್ಯವಾಗಿ ರಿಂಗ್ ಮಾಡೋದಿಲ್ಲ ನಾನು. ಈಗ ಕರೆದ ಕಾರಣ ಇಷ್ಟೆ. ನಿಮ್ಮಣ್ಣನ ವಿಷಯದಲ್ಲಿ ನಾನು ಆ ದಿನ ಎಷ್ಟು ಹೇಳಿದೆನೋ ಅಷ್ಟೇ ನನಗೆ ಗೊತ್ತಿರೋದು. ಅವೆಲ್ಲಾ ನಾನು ಹೇಳ್ದೆ ಅಂತ ಯಾರಿಗೂ ತಿಳಿಸಬೇಡಿ."

ಮಲ್ಹೋತ್ರ! ದೀಪಕನ ವಿವರಣೆಗೆ ಬೆಳಕು ಹಾಕಿದ ಪ್ರಥಮ ವ್ಯಕ್ತಿ. ದೀಪಕನೊಂದಿಗೆ ಕನ್ಹೇರಿ ಗುಹೆಗಳಿಗೆ ಹೊರಟವನು. ಅವನು ಮರಣಕ್ಕೆ ಮೊದಲು ಹಿಂದೆಯೇ ನಡೆದವನು!

"ಯಾಕೆ ಈ ಮಾತು ಹೇಳ್ತಿರೋದು?"

ಒರಟಾಗಿ ಕೇಳಿದಳು.

"ನವೀನ ದಾಮ್ಲೆ ಹಾಗಂತ ಸೂಚನೆ ಕೊಟ್ರು."

"ನವೀನ ಸಿಟಿಯಲ್ಲಿಲ್ಲ."

ವಕೀಲಳಂತೆ ಮಾತು ಒಗೆದಳು.

"ಅವರು ಹೋಗೋದಿಕ್ಕೆ ಮೊದಲು ತಿಳಿಸಿದ್ದು..... ನೀವು ಸ್ವಲ್ಪ ಎಚ್ಚರಿಕೆಯಲ್ಲಿರಬೇಕು, ಮಿಸ್."

"ಎಚ್ಚರಿಸ್ತಾ ಇರೊ ನಿಮ್ಮಲ್ಲಿ ನನಗೆ ವಿಶ್ವಾಸ ಇಲ್ಲ."

"ಹಾಂ!"

"ತಬ್ಬಿಬ್ಬಾಗಬೇಡಿ, ಮಿಸ್ಟರ್ ಮಲ್ಹೋತ್ರ. ನಾನು ತುಂಬಾ ಸೀರಿಯಸ್ ಆಗಿ ಹೇಳ್ತಿದೀನಿ. ನೀವು ಕಾಕ್‌ಟೈಲ್ ಪಾರ್ಟಿಯಲ್ಲಿ ದೀಪಕನ ವಿಷಯ ಹೇಳಿದ್ರಲ್ಲ, ಅದರಲ್ಲಿ ನಿಮ್ಮಿಬ್ಬರ ಉದ್ದೇಶ ಏನೋ ಇದೆ. ಇಲ್ಲವಾದ್ರೆ ನೀವು ಹೇಳ್ತಲೇ ಇರ್ಲಿಲ್ಲ."

"ನಿಮ್ಮಿಬ್ಬರ ಉದ್ದೇಶ? ಯಾವ ಇಬ್ಬರು?"

ಗಾಬರಿಗೊಂಡು ಕೇಳಿದ ಪ್ರೊಫೆಸರ್.

'ನಮ್ಮಣ್ಣನ ಮರಣದ ವಿಷಯ ಕೂಲಂಕುಶವಾಗಿ ತಿಳಿದಿರೋರು. ಬಹುಶಃ ಅವನ ಮರಣವನ್ನು ಸಮೀಪದಿಂದ ಪ್ರತ್ಯಕ್ಷವಾಗಿ ನೋಡಿದ  ಇಬ್ಬರು.... ನೀವು ಮತ್ತು ನವೀನ."

"ಮೈ ಗಾಡ್ !" ಗಟ್ಟಿಯಾಗಿ ಉಸಿರಿದ.

"ನಾಟಕ ಬೇಡ."

"ಮಿಸ್ ಅರ್ಚನಾ.... !" ಗದರು ಕಂಠ ಬಂತು.

"ನನಗೆ ಮುಂದೆ ಮಾತಾಡೋ ಇಷ್ಟವಿಲ್ಲ..... ನಿಲ್ಸಿ ಮಾತು!"

ಅವನ ಗದರಿಕೆ ಅಪ್ಪಳಿಸುವಂತೆ ಗಡುಸಾಗಿ ಹೇಳಿ ಫೋನ್ ಅಡಿಗಿಟ್ಟಳು. ತಲೆಯಲ್ಲಿ ಭಯ, ಚಿಂತೆಗಳ ದಾಳಿ ಇರಲಿಲ್ಲ. ಹಾಸಿಗೆಯಲ್ಲಿ ಮೈ ಹರಡಿದಾಗ ಬೇಸರ, ಜಿಗುಪ್ಸೆ.

ನವೀನ, ಮಲ್ಹೋತ್ರ ನಯವಂಚಕರು!

ಮತ್ತೆ ಎಚ್ಚರಗೊಳಿಸಿದುದು ಅದೇ ಫೋನ್ ಶಬ್ದ. ಸಂಜೆಯ ಆರು ಗಂಟೆ ಸಮೀಪಿಸಿತ್ತು. ಗಂಟೆ ಮತ್ತೆ ಬಾರಿಸಿತು.

"ಹಲೋ, ಎರಡು ಸಾರಿ ರಿಂಗ್ ಮಾಡ್ದೆ. ಉತ್ತರವೇ ಇಲ್ಲ. ನೀವು ನಿದ್ರೆ ಮಾಡ್ತಿರಬಹುದು ಅಂತ ಡೆಸ್ಕ್‌ಕ್ಲರ್ಕ್ ಹೇಳ್ದ... ನಿದ್ರಾಭಂಗ ಮಾಡಿದ್ರೆ ಕ್ಷಮೆ ಇರಲಿ."

ಕುಸುಮಾಕರನ ಧ್ವನಿ. ಅಲ್ಲಗಳೆದು ತಪ್ಪಿಸುವ ಧ್ವನಿ ಅಲ್ಲ. ಅದು.... ಮೋಪ್ಲನ ಕರೆ ಇನ್ನೂ ಬಂದಿಲ್ಲ!

"ಹೌದು, ಗಾಢ ನಿದ್ರೆ... ಬೋರಿವಿಲಿಗೆ ಹೋಗಿದ್ದೆ. ಕನ್ಹೇರಿ ಗುಹೆಗಳನ್ನು ನೋಡಿ

ಬಂದೆ."

"ಅದು ಗೊತ್ತಾಯ್ತು."

"ಯಾರು ಹೇಳಿದ್ರು?" ಚಕಿತ ಪ್ರಶ್ನೆ.

"ಅದೊಂದು ಆಕಸ್ಮಿಕ ಸಂಗತಿ. ನಾನೇ ಬಂದು ಹೇಳ್ತೀನಿ. ನಿನ್ನೆ ಹೇಳಿದ್ದೆ ಈ ಸಂಜೆಗೆ ನಮ್ಮ ಭೇಟಿ ಅಂತ. ನೆನಪು ಮಾಡಿಕೊಡ್ತಾ ಇದೀನಿ. ನಾನು ಕಾಲ, ಕೆಲಸ ಕರಾರುವಾಕ್ಕಾಗಿ ನಿರ್ವಹಿಸೋ ಮನುಷ್ಯ."

"ಹೌದು, ಮಿಸ್ಟರ್ ಕುಸುಮಾಕರ. ಅದನ್ನು ಅಲ್ಲಗಳೆಯೋ ಹಾಗಿಲ್ಲ. ನಾನೂ ನಿಮ್ಮ ಭೇಟಿಗೆ ಸಿದ್ಧವಾಗಿದೀನಿ."

ನಿರಾತಂಕವಾಗಿ ಹೇಳಿದಳು.

"ಈಗ ಹೇಳಿ. ನಿಮಗೆ ನನ್ನಲ್ಲಿ ವಿಶ್ವಾಸ ಇದೆಯೆ?"

"ಇದೆ. ಈ ಪ್ರಶ್ನೆ ಯಾಕೆ?"

"ನನ್ನಲ್ಲಿ ಬಹಳ ಮುಚ್ಚುಮರೆ ಮಾಡಿದ್ರಿ."

"ಬಿಡಿಸಿ ಹೇಳಿ."

ಬಿಡಿಸಿ ಹೇಳುವ ಅಗತ್ಯವಿರಲಿಲ್ಲ. ತಪ್ಪಿನ ಅರಿವಾಗಿತ್ತು. ಮುಚ್ಚುಮರೆ ಮಾಡಿರುವುದರ ಬಗ್ಗೆ ತನ್ನ ಮೇಲೆ ಬೇಸರ ಬಂತು.

"ಫೋನ್‌ನಲ್ಲಿ ಅವೆಲ್ಲಾ ಹೆಚ್ಚಾಗಿ ಹೇಳೋದಲ್ಲ.... ನಾನೂ ಬೋರಿವಿಲೆಗೆ ಹೋಗಿದ್ದೆ. ನಿಮಗೆ ಗೊತ್ತಲ್ಲ ನನ್ನದೊಂದು ಹಳೆ ಮನೆ ಅಲ್ಲಿದೆ ಅಂತ........... ಆಕಸ್ಮಿಕವಾಗಿ ಪೊಲೀಸ್ ಅಧಿಕಾರಿನ ಕಂಡೆ. ನಿಮ್ಮ ವಿಷಯ ಹೇಗೊ ಬಂತು. ನೀವು ದೀಪಕ ಪಾವನ್‌ನ ಸೋದರಿ ಅಂತ ಕೇಳಿ ಆಶ್ಚರ್ಯ, ನೋವು ಒಂದೇ ಸಾರಿ ಆಯ್ತು. ನೀವು ಹಾಗಂತ ಒಂದು ಮಾತು ನನ್ನಲ್ಲಿ ಹೇಳಲಿಲ್ಲ!... ಅಣ್ಣನ ಮರಣ ಆತ್ಮಹತ್ಯೆ ಅಲ್ಲಾಂತ ಸಂಶಯಪಟ್ರಿ ಅನ್ನೋದೂ ಆಫೀಸರ್ ಹೇಳ್ದ."

"ನಿಜ.""

"ನೀವು ಅದರ ವಿವರಣೆ ಪಡೆಯಲಿಕ್ಕೆ ಡೆಲ್ಲಿಯಿಂದ ಬಂದ್ರಿ ಅಂತ ಭಾವಿಸ್ತೀನಿ."

"ನೀವು ಪಿಸುಗಿತು ಉತ್ತರ."

"ನನ್ನಲ್ಲಿ ನೀವು ವಿಶ್ವಾಸ ಹೊಂದಿರೊ ರೀತಿ ಇದು.... ನೀವು ದೂರಿಂದ ಬಂದಿರೊ ಹೆಣ್ಣು. ಇಂತಾ ದೊಡ್ಡ ವಿಷಯದಲ್ಲಿ ಒಂಟಿಯಾಗಿ ಪ್ರಯತ್ನಪಡ್ತಿರೋದು ಸಾಹಸವೇ ಸರಿ... ನನ್ನ ಸಹಾಯ ಬೇಕಿಲ್ಲವೆ ನಿಮಗೆ ?"

ತುಟಿ ಕಚ್ಚಿದಳು.

"ಸಹಾಯ ಬೇಕಿತ್ತು... ಆದರೆ ಅದನ್ನ ಪಡೆಯೋದಿಕ್ಕೆ ತಪ್ಪು ವ್ಯಕ್ತಿನ ಆರಿಸಿಕೊಂಡೆ."

ನೊಂದು ಹೇಳಿದಳು.

"ನನ್ನ ಸಹಾಯ ಬೇಕೆ? ಸಂಕೋಚಪಡದೆ ಹೇಳಿ."

"ಬೇಕು."

ಹಾರ್ದಿಕವಾಗಿ ಬೇಡಿಕೆ ಹೊರಹಾಕಿದಳು.

"ನಾನು ಬಹಳ ಹೇಳೋದಿದೆ... ನಮ್ಮಿಬ್ಬರ ಭೇಟಿ, ತಿರುಗಾಟಗಳ ಮೇಲೆ ಯಾರೊ ಹೊಂಚಿನ ಕಣ್ಣು ಹೂಡಿದಾರೆ. ನಿಮ್ಮ ಹೊಟೇಲಿಗೆ ಬಂದು ಕರೆದೊಯ್ಯುವುದು ಸಂಶಯಕ್ಕೆ ಆಸ್ಪದ. ನಿಮಗೆ ಇಷ್ಟವಿಲ್ಲದ ಮಹಾಬಲೇಶ್ವರದ ಪ್ರವಾಸ ನನಗೂ ಬೇಡ... ಈಗ ಆರು ಗಂಟೆ ಹತ್ತು ನಿಮಿಷ. ಇನ್ನೊಂದು ತಾಸಿಗೆ ಸರಿಯಾಗಿ ನೀವು ದಾದರ್‌ನ ಪಾರ್ಕ್‌ವೆ ಹೊಟೇಲಿಗೆ ಬನ್ನಿ. ಶಿವಾಜಿ ಪಾರ್ಕ್ ಹತ್ತಿರದ ಪಂಚತಾರಾ ಹೊಟೇಲು ಸ್ವಾಗತದ ಹಜಾರದಲ್ಲಿರಿ. ನೀವು ಕಾಯೋದಿಕ್ಕೆ ಅವಕಾಶ ಕೊಡದ ಹಾಗೆ ಏಳು ಹತ್ತಕ್ಕೆ ಸರಿಯಾಗಿ ಬರ್ತೀನಿ..... ಬೈ ಬೈ."

* * *

ಪಾರ್ಕ್‌ವೆ ಹೊಟೇಲಿನ ಭವ್ಯ ಸ್ವಾಗತ ಹಜಾರದ ವಿದ್ಯುತ್ ಗಡಿಯಾರದ ಮುಳ್ಳು ಚಕಚಕನೆ ಸಿಡಿದು ಹಾರುತ್ತಿದ್ದಂತೆ ಅರ್ಚನಾಳ ಹೃದಯದ ಬಡಿತವೂ ಏರುತ್ತಿತ್ತು.

ಸಂಜೆಗೆ ಫೋನ್ ಮಾಡಿ ಬರುವೆನೆಂದಿದ್ದ ಪೋಪ್ಲನ ಸುಳಿವಿರಲಿಲ್ಲ!

ಗಡಿಯಾರದ ಮುಳ್ಳು ಏಳು ಗಂಟೆ ಹತ್ತು ನಿಮಿಷ ಮುಟ್ಟುವ ಹೊತ್ತಿಗೆ ಸರಿಯಾಗಿ ಕುಸುಮಾಕರ ಬಾಗಿಲಲ್ಲಿ ಕಾಣಿಸಿಕೊಂಡ. ಕಂದುಗಪ್ಪಿನ ಅಚ್ಚುಕಟ್ಟಾದ ಸೂಟು. ತೀಡಿ ಕೂಡಿಸಿದ ತಲೆಗೂದಲು. ಮಂದಹಾಸ ಬೀರುವ ಮುಖ.

ಸಮವಸ್ತ್ರದ ಆಳು ಅವನ ಸೂಚನೆ ಹಿಡಿದು ಅರ್ಚನಾಳನ್ನು ಗೌರವದಿಂದ ಎಡ ಪಾರ್ಶ್ವದ ಹಜಾರಕ್ಕೆ ಕರೆತಂದ. ಇಬ್ಬರೂ ಮೂಲೆಯ ಮೇಜು ಹಿಡಿದರು.

ಉತ್ಸಾಹದಲ್ಲಿದ್ದ ಕುಸುಮಾಕರ.

"ನಾನು ಕಾಲದ ವಿಷಯದಲ್ಲಿ ಮಾತ್ರ ಕರಾರುವಾಕ್ ಅಂತ ಭಾವಿಸಬೇಡಿ, ಅರ್ಚನಾ. ಕೊಟ್ಟ ಮಾತು, ಆಶ್ವಾಸನೆ ಉಳಿಸಿಕೊಳ್ಳೋದರಲ್ಲೂ ಅಷ್ಟೇ ನಿಷ್ಠಾವಂತ. ಅವೆರಡರಲ್ಲಿ ಸ್ವಲ್ಪ ಏರುಪೇರು ಕಂಡರೂ ನನ್ನ ವ್ಯವಹಾರಗಳಿಗೆ ತೊಂದರೆ...."

ಮುಂದೆ ಹೇಳುವುದು ತಟ್ಟನೆ ನಿಲ್ಲಿಸಿ ಅವಳ ಕುತ್ತಿಗೆಯ ಮೇಲೆ ಕಣ್ಣು ನಾಟಿದ. ನೀಲಿ ವಜ್ರಗಳ ಕೊಂಬಿನ ನೆಕ್‌ಲೇಸ್ ಥಳಥಳಿಸಿತು.

"ಅದ್ಭುತವಾಗಿ ಕಾಣುತ್ತೆ ಅಲ್ಲವೆ?"

ಅರಳಿದ ನಗೆಯಲ್ಲಿ ಅರ್ಚನಾ ಹಾರದ ಕೊಂಬು ಮುಂದಕ್ಕೆ ಎಳೆದು ತೋರಿದಳು.

"ನಿಜಕ್ಕೂ ಅದ್ಭುತ! ಹೆಂಗಸರು ಕೊಂಬು ಧರಿಸೋದಿಲ್ಲ. ಆದರೂ ಫ್ಯಾಷನ್ ಅಲ್ಲವೆ? ಇದು ಯಾವ ಲೋಕದಿಂದ ಬಂತು?"

ಅವನು ಅಚ್ಚರಿಯಿಂದ ಪಾರಾಗಿರಲಿಲ್ಲ.

'ದೀಪಕ ಅವನ ಚಿತ್ರಕ್ಕೆ ರೂಪದರ್ಶಿಯಾಗಿ ಕುಳಿತೋಳಿಗೆ ಇದನ್ನ ಕಾಣಿಕೆಯಾಗಿ ತಂದಿದ್ದ. ಅವನು ಹೋದ ಮೇಲೆ ಇದು ನನ್ನ ಡೆಲ್ಲಿ ವಿಳಾಸಕ್ಕೆ ಬಂತು."

ಕುಸುಮಾಕರ ಮಾತಿಲ್ಲದೆ ಕೋಟಿನ ಒಳ ಜೇಬಿನಿಂದ ಕೆಂಪು ರೇಷ್ಮೆಯ ಪ್ಯಾಕೆಟ್ ತೆಗೆದು ಅದರಿಂದ ಎಳೆದ ಹೊಳಪಿನ ಆಭರಣ ಅವಳ ಮುಂದೆ ಹಿಡಿದು ತೂಗಾಡಿಸಿದ. ಕೆಂಪು ವಜ್ರಗಳ ಕಂಠಹಾರ... ಮಧ್ಯೆ ತೂಗಿದ ವಜ್ರದ ಕೊಂಬು!

ಅರ್ಚನಾ ಅವಾಕ್ಕಾದಳು. ತನ್ನದರ ಹಾಗೆಯೇ ಇರುವ ನೆಕ್‌ಲೇಸ್. ಆದರೆ ಕೊಂಬಿನ ವಿಶಾಲತೆ ತುಸು ಚಿಕ್ಕದು. ಕೆಂಪು ವಜ್ರಗಳ ಕೊಂಬು!

"ಇದು ಯಾವ ಲೋಕದಿಂದ ಬಂತು?"

ಅವನ ಪ್ರಶ್ನೆ ಹಿಂತಿರುಗಿಸಿದಳು. ಅವನ ಕಣ್ಣುಗಳಲ್ಲಿ ನಿರಾಶೆ ನೆಲೆಸಿತು.

"ನಾಲ್ಕು ತಿಂಗಳ ಹಿಂದೆ ಸಿಲೋನ್‌ನಿಂದ ಒಬ್ಬ ನರ್ತಕಿ ಬಂದಳು....."

"ಕಾಮಿನಿ ರತ್ನೆ" ಸರಕ್ಕನೆ ಮುಖ ಮುಂದೆ ತಂದು ಕೇಳಿದಳು.

ಅವಳ ಮುಖ ದಿಟ್ಟಿಸಿ ತಲೆ ಕೊಡವಿದ. ವಜ್ರದ ಕೊಂಬಿನ ಸರ ಮತ್ತೆ ಜೇಬಿಗೆ ಸೇರಿಸಿದ.

ಎರಡು ನೀಳ ಗ್ಲಾಸ್‌ಗಳಲ್ಲಿ ವಿಸ್ಕಿ ಬಂತು.

"ಅವಳ ಹೆಸರು ಗೊತ್ತಿಲ್ಲ. ನರ್ತಕಿಯರ ವಿಷಯದಲ್ಲಿ ನಾನು ತಲೆ ಕೆಡಿಸಿಕೊಳ್ಳೋದಿಲ್ಲ. ಶ್ರೀಲಂಕಾದಲ್ಲೂ ಹೆಂಗಸರು ಸರದಲ್ಲಿ ಕೊಂಬು ಧರಿಸೊದಿಲ್ಲವಂತೆ. ಅವಳು ದಂತದ ಕೊಂಬು ಧರಿಸಿಕೊಂಡಿದ್ದು. ಅವಳ ನೃತ್ಯ ಪ್ರದರ್ಶನಕ್ಕೆ ಬೊಂಬಾಯಿನಲ್ಲಿ ಬೇಡಿಕೆ ಏರಿಬಿಡ್ತು. ಅದು ಕೊಂಬಿನಿಂದ ಬಂದ ಅದೃಷ್ಟ ಅಂತ ನಂಬಿಕೆ.... ನನ್ನ ಸ್ನೇಹಿತನ ನೈಟ್ ಕ್ಲಬ್‌ನಲ್ಲಿ ಅವಳು ಭಾರಿ ನೃತ್ಯದ ಕಾರ್ಯಕ್ರಮಕ್ಕೆ ಒಪ್ಪಿದ್ಲು. ಅವಳಿಗೆ ಕಾಣಿಕೆ ಕೊಡೋದಿಕ್ಕೆ ಕಿಂಬರ್ಲಿಯಿಂದ ಕೆಂಪು ವಜ್ರ ತರಿಸಿ ಸರ, ಕೊಂಬು ಮಾಡಿಸ್ದೆ. ಆ ದಿನ ಅವಳು ಕ್ಲಬ್‌ಗೆ ಬರಲೇ ಇಲ್ಲ!... ಎಲ್ಲಿಗೆ ಹೋದಳು ಅಂತ ಈವರೆಗೆ ಪತ್ತೆ ಆಗಿಲ್ಲ. ಇದು ನನ್ನಲ್ಲೇ ಉಳಿದುಹೋಯ್ತು... ಬಿಡಿ, ಇದು ನಮಗೆ ಸಂಬಂಧವಿಲ್ಲದ ವಿಷಯ. ನಿನ್ನೆ ಬೋರಿವಿಲಿ ಪೊಲೀಸ್ ಠಾಣೆಗೆ ಹೋಗೋವರೆಗೆ ನಿಮ್ಮಣ್ಣನ ವಿಷಯ ಗೊತ್ತಿರಲಿಲ್ಲ. ದೀಪಕ ಆತ್ಮಹತ್ಯೆ ಮಾಡಿಕೊಂಡಿದ್ದು, ನೀವು ಅದರ ವಿವರಣೆ, ಶೋಧನೆಗೆ ಬಂದಿರೋದು ಅಲ್ಲೇ ಗೊತ್ತಾಗಿದ್ದು... ಅದರ ಮೇಲೆ ಈ ದಿನ ಮಧ್ಯಾಹ್ನ ಏನಾಯ್ತು! ಒಬ್ಬ ಟ್ಯಾಕ್ಸಿ ಡ್ರೈವರ್ ಏಕ್‌ದಂ ಬಂದು ಭೇಟಿ ಆದ. ಬಿಳುಪು ಕೂದಲು, ಅರಳು ಕಣ್ಣು,

ಮುಖದಲ್ಲಿ ಸಿಡುಬಿನ ಕಲೆ..."

"ಅವನ ಹೆಸರು ಪೋಪ್ಲ."

ಗಂಭೀರವಾಗಿ ನುಡಿದರೂ ಎದೆ ಬಡಿತ ತಪ್ಪಲಿಲ್ಲ. ಅವನು ನಗೆ ಮಿಂಚಿಸಿದ. ಗ್ಲಾಸ್ ಎತ್ತಿ ಅವಳನ್ನು ನೋಡುತ್ತಾ ಎರಡು ಗುಟುಕು ಹೀರಿದ.

'ನಾವಿಬ್ರೂ ಸುತ್ತಾಡಿದ್ದು ನೋಡಿದಾನೆ ಪೋಪ್ಲ. ನೀವು ಬೆಳಿಗ್ಗೆ ಅವನ ಟ್ಯಾಕ್ಸಿಯಲ್ಲಿ ಕನ್ಹೇರಿ ಗುಹೆಗಳಿಗೆ ಹೋಗಿದ್ದು ತಿಳಿಸ್ದ....ದೀಪಕ ಪಾವನ್‌ನ ಕನ್ಹೇರಿಗೆ ಕರೆದೊಯ್ದ ಮನುಷ್ಯ ಅವನು. ದೀಪಕನೊಂದಿಗೆ ಸೇರಿದ್ದ ವ್ಯಕ್ತಿಗಳನ್ನು ನೋಡಿದಾನೆ. ಗುಹೆಗಳ ಕಡೆಯಿಂದ ದೀಪಕ ಹಿಂತಿರುಗದೆ ಇದ್ದದ್ದೂ ಗಮನಿಸಿದಾನೆ... ಆ ಮರಣದ ವಿಷಯದಲ್ಲಿ ಅವನಿಗೆ ಸತ್ಯಾಂಶ ತಿಳಿದಿದೆ. ಅದನ್ನ ಸಾಧಿಸುವಂತ ಎರಡು ಪುರಾವೆಗಳು ಅವನ ಹತ್ರ ಇವೆಯಂತೆ.... ಅದು ತಿಳಿಸಲಿಕ್ಕೆ ನಿರ್ಗತಿಕ ಹಣ ಕೇಳೋದು ಸ್ವಾಭಾವಿಕ."

ಪೋಪ್ಲ ಬರಲಿಲ್ಲವೆಂಬ ಚಿಂತೆ ಇನ್ನೂ ಕುಟುಕುತ್ತಿತ್ತು. ಅರ್ಚನಾ ಮುಖ ಮುಂದೆ ತಂದಳು.

"ನಾನು ಹಣ ಕೊಡಲಿಕ್ಕೆ ಒಪ್ಪಿದ್ದೆ. ನನಗೆ ಫೋನ್ ಮಾಡಿ ಬರ್ತೀನಿ ಅಂದೋನು ಸಂಜೆ ಆರು ಮುಕ್ಕಾಲು ಕಳೆದರೂ ಬರ್ಲಿಲ್ಲ."

ಕೈಲಿದ್ದ ಗ್ಲಾಸ್ ಮೇಲೆ ಶೂನ್ಯ ನೋಟ ಹಾಕಿದಳು.

"ಬಹುಶಃ ನನ್ನ ಭೇಟಿ ಮಾಡಿದ್ರಿಂದ ನಿಮ್ಮ ತಪ್ಪಿಸಿದ್ದಾನೆ...... ನೀವೇ ಯೋಚನೆ ಮಾಡಿ. ಒಬ್ಬ ಯುವತೀನ ಹೊಟೇಲಿನಲ್ಲಿ ಭೇಟಿ ಮಾಡಿ ರಹಸ್ಯದ ಮಾತು ಆಡೋದು ಕಷ್ಟದ ಕೆಲಸ. ನಿಮ್ಮಿಂದ ಹಣ ದೊರೆಯಲಾರದು ಅಂತ ಸಂಶಯಪಟ್ಟಿರಬೇಕು. ನೀವು ಅವನ್ನ ಪೋಲೀಸರಿಗೆ ಒಪ್ಪಿಸಬಹುದು ಅಂತ ಬೆದರಿರಬಹುದು..."

ಪ್ರತಿಮೆಯಂತೆ ಕುಳಿತವಳ ಕೈ ತಟ್ಟಿ ಕದಲಿಸಿ ಮತ್ತೆ ಮೆಲ್ಲನೆ ಹೇಳಿದ.

"ನನು ಅವನಿಗೆ ಹಣ ಕೊಟ್ಟಿದೀನಿ... ಐದು ಸಾವಿರ! ಈ ವಿಷಯಕ್ಕೆ ಅದು ಹೆಚ್ಚಲ್ಲ.... ಈ ರಾತ್ರಿ ಹನ್ನೊಂದು ಗಂಟೆಗೆ ಮಲಬಾರ್ ಹಿಲ್ ಕೊನೆಯಲ್ಲಿರೊ ಮನೆಯ ವಿಳಾಸ ಕೊಟ್ಟು ಅಲ್ಲಿಗೆ ನನ್ನ ಬರಲಿಕ್ಕೆ ಹೇಳಿದಾನೆ. ಅರ್ಚನಾ, ನಿಮ್ಮ ಸಲುವಾಗಿ, ನಿಮ್ಮ ಪರವಾಗಿ ಅವನಿಂದ ಸತ್ಯಾಂಶ, ಪುರಾವೆ ಪಡೆದು ಬರ್ತೀನಿ. ನಿಮಗಾಗಿ ಏನು ಮಾಡೋದಕ್ಕೂ ಸಿದ್ಧವಾಗಿದೀನಿ. ನಮ್ಮ ಸ್ನೇಹಕ್ಕೆ ನಾನು ಕೊಟ್ಟಿರೊ ಐದು ಸಾವಿರ ಒಂದು ಕ್ಷುಲ್ಲಕ ಸಹಾಯ."

ಅವಳಿಗೆ ಮಾತು ಹೊರಡಲಿಲ್ಲ. ಕಣ್ಣುಗಳಲ್ಲಿ ಕೃತಜ್ಞತೆ, ಸಂಕೋಚ ಹೊರಳಿತು.

"ಐದು ಸಾವಿರ ದೊಡ್ಡ ಹಣ... ನಾನು ಅಷ್ಟು ದೊಡ್ಡ ಶ್ರೀಮಂತೆ ಅಲ್ಲದಿದ್ರೂ ನಿಮಗೆ ಹಣ ಹಿಂತಿರುಗಿಸ್ತೀನಿ.... ನನ್ನ ಸಲುವಾಗಿ ನೀವು ಪೋಪ್ಲನಿಂದ ವಿವರಣೆ

ಪಡೆಯೋದು ದೊಡ್ಡ ಸಹಾಯವೇ ಆಗಿದ್ರೂ...."

ಮಾತು ನಿಲ್ಲಿಸಿದಳು. ಅವಳಲ್ಲಿ ಕೂಗು ಎದ್ದಿತು.

"ಅಣ್ಣನ ಮರಣ ಆತ್ಮಹತ್ಯೆ ಅಲ್ಲ... ಕೊಲೆ!"

"ಹೇಳಿ" ಗ್ಲಾಸ್ ಇಳಿಸಿದ.

"ನಾನು ನಿಮ್ಮೊಂದಿಗೆ ಬರ್ತೀನಿ...."

"ಪೋಪ್ಲನ ಬಾಯಿಂದ ನೀವೇ ಸತ್ಯಾಂಶ ಕೇಳಬೇಕು ಅನ್ನೋ ಹಠ.... ಚಪಲ."

ಎರಡೂ ಅಲ್ಲ. ನನ್ನ ಅಣ್ಣ ಮೇಲಿರೊ ಪ್ರೀತಿ. ನಿಮ್ಮಲ್ಲಿ ವಿಶ್ವಾಸವಿಲ್ಲಾಂತ ತಪ್ಪು ತಿಳೀಬೇಡಿ."

"ನಿಮ್ಮ ಇಚ್ಛೆಗೆ ಎದುರು ಹೇಳೋದಿಲ್ಲ. ನಮ್ಮ ಮೇಲೆ ಹೊಂಚು ಹಾಕ್ತಿರೊ ಹದ್ದುಗಳು ಇದಾರೆ ಅನ್ನೋದು ಮನಸ್ಸಿನಲ್ಲಿರಲಿ. ಒಂಬತ್ತೂವರೆಗೆ ಸರಿಯಾಗಿ ದಾದರ್ ಪಶ್ಚಿಮ ರೈಲ್ವೆ ಸ್ಟೇಷನ್ ಹಿಂಭಾಗಕ್ಕೆ ಬನ್ನಿ. ಅಲ್ಲಿಂದ ನನ್ನ ಕಾರಿನಲ್ಲಿ ಹೋಗೋಣ. ಊಟ ಎಲ್ಲಾದ್ರೂ ಮಾಡಿದರಾಯ್ತು."

ಹೊರಬಂದವರು ಎರಡು ಟ್ಯಾಕ್ಸಿ ಹಿಡಿದು ವಿರುದ್ಧ ದಿಕ್ಕುಗಳಲ್ಲಿ ಸರಿದು ಹೋದರು.

* * *

ದಾದರ್ ಪಶ್ಚಿಮ ರೈಲ್ವೆ ನಿಲ್ದಾಣದ ಹಿಂದೆ ಅರ್ಚನಾ ಟ್ಯಾಕ್ಸಿಯಿಂದ ಇಳಿದಾಗ ಹತ್ತು ನಿಮಿಷದ ಮಳೆ ಸುರಿದು ಧಗೆಯ ವಾತಾವರಣ ಹರಡಿತ್ತು. ಕಾರಿನಲ್ಲಿ ವೀಲ್ ಹಿಡಿದು ಕುಳಿತಿದ್ದ ಕುಸುಮಾಕರ ಕೈ ಎತ್ತಿದ. ಕತ್ತಲಿಗೆ ಕೂಡುವಂತೆ ಕಪ್ಪು ಸೀರೆ ಉಟ್ಟು, ವಜ್ರದ ಕೊಂಬಿನ ಕಂಠಹಾರ ಸೆರಗಿನಿಂದ ಮುಚ್ಚಿದವಳು ಸರ್ರನೆ ನಡೆದು ಕಾರು ಏರಿದಳು.

"ರಸ್ತೆಯಲ್ಲಿ ಯಾವ ಕಾರು ಹಿಂಬಾಲಿಸಲಿಲ್ಲಾಂತ ಭಾವಿಸ್ತೀನಿ" ಕಾರು ಚಾಲನೆಗೆ ತಂದು ಕೇಳಿದ.

"ಇಲ್ಲ" ನಿಖರವಾಗಿ ಹೇಳಿದಳು.

"ಇನ್ನೂ ಒಂದೂವರೆ ಗಂಟೆ ಕಾಲ ಇದೆ. ಎಲ್ಲಾದ್ರೂ ಅರ್ಧ ತಾಸು ಕಳೆದರೆ ಸರಿ ಹೋಗುತ್ತೆ."

ಕಾರು ವರ್ಣರಂಜಿತ ರಸ್ತೆಗಳಲ್ಲಿ ಸಾಗಿತು.

"ಬಹಳ ಯೋಚನೆಯಲ್ಲಿರೊ ಹಾಗೆ ಕಾಣುತ್ತೆ."

ಎಚ್ಚರಿಕೆಯಿಂದ ವೀಲ್ ಆಡಿಸಿದ.

"ಏನೂ ತಿಳಿಯದ ಒಬ್ಬ ಚಿತ್ರ ಕಲಾವಿದನ ಮೇಲೆ ಮೂವರು ಕೈವಾಡ

ನಡೆಸುವಂತ ಸಮಸ್ಯೆ ಏನಿತ್ತು ಅಂತ ತಲೆ ಕಾಡ್ತಿದೆ."

ಅವಳನ್ನು ಸುಮ್ಮನಾಗಿಸಿ ಮೆಲ್ಲನೆ ಹೇಳಿದ.

"ಆ ಮೂವರ ವಿಷಯ ಸದ್ಯಕ್ಕೆ ಮರೆತುಬಿಡೋಣ. ಈಗಿನ ಕೆಲಸವೊಂದೇ ನಮ್ಮ ಗುರಿ... ದೀಪಕನ ಸಾವಿನ ವಿಷಯದಲ್ಲಿ ನೀವು ತಲೆಕೆಡಿಸಿಕೊಂಡಿದ್ದು ಯಾಕೆ ಹೇಳ್ಲಿಲ್ಲ?"

ಎರಡನೆಯ ಸಾರಿ ಬಂದಿದ್ದ ಪ್ರಶ್ನೆ ಅದು.

"ಯಾಕೇಂತ ಈಗಲೂ ಗೊತ್ತಿಲ್ಲ. ಬುದ್ಧಿಗೆ ಆಗಾಗ ಮಂಪರು ಹತ್ತುತ್ತೆ.'

ಸಾವಿನ ಪ್ರಕರಣದಲ್ಲಿ ತಲೆ ಹಾಕಬೇಡವೆಂದು ನವೀನ ಹೇಳಿದುದನ್ನು ಯಾರಿಗೂ ಹೇಳುವಂತಿಲ್ಲ.

"ಆತ್ಮಹತ್ಯೆ ಅಂತ ನೀವು ನಂಬಲಿಲ್ಲ ಯಾಕೆ?"

"ಕಾರಣ ಹೇಳಲಾರೆ. ಸಂಶಯ ಹೊಕ್ಕಿತ್ತು."

"ಸಂಶಯಕ್ಕೆ ಕಾರಣ?" ಛೇಡಿಸುವಂತಿತ್ತು ಪ್ರಶ್ನೆ.

"ಕಾರಣವಿಲ್ಲದ ಸಂಶಯ.... ಹೆಣ್ಣಿನ ಸಚ್ಛಿದ್ರ ಮಿದುಳು."

ನಗೆಮುಖದಲ್ಲಿ ತಪ್ಪಿನ ಒಪ್ಪಿಗೆ ಕಂಡಿತ್ತು.

"ಅದು ಆತ್ಮಹತ್ಯೆ ಇರಲಾರದು ಅಂತ ನಾನೂ ಹೇಳ್ತೀನಿ . ಹವ್ಯಾಸಿ ಕಲಾವಿದನಿಗೆ ಚಿಂತೆ, ನಿರಾಶೆ ಇವೆಲ್ಲಾ ದೂರದ ಪದಗಳು. ನೆಚ್ಚಿನ ನರ್ತಕಿಗೆ ಬೆಲೆ ಬಾಳುವ ವಜ್ರದ ಕೊಂಬಿನ ಕಾಣಿಕೆ ಮಾಡಿಸಿದ ದಿಲ್‌ದಾರ್ ಮನುಷ್ಯ ಆತ್ಮಹತ್ಯೆ ಮಾಡಿಕೊಳ್ಳೋದುಂಟೆ? ಹಾಗೆ ಆತ್ಮಹತ್ಯೆ ಮಾಡಿಕೊಳ್ಳೋನಾಗಿದ್ರೆ ಅದಕ್ಕೆ ಮೊದಲು ಪ್ರೀತಿಯ ಸೋದರಿಗೆ ಒಂದು ಅಂತಿಮ ಪತ್ರ ಬಿಟ್ಟು ಹೋಗ್ತಿದ್ದ."

ಅವನ ಮಾತು ಅರ್ಥಬದ್ಧವಾಗಿತ್ತು. ಕುತ್ತಿಗೆಯ ಕೊಂಬಿನ ಮೇಲೆ ಬೆರಳು ಆಡಿತು."

ನೀವು ಹೇಳ್ತಿರೋದು ಸರಿ, ಅದು ಆತ್ಮಹತ್ಯೆ ಅಲ್ಲ. ನನಗೆ ಆಕಸ್ಮಿಕವಾಗಿ ಸ್ವಲ್ಪ ವಿವರ ಸಿಕ್ತು.... ನಿಮಗೆ ವಿಳಂಬವಾಗಿ ಹೇಳ್ತಿದೀನಿ ಅಂತ ಬೇಸರವಾಗಿದೆ... ಕಾಕ್‌ಟೈಲ್ ಪಾರ್ಟಿಯಲ್ಲಿ ನನ್ನ ವಜ್ರದ ಕೊಂಬನ್ನ ಪ್ರೊಫೆಸರ್ ಮಲ್ಹೋತ್ರ ಗುರ್ತಿಸಿದ್ರು. ಅವರು ದೀಪಕ ಹೊಟೇಲಿನಲ್ಲೇ ಪಕ್ಕದ ಕೋಣೆಯಲ್ಲಿ ಇದ್ದೋರು. ನರ್ತಕಿಯನ್ನು ಬಲ್ಲೋರು."

"ನರ್ತಕಿಯನ್ನು ಸಹಾಯದಿಂದ ಶೋಧ ನಡೆಸೋದಿಕ್ಕೆ ಡೆಲ್ಲಿಯಿಂದ ಬಂದ ಹಾಗೆ ಕಾಣುತ್ತೆ.

"ನರ್ತಕಿಯ ಕಾಣೋ ಆಸೆ, ಉದ್ದೇಶ ಇತ್ತು ನಿಜ. ಇಲ್ಲಿ ಒಂದು ತಿರುವು

ಸಿಕ್ತು.... ನರ್ತಕಿಯ ಮೇಲೆ ತಿರಸ್ಕಾರ ಬಂದ ಬಿಡ್ತು. ಪೋಪ್ಲನ ಹೇಳಿಕೆಗೆ ಕಾದಿದೀನಿ. ಅವನಿಂದ ಕಾರ್ಯಸಾಧನೆ ಆಗ್ಬೇಕು."

ಕಾರು ಮಹಾಲಕ್ಷ್ಮಿ ವಿಭಾಗದ ರೆಸ್ಟೋರೆಂಟ್ ಪಕ್ಕದಲ್ಲಿ ನಿಂತಿತು. ಹತ್ತು ಗಂಟೆ ದಾಟಿತ್ತು. ಲಘು ತಿನಿಸು, ಪಾನೀಯ ಮುಗಿಸಿ ಅರ್ಧ ತಾಸು ನವೆಸಿ ಹೊರ ಬಂದರು.

ನಿಶ್ಯಬ್ದವಾಗಿ ಹರಿದುಹೋದ ಕಾರಿನ ದಿಕ್ಕಿಗೆ ದೃಷ್ಟಿ ನಾಟಿ ನಿಂತಳು ಅರ್ಚನಾ.

"ಏನು ನೋಡ್ತಾ ನಿಂತ್ರಿ?"

ಸಿಗರೇಟು ಹೊತ್ತಿಸಿ ಲೈಟರ್ ಜೇಬಿಗೆ ಸೇರಿಸುತ್ತಾ ಕೇಳಿದ.

"ಅಲ್ಲಿ ಹೋದ ಉದ್ದನೆಯ ವಿದೇಶಿ ಕಾರು! ಅವತ್ತು 'ಥೌಸಂಡ್ ಅಂಡ್ ಒನ್' ರೆಸ್ಟೋರೆಂಟಿನಿಂದ ಬಂದು, ನನ್ನ ಹೊಟೇಲಿನ ಮುಂದೆ ನಿಮ್ಮನ್ನು ಬೀಳ್ಕೊಂಡಾಗ ಅದನ್ನ ನೋಡ್ದೆ. ಅವತ್ತು ಇಬ್ಬರು ಇದ್ರು. ಇವತ್ತು ಒಂದೇ ವ್ಯಕ್ತಿ. ಬಹುಶಃ ಹೆಂಗಸು!"

ತುಟಿಯಿಂದ ಸಿಗರೇಟು ತೆಗೆದು ಹಣೆಯಲ್ಲಿ ಸುಕ್ಕು ತಂದುಕೊಂಡ.

"ನೀವು ಗಮನಿಸಿದ್ದು ಒಳ್ಳೇದಾಯ್ತು. ನನಗೆ ಯಾರಿಂದಲೂ ತೊಂದರೆ ಇಲ್ಲ... ಹೊಂಚು ಹಾಕೋರಿಂದ ಪೋಪ್ಲ ಒಬ್ಬನಿಗೆ ಮಾತ್ರ ಅಪಾಯ.

ಮಹಾಲಕ್ಷ್ಮಿಯಿಂದ ಕಾರು ಲೋಅರ್ ಪರೇಲ್ ಮೂಲಕ ಹಾದು ಹೋಯಿತು. ಮಲಬಾರ್ ಹಿಲ್‌ಗೆ ವಿರುದ್ಧ ದಿಕ್ಕಿನಲ್ಲಿ ಹೋಗುತ್ತಿದ್ದುದರ ಕಾರಣ ಅವಳು ಪ್ರಶ್ನಿಸಲಿಲ್ಲ. ಉದ್ದೇಶ ಅರ್ಥವಾಗಿತ್ತು. ಹಿಂಬಾಲಿಸಬಹುದಾದ ವಾಹನದ ಗತಿ ತಪ್ಪಿಸಲು ಕಾರು ಬಳಸು ದಾರಿಯ ಹರಿದಾಟ ನಡೆಸಿತ್ತು..... ವಿಕ್ಟೋರಿಯಾ ಗಾರ್ಡನ್ ರಸ್ತೆಯಲ್ಲಿ ಹಿಂತಿರುಗಿ, ಎರಡು ಅಡ್ಡ ರಸ್ತೆ ಹಾದು, ಗಿಬ್ಸ್ ರೋಡ್‌ನಿಂದ ಮಲಬಾರ್ ಹಿಲ್‌ಗೆ ಏರಿದರು.

ಇಕ್ಕಟ್ಟಾದ ಎರಡು ಗೋಡೆಗಳ ಮಧ್ಯೆ ಸಾಗಿ ಚಿಕ್ಕ ಬಯಲು ಭಾಗದ ಕತ್ತಲಿನಲ್ಲಿ ಕಾರು ನಿಲ್ಲಿಸಿದ.

ಕಾರಿನ ಕಿಟಕಿ ಮೇಲಕ್ಕೆ ಎಳೆಯುತ್ತಾ ಹೇಳಿದ.

ಕತ್ತಲಿನಲ್ಲಿ ನುಣುಪಾದ ಕಲ್ಲು ಹಾಸುಗಳ ಕಿರು ಹಾದಿಯಲ್ಲಿ ನಡೆದು ಹೋಗುವಾಗ ಅವಳಿಗೆ ಎದೆಯಲ್ಲಿ ತಳಮಳ.

ಈ ಶೋಧನೆ ಕಾರ್ಯ ಅಗತ್ಯವೆ? ತನಿಖೆಯಲ್ಲಿ ಮುಗಿದು ಹೋದ ಪ್ರಕರಣವನ್ನು ತಾನು ತೋಡುವುದು ಬೇಡ. ಹಿಂತಿರುಗುವುದು ಸರಿ... ದೀಪಕನ ಕೊಲೆ?

"ಆ ದಿನ ನಾವು ಇದೇ ರಸ್ತೆಯಲ್ಲಿ ಬಂದಿದ್ದು, ಅಲ್ಲವೆ?" ಪಿಸುಗಿ ಕೇಳಿದಳು.

ನೆನಪು ಚೆನ್ನಾಗಿದೆ ನಿಮಗೆ... ನಾವು ಭೇಟಿಕೊಟ್ಟ, ಹೆಸರಿಲ್ಲದ ಆ ಸೈಫುಲ್ಲಾನ

ಕೆಫೆ ಅಲ್ಲೇ ಇರೋದು. ಅದರ ಪಕ್ಕದ ಹಾದಿಯಲ್ಲಿ ಎರಡು ನಿಮಿಷ ನಡೆದರೆ ಪೋಪ್ಲ ಬರಲು ಹೇಳಿರುವ ಮನೆ."

ಕತ್ತಲು ಮತ್ತಷ್ಟು ಗಾಢವಾಗಿತ್ತು. ಅವಳಿಗೆ ತಲೆಯಲ್ಲಿ ಶಂಕೆ, ಜಿಜ್ಞಾಸೆಗಳ ಮುತ್ತಿಗೆ.

ಪೋಪ್ಲ ಆ ಮನೆಗೆ ಬರದೆ ಹೋದರೆ? ಅವನಲ್ಲಿ ಹೇಳುವ ವಿಷಯ ಹೆಚ್ಚಿನದು ಇಲ್ಲವಾದಲ್ಲಿ?... ತನ್ನ ಸಲುವಾಗಿ ಬಂದಿರುವ ಕುಸುಮಾಕರನಿಗೆ ಪ್ರಾಣಾಪಾಯ!

ಅವನನ್ನು ಅನುಸರಿಸಿ ನಡೆದಳು. ಕಬ್ಬಿಣದ ಹಳೆಯ ಲಾಂದ್ರದ ತಳದಲ್ಲಿದ್ದ ಹಸಿರು ಬಾಗಿಲಿನ ಮೂಲಕ ಇಬ್ಬರೂ ಸರಿದರು. ಅದಕ್ಕೆ ಮುಂದೆ ಮತ್ತೊಂದು ಸಣ್ಣ ಬಾಗಿಲು. ತಳ್ಳುತ್ತಲೇ ತೆರೆಯಿತು.

"ನಿಧಾನವಾಗಿ ಮೆಟ್ಟಿಲು ಹತ್ತಬೇಕು."

ಅವಳ ಕಿವಿಯ ಬಳಿ ಹೇಳಿದ.

ಮೇಲಿನಿಂದ ತೂಗಾಡಿದ ಸಣ್ಣ ದೀಪದ ನಸು ಬೆಳಕಿನಲ್ಲಿ ಅವನ ಹಿಂದೆ ಇಕ್ಕಟ್ಟಾದ ಮೆಟ್ಟಿಲು ಏರಿದಳು.

ದಪ್ಪನೆಯ ಕರ್ಟನ್ ಸರಿಸಿ ಒಳ ಬಂದರು. ಮೇಲಿನ ಕೋಣೆಯಲ್ಲಿ ಸ್ಮಶಾನ ನೀರವತೆ ಹರಡಿತ್ತು. ನೆಲದ ಮೇಲೆ ಗೋಡೆಯ ಪಕ್ಕಕ್ಕೆ ದಪ್ಪನೆಯ ಮೆತ್ತೆ ಹಾಸು. ಅದರ ಮುಂದಿನ ತಗ್ಗು ಮೇಜಿನ ಮೇಲೆ ತಿನಿಸು ತಟ್ಟೆಗಳು, ಮೂರು ಕೊಳವೆ ಕಪ್‌ಗಳು, ಮುಚ್ಚಿದ ನೀಳ ಪಿಂಗಾಣಿ ಕಾಫಿ ಪಾತ್ರೆ.

"ಕಾಫಿ ಸಿದ್ಧವಾಗಿಡಲಿಕ್ಕೆ ನಾನೇ ತಿಳಿಸಿದ್ದೆ."

ಎಂದು ಅವಳ ಕೈ ಹಿಡಿದು ಮೆತ್ತೆಯ ಮೇಲೆ ಕುಳಿತ. ಅವಳ ಪ್ರಶ್ನೆಗೆ ಮೊದಲು ತಾನೇ ಹೇಳಿದ.

"ಪೋಪ್ಲ ಬರಲಿಕ್ಕೆ ಹೇಳಿರೊ ಮನೆ ಅಲ್ಲ ಇದು... ಇದರ ಪಕ್ಕದಲ್ಲಿದೆ ಆ ಮನೆ."

"ಪೋಪ್ಲನಿಗೆ ಇನ್ನೂ ಹದಿನೈದು ನಿಮಿಷ ಕಾಯಬೇಕು."

ಕೈ ಗಡಿಯಾರ ನೋಡಿ ಗೊಣಗಿದ ಅರ್ಚನಾ ಕೋಣೆಯ ಕೆಂಪು ಚಾವಣಿಗೆ, ಸುತ್ತಲೂ ಕಣ್ಣು ಹರಿಸಿದಳು.

"ಆ ವರ್ಗದ ಜನಕ್ಕೆ ಸಮಯದ ಪ್ರಜ್ಞೆ ಎಲ್ಲಿ ಬರಬೇಕು? ಅವನು ಬಸ್ ಹಿಡಿದು ಬರೋದಾದ್ರೆ ಈ ಹೊತ್ತಿನಲ್ಲಿ ಬಸಸು ಸಿಗೋದು ಕಷ್ಟ."

ಅವಳ ಮೂಗು ಅರಳಿತು. ಕೋಣೆಯಲ್ಲಿ ಸುಗಂಧ ಪಸರಿಸಿತ್ತು. ಕುಸುಮಾಕರ ಕಪ್‌ಗೆ ಕಾಫಿ ಬಗ್ಗಿಸಿದ.

"ಪೋಪ್ಲನ ಸಂಗಡ ಮಾತು ಮುಗಿದ ಕೊಡಲೇ ಸೈಫುಲ್ಲಾನ ಕೆಫೆಯಲ್ಲಿ

ಏನಾದ್ರು ತಿನ್ನಬೇಕು. ನಾನು ಹಾಗೇ ಬಂದುಬಿಟ್ಟೆ. ನೀವೂ ಏನೂ ತೆಗೆದುಕೊಂಡಿಲ್ಲ."

ಅರ್ಚನಾ ತಟ್ಟೆಯಲ್ಲಿದ್ದ ಪಿರಮಿಡ್ ಆಕಾರದ ಸಿಹಿ ತಿನಿಸು ಎತ್ತಿ ನೋಡಿದಳು.

"ಅದು ಇಜಿಪ್ಷಿಯನ್ ಸಿಹಿ, ರುಚಿಯಾಗಿದೆ... ಹೆಚ್ಚಾಗಿ ತಿನ್ನಬೇಡಿ, ಹಸಿವು ಅಡಗಿಹೋಗುತ್ತೆ."

ತಾನೊಂದು ಸಿಹಿ ಎತ್ತಿದ.

ಬಾದಾಮಿಯ ಚೂರುಗಳಿಂದ ತುಂಬಿದ ಸಿಹಿ ರುಚಿಯಾಗಿತ್ತು. ಒಂದು ಪೂರ್ತಿಯಾಗಿ ಮುಗಿಸಿದಳು... ಮತ್ತೊಂದು... ಮೂರು.....

ಅವಳಿಗೆ ಆತಂಕ, ಭೀತಿ, ಏಕಾಕಿ ಸರಿದುಹೋಗಿತ್ತು. ಮೈಯಲ್ಲಿ ಲವಲವಿಕೆ ತುಂಬಿತ್ತು.... ಸಂಬೋಧನೆಯ ಪರಿಜ್ಞಾನ ತೂರಿ ಹೋಗುವಷ್ಟು ಉದ್ರೇಕ.

"ನೀನು ಹೇಳಿದ್ದೇನು... ಪೋಪ್ಲ ಬಸ್‌ನಲ್ಲಿ ಬರಬೇಕು ಅಂತ? ಅವನು ಟ್ಯಾಕ್ಸಿ ಇಟ್ಟಿದ್ದಾನೆ ಅಲ್ಲವೆ?''

"ನೀನು ! ಅವನು ತುಚ್ಛ ಸಂಬೋಧನೆಯಿಂದ ಅಚ್ಚರಿಗೊಳ್ಳುವ ಬದಲು ಹರ್ಷಗೊಂಡ.

'ಅವನು ಟ್ಯಾಕ್ಸಿ ಡ್ರೈವರ್ ಅಲ್ಲ... ನನ್ನ ಸಹಾಯಕ. ವೈರ್‌ಲೆಸ್, ಟೇಪ್ ರೆಕಾರ್ಡರ್‌ಗಿಂತ ಚುರುಕು ಅವನು. ನಿನಗೆ ಕಾಕ್‌ಟೈಲ್ ಪಾರ್ಟಿಯಲ್ಲಿ ಆ ಪ್ರೊಫೆಸರ್ ಹೇಳಿದ್ದನ್ನೆಲ್ಲಾ ಗ್ರಹಿಸಿ ಚಾಚೂ ತಪ್ಪದ ಹಾಗೆ ನನಗೆ ಒಪ್ಪಿಸಿದ ನಿಷ್ಠಾವಂತ. ಆ ಡ್ರೈವರುಗಳ ಮಧ್ಯೆ ನೀನು ಅವನ್ನ ಗುರ್ತಿಸಲಿಲ್ಲ."

ಮೆಲ್ಲನೆ ಅವಳ ಕೆನ್ನೆ ತಟ್ಟಿದ. ಕತ್ತಿನಲ್ಲಿದ್ದ ನೀಲಿ ವಜ್ರದ ಕೊಂಬಿನ ಮೇಲೆ ಬೆರಳು ಸವರಿದ. ಅವನ ಮಾತು ಅರೆಬರೆ ಕೇಳಿಸಿಕೊಂಡು ಸೋಲುಗಣ್ಣು ಎತ್ತಿದಳು.

"ಕಾಮಿನಿ ರತ್ನೆ ನಿನಗೆ ಯಾಕೆ ಪರಿಚಯ ಆಗ್ಲಿಲ್ಲ?"

"ಪರಿಚಯ ಆಗ್ಲಿಲ್ಲ... ಆದರೆ ನನ್ನ ಪ್ರೇಮಿಸಿದ್ಲು. ಮದುವೆ ಆಗ್ತೀನಿ ಅಂದ್ಲು."

ಓರೆಗಣ್ಣಿನಲ್ಲಿ ನೋಡಿ ವ್ಯಂಗ್ಯದಲ್ಲಿ ಹೇಳಿದ. ಅವಳಿಗೆ ಮಂಪರು ಏರಿತ್ತು. ಮಾತಿನ ಅಣಕು ಅರ್ಥವಾಗದೆ ಕಣ್ಣು ಕಿರಿದು ಮಾಡಿದಳು.

"ಅವಳು, ಆ ಪ್ರೊಫೆಸರ್, ಮತ್ತೆ ನವೀನ ಒಟ್ಟಾಗಿ ಸೇರಿ ನನ್ನ ಅಣ್ಣನ ಜೀವಕ್ಕೆ ಸಂಚಕಾರ ತಂದ್ರು ಅಂದರೆ ನೀನು ನಂಬ್ತೀಯಾ?"

ಅವನ ಎದೆಗೆ ಬೆರಳು ಒತ್ತಿ ಕೇಳಿದಳು. ಅವನು ನಕಾರದಲ್ಲಿ ತಲೆ ಒದರಿಂದ.

'ನಂಬೋದಿಲ್ಲ.... ಸತ್ತು ಬಿದ್ದಿರೋ ಮೀನನ್ನು ಕೋಲಿನಿಂದಲೂ ಮುಟ್ಟಲಾರದಷ್ಟು ನರ ಸತ್ತ ಜನ ಅವರು."

ನಿದ್ರೆಗಣ್ಣು ತೇಲಿಸಿ ಮುಖ ಎತ್ತಿದಳು. ಮತ್ತೆ ತಲೆ ಪಕ್ಕಕ್ಕೆ ವಾಲಿಸಿದಳು. ವಜ್ರದ

ಕೊಂಬು ಕತ್ತು ಒತ್ತಿತ್ತು. ಬೆರಳುಗಳಿಂದ ಅದನ್ನು ಸರಿಪಡಿಸಿದಳು.

"ನನಗೆ ಗೊತ್ತು.... ನೀವು ಕೆಂಪು ವಜ್ರದ ಕೊಂಬು ಕಾಮಿನಿ ರತ್ನೆಗೆ ಮಾಡಿಸಿದ್ದು" ಗಹಗಹಿಸಿದಳು.

"ಸರಿಯಾಗಿ ಹೇಳ್ದೆ. ನಿಮ್ಮಣ್ಣ ಅವಳಿಗೆ ನೀಲಿ ವಜ್ರದಲ್ಲಿ ಮಾಡಿಸ್ದ. ನಾನು ಸ್ಪರ್ಧೆ ಮೇಲೆ ಕೆಂಪು ವಜ್ರದ್ದು ಮಾಡಿಸ್ದೆ."

ತರಂಗಗಳಲ್ಲಿ ನಗೆ ತೂರಿದಳು.

"ನಮ್ಮಣ್ಣನ ಹಾಗೆ ನೀನೂ ಅವಳನ್ನು ಪ್ರೀತಿಸಿದೆಯೇನು?"

ಅವನ ಎದೆಗೆ ಮೆಲ್ಲನೆ ಬಾರಿಸಿದಳು. ಅವಳ ಕೈ ಹಿಡಿದು ಚುಂಬಿಸಿದ.

"ಅವಳನ್ನ ನಾನೇ ಮೊದಲು ಪ್ರೀತಿಸಿದೋನು... ಅವಳಿಗೋಸ್ಕರ ಹಣ ನೀರಿನ ಹಾಗೆ ಸುರಿದೆ. ಆಮೇಲೆ ನಿಮ್ಮಣ್ಣ ಧೂಮಕೇತು ಹಾಗೆ ಬಂದ. ಒಬ್ಬ ಸಾಮಾನ್ಯ ಚಿತ್ರಕಾರನಿಗೆ ಕಾಮಿನಿ ರತ್ನೆ ಅಷ್ಟೊಂದು ಸೋತು ನನ್ನ ದೂರ ಮಾಡ್ತಾಳೇಂತ ಭಾವಿಸ್ಲಿಲ್ಲ"

ಕಣ್ಣಿನ ಸಮೀಪಕ್ಕೆ ಕೈ ಗಡಿಯಾರ ಹಿಡಿದು ನೋಡಿದಳು. ಎಲ್ಲವೂ ಮಂಜು. ಸಂಖ್ಯೆಗಳ, ಮುಳ್ಳುಗಳ ಗಲಿಬಿಲಿ.

"ಪೋಪ್ಲ ಬರೊ ಹೊತ್ತು ಮೀರಿದೆ."

"ಪೋಪ್ಲ ಇಲ್ಲಿಗೆ ಈಗ ಬರೋದೇ ಇಲ್ಲ.... ಯಾಕೆ ಅಂತ ಕಷ್ಟಪಟ್ಟು ಕೇಳಬೇಡ.. ಪೋಪ್ಲ ನಿನಗೆ ಬೋರಿವಿಲಿಯಲ್ಲಿ ಹೇಳಿದ್ದೆಲ್ಲಾ ಒಂದು ಭಾರೀ ಕಟ್ಟುಕಥೆ, ಅವನು ಹೇಳಿದ ಹಾಗೆ ದೀಪಕ, ಮಲ್ಹೋತ್ರ, ನವೀನ, ಕಾಮಿನಿ ರತ್ನೆ ಕನ್ಹೇರಿಯಲ್ಲಿ ಸೇರ್ಲಿಲ್ಲ... ನಿನ್ನ ಇಲ್ಲಿಗೆ ಬರೋ ಹಾಗೆ ಮಾಡೋದಿಕ್ಕೆ ನಾನು ಅವನಿಂದ ಹೇಳಿಸಿದ ಸುಳ್ಳು ಕಥೆ ಅದು...."

ಅವನ ವಿಕಟ ನಗೆ ಕೇಳಿತು. ಗೋಡೆಯ ದಿಂಬಿಗೆ ತಲೆ ಒರಗಿಸಿ ಕೊರಗಿದಳು.

"ಆ ಸ್ಮಗ್ಲರ್ ನವೀನ ನಿನ್ನ ಸ್ನೇಹಿತನೆ?... ಫೂಲ್!" ಸ್ವರ ಕ್ಷೀಣಿಸುತ್ತಿತ್ತು. ಹಲ್ಲು ಕಚ್ಚಿದಳು.

"ನವೀನ ಸ್ಮಗ್ಲರ್ ಅಲ್ಲ... ನಾನು ಸುಪ್ರಸಿದ್ಧ ಸ್ಮಗ್ಲರ್. ಅವನು ಕೇಂದ್ರದ ತೆರಿಗೆ ಕಟ್ಟೆ ಇಲಾಖೆಯೋನು..."

ಅಗಾಧ ನಿಶ್ಶಕ್ತತೆಯಲ್ಲಿ ಭಾರವಾದ ತಲೆ ಎತ್ತಿದಳು.

"ಯಾರು?.... ಯಾಕೆ ಹೀಗೆ?"

ಶಕ್ತಿ ಮೀರಿ ಬಂತು ಪ್ರಶ್ನೆಗಳ ಸ್ವರ.

"ಯಾಕೇಂದ್ರೆ ನೀನು ವಿಪರೀತ ಪ್ರಶ್ನೆ ಕೇಳ್ತಿದೀಯ."

ದೂರದಿಂದ ಬಂದ ಹಾಗೆ ಕೇಳಿತು ಕುಸುಮಾಕರನ ಬಿರುಸು ಕಂಠ. ಅವನ ವಿಕೃತ ನಗೆ ಕೋಣೆಯೆಲ್ಲಾ ಹೊಗೆಯಂತೆ ಆವರಿಸಿತು.

ಅವಳ ಕಿವಿಗೆ ತುಟಿ ಸ್ಪರ್ಶಿಸಿ ಹೇಳಿದ.

"ಯಾಕೇಂದ್ರೆ.. ಅವತ್ತು ನಿಮ್ಮಣ್ಣ ದೀಪಕನೊಂದಿಗೆ ಕನ್ಹೇರಿ ಗುಹೆಗಳ ಕಡೆಗೆ ಹೋದೋನು ಒಬ್ಬನೇ ಮನುಷ್ಯ ನಾನೇ!"

ಅವಳು ತಲೆ ಎತ್ತಲು ಸೆಣೆಸಿದಳು. ಉಸಿರಾಟಕ್ಕೆ ಹಾತೊರೆದಳು. ಕಣ್ಣುಗಳ ಮುಂದೆ ಕಪ್ಪು ತೆರೆ ಹರಡಿತ್ತು. ತೆರೆಯ ಮೇಲೆ ಬಣ್ಣದ ಸಹಸ್ರ ನಕ್ಷತ್ರಗಳು ಸಿಡಿದೇರಿದವು.

* * *

ತೆಳುಗಾಳಿ 'ಸುಂಯ್' ಗುಟ್ಟಿತು. ತಲೆಯಲ್ಲಿ ಸಿಡಿತದ ನೋವು. ಅರ್ಚನಾ ಮೆಲ್ಲನೆ ನರಳಿ ಕಣ್ಣು ತೆರೆದಳು. ಕಿಟಕಿಯ ಸೀಳಿನಿಂದ ಬೆಳ್ಳಿ ಬೆಳಕು ತೂರಿ ಬಂದಿತ್ತು. ತಗ್ಗಿ ಹೆಂಚು ಚಾವಣಿಯ ವಿಶಾಲ ಕೋಣೆ.

ಉಸಿರಾಟಕ್ಕೆ ಭೀತಿ ತಡೆ ಹಾಕಿತ್ತು. ಎದೆಯಲ್ಲಿ ಸುತ್ತಿಗೆ ಬಡಿತ..... ತಾನೆಲ್ಲಿರುವೆ?

ನೆನಪಿನ ಮೇಲೆ ತೆಳು ಹೊದಿಕೆ.... ಹೊದಿಕೆ ನಿಧಾನವಾಗಿ ಸರಿಯಿತು.

ಮಲಬಾರ್ ಹಿಲ್ ಏರಿದ ಕಾರು... ನುಣುಪು ಹಾಸುಗಲ್ಲಿನ ಮೇಲೆ ನಡಿಗೆ.... ಮಹಡಿ ಮೆಟ್ಟಿಲು..... ಪಿರಮಿಡ್ ಆಕಾರದ ಸಿಹಿ ತಿನಿಸು.....

ಸಿಹಿಯಲ್ಲಿಯ ನಿದ್ರೆಯ ಮದ್ದು! ಮಿದುಳಿನ ಮೇಲೆ ಹರಡಿದ ಮಂಪರು!

ಎದುರು ಬಾಗಿಲಿನ ಬೀಗ 'ಕಟ್' ಎಂದು ತೆರೆಯಿತು. ಹೊರಗಿನ ಕತ್ತಲು ಆವರಣ ಕಾಣಿಸಿತು. ಲಾಂದ್ರ ಹಿಡಿದ ಕೈ ಒಳ ಬಂತು. ಪರಿಚಿತ ಕೈ!

ಪುನಃ ಬಾಗಿಲು ಮುಚ್ಚಿತು. ಲಾಂದ್ರ ಮುಂದಕ್ಕೆ ಚಲಿಸಿ ಮೇಲೆದದಿತು.

"ಸ್ವಲ್ಪ ಮುಂಚಿತವಾಗಿ ಪ್ರಜ್ಞೆ ಪಡೆದಿದೀಯ."

ಕುಸುಮಾಕರ ಲಾಂದ್ರ ನೆಲಕ್ಕಿಟ್ಟು ಅವಳ ಪಕ್ಕ ಕುಳಿತ.

"ನಾನು ಹೋಗ್ಬೇಕು."

ಅದು ತನ್ನ ಧ್ವನಿಯೇ ಎಂಬ ಅಚ್ಚರಿ ಅವಳಿಗೆ .

"ಆತುರ ಯಾಕೆ? ಇದು ನನ್ನ ಸ್ವಂತದ ಮನೆ... ನೀನು ಇಲ್ಲಿಂದ ಹೋಗೋ ಹಾಗಿಲ್ಲ.... ನೀನು ಅಪಾಯಕಾರಿ!"

ಅವನ ಗಂಭೀರ ಹೇಳಿಕೆ ಅವಳಲ್ಲಿ ಚಳಿ ಹತ್ತಿಸಿತು.

"ಅಪಾಯಕಾರಿ? ನಾನು ಬೊಂಬಾಯಿಗೆ ಬಂದಿದ್ದು....."

"ಹಾಗೆ ನೀನು ಬಂದಿದ್ದು ನನ್ನ ಅದೃಷ್ಟ... ನವೀನ ದಾಮ್ಲೆ ಡೆಲ್ಲಿಯಿಂದ

ಪಂಜಾಬ್ ಮೈಲ್‌ನಲ್ಲಿ ಹೊರಟ ಕೂಡ್ಲೆ ನನ್ನ ಕಡೆಯೋರು ಸುದ್ದಿ ಕೊಟ್ರು. ಅವನು ವಿ.ಟಿ. ಸ್ಟೇಷನ್‌ನಲ್ಲಿ ಇಳಿದ. ನಾನು ಬಂದಿದ್ದು ನವೀನನ ಮೇಲೆ ಗಮನ ಇಡೋದಿಕ್ಕೆ. ಅವನ ಜೊತೆಯಲ್ಲಿ ನೀನಿದ್ದೆ. ಹೊಟೇಲ್ ಅಮರ್‌ನಲ್ಲಿ ನಿನ್ನ ಬಿಟ್ಟು ಹೋದ. ನಿನ್ನ ಉಸಾಬರಿ ಯಾಕೇಂತ ನಿರ್ಲಕ್ಷಿಸಿ ಹೋಗೋದ್ರಲ್ಲಿದ್ದೆ. ಅದೆಂತಹ ಆಕಸ್ಮಿಕ! ನೀನು ಡೈನಿಂಗ್ ಹಾಲ್‌ನಲ್ಲಿ ಚರ್ಮದ ಕೈ ಚೀಲ ಮರೆತು ಹೋದೆ. ಅದರಲ್ಲಿ ಕಂಡಿದ್ದು ನಿನ್ನ ಅಣ್ಣ ಬರೆದ ಕಾಮಿನಿ ರತ್ನೆಯ ಚಿತ್ರದ ಫೋಟೋ! ನನ್ನ ಬದುಕು ಕೆದಕಿದ
ನಿನ್ನ ಅಣ್ಣ ಬರೆದ ಕಾಮಿನಿ ರತ್ನೆಯ ಚಿತ್ರದ ಫೋಟೋ! ನನ್ನ ಬದುಕು ಕೆದಕಿದ
ದೀಪಕ ಪಾವನ್‌ನ ಸಹೋದರಿ ನೀನು ಅಂತ ಗೊತ್ತು ಮಾಡಿಕೊಳ್ಳೋದು ಕಷ್ಟ ಆಗ್ಲಿಲ್ಲ."

"ನನ್ನ ಅಣ್ಣ ಬೇರೆಯೋರ ವಿಷಯದಲ್ಲಿ ತಲೆ ಹಾಕದ ಮನುಷ್ಯ." ಏದುಸಿರಿನಲ್ಲಿ ಹೇಳಿದಳು.

"ನನ್ನ ಸೊತ್ತಿಗೆ ಕೈ ಹಾಕ್ದ."

"ನಿನ್ನ ಸೊತ್ತು?" ಜಿಗುಪ್ಸೆಯಿಂದ ಹೂಂಕರಿಸಿದಳು."

"ನನ್ನ ಪ್ರೇಮದ ಸೊತ್ತು.... ಕಾಮಿನಿ ರತ್ನೆ ! ನನ್ನ ಪ್ರೇಮಿಸಿದ ನರ್ತಕಿ ನಿನ್ನ ಅಣ್ಣನ ತೋಳಿಗೆ ಹೊರಟು ಹೋದ್ಲು. ನನ್ನ ಹಣಕ್ಕೆ ತಿರಸ್ಕಾರ! ನಾನು ಅಲ್ಲಾಡಿಸಿದ ಹಾಗೆ ಬೆಳೆದು ಹೋಯ್ತು ಅವರ ಪ್ರೇಮ.... ಅವರಿಬ್ಬರೂ ಡೆಲ್ಲಿಗೆ ಹೋಗಿ ಮದುವೆ ಆಗುವ ತೀರ್ಮಾನಕ್ಕೆ ಬಂದ್ರು...."

ಅರ್ಚನಾಗೆ ತಟ್ಟಗೆ ನೆನಪಿಗೆ ಬಂತು. ಅಣ್ಣ ತನಗೆ ಬರೆದ ಅಂತಿಮ ಪತ್ರದಲ್ಲಿ, ಡೆಲ್ಲಿಗೆ ಇಳಿಯುತ್ತಲೇ ತನಗೆ ಸೋಜಿಗ ಕಾದಿರುವುದಾಗಿ ತಿಳಿಸಿದ್ದ..... ಸೋಜಿಗ? ಡೆಲ್ಲಿಯಲ್ಲಿ ಕಾಮಿನಿ ರತ್ನೆಯೊಂದಿಗೆ ಮದುವೆ!

"ದೀಪಕ ತಪ್ಪು ಮಾಡ್ಲಿಲ್ಲ" ತಡವರಿಸಿದಳು.

ಕತ್ತಲಿನಲ್ಲಿ ಬೆಂಕಿ ಚರ್ರನೆ ಹೊತ್ತಿತು. ಅದನು ಸಿಗರೇಟು ಹೊತ್ತಿಸಿದ್ದ.

ತಪ್ಪು ಮಾಡದಿದ್ರೂ ಕೆಲವರಿಗೆ ಶಿಕ್ಷೆ ತಪ್ಪೋದಿಲ್ಲ. ಅಪ್ರತ್ಯಕ್ಷವಾಗಿ ಅವನು ನನ್ನ ಪ್ರೇಮದ ವ್ಯವಹಾರದಲ್ಲಿ ತಲೆ ಹಾಕಿದ್ದ. ದೀಪಕ ಬೋರಿವಿಲಿ ಹೊಟೇಲಿನಲ್ಲಿದ್ದ. ಮಲ್ಹೋತ್ರ ಅವನ ಪಕ್ಕದ ಕೋಣೆಯಲ್ಲಿದ್ದ. ಅವನು ಇಲ್ಲದ ಸಮಯದಲ್ಲಿ ನಾನು ದೀಪಕನ್ನು ಕಪ್ಪು ಗಾಜಿನ ಕಾರಿನಲ್ಲಿ ಕನ್ಹೇರಿ ಗುಹೆಗಳಿಗೆ ಒಯ್ದೆ. ಜೊತೆಯಲ್ಲಿ ನಂಬರು ಅಳಿಸಿದ ಒಂದು ಹಳೆಯ ರಿವಾಲ್ವರ್ ತೊಗೊಂಡು ಹೋದೆ. ಅವತ್ತು ಒಬ್ಬ ಪ್ರವಾಸಿಯೂ ಇರ್ಲಿಲ್ಲ... ನಿರ್ಜನವಾದ ಕಡೇ ಗುಹೆಯ ಹತ್ತಿರ ಅವನ ಮೇಲೆ ರಿವಾಲ್ವರ್ ಪ್ರಯೋಗಿಸ್ದೆ. ಹೆಚ್ಚು ಶಬ್ದ ಆಗದ ಹಾಗೆ ರಿವಾಲ್ವರ್ ನಳಿಕೆ ಮುಂದೆ ಬಟ್ಟೆ ಬಳಸಿದ್ದೆ. ಗುಹೆಯ ಪಕ್ಕದ ಮರಗಳ ಗುಂಪಿನಲ್ಲಿ ದೇಹ ಸೇರಿಸ್ದೆ. ರಿವಾಲ್ವರ್ ಚೆನ್ನಾಗಿ ಒರೆಸಿ ಸತ್ತವನ ಕೈಯಲ್ಲಿ ಚೆನ್ನಾಗಿ ಒತ್ತಿಟ್ಟು ಬಂದೆ... ಅದು ದೀಪಕನ

ಆತ್ಮಹತ್ಯೆ!"

ಅವನು ಎದ್ದು ನಿಂತು ವಿಕಾರವಾಗಿ ಗಹಗಹಿಸಿದ. ಅರ್ಚನಾ ಮೆಲ್ಲಗೆ ಚೀರಿದಳು.

"ನನ್ನ ಯಾಕೆ ಇಲ್ಲಿಗೆ ಕರೆತಂದಿದ್ದು?"

ಥರಗುಟ್ಟುತ್ತಾ ಗೋಡೆಗೆ ಒರಗಿ ನಿಂತಳು.

ಕತ್ತಲಿನಲ್ಲಿ ಸಿಗರೇಟಿನ ತುದಿ ಕೆಂಪಾಗಿ ಕಾಣಿಸಿತು.

"ಪ್ರಕರಣ ಮುಗೀತು ಅಂತ ನಾನು ನಿಶ್ಚಿಂತನಾಗಿದ್ದೆ. ಮೂರು ತಿಂಗಳಾದ ಮೇಲೆ ನೀನು ಡೆಲ್ಲಿಯಿಂದ ಬಂದೆ. ನಿನ್ನ ಕೈಚೀಲದಲ್ಲಿ ಕಾಮಿನಿಯ ಫೋಟೋ ನೋಡಿದ ಕೂಡಲೇ ನಿನ್ನಿಂದ ತೊಂದರೆ ಇದೆ ಅಂತ ತಿಳಿದೆ..... ನನ್ನ ಸಹಾಯಕ ಪೋಪ್ಲನ್ನ ನಿನ್ನ ಮೇಲೆ ಕಣ್ಣಿಡಲಿಕ್ಕೆ ನೇಮಿಸ್ದೆ... ಅಣ್ಣನ್ನ ದಫನ್ ಮಾಡಿದ ನೆಲ ನೋಡ್ತೀನಿ ಅಂತ ಬೋರಿವಿಲಿಗೆ ಹೋದೋಳು ಪೊಲೀಸ್ ಠಾಣೆಯಲ್ಲಿ ವಿಪರೀತವಾಗಿ ವಿಚಾರಿಸ್ದೆ. ಆತ್ಮಹತ್ಯೆ ಅನ್ನೊ ವಿಷಯದಲ್ಲಿ ಸಂಶಯ ವ್ಯಕ್ತಪಡಿಸ್ದೆ... ಆಮೇಲೆ ಸದಾ ನನ್ನ ಮೇಲೆ ಕಣ್ಣಿಟ್ಟಿರೊ ನವೀನನ ಜೊತೇಲಿ ಓಡಾಡೋಕೆ ಪ್ರಾರಂಭ ಮಾಡ್ದೆ... ನಿನ್ನ ಕುತ್ತಿಗೆಯಲ್ಲಿ ನೀಲಿ ವಜ್ರದ ಕೊಂಬು! ನಿನ್ನ ಪ್ರತಿಕ್ರಿಯೆ ತಿಳಿಯೋದಿಕ್ಕೆ ನನ್ನ ಕೈ ಮೇಲೆ ಹಸಿರು ಕೊಂಬಿನ ಚಿತ್ರ ಬರೆಸಿಕೊಂಡೆ. ನೀನು ವಿಷಯನ ನನ್ನ ಮುಂದೆ ಬಿಚ್ಚಲೇ ಇಲ್ಲ.... ಆ ಶತ್ರು ನವೀನ ನನ್ನ ಬಗ್ಗೆ ಏನೂ ಗೊತ್ತಿಲ್ಲ ಅನ್ನೋತರಹ ನಿನ್ನಲ್ಲಿ ನಟಿಸಿ ಕಾದು ಕುಳಿತ. ಕಾಮಿನಿ ರತ್ನೆ ನಿನಗೆ ಕಾಣಿಸಿಕೊಂಡ್ಲು. ನಿನಗೇ ಗೊತ್ತಿಲ್ಲದ ಹಾಗೆ ಈ ಪ್ರಕರಣ ಅಂತಿಮ ಘಟ್ಟಕ್ಕೆ ಏರ್ತು... ನಿನ್ನ ಇಲ್ಲಿಗೆ ಬರೊ ಹಾಗೆ ಮಾಡಲೇಬೇಕಾಯ್ತು."

"ಅದು ಯಾಕೆ?" ಚೀರು ಕಂಠದಲ್ಲಿ ಕೇಳಿದಳು.

ಉತ್ತರಿಸುವ ಬದಲು ಅವಳ ಭುಜಗಳ ಮೇಲೆ ಕೈಯಿಟ್ಟು ಸಮೀಪದಿಂದ ಮುಖ ನೋಡಿದ. ಸಮ್ಮೋಹನ ದೃಷ್ಟಿ ಅವಳನ್ನು ಇರಿಯಿತು. ಅವಳ ಹಣೆ, ಕೆನ್ನೆ, ಕತ್ತಿನ ಮೇಲೆ ಚುಂಬನದ ಮಳೆಗರೆದ.

"ಬಿಡು ನನ್ನ..."

ಬಂಧನದಿಂದ ಸರಿದು ಏದುಸಿರು ಹಾಕಿದಳು. ಅವಳ ಕೈ ಬಿಗಿಯಾಗಿ ಹಿಡಿದು ಹಿಂದಿನ ಬಾಗಿಲು ನೋಡಿ ಹೇಳಿದ.

"ನಿನ್ನ ಪ್ರೇಮಿಸೋದಕ್ಕೆ, ನಿನ್ನ ಮೇಲೆ ಅತ್ಯಾಚಾರ ನಡೆಸೋದಿಕ್ಕೆ ಇಲ್ಲಿಗೆ ಕರೆತರಲಿಲ್ಲ, ಹುಡುಗಿ. ರೂಪದಲ್ಲಿ ನಿನ್ನ ಮೀರಿಸಿದ ನೂರು ಹೆಣ್ಣುಗಳಿವೆ ನನ್ನ ವಶದಲ್ಲಿ... ಈಗ ನಾನು ಅಪಾಯದಲ್ಲಿದೀನಿ.... ಆ ಹಿಂದಿನ ಬಾಗಿಲು ತೆಗೆದರೆ ಕಾಣೋದು ಕಲ್ಲು ಬಂಡೆಗಳ ಪ್ರಪಾತ .... ಇನ್ನೂರು ಅಡಿಗಳ ತಳಕ್ಕೆ ನಿನ್ನ ದೇಹ ಬಿದ್ದು ಹೋಗುತ್ತೆ!..... ಆಗ ನಿನ್ನ ಮರಣವೂ ಆತ್ಮಹತ್ಯೆ ಅಂತ ಆಗಿ ಹೋಗುತ್ತೆ...."

"ರಾಕ್ಷಸ!"

ಭೀಕರವಾಗಿ ಚೀತ್ಕರಿಸಿ ಅವನ ಹಿಡಿತದಿಂದ ಬಲವಾಗಿ ಕೈ ಕೊಡವಿದಳು. ಮುಂಬಾಗಿಲಿಗೆ ಹಾರಿ ಪಿಡಿ ಹಿಡಿದು ಜಗ್ಗಿದಳು. ಸಡಿಲಗೊಂಡ ಬಾಗಿಲು ಎಳೆಯುವ ಮೊದಲೇ ಕುಸುಮಾಕರ ಮಿಂಚಿನ ವೇಗದಲ್ಲಿ ಜಿಗಿದು ಅವಳನ್ನು ಮತ್ತಷ್ಟು ಬಲವಾಗಿ ತಬ್ಬಿ ಹಿಡಿದು ಬಾಗಿಲಿಗೆ ಬೆನ್ನು ಒತ್ತಿದ.

ಇಬ್ಬರೂ ಪಕ್ಕದಿಂದ ಪಕ್ಕಕ್ಕೆ ಹೊರಳಿ ಸೆಣಸಾಟ ನಡೆಸುತ್ತಿದ್ದಂತೆ ಬಾಗಿಲು ನಿಧಾನವಾಗಿ ತೆರೆಯಿತು.

ಹೋರಾಟದ ಭರದಲ್ಲೂ ಅರ್ಚನಾಗೆ ನಸುಗತ್ತಲೆಯಲ್ಲಿ ಬಾಗಿಲಿನಿಂದ ಒಳಕ್ಕೆ ಸರಿದು ಬಂದ ಮಾಸಲು ಆಕೃತಿ ಕಾಣಿಸಿತು!

ಆಕೃತಿಯ ಕೈ ಏರಿತು. ವಸ್ತುವೊಂದು ಫಳಕ್ಕನೆ ಮಿಂಚಿತು.

ಅರ್ಚನಾ ಭ್ರಾಂತಿಗೊಳ್ಳುವಂತೆ ಕುಸುಮಾಕರನ ಉಕ್ಕಿನ ಹಿಡಿತ ಸಡಿಲಗೊಂಡಿತು. ಸದ್ದಿಲ್ಲದ ದೇಹ ಮುಂದಕ್ಕೆ ಬಾಗಿಸಿ ಕುಸಿದ.... ಮುಖವಡಿಯಾಗಿ ದೇಹ ಹರಡಿ ಅಚಲನಾದ.

ಅವಳಿಗೆ ದೃಶ್ಯದ ಭೀಕರತೆ ಸ್ಫುಟವಾಗಿ ಕಂಡಿತು. ಕುಸುಮಾಕರನ ಬೆನ್ನಲ್ಲಿ ನಾಟಿ ನಿಂತ ಚೂರಿ!

"ಸತ್ತು ಹೋಯ್ತು ನಾಯಿ!"

ಕಾಲು ತುದಿಯಿಂದ ದೇಹ ಅಲುಗಿಸಿದ ಹೆಣ್ಣು ಆಕೃತಿ, ತೀಕ್ಷ್ಣ ದುಂಬಿ ಕಣ್ಣುಗಳನ್ನು ಅರ್ಚನಾಳ ಕಡೆ ತಿರುಗಿಸಿತು.

"ಕಾಮಿನಿ ರತ್ನೆ!...ನೀನು?"

ಒತ್ತು ಕಂಠ ಕಂಪಿಸಿತು.

"ನನ್ನ ಪ್ರೇಮಿ ದೀಪಕ ಕಾರಣವಿಲ್ಲದೆ, ಅನ್ಯಾಯವಾಗಿ ಇವನಿಂದ ಕೊಲೆ ಆದ.... ನಾನು ಇವನ್ನ ನಿರ್ದಾಕ್ಷಿಣ್ಯವಾಗಿ ತೀರಿಸಿಬಿಟ್ಟೆ! ನನ್ನ ಕೆಲಸ ಪೂರೈಸ್ತು. ಪೋಪ್ಲನ ಕಣ್ಣ ತಪ್ಪಿಸಿ ನಿನಗೆ ಎಚ್ಚರಿಕೆ ಕೊಡಲಿಕ್ಕೆ ಆಗ್ಲಿಲ್ಲ. ಜೊತೆಗೆ ಆ ನಮ್ಮ ಉದ್ದನೆಯ ವಿದೇಶ ಕಾರು ಎಲ್ಲಾ ಕಡೆಯೂ ಎದ್ದು ಕಾಣುತ್ತೆ... ನಿನ್ನ ಕುತ್ತಿಗೆಯಲ್ಲಿರೊ ನೀಲಿ ವಜ್ರದ ಕೊಂಬು ನನಗೆ ಒಪ್ಪಿಸಿಬಿಡು. ಅದನ್ನ ನೀನು ಧರಿಸಬಾರದು. ಅದು ನನ್ನ ಸ್ವತ್ತು."

ಕೈ ಚಾಚಿದಳು. ಅರ್ಚನಾ ಸೊಲ್ಲೆತ್ತದೆ ಕಂಠಹಾರ ತೆಗೆದು ಅವಳ ಕೈಗಿತ್ತಳು.

"ನೀನು ನನ್ನ ಪ್ರಾಣ ಉಳಿಸ್ದೆ."

ಕಳಕಳಿಯಿಂದ ಉಸಿರಿದಳು. ಕಾಮಿನಿ ತಲೆ ಅಲುಗಿಸಿದಳು.

"ಮಾತಾಡೋದಿಕ್ಕೆ ವೇಳೆ ಇಲ್ಲ... ನೀನು ಈ ಸ್ಥಳದಲ್ಲೇ ಇರು ಓಡ್ಬೇಡ....

ಹೆದರ್ಬೇಡ. ನಾನು ಹೋಗ್ತಾ ಪೊಲೀಸ್‌ಗೆ ಫೋನ್ ಮಾಡ್ತೀನಿ. ಅವರು ನನ್ನ ಹುಡುಕೋದಿಕ್ಕೆ ಪ್ರಾರಂಭ ಮಾಡೊದ್ರಲ್ಲಿ ನನ್ನ ಇಟಾಲಿಯನ್ ಗಂಡನ ಜೊತೇಲಿ ಬಹಳ ದೂರ ಹೋಗಿರ್ತೀನಿ. ನಾನು ಮತ್ತೆ ನಿನ್ನ ಭೇಟಿ ಮಾಡೋದಿಲ್ಲ."

ಕಾಮಿನಿ ರತ್ನೆಯ ಮಾಸಲು ಆಕೃತಿ ಕತ್ತಲಿನಲ್ಲಿ ಕರಗಿ ಹೋಯಿತು. ತೆರೆದ ಬಾಗಿಲಿನಿಂದ ಭರ್ರನೆ ಗಾಳಿ ಬೀಸುತ್ತಿತ್ತು.

* * *

ಸೋಫಾದಲ್ಲಿ ಚಿತ್ರಾರ್ಪಿತಳಂತೆ ಕುಳಿತ ಅರ್ಚನಾಳ ಕೆನ್ನಗಳಿಗೆ ಹಿತವಾಗಿ ಎರಡು ಕೈಗಳಿಂದ ತಟ್ಟಿ ಮುಖದ ಹತ್ತಿರ ಮುಖ ತಂದು ಧೈರ್ಯ ನೀಡಿದ ನವೀನ.

"ಯಾಕೆ ಮಂತ್ರಕ್ಕೆ ಸಿಕ್ಕಿದವರ ಹಾಗೆ ಕೂತಿದೀರಿ. ಪೊಲೀಸ್ ನಿಮ್ಮನ್ನ ಹಿಡಿಯೋದಿಲ್ಲ. ಕುಸುಮಾಕರನ್ನ ತೀರಿಸಿದ ಹೆಣ್ಣು ಪೊಲೀಸ್‌ಗೆ ಫೋನ್ ಮಾಡಿ, ವಿವರ ಸಂಕ್ಷೇಪವಾಗಿ ಕೊಟ್ಟು ಹಾರಿ ಹೋಗಿದ್ದಾಳೆ. ಚೂರಿ ಹಿಡಿಯ ಮೇಲೆ ಅವಳ ಬೆರಳು ಗುರುತೇ ಸಿಕ್ಕೋದು.... ಕುಸುಮಾಕರ ನಮಗೆಲ್ಲಾ ಬಹಳ ದಿನಗಳಿಂದ ಹಿಡಿತಕ್ಕೆ ಸಿಗಬೇಕಾಗಿದ್ದ ಕಳ್ಳವಸ್ತು ಸಾಗಣೆದಾರ... ಸ್ಮಗ್ಲರ್!"

ತನಗೆ ಸಂಬಂಧಿಸದ ವಿಷಯ ಅದು ಎಂಬಂತೆ ಅವನತ್ತ ಕೋಪದ ಕಣ್ಣು ಹರಿಸಿದಳು. ತಲೆ ಕೆರೆದು  ಹೇಳಿದ.

"ನಿಮ್ಮಣ್ಣನ ಮರಣ ಆತ್ಮಹತ್ಯೆ ಅಂತ ಪೊಲೀಸ್ ಇಲಾಖೆ ಪ್ರಕರಣ ಮುಗಿಸಿ ಕುಳಿತರೆ ನನ್ನ ತಪ್ಪೇನು? ನಮ್ಮ ಇಲಾಖೆ ಸುಮ್ಮನೆ ಕೂಡ್ಲಿಲ್ಲ. ಕಾಮಿನಿ ರತ್ನೆಯ ಜೊತೇಲಿ ಒಂದು ಸಾರಿ ಕುಸುಮಾಕರನ್ನ, ಮತ್ತೊಂದು ಸಾರಿ ದೀಪಕನ್ನ ಗಮನಿಸಿದ ನಾವು ಮೂವರನ್ನೂ ಗಮನದಲ್ಲಿಟ್ಟಿದ್ವಿ. ದೀಪಕ ಹೋದ ಮೇಲೆ ನಾನು ಡೆಲ್ಲಿಗೆ ಬಂದೆ. ಮೂರು ತಿಂಗಳು ಸುಮ್ಮನೆ ಇದ್ದು ಏಕ್‌ದಂ ಬೊಂಬಾಯಿಗೆ ಹೊರಟ್ರಿ ನೀವು. ಜೊತೇಲಿ ನಾನೂ ಬರಬೇಕಾಯ್ತು... ಮಲ್ಹೋತ್ರನಿಂದ ನಿಮ್ಮ ಶೋಧನೆ ಕಾರ್ಯಕ್ಕೆ ರೊಚ್ಚು, ಸ್ಫೂರ್ತಿ ಸಿಕ್ತು. 'ಥೌಸಂಡ್ ಅಂಡ್ ಒನ್' ರೆಸ್ಟೋರೆಂಟ್‌ನಲ್ಲಿ ನಿಮ್ಮನ್ನು ಕುಸುಮಾಕರನೊಂದಿಗೆ ನೋಡಿದ ಮೇಲೆ ನಿಮ್ಮ ಮೂಲಕವೇ ನಿಧಾನವಾಗಿ ನನ್ನ ಕಾರ್ಯ ಸಾಗ್ತು. ಆದರೆ ಕಾಮಿನಿ ರತ್ನೆ ಅವನ್ನ ಕೊನೆಗಾಣಿಸಿಬಿಡ್ತಾಳೆ ಅಂತ ಗೊತ್ತಿರಲಿಲ್ಲ... ನೀವು ಇನ್ನೂ ಮಾತಾಡ್ದೆ ಕುಳಿತಿದೀರಿ. ಮತ್ತೆ ಹೇಳಲೆ? ನಾನು ಸುಗಂಧ ದ್ರವ್ಯಗಳ ಸ್ಮಗ್ಲರ್ ಅಲ್ಲ. ಕಸ್ಟಮ್ಸ್ ಇಲಾಖೆಯೋನು."

ಅವಳು ಮತ್ತೊಮ್ಮೆ ಅವನನ್ನು ನೋಡಿ ಕೋಪದಿಂದ ಗಾಂಭೀರ್ಯಕ್ಕೆ ಇಳಿದ ಮುಖವನ್ನು ಚಾವಣಿಗೆ ಎತ್ತಿದಳು. ಮತ್ತೆ ಅದೇ ಮೌನ. ಅವನು ಕೈ ಕಟ್ಟಿ ನಿಟ್ಟುಸಿರು ಹಾಕಿದ.

ದೀಪನ ಪ್ರಕರಣದಲ್ಲಿ ತಲೆ ಹಾಕಬೇಡಿ ಅಂದೆ. ಆ ಸ್ಮಗ್ಲರ್ ಕುಸುಮಾಕರ ನಮಗೆ ಬೇಕಾಗಿರೋನು ನಿಮ್ಮ ಪ್ರಕರಣದ ಪ್ರಧಾನ ವ್ಯಕ್ತಿ ಅಂತ ನನಗೆ ಕನಸು ಬೀಳ್ಲಿಲ್ಲ... ಹಾಂ! ಬೆಲೆ ಬಾಳೊ ವಜ್ರದ ಕೊಂಬು ಅವಳು ಕಿತ್ತುಕೊಂಡು ಹೋದಳು ಅಂತ ಚಿಂತೆಯೆ? ನಾನು ಗಾಜಿನ ಕೊಂಬು ತೆಗೆದು ಕೊಡ್ತೀನಿ."

ತುಟಿಯಲ್ಲಿ ಮಿಂಚಿದ ನಗೆಯನ್ನು ಕಷ್ಟಪಟ್ಟು ಅಡಗಿಸಿ ಬಿಗುಮಾನ ತಾಳಿದಳು. ಅವನು ಮುಂದುವರಿಸಿದ.

"ನನಗೆ ಈಗ ಅರ್ಥ ಆಯ್ತು. ಹೆಣ್ಣು ಮನಸ್ಸಿನ ರಂಗಿನ ಆಟ ಬಲ್ಲೆ.... ನಾನು ಸುರಭಿಯ ಕೆಲಸದ ಮೇಲೆ ಹೊರಟುಬಿಟ್ಟೆ ಅಂತ ನಿಮಗೆ ಈ ಸಿಟ್ಟು, ಬೇಸರ, ಬಿಗಿ... ಸುರಭಿ ನನ್ನ ಪ್ರಿಯತಮೆ ಅಂತ ನಿಮ್ಮ ತಲೆಯಲ್ಲಿ ಜೇನು ಹಿಂಡು ಎದ್ದಿದೆಯಲ್ಲ! ಕೊಲ್ಲಿಯಲ್ಲಿ ಅವತ್ತು ಅವಳ ಜೊತೆ ನೋಡಿದ್ರಲ್ಲ. ಆ ಯುವಕ ಅಜಿತ್.. ಅವನಿಗೊಂದು ಇಂಜಿನಿಯರ್ ಕೆಲಸ ಕೊಡಿಸಲಿಕ್ಕೆ ಶಿಫಾರಸು ಮಾಡಿ ಬರೋಕೆ ತುರ್ತಾಗಿ ಹೋದೆ. ಏನು ಮಾಡ್ತೀರಿ? ನನ್ನ ಮಾತು ನಾಲ್ಕು ಜನ ಕೇಳುವಂತ ಹುದ್ದೆ ನನ್ನದು. ಸುರಭಿ, ಅಜಿತ್ ಇಬ್ಬರೂ ಮದುವೆ ಆಗೋಕೆ ಒಪ್ಪಿ ಎರಡು ತಿಂಗಳಾಯ್ತು ಅಂತ ಆಂಟಿಯ ತಗಾದೆ. ಅವನಿಗೆ ಮದುವೆಗೆ ಮೊದಲು ಒಂದು ಕೆಲಸ ಬೇಡವೆ?"

ಅರ್ಚನಾಳ ಕಣ್ಣುಗಳು ಮಿನುಗಿದವು. ಮುಖದಲ್ಲಿ ಬಣ್ಣ ತಿರುಗಿತು. ತುಟಿ ಬಿಚ್ಚಿದಳು. ನವೀನ ಕೈ ಅಡ್ಡ ತಂದ.

"ಅಷ್ಟು ಹೊತ್ನಿಂದ ಬೊಂಬೆ ಹಾಗೆ ಕೂತೋರು ಈಗ ಯಾಕೆ ತುಟಿ ಎರಡು ಮಾಡ್ಬೇಕು? ಅದರಿಂದ ಏನೂ ಪ್ರಯೋಜನ ಇಲ್ಲ... ನಿಮಗೇ ಗೊತ್ತು ನಾನು ಮದುವೆ ಆಗೊ ಮನೋವೃತ್ತಿಯ ಮನುಷ್ಯ ಅಲ್ಲಾಂತ... ಹೌದು, ಮೇಡಂ... ಮೊದಲು ಪ್ರೇಮಿಸೊ ಪ್ರವೃತ್ತಿ, ಅದರಿಂದ ಅನುಭವ ಪಡೆದು ಆಮೇಲೆ ಮದುವೆ ಆಗೊ ಪ್ರವೃತ್ತಿಯ ಪೋಲಿ! ಹೇಳಿ ನಿಮ್ಮದೂ ಅದೇ ಪ್ರವೃತ್ತಿಯೇನು?"

ಅರ್ಚನಾ ಅವನ ಕೈ ಹಿಡಿದು ಒತ್ತಿದಳು.

"ಹೆಣ್ಣು ಅಂದ್ರೆ ಅದೆಷ್ಟು ಹುಡುಗಾಟ ಆಡ್ತೀರಿ, ದೂರದಿಂದ ಬಂದಿರೊ ಒಂಟಿ ಹುಡುಗಿ ಅಂದ್ರೆ ಇನ್ನಷ್ಟು ಸಲೀಸು ಅಲ್ಲವೆ?.... ನವೀನ, ನಾನೂ ನಿಮ್ಮ ಪ್ರವೃತ್ತಿಯೋಳೆ!

ಅವನ ಕೈಗೆ ತುಟಿ ಒತ್ತಿದಳು.

"ಸ್ವಲ್ಪ ಕೈ ಬಿಡಿ... ನಿಮ್ಮ ಹೇಳಿಕೆ ತೊಗೊಳೋದಿಕ್ಕೆ ಪೊಲೀಸ್ ಅಧಿಕಾರಿ ನೋಟುಬುಕ್ ಹಿಡಿದು ಬರ್ತಿದ್ದಾನೆ."

ಅವಳು ಬೆಚ್ಚಲಿಲ್ಲ. ಹಿಡಿದ ಕೈಮೇಲೆ ಮತ್ತಷ್ಟು ಬಲವಾಗಿ ತುಟಿಗಳ ಮುದ್ರೆ ಒತ್ತಿದಳು.

* * *

# ನೆರಳು

೧

ಹಸಿರು ಕೈಚೀಲ ತಿರುಗಿಸುತ್ತಾ ದೇಹ ಬಳುಕಿಸಿ 'ನೀಲಂಕಾರ ಕಾಂಪ್ಲೆಕ್ಸ್' ಕಡೆಗೆ ಬಿರುಸಿನ ಹೆಜ್ಜೆ ಹಾಕಿದಳು ಚಿತ್ರಾ, ಲಿಫ್ಟ್‌ಗಾಗಿ ಕಾದು ನಿಂತ ಸಿಬ್ಬಂದಿ ವರ್ಗದ ಕಣ್ಣುಗಳು ಅವಳತ್ತ ತಿರುಗಿದವು. ಸಾಲಿನಲ್ಲಿ ನಿಲ್ಲದೆ ನಕ್ಷತ್ರ ಕಣ್ಣುಗಳನ್ನು ಮಿನುಗಿಸಿ ಮೆಟ್ಟಲು ಏರಿದಳು.

ಎರಡನೆಯ ಅಂತಸ್ತಿನಲ್ಲಿ ನಿಂತು ಕೆಳಗಡೆಯ ವಿಶಾಲ ಆವರಣದ ಮೇಲೆ ದೃಷ್ಟಿ ಹರಡಿದಳು. ಉದ್ದನೆಯ ವಿದೇಶೀ ಕಾರು ಒರಗಿ ನಿಂತಿದ್ದ ಸಂತೋಷ. ತಲೆ ಎತ್ತಿ ಅವನಿಗೆ ಚಿತ್ರಾ ಸ್ಫುಟವಾಗಿ ಕಾಣಿಸಿದಳು. ಹಿಗ್ಗಿನಿಂದ ಕೈ ಆಡಿಸಿದ ಶ್ರೀಮಂತ ತನ್ನತ್ತ ಬಂದ ಜನರ ಮಧ್ಯೆ ಮುಳುಗಿ ಹೋದ. ಕಟು ಸ್ವಭಾವದ ಆಗರ್ಭ ಸಿರಿವಂತ ನೀಲಂಕಾರ್ ಪಂಪಾಪತಿಯ ಮಗ ಎಲ್ಲರಿಗೂ ಪ್ರಿಯ ವ್ಯಕ್ತಿಯಾಗಿದ್ದ.

ಚಿತ್ರಾ ಲಘುವಾಗಿ ಕಂಪಿಸಿದಳು. ಹದ್ದು ಕಣ್ಣುಗಳು ಗಡಸು ಗಂಟಲಿನ ಪಂಪಾಪತಿಯ ಪ್ರತಿಕ್ರಿಯೆ ಏನೆಂಬ ಚಿಂತೆ. ಪಂಪಾಪತಿಯ ಮಗ ಸಂತೋಷ ತನ್ನನ್ನು ಪ್ರೀತಿಸುತ್ತಾನೆ! ಜನಪ್ರಿಯ ಸ್ಟೋರುಗಳ ಮಾಲೀಕನ ಮಗನಿಗೆ ತಾನು ಅರ್ಹಳಲ್ಲ. ಆದರೂ ಸಂತೋಷ ತನ್ನನ್ನು ಮದುವೆಯಾಗುವ ಸುದ್ದಿ ತಂದೆಗೆ ತಿಳಿಸಲು ಹೊರಟಿದ್ದ. ನಾಳೆ ದೆಹಲಿಗೆ ಹೊರಡುವ ಮೊದಲು ಆಘಾತ ತಟ್ಟಿಸಬಹುದಾದ ಸಂಗತಿ ಪಂಪಾಪತಿಯ ಮುಂದೆ ತೆರೆದಿಡಬೇಕೆಂಬ ನಿರ್ಧಾರ. ತಾನು ಮೆಚ್ಚಿದವಳನ್ನು ತಾಯಿ ಹಾರ್ದಿಕವಾಗಿ ಸ್ವಾಗತಿಸುವಳೆಂಬ ದೃಢ ವಿಶ್ವಾಸ.

ಸಿದ್ಧಪಡಿಸಿದ ಉಡುಪುಗಳ ವಿಭಾಗಕ್ಕೆ ಬಂದಳು ಚಿತ್ರಾ.

"ಗುಡ್‌ಲಕ್"

ಸ್ನೇಹಿತೆ ಬಿಂದು ಅವಳು ನಡು ಒತ್ತಿದಳು. ಮಾಲೀಕನ ಮಗನೊಂದಿಗೆ ಗೆಳತಿ ಪ್ರಣಯ ವ್ಯವಹಾರ ನಡೆಸಿರುವುದನ್ನು ಅವಳು ಚೆನ್ನಾಗಿ ಬಲ್ಲಳು. ಚಿತ್ರಾಳೊಂದಿಗೆ ವಾಸಿಸುತ್ತಿದ್ದು, ಅದೇ ಸ್ಟೋರುಗಳ ಮೂರನೆಯ ಅಂತಸ್ತಿನಲ್ಲಿ ಕೆಲಸ ಮಾಡುತ್ತಿದ್ದಳು ಆತ್ಮೀಯ ಸಂಗಾತಿ.

ಚಿತ್ರಾ ಈಗ ಎಲ್ಲಿಂದ ಬರುತ್ತಿದ್ದಳೆಂಬುದು ಅವಳಿಗೆ ತಿಳಿದಿತ್ತು. ಸಂಸ್ಥೆಯ ಅರ್ಧ ತಾಸಿನ ವಿರಾಮ ಕಾಲವನ್ನು ಗೆಳತಿ ಸಂತೋಷನೊಂದಿಗೆ ಕಳೆದು ಬಂದಿದ್ದಳು. ಪಕ್ಕದ ಪಾರ್ಕಿನ ರೆಸ್ಟೂರಾದಲ್ಲಿ ಅವನೊಂದಿಗೆ ಉಪಾಹಾರ ಮುಗಿಸಿ ಒಲವಿನ ಮಾತುಗಳನ್ನಾಡಿ ಹಿಗ್ಗಿನಿಂದ ಹಗುರಾಗಿದ್ದಳು.

ಚಿತ್ರಾ ಕೌಂಟರ್ ತುದಿಯಲ್ಲಿದ್ದ ಬಣ್ಣದ ಪ್ಲಾಸ್ಟಿಕ್ ದೋಣಿಯನ್ನು ಎತ್ತಿ ತಿರುಗಿಸಿದಳು. ಹಗಲುಗನಸಿನಲ್ಲಿ ಸಂತೋಷ ಸರಿದು ಬಂದ.

ಎರಡು ವಾರಗಳ ಹಿಂದೆ ಕಾಂಪ್ಲೆಕ್ಸ್‌ನ ಸಿಬ್ಬಂದಿ ವರ್ಗದವರು ಸೇರಿದ ಕೂಟದಲ್ಲಿ ಸಂತೋಷ ಇವಳನ್ನು ಕಂಡಿದ್ದ. ತಂದೆಯ ಸಂಸ್ಥೆಯಲ್ಲಿ ಉದ್ಯೋಗಸ್ಥೆಯೆಂದು ಅಂದೇ ಅವನಿಗೆ ತಿಳಿದುದು.

ಗುಂಗುರು ಕೂದಲಿನ, ದಯಾರ್ದ್ರ ನೀಲ ಕಣ್ಣುಗಳ ಶ್ರೀಮಂತನನ್ನು ತೆಳು ದೇಹದ ಉದ್ದನೆಯ ಜಡೆಯ, ನಕ್ಷತ್ರ ಕಣ್ಣುಗಳ ಹುಡುಗಿ ಅತಿಯಾಗಿ ಸೆಳೆದಿದ್ದಳು. ಮತ್ತೆರಡು ದಿನಗಳ ನಂತರ ಇಬ್ಬರ ಮಾತುಗಳು ಹದವಾಗಿ ಹೃದಯಗಳು ಒಂದಾಗಿದ್ದವು.

"ಹೆಸರಿನ ಹಾಗೆಯೇ ಇದ್ದೀಯ. ಹೇಳಿ ಬರೆಸಿದ ಚಿತ್ರದ ಹಾಗೆ. ನಾನು ನಿನ್ನ ಪ್ರೀತಿಸ್ತೀನಿ."

ದಿಢೀರ್ ಮಾತಿನಿಂದ ಅವಳಿಗೆ ಆಘಾತ ತಟ್ಟಿತ್ತು.

"ನಿಮ್ಮ ಕಾಂಪ್ಲೆಕ್ಸ್‌ನಲ್ಲಿ ನೌಕರಿ ಮಾಡೋಳು ನಾನು."

"ನಮ್ಮಿಬ್ಬರ ಮೇಲೆ ದಾಳಿ ಮಾಡಿರೊ ಪ್ರೇಮಕ್ಕೆ ಅದೆಲ್ಲಾ ಕಾಣೋದಿಲ್ಲ. ನಿನ್ನ ಮದುವೆ ಆಗ್ತೀನಿ."

ಎದೆಯಲ್ಲಿ ಮಧುರ ಕಂಪನ. ಸೊಗಸಾದ ಸಂಜೆ ಅದು!

"ಆ ದೋಣಿ ಎತ್ತಿಡು, ಚಿತ್ರಾ. ಎರಡು ನಿಮಿಷದಿಂದ ಅದನ್ನ ಮಗುವಿನ ಹಾಗೆ ತಿರುಗಿಸ್ತಾ ಇದೀಯ."

ಹಗಲುಗನಸಿನಿಂದ ಎಚ್ಚೆತ್ತು ನಾಚಿದಳು.

"ಈಚೆಗೆ ನನಗೆ ಏನೊ ಒಂದು ಥರಾ ಭಯ ಆಗ್ತಿದೆ, ಬಿಂದು."

"ಭಯ ಪ್ರಣಯದ ನೆರಳು. ಪ್ರಣಯ ಗಾಢವಾದ ಹಾಗೆ ಆ ನೆರಳು ತೆಳುವಾಗತ್ತೆ. ನಿನ್ನ ತುಟಿ ಬಣ್ಣ ಕೆಟ್ಟಿದೆ ನೋಡು."

ಕೆನ್ನೆ ರಂಗೇರಿತು, ತುಟಿಗೆ ಕರವಸ್ತ್ರ ಒತ್ತಿ ಬಣ್ಣ ಸರಿಪಡಿಸಿದಳು.

"ಕೆಲಸದ ಮೇಲಿರೋವಾಗ ಮೇಕಪ್ ಕೂಡದು. ಬಾಸ್ ನೋಡಿದ್ರೆ ನಿನ್ನ ಗತಿ ಮುಗೀತು."

ಬಿಂದು ಕಣ್ಣು ಕುಣಿಸಿ ಮತ್ತೆ ಕೇಳಿದಳು.

"ಇವತ್ತು ಎಲ್ಲಿಗೆ ಹೋಗಿದ್ದಿ?"

"ಅದೇ ಪಾರ್ಕಿಗೆ. ಅಲ್ಲಿ ನಮ್ಮನ್ನ ಯಾರೂ ನೋಡೋದಿಲ್ಲ."

"ಹಾಗನ್ನಬೇಡ, ನಿಮ್ಮನ್ನ ಎಷ್ಟೋ ಜನ ನೋಡಿದಾರೆ. ಸಂತೋಷ ಮಾಡಿದ್ದೆಲ್ಲಾ ಸ್ಟೋರ್ ಜನಕ್ಕೆ ಸುದ್ದಿ. ಈಗ ತಾನೆ ಕ್ಯಾಂಟಿನ್‌ನಿಂದ ಬರ್ತಾ ಇದೀನಿ. ಅಲ್ಲಿನ ಗುಸುಗಸು ಏನು ಗೊತ್ತೆ? ಬಾಸ್ ಮಗನ ಪ್ರಣಯ ಈ ಸಾರಿ ದಿನ ಉಳಿಯುತ್ತೆ ನೋಡೋಣ ಅನ್ನೋ ಕುತೂಹಲ ಜನಕ್ಕೆ."

ಚಿತ್ರಾಳ ಮುಖದಲ್ಲಿ ಬಣ್ಣ ಸರಿದು ಹೋಯಿತು, ಎರಡು ತಿಂಗಳ ಹಿಂದೆ ಜ್ಯೋತಿಯೊಂದಿಗೆ ಸಂತೋಷನ ನಿಶ್ಚಿತಾರ್ಥ ನಡೆದು ವಾರದಲ್ಲಿ ಅದು ಭಗ್ನವಾಗಿತ್ತು. ಪಂಪಾಪತಿಯ ತಲೆಯಲ್ಲಿ ಆ ಪ್ರಕರಣ ಇನ್ನೂ ಜೀವಂತವಾಗಿರುವಾಗ, ಅವನ ಸ್ಟೋರ್‌ನಲ್ಲಿ ಕೆಲಸ ಮಾಡುವ ಸಾಮಾನ್ಯ ಹುಡುಗಿಯನ್ನು ಸೊಸೆಯಾಗಿ ಪಡೆಯುವುದು ಅಸಂಭವ!

"ಬಾಸ್ ಮಗನ ಜೊತೆಯಲ್ಲಿ ಪ್ರೀತಿ ಹೊಂದಿರೋದು ತಪ್ಪಲ್ಲ. ವಿಷಯ ಆಳವಾಗಿ ಯೋಚನೆ ಮಾಡ್ಬೇಕು, ಚಿತ್ರಾ."

ಗೆಳತಿಯದೇ ನಮ್ರ ಸಲಹೆ.

"ಗಂಭೀರವಾಗಿ ಯೋಚಿಸಿರೊ ವಿಷಯ ಇದು."

"ನಿನಗೆ ವಿವೇಚನೆ ಸಾಲದು, ಜ್ಯೋತಿಯ ವಿಷಯ ಏನಾಯ್ತು?"

"ಪ್ರೇಮಿಗಳಿಗೆ ಹೊಂದಾಣಿಕೆ ಇಲ್ಲದಿದ್ದಾಗ ಆತುರದಲ್ಲಿ ಆದ ನಿಶ್ಚಿತಾರ್ಥ ಅದು. ಈಗಲೂ ಸಂತೋಷ ವಿಷಾದಪಡ್ತಾನೆ."

"ನಿನಗೆ ಕಥೆ ಗೊತ್ತಿಲ್ಲ."

"ಕಥೆ ಕಟ್ಟೊ ಜನರ ಸುದ್ದಿ ಬೇಡ. ಜನ ಅಂದರೆ ಮೃಗಗಳು!"

"ನಾನೂ ಮೃಗವೆ?" ಕಟುವಾಗಿ ಕೇಳಿದಳು.

ಚಿತ್ರಾ ಅವಳ ಕೆನ್ನೆ ಸವರಿ ಸಮಾಧಾನ ನೀಡಿದಳು.

"ಶ್ರೀಮಂತರ ವಿಷಯದಲ್ಲಿ ಹಗುರವಾಗಿ ಮಾತಾಡೋದು ಜನರ ಸ್ವಭಾವ. ಸಂತೋಷನ ಗತಿಯೂ ಹಾಗೇಂತ ನಿನ್ನ ಭಾವನೆ. ಎಲ್ಲಾ ಶ್ರೀಮಂತರ ಹಾಗಲ್ಲ ಅವರು."

"ನಿನಗೆ ವಂಚನೆ ಆದ್ರೆ ನನಗಿಂತ ಹೆಚ್ಚಾಗಿ ದುಃಖಪಡೋರಿಲ್ಲ."

ಎದೆಯ ಅಳುಕು ತಡೆದಳು ಚಿತ್ರಾ.

"ಸಂತೋಷ ಈಗ ತಂದೆಯ ಕೋಣೆಗೆ ಹೋಗಿ ನನ್ನ ಮದುವೆ ಆಗೊ ವಿಷಯ ಹೇಳ್ತಿದಾರೆ."

ಅವಳಿಗೆ ಏದುಸಿರು ಬಂತು. ಸ್ನೇಹಿತ ನಿಟ್ಟುಸಿರು ಹಾಕಿದಳು.

"ನೀನು ಸಂತೋಷನ್ನ ತಡೆಯಬೇಕಿತ್ತು, ಬಾಸ್‌ನಿಂದ ನಿನಗೆ ಸಿಗೋದೇನು ಗೊತ್ತೆ? ಕೆಲಸದಿಂದ ವಜಾ ಮಾಡಿದ ಆಜ್ಞೆ! ಹಠವಾದಿ, ಗರ್ವಿಷ್ಠ ಶ್ರೀಮಂತ ತನ್ನ ಮಗನಿಗೆ ನಿನ್ನ ತಂದುಕೊಳ್ತಾನೆ ಅಂತ ಭಾವಿಸ್ತೀಯ?"

ಚಿತ್ರಾ ಉತ್ತರಿಸುವುದಕ್ಕೆ ಬಾಯ್ತೆರೆಯುವ ಮೊದಲೇ ವಿಭಾಗದ ಟೆಲಿಫೋನ್ ಗಂಟೆ ಬಾರಿಸಿತು.

"ಮಿಸ್ ಚಿತ್ರಾ, ಬಾಸ್ ಚೇಂಬರ್‌ನಿಂದ ನಿಮಗೆ ಕರೆ ಬಂದಿದೆ" ವಿಭಾಗದ ಮ್ಯಾನೇಜರ್ ತಿಳಿಸಿದ.

ತಳಮಳಗೊಳ್ಳುತ್ತಿದ್ದವಳಿಗೆ ಸ್ನೇಹಿತೆಯ ಉತ್ತೇಜನ ಬಂತು.

"ಹೆದರಬೇಡ, ಚಿತ್ರಾ. ಬೇಕಾದಷ್ಟು ಮಂದಿ ಬಾಸ್‌ಗಳು ಸಿಗ್ತಾರೆ. ನಮ್ಮಂಥ ಪ್ರಾಮಾಣಿಕ ಸೇಲ್ಸ್ ಹುಡಿಗಿಯರು ಸಿಕ್ಕೋದು ವಿರಳ. ನೀಲಂಕಾರ್ ಮಹಾಶಯ ದರ್ಪ ತೋರ್‍ಸಿದ್ರೆ ರಾಜೀನಾಮೆ ಹಾಕಿ ಬಂದ್ಬಿಡು. ಇಬ್ಬರೂ ಕಲ್ಪತರು ಕಲ್ಪತರು ಕಾಂಪ್ಲೆಕ್ಸ್ ಸೇರಿಬಿಡೋಣ."

ತಾವಿದ್ದ ಸಂಸ್ಥೆಗೆ ವ್ಯಾಪಾರದಲ್ಲಿ ಸ್ಪರ್ಧೆಯಾಗಿದ್ದ ಮತ್ತೊಂದು ಸಂಸ್ಥೆಯ ಹೆಸರು ಹೇಳಿ ಧೈರ್ಯ ನೀಡಿದ ಬಿಂದು ಮೇಲಿನ ಅಂತಸ್ತಿಗೆ ಲಿಫ್ಟ್ ಹಿಡಿದಳು.

ಚಿತ್ರಾ ಮಾಲೀಕನ ಚೇಂಬರ್ ಹೊರಗಡೆ ಐದು ನಿಮಿಷ ಅನುಮಾನಿಸುತ್ತಾ ನಿಂತಳು. ತಲೆಗೂದಲು ತಿದ್ದಿಕೊಂಡು ಸೆರಗು ಸರಿಪಡಿಸಿಕೊಂಡಳು. ಹಳದಿ ರಂಗಿನ ನಯವಾದ ಸೀರೆಯಲ್ಲಿ ಇಪ್ಪತ್ತರ ಹರೆಯದ ಚಿತ್ರಾ ಹದಿನಾರರ ಕಿಶೋರಿಯಾಗಿ ಕಾಣುತ್ತಿದ್ದಳು.

ಬಾಗಿಲು ಸರಿಸಿ ತಲೆ ಹಾಕುತ್ತಲೇ ಪಂಪಾಪತಿ ಮೆಲ್ಲನೆ ಹೂಂಕರಿಸಿದ.

"ಬಾ ಒಳಗೆ, ಹೊರಗೆ ಯಾಕೆ ಕಾದಿದ್ದೀಯ?"

ಗಂಟಲಿನಲ್ಲಿ ಏನೊ ತಡೆದಂತಾಯಿತು. ಉಗುಳು ನುಂಗಿ ವಿಶಾಲ ಕೋಣೆಗೆ ಅಡಿ ಇಟ್ಟಳು.

ದಪ್ಪ ಕುತ್ತಿಗೆ, ದೊಡ್ಡ ತಲೆ, ಉಬ್ಬಿದ ತಳದ ಮೊನಚು ಕಣ್ಣುಗಳು, ಪೊದೆ ಹುಬ್ಬುಗಳು, ಮೇಲೆ ಸಣ್ಣ ವಿಭೂತಿ ಗುರುತು, ಜೋಲು ಮುಖ.

ಕೊಳ್ಳುವ ವಸ್ತುವನ್ನು ಪರಾಮರ್ಶಿಸುವಂತೆ ಬಾಸ್ ಅವಳನ್ನು ಅಪಾದ ಮಸ್ತಕ ನಿರುಕಿಸಿದ.

"ಕೂತುಕೊ."

ಕುರ್ಚಿಯತ್ತ ಬೆರಳು ನಿರ್ದೇಶಿಸುತ್ತಿದ್ದಂತೆ ಪ್ರಶ್ನೆ ಸೀಳಿ ಬಂತು.

"ನನ್ನ ಮಗನಿಗೆ ಲಾಯಕ್ಕಾದೋಳು ಅಂತ ಹೇಗೆ ಭಾವಿಸ್ದೆ?"

ಕೆರಳಿದ ನಾಯಿಯ ಮುಂದಿನ ಬೆಕ್ಕಿನ ಮರಿಯಾಗಿ ನಿಂತಳು. ತುಸು ಧೈರ್ಯ ತಳೆದು ಕುಳಿತು ಹೇಳಿದಳು.

"ನಾನು ಲಾಯಕ್ಕಾದೋಳು ಅಂತ ಭಾವಿಸಿಲ್ಲ..."

ಬಾಸ್ ಕಣ್ಣು ವಿಶಾಲಗೊಳಿಸಿ ಗೊರಗುಟ್ಟಿದ.

"ಅವನ ಹತ್ರ ಹಣದ ಗಡಿಗೆ ಇದೇಂತ ನೀನು ಬಲ್ಲೆ."

"ಅದು ನನ್ನ ತಪ್ಪಲ್ಲ. ಸಂತೋಷನ ತಪ್ಪೂ ಅಲ್ಲ. ಅವರಲ್ಲಿ ಹಣದ ಗಡಿಗೆ ಇಲ್ಲವಾಗಿದ್ರೂ ಅವರನ್ನ ಪ್ರೀತಿಸ್ತಾ ಇದ್ದೆ."

ಜೋಲು ಮುಖ ಮುಂದೆ ಬಂತು.

"ಆದರೆ ನಾನು ತುಂಬಿರೊ ಗಡಿಗೆ ಅವನಿಗೆ ಸೇರುತ್ತೆ. ಅವನ ಹೆಂಡತಿ ಆಗೋಳಿಗೆ ಅದರ ಮೇಲೆ ಅಧಿಕಾರ ಬರುತ್ತೆ. ಅವನು ಆರಿಸೊ ಹುಡುಗಿ ವಿಷಯದಲ್ಲಿ ನನಗೂ ಎರಡು ಮಾತು ಆಡೊ ಅಧಿಕಾರ ಇದೆ."

"ನಮ್ಮ ಪ್ರೀತಿ ದೃಢವಾಗಿದ್ರೆ ನಿಮ್ಮ ಅಧಿಕಾರದ ಮಾತಿಗೆ ಅವಕಾಶ ಇಲ್ಲ."

ಧೈರ್ಯದ ಮಾತಿಗೆ ಬೆರಗಾದ ಶ್ರೀಮಂತ ಈರ್ಷ್ಯೆಯಿಂದ ದುರುಗುಟ್ಟಿದ.

"ಹುಂ! ನಿನ್ನ ಉಫ್ ಅಂತ ಹಾರಿಸಿಬಿಡ್ತೀನಿ."

ತಗ್ಗಿಸಿದ ತಲೆ ಎತ್ತಿದಳು.

"ಸಂತೋಷನ ಹೃದಯದಿಂದ ಮಾತ್ರ ಖಂಡಿತ ಹಾರಿಸೋದಕ್ಕೆ ಸಾಧ್ಯವಿಲ್ಲ."

"ಇಂಥಾ ಕಥೆ ಬಹಳ ಕೇಳಿದೀನಿ."

"ಇದು ಕಥೆಯಲ್ಲ. ಪ್ರೇಮಿಸೋದು ತಪ್ಪು ಅನ್ನೋದಾದ್ರೆ ನಾವಿಬ್ರೂ ತಪ್ಪು ಮಾಡಿದೀವಿ. ಬಹುಶಃ ನೀವೂ ಹಿಂದೆ ಅದೇ ತಪ್ಪು ಮಾಡಿರಬಹುದು."

ಕುರ್ಚಿಯಲ್ಲಿ ಹಿಂದಕ್ಕೆ ಒರಗಿ ಕುತ್ತಿಗೆ ಹೊರಳಿಸಿದ.

"ನಲವತ್ತು ಲಕ್ಷದ ಆಸ್ತಿಯ ಯಜಮಾನನಾಗುವ ನನ್ನ ಮಗನಿಗೆ ನಿನ್ನಿಂದ ಪ್ರಯೋಜನ ಏನಿದೆ? ಅವನ ಮನೆ ನಿಭಾಯಿಸ್ತೀಯಾ? ಮನೆಗೆ ಬರೊ ಅತಿಥಿಗಳನ್ನು ಸ್ವಾಗತಿಸಿ ನಮ್ಮ ಅಂತಸ್ತು ಕಾಪಾಡೊ ಶಕ್ತಿ ಇದೆಯಾ?"

"ಅವೆಲ್ಲಾ ಈತನಕ ಗೊತ್ತಿರಲಿಲ್ಲ. ಮುಂದೆ ಕಲಿತುಕೊಳ್ತೀನಿ."

"ಈಗ ನಿನಗಿರೊ ಸ್ನೇಹಿತರನ್ನ ಬಿಡಬೇಕಾಗತ್ತೆ."

ನಕಾರದಲ್ಲಿ ತಲೆ ಅಲುಗಿಸಿದಳು.

"ಸಾಧ್ಯವಿಲ್ಲ. ಸಂತೋಷ ಹಾಗೆ ಸೂಚಿಸ್ತಾರೆ ಅಂತ ನಾನು ಭಾವಿಸೋದಿಲ್ಲ. ನೀವು ಹೇಳ್ತಾ ಇರೋವೆಲ್ಲಾ ತುಂಬಾ ಹಳೇ ಕಾಲದ ಮಾತು."

"ಹಳೇ ಕಾಲದ್ದು?" ಕಣ್ಣೇರಿಸಿ ಮುಖ ಮುಂದೆ ತಂದ.

"ವಿಪರೀತ ಗೊಡ್ಡು ಸೂಚನೆ."

ಅಳುಕದೆ ಬಂತು ಮರುನುಡಿ,

ಪೊದೆ ಹುಬ್ಬುಗಳು ಏರಿದವು. ಚಕಿತಗೊಳಿಸುವಂತೆ ಗಹಗಹಿಸಿದ.

"ಹಳೇದು ! ಗೊಡ್ಡು ! ಅವೆಲ್ಲಾ ಹಣ ಸಂಪಾದಿಸೊ ಜನಕ್ಕೆ ಇರಬೇಕಾದ ಗುಣಗಳು. ಒಂದೇ ಸಂತೋಷದ ವಿಷಯ. ದಿಟ್ಟ ಮಾತು ಆಡುವಂತ, ತಲೆ ನೆಟ್ಟಗಿರುವ, ಕಷ್ಟಪಟ್ಟು ಕೆಲಸ ಮಾಡೊ ಹುಡುಗೀನ ನನ್ನ ಮಗ ಹುಡುಕಿದಾನೆ. ಅದು ನಮ್ಮ ಸ್ಟೋರ್‌ನಲ್ಲಿ !."

ಚಿತ್ರಾ ಅವಾಕ್ಕಾದಳು. ಬಿಂದು ಊಹಿಸಿದಂತೆ ಪಂಪಾಪತಿ ತನ್ನನ್ನು ತರಾಟೆಗೆ ತೆಗೆದುಕೊಳ್ಳದೆ ಅರ್ಧ ಒಪ್ಪಿಗೆ, ಮೆಚ್ಚಿಗೆ ತೋರಿದ್ದ. ಹಠ ಇಳಿದಿರಲಿಲ್ಲ.

ಅವನು ಚುಟ್ಟಿದ ತುದಿ ಬೆರಳಿನಿಂದ ಕಿತ್ತು ತುಟಿಗಿಟ್ಟು ಹೊತ್ತಿಸಿದ. ಹೊಗೆಯ ಪದರದ ಮೂಲಕ ಅವಳನ್ನು ನಿರಾಶೆಯಿಂದ ನೋಡಿದ. ಮುಖ ಮತ್ತಷ್ಟು ಜೋಲಿಸಿ ಕೆನ್ನೆ ಕೆರೆದ.

"ನೀನು ಲಕ್ಷಣವಾಗಿದೀಯ, ಚುರುಕಾಗಿದೀಯ. ಅದಕ್ಕೇ ನಿನ್ನ ಉಡುಪುಗಳ ವಿಭಾಗಕ್ಕೆ ನೇಮಿಸಿರೋದು. ಆದರೆ ನೀನು ಸೇಲ್ಸ್‌ಗರ್ಲ್"

"ಅದೇ ನನ್ನ ಅರ್ಹತೆಗೆ ಒಲಿದು ಬಂದ ಉದ್ಯೋಗ."

ತಲೆ ತಗ್ಗಿತು.

"ಸಂತೋಷನಿಗೆ ಅನುಭವ ಇಲ್ಲ. ಮುಂದೆ ಅವನು ಪಶ್ಚಾತ್ತಾಪ ಪಡುವಂತ ಯಾವ ಕೆಲಸಕ್ಕೂ ನಾನು ಅವಕಾಶ ಕೊಡೋದಿಲ್ಲ. ನಾನು ಯಾವುದನ್ನಾದ್ರೂ ತಡೆಯಬೇಕೂಂತ ನಿರ್ಧಾರ ತೊಗೊಂಡ್ರೆ ಶತಾಯಗತಾಯ ತಡೆದೇಬಿಡ್ತೀನಿ. ಯಾರಿಗೆ ನೋವಾದ್ರು ಸರಿ. ನೀನು ಸಂತೋಷನಿಗೆ ಲಾಯಕ್ಕಾದ ಹುಡುಗಿ ಅಂತ ಭಾವಿಸ್ತೀನಿ. ನನ್ನ ಭಾವನೆ ತಪ್ಪಾಗಿರಲೂಬಹುದು. ಈ ಮುಖ್ಯ ವಿಷಯದಲ್ಲಿ ಎರಡನೆ ಅಭಿಪ್ರಾಯ ಪಡೆಯೋಣ."

"ಎರಡನೆ ಅಭಿಪ್ರಾಯ?"

ತಬ್ಬಿಬ್ಬಾಗಿ ಕೇಳಿದಳು ಚಿತ್ರಾ.

"ಹಾಂ, ನನ್ನ ಹೆಂಡತಿಯ ಅಭಿಪ್ರಾಯ. ಸಂತೋಷ ಸಂಜೆ ಏಳಕ್ಕೆ ನಿನ್ನನ್ನ ಮನೆಗೆ ಊಟಕ್ಕೆ ಕರಕೊಂಡು ಬರ್ತಾನೆ. ಸರಿಯಾದ ಸೊಸೇನ ಆರಿಸೊ ಶಕ್ತಿ ನನ್ನ ಹೆಂಡತಿಗೆ ಇದೆ. ನಿನ್ನ ಅದೃಷ್ಟ ಅವಳ ಕೈಯಲ್ಲಿದೆ... ಇನ್ನು ನೀನು ಹೊರಡಬಹುದು."

ಮಾತು ಮುಗಿಸಿ ಗಂಟೆ ಒತ್ತಿದ. ಅವಳು ಹೊರಬೀಳುತ್ತಲೇ ಕಾರ್ಯದರ್ಶಿ ಒಳಕ್ಕೆ ಹೋದ.

ಕಾತರಿಸಿ ಕಾದಿದ್ದ ಬಿಂದು ಕೇಳಿದಳು.

"ವಜಾ ಆಜ್ಞೆ ಸಿಕ್ತೆ?"

"ಊಹುಂ, ರಾತ್ರಿಯ ಊಟಕ್ಕೆ ಆಮಂತ್ರಣ ಸಿಕ್ತು. ಅದೂ ನೀಲಂಕಾರ್ ಕುಟುಂಬದವರ ಜೊತೆಯಲ್ಲಿ. ಬಾಸ್ ಒಂದು ರೀತಿಯಲ್ಲಿ ನನ್ನ ಮೆಚ್ಚಿದಾರೆ. ಅವರ ಶ್ರೀಮತಿಯ ಅಭಿಪ್ರಾಯದ ಮೇಲೆ ನಿಂತಿದೆ."

"ಶ್ರೀಮತಿ ಪಂಪಾಪತಿ ! ಗೊತ್ತು ನನಗೆ. ನಾಗರತ್ನ ಅಂದರೆ ನಾಗಿಣಿಯೇ!"

"ಅದಿರಲಿ, ನನ್ನಲ್ಲಿ ಒಳ್ಳೆ ಸೀರೆ ಇಲ್ಲ."

ಚಿತ್ರಾ ಮನದ ಭೀತಿ ಅಡಗಿಸಲು ವಿಷಯ ಬದಲಿಸಿದಳು.

"ನನ್ನಲ್ಲೂ ಇಲ್ಲ. 'ಸಿಂಗಾರ್ಸ್'ನಲ್ಲಿ ತೊಗೋಳೋಣ ಒಂದು ವಾರದ ಮಟ್ಟಿಗೆ."

'ಸಿಂಗಾರ್ಸ್' ಡ್ರೆಸ್ ಏಜೆನ್ಸಿಯಲ್ಲಿ ಸಿದ್ಧ ಉಡುಪುಗಳು ಹೇರಳವಾಗಿದ್ದವು. ಫಿಲ್ಮ್ ಸ್ಟುಡಿಯೋಗಳಲ್ಲಿ ಒಂದೆರಡು ಸಾರಿ ತೊಟ್ಟ ಉಡುಪುಗಳು ಅಲ್ಲಿ ಬಾಡಿಗೆಗೆ ದೊರೆಯುತ್ತಿದ್ದವು.

ಚಿತ್ರಾ ತನಗೊಪ್ಪುವ ಸೀರೆ, ಕುಪ್ಪಸವನ್ನು ಇಪ್ಪತ್ತೈದು ರೂಪಾಯಿ ವಾರದ ಬಾಡಿಗೆಗೆ ಪಡೆದು ಪ್ಯಾಕೆಟ್ ತೆಗೆದುಕೊಂಡು ಹೊರಬಿದ್ದಳು.

## ೨

ಜಯಮಹಲ್ ಬಡಾವಣೆಯ ಮನೆ ಸೇರುವ ಮೊದಲೆ ಸಂತೋಷ ಅಡ್ಡ ರಸ್ತೆಯಲ್ಲಿ ಕಾರು ನಿಲ್ಲಿಸಿದ.

"ಇನ್ನೂ ಆರೂಮುಕ್ಕಾಲು. ನೀನು ಹೇಗೆ ಕಾಣ್ತೀಯ ಅಂತ ನೋಡುವ."

ಉತ್ಸಾಹದಿಂದ ಅವಳ ಮುಖ ತನ್ನ ಕಡೆಗೆ ತಿರುಗಿಸಿದ.

"ಹೌದು, ಸಂತೋಷ. ನಾನು ಸರಿಯಾಗಿ ಕಾಣ್ತೀನಾಂತ ನೋಡಿ ಹೇಳಿ. ಯಾಕೋ ಭಯ ಆಗ್ತಿದೆ. ಪ್ರಣಯದ ನೆರಳು ಭೀಕರವಂತೆ."

ಅವಳ ಮಾತಿಗೆ ಗಮನ ಕೊಡದೆ ಕಣ್ಣಂಚಿನ ಕಪ್ಪು ಸರಿಪಡಿಸಿದ.

"ಓಹ್, ನೀನು ಅಪ್ಸರೆ! ಡ್ಯಾಡಿ ಈ ರೂಪಕ್ಕೆ ಸೋಲಲೇಬೇಕು. ಅವರಿಗೆ ಹುಡುಗಿ ಸುಂದರವಾಗಿರಬೇಕು. ಅವರು ಆರಿಸಿದ್ದೂ ಸುಂದರ ಹೆಂಡತಿಯನ್ನೇ. ನನ್ನ ತಾಯಿ ವಿಷಯದಲ್ಲಿ ಯೋಚನೆ ಬೇಡ. ನನ್ನ ಇಷ್ಟಕ್ಕೆ ಯಾವತ್ತೂ ಅಡ್ಡಿ ಮಾಡೋಳಲ್ಲ."

"ಒಂದು ವೇಳೆ ನಿಮ್ಮ ತಾಯಿ ನನ್ನ ಒಪ್ಪದೇ ಹೋದ್ರೆ?"

"ಒಪ್ಪಲೇಬೇಕು. ಎಲ್ಲಾ ತಂದೆ, ತಾಯಿಗಳ ಹಾಗೇ ಅವರೂ. ಮಗನ ಸಂತೋಷದಲ್ಲಿ ತಮ್ಮ ಸಂತೋಷ ಕಾಣೋರು."

"ನಿಮಗೆ ಸಂತೋಷ ಆಗಿದೆಯೇ?"

"ಅದು ನಿನಗೇ ಗೊತ್ತಿರಬೇಕು."

ಅವಳನ್ನು ಎದೆಗೆ ಒತ್ತಿಕೊಂಡ. ಅವನ ಎದೆಬಡಿತ ಅವಳಿಗೆ ಕೇಳುತ್ತಿತ್ತು. ಅವನಿಗೂ ತನ್ನಂತೆ ಯಾವುದೋ ದಾಳಿ ಎದುರಿಸುವ ಪರಿಸ್ಥಿತಿ!

ಕಾರು ಭವ್ಯವಾದ ಒಂದಂತಸ್ತಿನ ಆಧುನಿಕ ಮನೆಯ ಮುಂದೆ ನಿಂತಿತು. ಕೆಳ ವರಾಂಡದಲ್ಲಿ ಅತ್ತಿಂದಿತ್ತ ಅಡ್ಡಾಡುತ್ತಿದ್ದ ಪಂಪಾಪತಿ ಅವಳನ್ನು ಮಾತಿಲ್ಲದೆ ಸ್ವಾಗತಿಸಿ ಮೇಲಕ್ಕೆ ಕರೆದೊಯ್ದ. ಸಂತೋಷ ಮೌನವಾಗಿ ಅನುಸರಿಸಿದ.

ಹೊಸ ವ್ಯಕ್ತಿಯನ್ನು ಕಾಣುವಂತೆ ಪಂಪಾಪತಿ ಅವಳನ್ನು ಮುಖ ಜೋಲಿಸಿ ನೋಡಿದ.

"ನೀನು ಉಟ್ಟಿರೋ ಸೀರೆ ನಮ್ಮ ಸ್ಟೋರಿನದಲ್ಲ ಅಂತ ತಿಳಿತೀನಿ."

ನಕ್ಷತ್ರ ಕಣ್ಣುಗಳು ತುಸು ಮಂಕಾದರೂ ನಸುನಗೆ ಕಾಣಿಸಿತು.

"ನಮ್ಮ ಸ್ವಂತದ ವಸ್ತುಗಳನ್ನು 'ನೀಲಂಕಾರ್ ಕಾಂಪ್ಲೆಕ್ಸ್'ನಲ್ಲಿ ಕೊಳ್ಳೋದಿಲ್ಲ, ಬಾಸ್."

"ಅಲ್ಲಿ ನಾವು ನಮ್ಮ ಸಿಬ್ಬಂದಿಯವರಿಗೆ ಕೊಡೋದು ಶೇಕಡ ಹತ್ತು ಸೋಡಿ. ಎಲ್ಲಾದರೂ ವಸ್ತುಗಳನ್ನು ಕೊಂಡ್ಕೊಳ್ಳಿ. 'ಕಲ್ಪತರು ಕಾಂಪ್ಲೆಕ್ಸ್' ಗೆ ಮಾತ್ರ ಹೋಗೋದು ಬೇಡ."

ಹಾಸ್ಯದ ಧಾಟಿಯಲ್ಲಿ ವ್ಯವಹಾರದ ಮಾತು ಆಡಿ ಕೈ ಉಜ್ಜಿಕೊಂಡ. ಮರುಕ್ಷಣ ಮಗನ ಕಡೆ ತಿರುಗಿದ.

"ಇವಳಿಗೆ ಈ ಸೀರೆ ತೆಗೆದುಕೊಟ್ಟಿಯೇನು?"

ಬೆಚ್ಚಿದ ಸಂತೋಷ ಒಡನೆ ಉತ್ತರಿಸಿದ.

"ಇಲ್ಲ."

ನಾಗರತ್ನ ಕೋಣೆಯಿಂದ ಹೊರಬಂದಳು. ಸಂತೋಷ ಚಿತ್ರಾಳ ತೋಳು ಹಿಡಿದು ಮುಂದೆ ಕರೆತಂದ.

"ಮಮ್ಮಿ, ನಾನು ಹೇಳಿದ ಹುಡುಗಿ ಇವಳೇ... ಚಿತ್ರಾ"

ಕೈ ಮುಗಿದ ಚಿತ್ರಾ ಅವಳ ಮೇಲೆ ನೋಟ ಹರಿಸಿದಳು.

ಸೊಂಪಾದ ಅಚ್ಚ ಕಪ್ಪು ಕೂದಲು. ಗಾಜಿನಂತೆ ನುಣುಪಾದ ಕೆನ್ನೆಗಳ ಬಾದಾಮಿ ಆಕಾರದ ಮುಖ. ಸಂತಸದ ನೆರಳು ಹಿಡಿದ ಚೂಪು ಕಣ್ಣುಗಳು.

ಬಿಂದುವಿನ ಅಭಿಪ್ರಾಯದಂತೆ ನಾಗಿಣಿ ಎನಿಸಿದ ನಾಗರತ್ನ ತನ್ನ ಪತಿಗಿಂತ ಬಹಳಷ್ಟು ಕಡಿಮೆ ವಯಸ್ಸಿನ ಹೆಣ್ಣು !

"ನಿನ್ನ ನೋಡಿ ಸಂತೋಷ ಆಯ್ತು."

ಮೊಟಕಾಗಿ ನುಡಿದು ಚಿತ್ರಾಳನ್ನು ಡೈನಿಂಗ್ ಟೇಬಲ್ ಕಡೆಗೆ ಕರೆದೊಯ್ದಳು. ನಾಲ್ವರೂ ಕುಳಿತರು. ಶ್ರೀಮತಿಯ ಪ್ರಶ್ನೆಗಳಿಗೆ ಚಿತ್ರಾ ಸಂಕ್ಷೇಪವಾಗಿ ತನ್ನ ವಿವರ ನೀಡಿದಳು.

ಹುಟ್ಟಿದ ಊರು ರಾಣಿಬೆನ್ನೂರು. ತಂದೆ ಗುಂತಕಲ್‌ನಲ್ಲಿ ರೈಲ್ವೆ ಗೂಡ್ಸ್ ಕ್ಲರ್ಕ್. ಅಣ್ಣ ಮಧ್ಯಪ್ರದೇಶದಲ್ಲಿ ಅಕೌಂಟ್ಸ್ ಇಲಾಖೆಗೆ ಸೇರಿದವ. ಅಕ್ಕನಿಗೆ ಮದುವೆಯಾಗಿದೆ. ರಾಣಿಬೆನ್ನೂರಿನಲ್ಲಿ ತಾಯಿಯ ವಾಸ. ಕಾಲೇಜಿನ ಓದು ಅರ್ಧಕ್ಕೆ ನಿಲ್ಲಿಸಿದ ಕಿರಿಯ ಮಗಳನ್ನು ಜೊತೆಯಲ್ಲಿ ನೋಡಿಕೊಳ್ಳುವಂತೆ ತಾಯಿ ಬಿಂದುವಿಗೆ ತಿಳಿಸಿದಂತೆ.

"ಬೆಂಗಳೂರು ಸೇರಿದ್ದು ಯಾಕೆ? ಪಂಪಾಪತಿ ಕೇಳಿದ.

"ಜನ ಅದೃಷ್ಟ ಹುಡುಕಿಕೊಂಡು ನಗರಕ್ಕೆ ತಾನೆ ಬರೋದು?"

ನಾಗರತ್ನ ಮೆಲ್ಲನೆ ಹೇಳಿದಳು.

"ಸಂತೋಷ ದಕ್ಕಿದರೆ ಅವಳಿಗೆ ಅದೃಷ್ಟ ಸಿಕ್ಕಿದ ಹಾಗೆ."

ಮೊಂಡು ಮಾತು ಹಾಕಿದ ಬಾಸ್.

ಊಟ ಸಾಗುವಾಗ ಪಂಪಾಪತಿ ಮಾತಿನ ಹೆಚ್ಚು ಪಾಲು ವಹಿಸಿದ್ದ. ಅವನ ಮಡದಿ ಯಾವುದೋ ಯೋಚನೆಯಲ್ಲಿ ಮಗ್ನಳಾಗಿದ್ದಂತೆ ಕಂಡರೂ ಚಿತ್ರಾಗೆ ಅವಳು ತನ್ನನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾಳೆನಿಸಿತು.

ಊಟ ಮುಗಿದ ಮೇಲೆ ನಾಗರತ್ನ ಮಗನಿಗೆ ಹೇಳಿದಳು.

"ನಾವು ಡೆಲ್ಲಿಯಿಂದ ಬಂದ ಮೇಲೆ ಚಿತ್ರಾ ಮತ್ತೆ ಬರಲಿ."

ಅಗ್ನಿ ಪರೀಕ್ಷೆಯಲ್ಲಿ ಅರ್ಧ ಜಯ ದೊರೆತಿದೆ ಎನಿಸಿತು ಚಿತ್ರಾಗೆ. ಸಂತೋಷನ ಮುಖ ಅರಳಿತು.

"ಡೆಲ್ಲಿಯಿಂದ ಬಂದ ಕೂಡಲೇ ಮದುವೆ ನಿಶ್ಚಿತಾರ್ಥ ಪ್ರಕಟಿಸೋಣ. ಸರಿಯಾ, ಡ್ಯಾಡಿ?."

"ಸರಿಯಲ್ಲ. ನೀನು ಮದುವೆ ನಿಶ್ಚಯ ಮಾಡಿ ಮತ್ತೆ ರದ್ದು ಮಾಡೋದೂ ನಮ್ಮ ವ್ಯವಹಾರಕ್ಕೆ ಕೆಟ್ಟ ಹೆಸರು."

"ಈ ಮದುವೆ ರದ್ದಾಗೋದಲ್ಲ."

"ಮತ್ತೆ ನಿಶ್ಚಿತಾರ್ಥ ಪ್ರಕಟಣೆ ಯಾಕೆ? ನೇರವಾಗಿ ಮದುವೆ ಆಗಿಬಿಡು. ಹುಡುಗೀನ ನಾನು ಒಪ್ಪಿದೀನಿ. ನೀನೂ ಒಪ್ಪಿರಬೇಕಲ್ಲ, ನಾಗರತ್ನ?"

ಚಿತ್ರಾಗೆ ಉಸಿರು ನಿಂತಿತು.

ನಾಗರತ್ನ ಉತ್ತರಿಸಲಿಲ್ಲ. ಪ್ರಶ್ನೆ ಮತ್ತೊಮ್ಮೆ ಬಂದಾಗ ಚಿತ್ರಾಳ ಕಡೆ ನಿರುಕಿಸಿದಳು.

"ಸಂತೋಷನಿಗೆ ವಿಷಯ ಬಿಟ್ಟುಬಿಡಿ. ನಿಶ್ಚಿತಾರ್ಥದ ಪ್ರಕಟಣೆ ಮಾಡಿಕೊಳ್ಳಲಿ.

ನಮ್ಮ ಸ್ಟೋರ್‌ನ ಹುಡುಗಿಯನ್ನ ಅವನು ಮದುವೆ ಆಗೋದು ವ್ಯವಹಾರಕ್ಕೆ ಪ್ರಚಾರ ಸಿಕ್ಕಿದ ಹಾಗೆ."

ಗಂಡ ಹೆಂಡತಿ ಪರಸ್ಪರ ದೃಷ್ಟಿಸಿದರು. ಪತಿಗೆ ವಿರುದ್ಧವಾಗಿ ಅವಳು ಆಡಿದುದು ಹಾಸ್ಯದ ಮಾತು ಎನಿಸಿತು. ವಿಷಯದ ಅಡಿಯಲ್ಲಿ ಸುಳಿ ಸುತ್ತುತ್ತಿದೆ ಎಂದು ತಿಳಿದಳು ಚಿತ್ರಾ.

"ನಿಶ್ಚಿತಾರ್ಥ ಭಗ್ನವಾಗೋದು ಅಂದ್ರೆ ಪ್ರಚಾರ ಮಾಡಿದ ಭಾರಿ ಮೊತ್ತದ ವಸ್ತು ಮಾರಾಟವಾಗದೇ ಉಳಿದುಹೋಗೋ ಹಾಗೆ."

ತೀಕ್ಷ್ಣವಾಗಿ ಹೇಳಿದ ತಂದೆ.

"ಅದು ಭಗ್ನವಾಗೋದಲ್ಲಾಂತ ಮತ್ತೆ ಹೇಳ್ತಿದೀನಿ."

ದೃಢವಾಗಿ ನುಡಿದ ಮಗ.

ಚಿತ್ರಾಳನ್ನು ಮನೆಗೆ ಬಿಟ್ಟು ಹೋಗಲು ಬಂದಾಗ ಸಂತೋಷ ಗೆಲುವಾಗಿದ್ದ.

"ಡ್ಯಾಡಿ ಹೆಚ್ಚು ಮಾತಿನೋರು. ಮಮ್ಮಿಗೆ ಸಂತೋಷ ಆಗಿದೆ. ಅವಳು ಹೆಚ್ಚು ಮಾತಾಡೋಳಲ್ಲ."

"ಎಷ್ಟು ದಿನ ಆಗತ್ತೆ ನೀವು ಡೆಲ್ಲಿಯಿಂದ ಬರೋದು?"

"ವಾರಕ್ಕಿಂತ ಹೆಚ್ಚಾಗಿ ನಿಲ್ಲೋದಿಲ್ಲ. ಡ್ಯಾಡಿಗೆ ಸ್ವಲ್ಪ ವ್ಯವಹಾರದ ಕೆಲಸ ಇದೆ. ಅಲ್ಲಿಂದ ಬಂದ ಕೂಡಲೇ ನಿಶ್ಚಿತಾರ್ಥದ ದಿನ ಗೊತ್ತು ಮಾಡೋಣ."

* * *

ಮಳಿಗೆಯಲ್ಲಿ ಗಿರಾಕಿಗಳು ಗುಂಪು ಸರಿದು ಸ್ವಲ್ಪ ವಿರಾಮ ದೊರೆತೊಡನೆ ಬಿಂದು ಇಳಿದು ಬಂದಳು. ಕಳೆದ ಏಳು ದಿನಗಳಿಂದ ಆಡಿದ ಮಾತುಗಳಲ್ಲಿ ನೀಲಂಕಾರರ ವಿಷಯ ಅಧಿಕಾಂಶದಲ್ಲಿತ್ತು.

ಬಿಂದುವಿನ ಕಟು ವಿಮರ್ಶೆ ಪ್ರಾರಂಭವಾಗುತ್ತಲೇ ಚಿತ್ರಾ ನಮ್ರವಾಗಿ ಹೇಳಿದಳು.

"ಅವತ್ತೇ ಹೇಳ್ದೆ ವಿಷಯ ನೀನು ಹೇಳಿದ ಹಾಗಲ್ಲ ಅಂತ. ಬಾಸ್ ಮತ್ತು ಅವರ ಶ್ರೀಮತಿ ನಮ್ಮ ಹಾಗೇ ಮನುಷ್ಯ ಜಾತಿಯೋರು ನೋಡು."

ಸ್ನೇಹಿತೆಯ ತಲೆಗೆ ಮೆಲ್ಲನೆ ಮೊಟ್ಟಿದಳು. ಬಿಂದುವಿನ ಪ್ರತಿಹಾಸ್ಯ ಸಿದ್ಧವಿತ್ತು.

"ಮೃಗಾಲಯದ ಪಂಜರದಲ್ಲಿ ಮನುಷ್ಯರನ್ನು ಕಂಡ ಹಾಗಾಯ್ತು ಅನ್ನು."

"ನನ್ನ ಭಾವನೆ ಅವತ್ತೇ ತಲೆಕೆಳಕಾಯ್ತು. ನಾಗರತ್ನ ಮಿತಭಾಷಿ, ನಮ್ರ ಹೆಂಗಸು, ಬಸ್ ನಿಜವಾಗಿಯೂ ಹೇಳೊ ಹಾಗೆ ಕೇವಲ ಒದರುವ ಪ್ರಾಣಿ."

"ನಿನ್ನ ಮರುಳು ಮಾಡುವಷ್ಟು ನಾಟಕ ಆಡಿದಾರೆ ನೀಲಂಕಾರ್ ದಂಪತಿಗಳು."

“ನಿನ್ನೊಂದಿಗೆ ಮಾತಾರೋದು ಕಷ್ಟ. ಬಾಸ್ ಎಷ್ಟು ಚುರುಕು ಗೊತ್ತೆ? ನನ್ನ ಸೀರೆ ನೋಡಿ ಅದು ಈ ಸ್ಟೋರಿನದಲ್ಲ ಅಂತ ಕಂಡುಹಿಡಿದ್ರು.”

“ಸದ್ಯ, ನೀನು ಗಾಬರಿಯಲ್ಲಿ ಅದು ಬಾಡಿಗೆ ಸೀರೆ ಅನ್ನೋದು ಹೇಳಲಿಲ್ಲವಲ್ಲ. ಅಂದಹಾಗೆ ಆ ಸೀರೆಯ ಬಾಡಿಗೆ ಹಣ ಇನ್ನೂ ಕೊಟ್ಟಿಲ್ಲ.”

ಚಿತ್ರಾ ಸ್ವೆಟರ್ ನೋಡುತ್ತಿದ್ದ ಗಿರಾಕಿ ಹೆಂಗಸಿನ ಕಡೆಗೆ ಸರಿದು ಹೋದಳು.

“ಸೊಗಸಾಗಿದೆ, ಮ್ಯಾಡಾಂ. ಬೊಂಬಾಯಿನಿಂದ ಬಂದ ಹೊಸ ಸರಕು. ಕನ್ನಡಿ ಕೋಣೆಗೆ ಹೋಗಿ ಧರಿಸಿ ನೋಡಿಕೊಳ್ಳಿ.”

ಚಿತ್ರಾ ಗಿರಾಕಿಗೆ ಮಳಿಗೆ ಕೊನೆಯಲ್ಲಿದ್ದ ಕಿರುಕೋಣೆ ತೋರಿಸಿದಳು. ತನ್ನ ಸ್ಥಾನಕ್ಕೆ ಹಿಂತಿರುಗಿ ಸ್ವೆಟರ್‌ಗಳನ್ನು ಜೋಡಿಸತೊಡಗಿದಳು.

ಮೂರು ನಿಮಿಷಗಳಲ್ಲಿ ಕನ್ನಡಿ ಕೋಣೆಯಿಂದ ಹಿಂತಿರುಗಿದ ಹೆಂಗಸು ಕಾತರದಿಂದ ಪ್ರಶ್ನಿಸಿದಳು.

“ಬೆಲೆ ಎಷ್ಟು?”

“ಹೆಚ್ಚಿಲ್ಲ, ನೂರ ಎಪ್ಪತ್ತೈದು.”

ನಡುವಯಸ್ಸಿನ ಹೆಂಗಸು ನಿರಾಶೆಯಲ್ಲಿ ಮುಖ ಕಿವಿಚಿದಳು.

“ಸ್ವಲ್ಪ ಅಗ್ಗವಾಡಿರೋದು ನೋಡಿ.”

ಚಿತ್ರಾ ಸ್ವೆಟರ್‌ಗಳ ಹೊರೆಯೊಂದಿಗೆ ಅತ್ತಿತ್ತ ಹರಿದಾಡಿದಳು. ಹೆಂಗಸು ಸಾಮಾನ್ಯ ದರ್ಜೆಯ ಸ್ವೆಟರ್ ಆರಿಸಿದ ಮೇಲೆ ಚಿತ್ರಾ ಅದನ್ನು ಪ್ಯಾಕ್ ಮಾಡಿ ಅವಳ ಮುಂದಿರಿಸಿದಳು. ಹೆಂಗಸು ಕೈಚೀಲ ತೆರೆದಳು.

“ನನ್ನ ಹಣ!”

ಹೆಂಗಸಿನ ಕೂಗು ಚಿತ್ರಾಳನ್ನು ಹಿಂದಕ್ಕೆ ತಿರುಗುವಂತೆ ಮಾಡಿತು.

“ಏನಾಯ್ತು ?”

ಗಿರಾಕಿ ಹೆಂಗಸು ತತ್ತರಿಸಿದಳು.

“ನೂರರ ನೋಟು ಕಳೆದುಹೋಗಿದೆ !”

“ಹಾಂ, ಹೌದೇನು? ಸರಿಯಾಗಿ ನೋಡಿ.”

ಅವಳು ಚೀಲ ತಿರುಗಿಸಿ ಉದ್ದನೆಯ ಮೇಜಿನ ಮೇಲೆ ಒದರಿದಳು. ಒಂದು ಐದರ ಎರಡೆರಡು ನೋಟುಗಳು, ಚಿಲ್ಲರೆ ಹಣ ಬಿದ್ದವು. ನೂರರ ನೋಟು ಇಲ್ಲ !

ಹೆಂಗಸು ನೆನಪು ತಂದುಕೊಂಡಳು.

“ನೂರರ ಹೊಸ ನೋಟು. ಎರಡು ಪದರ ಮಡಿಸಿತ್ತು. ಬಿಳಿ ಭಾಗದಲ್ಲಿ ಯಾವುದೊ ಗುಂಡು ಸ್ಟಾಂಪ್ ಒತ್ತಿತ್ತು.”

ಚಿತ್ರಾ ವಿಭಾಗದ ಮುಖ್ಯಸ್ಥ ಥಾಮಸ್‌ಗೆ ಸನ್ನೆ ಮಾಡಿದಳು. ಸ್ಟೋರ್‌ನಲ್ಲಿ ಅಂತಹ ಪ್ರಸಂಗಗಳು ಹಿಂದೆ ನಡೆದಿದ್ದವು. ಅವು ಸಂಸ್ಥೆಯ ಹೆಸರಿಗೆ ಕಳಂಕ ತರುವುವಾದ್ದರಿಂದ ಪಂಪಾಪತಿ ಪ್ರಸಂಗಗಳ ಪೂರ್ಣ ತನಿಖೆಗೆ ಸೂಚನೆ ಕೊಟ್ಟಿದ್ದ.

ಗಿರಾಕಿಯನ್ನು ಮ್ಯಾನೇಜರ್ ಕೋಣೆಗೆ ಕರೆದೊಯ್ದರು. ಬಿಂದು ಓಡಿ ಬಂದಳು.

"ಹಣ ಇಲ್ಲದ ಬಡಾಯಿ ಹೆಂಗಸಿರಬೇಕು."

ಸ್ನೇಹಿತೆಯ ಮಾತನ್ನು ಅಲ್ಲಗಳೆದಳು ಚಿತ್ರಾ.

"ಇಲ್ಲ, ಹಾಗೆ ಕಾಣ್ತಾ ಇಲ್ಲ. ಆಕೆ ಕನ್ನಡಿ ಕೋಣೆಗೆ ಹೋಗಿದ್ದಾಗ ಯಾರೊ ಆಕೆಯ ಚೀಲದಲ್ಲಿ ಕೈ ಆಡಿಸಿರಬೇಕು."

ಮ್ಯಾನೇಜರ್ ಗುಡುಗುತ್ತಾ ಬಂದ.

"ಗಿರಾಕಿಗಳು ಮೇಜಿನ ಮೇಲೆ ಕೈಚೀಲ ಬಿಟ್ಟುಹೋಗದ ಹಾಗೆ ನೋಡ್ಕೊಳ್ಳಿ ಅಂತ ಎಷ್ಟು ಸಾರಿ ಹೇಳಿದೀನಿ."

ಚಿತ್ರಾ ನಮ್ರವಾಗಿ ಹೇಳಿದಳು.

"ಗಿರಾಕಿಗಳು ಕೇಳಿದ್ದಕ್ಕೆಲ್ಲಾ ಉತ್ತರ ಹೇಳೋದು, ಅವರಿಗೆ ಬಗೆಬಗೆ ವಸ್ತುಗಳನ್ನು ತೋರಿಸೋದು ಈ ಕೆಲಸಗಳ ಮಧ್ಯೆ ಅವರ ವಸ್ತು ಕಾಯೋದು ಹೇಗೆ?"

"ಎದುರುತ್ತರ ಕೊಡಬೇಡಿ, ಮಿಸ್."

ಗಡುಸಾಗಿ ನುಡಿದು ದುರುಗುಟ್ಟಿದ ಮ್ಯಾನೇಜರ್.

ವಿಭಾಗದ ಮುಖ್ಯಸ್ಥ ಥಾಮಸ್ ಸ್ಟೋರ್ ಡಿಟೆಕ್ಟಿವ್‌ನೊಂದಿಗೆ ಸರಸರ ಬಂದ.

"ಹಣ ಸಿಕ್ಕಿಬಿಡ್ತು, ಸಾರ್."

ಪತ್ತೇದಾರ್ ಚೆರಿಯನ್ ಹೆಮ್ಮೆಯಿಂದ ಸೆಟೆದುನಿಂತ. ತೊಡಕಿನಿಂದ ಬಿಡುಗಡೆ ಹೊಂದಿದ ಮ್ಯಾನೇಜರ್ ಹಣೆ ಒರೆಸಿಕೊಂಡ.

"ಒಳ್ಳೇದಾಯ್ತು. ಎಲ್ಲಿತ್ತು ಹಣ?"

"ಕೌಂಟರ್ ಡ್ರಾನಲ್ಲಿದ್ದ ಕೈಚೀಲದಲ್ಲಿ. ಕೈಚೀಲ ಚಿತ್ರಾದು."

ಪತ್ತೇದಾರ ಚಿತ್ರಾಳ ಕಡೆ ಅಚ್ಚರಿ ಬೆರೆತ ಪ್ರಶ್ನಾರ್ಥಕ ನೋಟ ಹಾಕಿದ. ಚಿತ್ರಾಗೆ ಉಬ್ಬಸ ಬಂತು.

"ನನ್ನ ಕೈಚೀಲದಲ್ಲಿ ?... ಸುಳ್ಳು !"

ಎರಡು ಮಡಿಕೆಯ ನೂರರ ಹೊಸ ನೋಟು ಮೇಜಿನ ಮೇಲೆ ಬಿತ್ತು. ಪತ್ತೇದಾರ ವಿವರಣೆ ಕೊಟ್ಟ.

"ನೀವು ಗಿರಾಕಿ ಹೆಂಗಸನ್ನು ಪ್ರಶ್ನೆ ಮಾಡ್ತಾ ಇದ್ದಾಗ ನಾನು ಮಾರಾಟದ ಕೌಂಟರ್ ಮೇಜಿನ ಉದ್ದಕ್ಕೂ ಹುಡುಕ್ತಾ ಬಂದೆ. ಡ್ರಾನಲ್ಲಿ ಇದು ಸಿಕ್ತು."

ಹಸಿರು ಕೈಚೀಲ ಎತ್ತಿ ತೋರಿದ. ಚಿತ್ರಾ ಕೂಗಿದಳು.

"ಚೀಲ ನನ್ನದೇ ಆದರೆ... "

ಚೆರಿಯನ್ ತನ್ನ ಶೋಧನೆಯನ್ನು ಸಮರ್ಥಿಸಿಕೊಂಡ.

"ಈ ಚೀಲವನ್ನು ನಾನು ಥಾಮಸ್ ಎದುರಿನಲ್ಲಿ ಬಿಚ್ಚಿದಾಗ ಈ ನೋಟು ಪತ್ತೆ ಆಗಿದೆ, ಸಾರ್. ಗಿರಾಕಿ ಹೇಳಿದ ಹಾಗೆ ಎರಡು ಮಡಿಕೆಯ ಹೊಸ ನೋಟು. ಬಳಿ ಭಾಗದಲ್ಲಿ ಸೊಸೈಟಿಯ ಒಂದು ಗುಂಡನೆ ಮುದ್ರೆಯಿದೆ."

ಚಿತ್ರಾಗೆ ಎದೆಯಲ್ಲಿ ಚೂರಿ ಇರಿದಂತಾಯಿತು. ನೀಳವಾಗಿ ಉಸಿರೆಳೆದುಕೊಂಡಳು.

"ನಾನು ಹಣ ಕದ್ದಿಲ್ಲ. ಅದು ನನ್ನ ಚೀಲದಲ್ಲಿ ಹೇಗೆ ಸೇರ್ತು ಅಂತ ಗೊತ್ತಿಲ್ಲ."

ಥಾಮಸ್ ಪ್ರಶ್ನಿಸಿದ.

"ನೀವು ಗಿರಾಕಿಗೆ ಕನ್ನಡಿ ಕೋಣೆ ತೋರಿಸಿ ನಿಮ್ಮ ಭಾಗದ ಕೌಂಟರ್‌ಗೆ ಹಿಂತಿರುಗಿದ್ದು ನಿಜ ತಾನೆ?"

"ನಾನು ಇನ್ನೊಬ್ಬ ಗಿರಾಕಿಗೆ ಹ್ಯಾಟ್ ತೋರಿಸಬೇಕಾಗಿತ್ತು. ಏನೊ ಅತಂತ್ರ ಆಗಿದೆ. ಇದು ನನ್ನ ಕೈಚೀಲ ಆಗಿಲ್ಲದಿದ್ರೆ..."

ನಿರಾಶೆಯಿಂದಲೇ ಚೇಲ ಎತ್ತಿ ತಿರುಗಿಸಿದಳು. ಅದರಿಂದ ಬಿಳುಪು ಮಡಿಕೆ ಕಾಗದ ಕೆಳಗೆ ಬಿತ್ತು. ಪತ್ತೇದಾರ ಮಡಿಕೆ ಬಿಚ್ಚಿ ನೋಡಿದ.

"ಓ, ಸಿಂಗಾರ್ಸ್ ಡ್ರೆಸ್ ಏಜೆನ್ಸಿಗೆ ನೀವು ಸೀರೆ ಬಾಡಿಗೆ ಇಪ್ಪತ್ತೈದು ರೂಪಾಯಿ ಕೊಡಬೇಕು ಅನ್ನಿ. ಈ ಬಿಲ್ ಹಣ ಕೊಟ್ಟಾಗಿದೆಯೆ?"

ತುಟಿಗೆ ನಾಲಗೆ ಸವರಿದಳು.

"ಇನ್ನೂ ಕೊಟ್ಟಿಲ್ಲ. ದಯವಿಟ್ಟು ನನ್ನ ಮಾತು ನಂಬಿ. ನಾನು ಹಣ ಕದೀಲಿಲ್ಲ."

ಮ್ಯಾನೇಜರ್ ಬಲವಾಗಿ ತಲೆ ಕೊಡವಿದ.

"ಬಾಸ್ ಊರಿನಲ್ಲಿ ಇಲ್ಲ. ನನ್ನ ತರ್ಕವ್ಯ ನಿರ್ವಹಿಸಲೇಬೇಕು. ಪೋಲೀಸ್‌ಗೆ ಫೋನ್ ಮಾಡಿ."

ಚೆರಿಯನ್‌ಗೆ ಸೂಚಿಸಿದ. ವಿಭಾಗದ ಮುಖ್ಯಸ್ಥನೊಂದಿಗೆ ಚೆರಿಯನ್ ಹೊರಬಿದ್ದ. ಚಿತ್ರಾ ಭೀತಿಯಿಂದ ಕೂಗಿದಳು.

"ನನ್ನ ಮೇಲೆ ಆಪಾದನೆ ಹೊರಿಸಬೇಡಿ.... ಕೂಡದು!"

ಅವಳ ಕೂಗು ಯಾರ ಕಿವಿಯೂ ಮುಟ್ಟದೆ ತೂರಿಹೋಯಿತು.

ಪೋಲೀಸ್ ಸ್ಟೇಷನ್‌ನಲ್ಲಿ ಅವಳ ಮೇಲೆ ಕಳ್ಳತನದ ಆಪಾದನೆ ಹೊರಿಸಲಾಯಿತು. ಬಿಂದು ನೀಡಿದ ಜಾಮೀನಿಗೆ ಪೋಲೀಸ್ ಒಪ್ಪಿದುದು ಚಿತ್ರಾಗೆ ಹಾಯೆನಿಸಿತು.

ಮನೆಯ ಕಡೆ ನಡೆದಾಗ ಬಿಂದು ಹೇಳಿದಳು.

"ಸಂತೋಷನಿಗೆ ಕೂಡ್ಲೆ ಫೋನ್ ಮಾಡಿ ಅವನ ತಂದೆಗೆ ಹೇಳಿಸಿ ಈ ಪ್ರಕರಣ ನಿಲ್ಲೋ ಹಾಗೆ ಮಾಡಬೇಕು."

"ಸಂತೋಷ ಎಲ್ಲಿದಾರೇಂತ ಹುಡುಕೋದು. ಗೊತ್ತಾದ್ರೂ ಅವರಿಗೆ ಏನು ಹೇಳೋದು. ನನ್ನ ಪರವಾಗಿ ಸಾಕ್ಷಿ ಇಲ್ಲ."

"ನಿನ್ನ ಬ್ಯಾಗ್‌ನಲ್ಲಿ ಆ ನೋಟು ಹೇಗೆ ಸೇರ್ತು?"

"ಗೊತ್ತಿಲ್ಲ" ತಲೆಗೆ ಕೈ ಹಚ್ಚಿ ನಿಂತಳು.

"ನನಗೆ ಗೊತ್ತು. ನೋಟನ್ನ ಚೀಲದಲ್ಲಿ ಸೇರಿಸಿದ್ರು."

"ಸೇರಿಸಿದ್ರು ! ಯಾರು ?... ಯಾಕೆ?"

ಗಾಬರಿ, ಆತುರದಲ್ಲಿ ಕೇಳಿದಳು.

"ನಿನಗೆ ಗೊತ್ತಿದೆ ಅದು. ಕುತಂತ್ರ ನಡೆಸಿರೋದು ನೀಲಂಕಾರರ ಶಕ್ತಿ!"

ಅವಳಿಗೆ ಉಸಿರು ಕಟ್ಟಿತು.

"ಅವರು ಹಾಗೆ ಮಾಡೊ ಪ್ರಮೇಯ ಏನಿದೆ?"

"ನೀಲಂಕಾರ್ ದಂಪತಿಗಳು ನಿನಗೆ ಸ್ವಾಗತ ಕೊಟ್ಟು ಮನೇಲಿ ಚೆನ್ನಾಗಿ ಮಾತಾಡಿ ಕಳೆದ ವಾರ ಬಣ್ಣದ ನಾಟಕ ಆಡಿದ್ರು. ಇವತ್ತು ಬೆನ್ನಲ್ಲಿ ಚೂರಿ ಹಾಕಿದಾರೆ. ಅವರ ಒಬ್ಬನೇ ಮಗ ನಿನ್ನಂಥ ಸಾಮಾನ್ಯ ಹುಡುಗೀನ ಮದುವೆ ಆದ್ರೆ ಅವರಿಗೆ ನೆಮ್ಮದಿಯೆ?"

"ಎಷ್ಟು ಚೆನ್ನಾಗಿ ಮಾತಾಡಿದ್ರು !"

"ಮದುವೆ ಅಸಾಧ್ಯ ಅಂತ ತೀರ್ಮಾನ ಮಾಡಿಕೊಂಡೋರಿಗೆ ನಾಲ್ಕು ಮಾತು ಚೆನ್ನಾಗಿ ಆಡೋದಿಕ್ಕೇನು ನಷ್ಟ? ನಿನ್ನ ನಿವಾರಿಸಿಕೊಳ್ಳೋದಿಕ್ಕೆ ಅವರು ಹೂಡಿದ ತಂತ್ರ ಇದು. ನಿನ್ನ ಮೇಲೆ ಕಳ್ಳತನದ ಪಟ್ಟಿ ಹಚ್ಚೋದು. ಅದಕ್ಕೇ ಅವರು ಉದ್ದೇಶಪೂರ್ವಕವಾಗಿ ಪ್ರವಾಸ ಹೋಗಿರೋದು. ಜೊತೇಲಿ ಸಂತೋಷನ್ನ ಕರೆದೊಯ್ದಿರೋದು. ಅವರು ಬರೋ ಹೊತ್ತಿಗೆ ನಿನ್ನ ಮದುವೆ ವಿಷಯ ಬತ್ತಿ ಹೋಗಿರುತ್ತೆ."

ಬಳ್ಳನೆ ಅತ್ತಳು ಚಿತ್ರಾ. ಸ್ನೇಹಿತೆ ಸಮಾಧಾನ ಕೊಟ್ಟಳು.

"ಹೆದರಬೇಡ, ಚಿತ್ರಾ. ಅವರನ್ನ ನಾವಿಬ್ರೂ ಒಟ್ಟಾಗಿ ಎದುರಿಸೋಣ."

"ತಪ್ಪಿತಸ್ಥೆ ಅಂತ ನನಗೆ ಪಟ್ಟಿ ಹಾಕಲಾರರು."

ಬಿಕ್ಕಳಿಸಿದಳು.

"ನಾಳೆ ಅವರ ತೀರ್ಮಾನ."

ಮರುದಿನ ಹತ್ತು ನಿಮಿಷಗಳಲ್ಲಿ ಕೋರ್ಟಿನ ವಿಚಾರಣೆ ಮುಗಿಯಿತು. ವಿಚಾರಣೆಯ ಪ್ರಕಾರ ಚಿತ್ರಾ ತನ್ನ ಸೀರೆಯ ಬಾಡಿಗೆ ತೀರಿಸಲು ಗಿರಾಕಿಯ

ಹಣದಿಂದ ಆಕರ್ಷಿತಳಾಗಿದ್ದಳು. ಅವಳ ತರುಣ ವಯಸ್ಸನ್ನು ಪರಿಗಣಿಸಿದ ಕೋರ್ಟು ಉದಾರತೆ ತೋರಿತು. ಅವಳನ್ನು ಒಂದು ವರ್ಷದ ಅವಧಿಗೆ ಒಳ್ಳೆಯ ನಡತೆಯ ನಿರ್ಬಂಧದ ಮೇಲೆ ಬಿಡುಗಡೆ ಮಾಡಿತು.

ಬಿಂದು ಅವಳನ್ನು ಕಾಫಿ ಬಾರ್‌ಗೆ ಕರೆದೊಯ್ದಳು. ಚಿತ್ರಾಗೆ ಷಾಕ್ ಕಳೆದು ಅಪಮಾನ, ಭೀತಿಯ ಕಾವು ಹತ್ತಿತ್ತು.

"ಸಂತೋಷನಿಗೆ ಏನು ಹೇಳಲಿ?"

ಆತಂಕದಲ್ಲಿ ಮಲ್ಲನೆ ಕೇಳಿದಳು.

"ಅವನ ತಂದೆ, ತಾಯಿ ಎಲ್ಲಾ ಹೇಳಿರ್ತಾರೆ. ಸಂತೋಷ ನಿನ್ನ ಮರೆತುಬಿಡ್ತಾನೆ."

ನಿರ್ದಯವಾಗಿ ಉತ್ತರಿಸಿದಳು ಬಿಂದು.

"ಸಂತೋಷ ಈ ಸುಳ್ಳು ಸಂಗತಿ ನಂಬೋದಿಲ್ಲ" ಪ್ರತಿಭಟಿಸಿದಳು.

"ನಂಬದಿದ್ರೆ ಬಹಳ ಸಂತೋಷ."

"ಈಗೇನು ಮಾಡ್ಲಿ?"

"ನನ್ನೊಂದಿಗೆ ಸ್ಟೋರ್‌ಗೆ ಬಂದು ಮ್ಯಾನೇಜರ್‌ನ ಕಾಣು. ಕೆಲಸದಿಂದ ವಜಾ ಮಾಡಿದ ಕಾಗದ ಕೊಡ್ತಾನೆ. ಹೊಸ ಕೆಲಸ ಹುಡುಕೋಣ."

ಮುಚ್ಚುಮರೆ ಇಲ್ಲದೆ ಹೇಳಿದಳು.

ಕೋರ್ಟು ತೀರ್ಪು ಅರಿತಿದ್ದ ಮ್ಯಾನೇಜರ್ ಚಿತ್ರಾಳನ್ನು ಕಾಣುತ್ತಲೇ ಹೇಳಿದ.

"ಬಾಸ್ ಬಂದ ಮೇಲೆ ಕ್ರಮ ಕೈಗೊಳ್ತಾರೆ. ಫೋನ್‌ನಲ್ಲಿ ಅವರೊಂದಿಗೆ ಮಾತಾಡ್ದೆ. ಸಂಜೆಗೆ ವಾಪಸ್ ಬರ್ತಾರೆ. ನೀವು ಅವರನ್ನ ಭೇಟಿ ಮಾಡಿ"

"ಈಗ ಕೆಲಸಕ್ಕೆ ಹೋಗಲೇ?"

"ಬೇಡ, ಗಿರಾಕಿಗಳು ನಿಮ್ಮ ಕಡೆ ಸಂಶಯದಿಂದ ನೋಡ್ತಾರೆ."

ಮುಖಕ್ಕೆ ಬಾರಿಸಿದಂತಾಯಿತು. ಮಾತಿಲ್ಲದೆ ತನ್ನ ಬ್ಯಾಗ್ ಎತ್ತಿಕೊಂಡಳು. ಪಿಸುಗುಟ್ಟುತ್ತಿದ್ದ ಸೇಲ್ಸ್ ಹುಡುಗಿಯರು ಮೌನ ತಾಳಿದರು. ಕುತೂಹಲ, ಮತ್ಸರ ಮರುಕ ನೋಟ ಮಧ್ಯೆ ಹಾದು ಬಂದಳು.

ನಕ್ಷತ್ರ ಕಣ್ಣುಗಳ ಚೆಲುವೆಯ ಪತನವಾಗಿತ್ತು.

ಬಿಂದು ಮತ್ತೆ ಅವಳಿಗೆ ಸಮಾಧಾನ ನೀಡಿ ತನ್ನ ಕೆಲಸದ ವಿಭಾಗಕ್ಕೆ ಹೊರಟಳು.

ಚಿತ್ರಾ ರೆಸ್ಟೋರೆಂಟ್‌ಗೆ ಬಂದು ನಿಶ್ಶಬ್ದವಾದ ಮೂಲೆಯ ಟೇಬಲ್ ಮುಂದೆ ಕುಳಿತಳು. ಹಿಂದಿನ ರಾತ್ರಿಯಿಂದ ಏನೂ ಸೇವಿಸದಿದ್ದ ಸಂಜೆಗೆ ಬಾಸ್‌ನನ್ನು ಎದುರಿಸಲು ಶಕ್ತಿ ಬೇಕಿತ್ತು. ತಿಂಡಿ ತಿನ್ನುತ್ತಿದ್ದಾಗ ಅವಳ ಎದುರಿನಲ್ಲಿ ಯಾರೊ ಕುಳಿತರು.

"ನಿಮ್ಮೊಂದಿಗೆ ಕಾಫಿ ತೆಗೆದುಕೊಳ್ಳಬಹುದೆ?"

ಸವಿಯಾದ ಪ್ರಶ್ನೆಯಿಂದ ಚಿತ್ರಾ ತಲೆ ಎತ್ತಿದಾಗ ಕಂಡವಳು ಜ್ಯೋತಿ! ಸಂತೋಷನ ಪ್ರಥಮ ಪ್ರಿಯತಮೆ!

ಪೂರ್ಣ ಚಲನಚಿತ್ರ ನಟಿಯ ಲಕ್ಷಣ. ತಲೆಗೂದಲಿನ ವಿನ್ಯಾಸ, ಮುಖದ ಶೃಂಗಾರ, ಬಿಗಿಯಾಗಿ ಉಟ್ಟ ಸೀರೆ ಎಲ್ಲವೂ ರೂಪಸಿಯನ್ನು ಕಡೆದಿದ್ದವು. ಧ್ವನಿ ಸ್ನೇಹಯುತವಾಗಿ ಬಂತು.

"ನನ್ನ ಪರಿಚಯ ಇದೆಯಾ?"

ಪರಿಚಯ ಇಲ್ಲವಾದರೂ ಅವಳು ಯಾರು ಎಂಬುದು ಗೊತ್ತಿತ್ತು.

"ನನ್ನ ಪರಿಚಯ ಮೊದಲೇ ಆದಂತಿದೆ ನಿಮಗೆ"

ಜ್ಯೋತಿ ಕಣ್ಣು ಹೊರಳಿಸಿದಳು.

"ನಾವಿಬ್ರೂ ಬದುಕಿನ ಒಂದೇ ಹಾದಿಯಲ್ಲಿ ಹೆಜ್ಜೆ ಹಾಕಿದೋರು. ಸಂತೋಷನ ಜೊತೆಗೆ ಕಾರಿನಲ್ಲಿ, ಪಾರ್ಕಿನಲ್ಲಿ ನಿಮ್ಮನ್ನ ನೋಡಿದೀನಿ. ಸಂತೋಷ ತನ್ನ ಹುಡುಗಿಯರನ್ನ ಹೊಟೇಲಿನ ನಿರ್ದಿಷ್ಟವಾದ ಟೇಬಲ್‌ಗೆ, ಪಾರ್ಕಿನ ಒಂದೇ ಬೆಂಚಿಗೆ ಒಯ್ಯುವ ಅಭ್ಯಾಸದೋನು. ಅವನಿಗೆ ಮುಂದಿನ ಬಲಿ ಯಾರೂಂತ ನೋಡುವ ಕುತೂಹಲ ಆಯ್ತು. ನಿಮ್ಮನ್ನ ಕಂಡೆ! ಸಂತೋಷ ಏನೂ ತಿಳಿಯದ, ಸ್ವಚ್ಛಪ್ರೇಮಿಯ ಹಾಗೆ ಕಾಣ್ತಾನೆ ಅಲ್ಲವೆ?"

ಅವಳ ಪ್ರತಿಕ್ರಿಯೆ ಗಮನಿಸುತ್ತಾ ತುಟಿಯ ಬಣ್ಣದ ಮೇಲೆ ಬೆರಳಾಡಿಸಿ ಹುಬ್ಬು ತೀಡಿಕೊಂಡಳು. ಚಿತ್ರಾ ಅರ್ಧ ನಿಮಿಷ ವಿಗ್ರಹವಾಗಿ ಕುಳಿತಳು.

"ನಾನು ಸಂತೋಷನ ಮುಂದಿನ ಬಲಿಯೆ? ಹಾಗಂದ್ರೆ...?"

"ಪದ ಸ್ವಲ್ಪ ಹೊರಳಿಬಿಡ್ತು. ನೀಲಂಕಾರರ ಮುಂದಿನ ಬಲಿ ಅಂತ ಹೇಳಬೇಕಿತ್ತು... ಮಧ್ಯಾಹ್ನ ಕೋರ್ಟಿಗೆ ಬಂದಿದ್ದೆ. ಯಾರಿಗೊ ಸಾಕ್ಷಿ ಹೇಳೋದಿಕ್ಕೆ."

"ನಿಮ್ಮನ್ನ ಅಲ್ಲಿ ಕಾಣಲಿಲ್ಲ."

"ಹಿಂದೆ ಕುಳಿತಿದ್ದೆ. ನಿಮಗೆ ಕೊಟ್ಟ ತೀರ್ಪು ಕೇಳ್ದೆ."

ಅವರ ಸ್ವರದಲ್ಲಿ ಅನುಕಂಪ ಕೂಡಿತ್ತು.

"ನಾನು ಹಣ ಕದೀಲಿಲ್ಲ" ಅಳುಕು ಒತ್ತಿದಳು.

"ಕದೀಲಿಲ್ಲ, ನಿಜ ಅದನ್ನು ಯಾರು ನಂಬ್ತಾರೆ? ನಾನೊಬ್ಬಳು ನಂಬ್ತೀನಿ."

"ನೀವು ಯಾಕೆ ನಂಬಬೇಕು?"

ಜ್ಯೋತಿ ತುಟಿ ಕಚ್ಚಿ ಮೆಲ್ಲನೆ ಮೇಜು ಗುದ್ದಿದಳು.

"ನನಗೆ ನೀಲಂಕಾರ್ ದಂಪತಿಗಳ ಕುತಂತ್ರ ಚೆನ್ನಾಗಿ ಗೊತ್ತು. ಅವರಿಬ್ಬರೂ ಎಂಥ ಪಿಶಾಚಿಗಳು ಗೊತ್ತೆ? ನಾನು ಸಂತೋಷನ್ನ ಮನಸಾರೆ ಪ್ರೇಮಿಸ್ದೆ. ಬಹುಶಃ

ನೀವು ಪ್ರೀತಿಸಿರೋದಕ್ಕಿಂತ ಹೆಚ್ಚಾಗಿ ! ಅವನ ತಂದೆ, ತಾಯಿ ನನ್ನಂತ ಸಾಮಾನ್ಯ ಹುಡುಗೀನ ಮದುವೆ ಆಗೋದಿಕ್ಕೆ ಬಿಡಲಿಲ್ಲ. ನಿಶ್ಚಿತಾರ್ಥ ಆದ ಮೇಲೆ ಮದುವೇನು ಮುರಿದ ಹಾಕಿದ ಕಟುಕರು!"

ಅವಳ ಮುಖದಲ್ಲಿ ಎರಡು ತಿಂಗಳಿಂದ ಅನುಭವಿಸಿದ ನೋವು, ಅಪಮಾನ ಒಮ್ಮೆಗೇ ಕಾಣಿಸಿದವು.

"ನಿಮಗೇನು ನಡೆಸಿದ್ರು ಕುತಂತ್ರ?"

ಅರಿಯಲು ಕಾತರಿಸಿದ ವಿವರಕ್ಕಾಗಿ ನೇರ ಪ್ರಶ್ನೆ ಬಂತು.

"ನಿಮಗೆ ಮಾಡಿದ ಹಾಗೆ ನನಗೂ ಒಂದು ಕ್ಷುದ್ರ ತಂತ್ರ. ನಾನು ಎರಡು ದಿನ ಒಬ್ಬ ಯುವಕನೊಂದಿಗೆ ಹೊಟೇಲಿನಲ್ಲಿ ಕಳೆದಂತೆ ರುಜುವಾತು ಸೃಷ್ಟಿಮಾಡಿದ್ರು. ನಾನು ವಿರೋಧಿಸೋದಿಕ್ಕೆ ಆಗದ ಹಾಗೆ ಚಮತ್ಕಾರದಿಂದ ಆಧಾರಗಳನ್ನು ಜೋಡಿಸಿದ್ರು."

"ಸಂತೋಷ ಅದನ್ನೆಲ್ಲ ನಂಬಿದ್ರೆ?"

"ಚೆನ್ನಾಗಿ ನಂಬಿದ. ಅದು ಅವನ ತಪ್ಪಲ್ಲ. ನೀಲಂಕಾರ್ ಕುಟುಂಬದ ಅಸ್ತಿಗೆ ನಾನು ಹಸಿದಿದ್ದೀನಿ ಅಂತ ಅವನ ತಲೆ ಕೆಡಿಸಿದ್ರು. ನನ್ನ ಪ್ರೇಮ ಕೃತ್ರಿಮ ಅಂತ ಹತ್ತಾರು ಮಂದಿಯಿಂದ ಹೇಳಿಸಿದ್ರು. ಸಂತೋಷ ನನ್ನ ತಿರಸ್ಕರಿಸಿದ. ನೀವು ಅವನ್ನ ಕೇಳಿದ್ರೆ ನನ್ನ ವ್ಯಭಿಚಾರದ ಕಟ್ಟು ಕಥೆ ಹೇಳ್ತಾನೆ... ಸಂತೋಷನಿಗೆ ಸ್ವಬುದ್ಧಿ ಇಲ್ಲ. ಸುಳ್ಳು ಸಾಕ್ಷಿ, ಪುರಾವೆಗಳು ಸೃಷ್ಟಿ ಆದ್ವು, ಸ್ಟೋರ್ ಮುಖ್ಯಸ್ಥ, ಆ ಫೋಟಾ ಬಾಸ್, ಥಾಮಸ್ ನೀಲಂಕಾರರ ಸೂಚನೆ ಮೇಲೆ ರುಜುವಾತುಗಳು ಸೃಷ್ಟಿಸಿಕೊಟ್ಟ."

ಬೆಚ್ಚಿದಳು ಚಿತ್ರಾ!

ಥಾಮಸ್! ತನ್ನ ಪ್ರಕರಣದಲ್ಲಿ ಮೌನ ಪ್ರೇಕ್ಷಕನಂತೆ ನಿಂತಿದ್ದವನು. ಸ್ಟೋರ್‌ನ ಚಿಕ್ಕ ಬಾಸ್.

"ಆ ಚೆರಿಯನ್ ನನ್ನ ಪ್ರಕರಣದಲ್ಲಿ."

ಬೆರಳಾಡಿಸಿದಳು ಜ್ಯೋತಿ.

"ಚೆರಿಯನ್ ಕರ್ತವ್ಯನಿಷ್ಠ ಪತ್ತೇದಾರ. ಅವನ ತಪ್ಪಿಲ್ಲ. ಥಾಮಸ್ ನಿಧಾನದ್ರೋಹಿ. ನಿಮ್ಮ ಕಥೆ ಕೇಳ್ದೆ. ನನಗೆ ಸಂಬಂಧ ಇಲ್ಲವಾದ್ರೂ ನಿಮ್ಮನ್ನು ಕಂಡು ನಿಜಾಂಶ ತಿಳಿಸೋಣ ಅನ್ನಿಸ್ತು. ನೀವು ಜೋಡಿ ಪಿಶಾಚಿಗಳನ್ನ ಎದುರಿಸ್ತಾ ಇದೀರಿ. ಪಂಪಾಪತಿ ಮಹಾಧೂರ್ತ. ಅವನಿಗೆ ಬೇಕಾಗಿರೋದು ಒಂದು ರಾಷ್ಟ್ರಪ್ರಶಸ್ತಿ ಮತ್ತು ಮಗನಿಗೊಂದು ಶ್ರೀಮಂತ ವಿವಾಹ. ಅವನ ಹೆಂಡತಿ ನಾಗರತ್ನ ಸೌಮ್ಯ ಮುಖದ ಸರ್ಪಿಣಿ. ಇಬ್ಬರೂ ನಮ್ಮಂಥ ಸೊಸೇನ ಮನೆಗೆ ಬರೋದಿಕ್ಕೆ ಅವಕಾಶ ಕೊಡೋರಲ್ಲ."

"ನಮ್ಮಂತೋರು ಯಾಕೆ ಕೂಡದು?"

"ನಮ್ಮಂತ ಸೊಸೆಯಾದ್ರೆ ಅವಳ ಶೃಂಗಾರ ಬಯಲು ಮಾಡ್ತೀವಿ. ಅವಳಿಗೆ ವಯಸ್ಸಾದ ಗಂಡ ಸಿಕ್ಕಿರೋದು ನಮ್ಮಂತ ಯುವತಿಯರ ಮೇಲೆ ಕೋಪ. ಅವಳು ಯಾವತ್ತೂ ನಗೋದಿಲ್ಲ. ಸ್ವಲ್ಪ ನಕ್ಕುಬಿಟ್ರೆ ಆ ಮುಖ ಗಾಜಿನ ಹಾಗೆ ಚಟಚಟ ಒಡೆದುಹೋಗುತ್ತೆ. ಅದರ ಅಡಿಯಲ್ಲಿರೋ ಸುಕ್ಕುಗಳು ಕಣ್ಣಿಗೆ ರಾಚೊ ಹಾಗೆ ಕಾಣುತ್ವೆ."

ಮೈ ಅದುರಿಸಿದಳು ಚಿತ್ರಾ.

"ಪಂಪಾಪತಿ ಅಷ್ಟೊಂದು ಆತ್ಮೀಯತೆಯಿಂದ ಮಾತಾಡಿದ್ರು."

"ಕರಡಿಯ ಆಲಿಂಗನದ ಹಾಗೆ ಅದು. ನನ್ನೊಂದಿಗೆ ಹಾಗೆಯೇ ವರ್ತಿಸಿದ್ದ. ನನ್ನ ಮೇಲೆ ಸುಳ್ಳು ಆಪಾದನೆ ಹೊರಿಸಿದಾಗ ನನ್ನ ರಕ್ಷಣೆಗೆ ಸಾಕ್ಷಿ. ಹುಡುಕಿ ವಿರೋಧಿಸೋದಿಕ್ಕೆ ಪ್ರಯತ್ನ ಮಾಡ್ದೆ. ನನ್ನ ಜೀವನ ಹಾಳು ಮಾಡೋ ಬೆದರಿಕೆ ಹಾಕಿದ. ನಾನು ತೆಪ್ಪಗೆ ಇರಬೇಕಾಯ್ತು."

"ಸಂಜೆಗೆ ಪಂಪಾಪತೀನ ಕಾಣಬೇಕಾಗಿದೆ."

"ಕಂಡು ಪರೀಕ್ಷೆ ಮಾಡ್ಬಿಡಿ. ನನ್ನ ಹಾಗೆ ನೀವೂ ಅವನ ಮಗನ್ನ ಕಳಕೊಂಡ್ರೆ ನಿರಾಶೆಪಡಬೇಡಿ. ನನ್ನ ಹಾಗೇ ಸಂತೋಷನ್ನ ಮರೆಯೋದಿಕ್ಕೆ ಸಿದ್ಧವಾಗಿರಿ."

ಹಾರ್ದಿಕವಾಗಿ ಕೈ ಕುಲುಕಿ ಬೀಳ್ಕೊಂಡಳು ಜ್ಯೋತಿ.

ಸಂಜೆ ಆರರ ಹೊತ್ತಿಗೆ ಚಿತ್ರಾ ಪಂಪಾಪತಿಯ ಚೇಂಬರ್‌ಗೆ ಬಂದಳು. ಅವನ ಜೋಲು ಮುಖದಲ್ಲಿ ಚುಟ್ಟಾ ಇಳಿದಿತ್ತು.

"ಕೂತ್ಕೊ, ಯಾಕೆ ಹಾಗೆ ಮಾಡ್ದೇಂತ ಹೇಳು."

ಸಿಗಾರ್ ಕಚ್ಚಿದಂತೆಯೇ ಗಡುಸಾಗಿ ಕೇಳಿದ. ಅವಳು ಕುಳಿತುಕೊಳ್ಳಲಿಲ್ಲ.

"ನಾನು ಆ ಕೆಲಸ ಮಾಡ್ಲಿಲ್ಲ. ನನ್ನ ಕೈಚೀಲದಲ್ಲಿ ಯಾರೋ ಆ ನೋಟನ್ನು ಸೇರಿಸಿದ್ರು."

"ಯಾರೋ ನೋಟು ಸೇರಿಸಿದ್ರು! ಹುಚ್ಚು ಹುಚ್ಚಾಗಿ ಆಡ್ಬೇಡ. ಯಾರು ಅಂತಾ ಕೆಲಸ ಮಾಡ್ತಾರೆ?"

"ನನಗೆ ಗೊತ್ತಿಲ್ಲ."

ಚುಟ್ಟಾ ತೆಗೆದು ಮುಂದಕ್ಕೆ ಬಾಗಿ ಹುಬ್ಬು ಗಂಟೇರಿಸಿದ .

"ನನಗೆ ಗೊತ್ತಾಗಿರೋದು ಇಷ್ಟು. ನೀನು ತಪ್ಪಿತಸ್ಥೆ ಅಂತ ಕೋರ್ಟು ತೀರ್ಮಾನಿಸಿದೆ. ಪೊಲೀಸ್‌ಗೆ, ಕೋರ್ಟಿಗೆ ನಿನ್ನ ಮೇಲೆ ದ್ವೇಷ ಇಲ್ಲ. ಇನ್ನೂ ಎಷ್ಟೋ ವರ್ಷ ಬದುಕಬೇಕಾದೋಳಿಗೆ ಈ ಕೆಟ್ಟ ಬುದ್ಧಿ ಯಾಕೆ ಬಂತು?"

"ನಾನು ಹಣ ಕದೀಲಿಲ್ಲ."

ನಿಖರವಾಗಿ ನುಡಿದಳು. ಅವನು ತಾಳ್ಮೆಗೆಟ್ಟು ಕುರ್ಚಿಯಲ್ಲಿ ಹೊರಳಿದ.

"ಇದು ಮುಗಿದ ವಿಷಯ. ಪರಿಣಾಮ ಗೊತ್ತೇನು?"

ಚಿತ್ರಾ ಬಿಗಿಯಾಗಿ ನಿಂತಳು.

"ಕೆಲಸದಿಂದ ವಜಾ. ಆದು ನಿರೀಕ್ಷಿಸಿದ್ದೇ."

"ನಿನ್ನ ನಿರೀಕ್ಷೆ ಸುಳ್ಳಾಗೋದಿಲ್ಲ. ಅದು ನಮ್ಮ ಸಂಸ್ಥೆಯ ಕಾನೂನು. ಸಂತೋಷ ಏನೇ ಹೇಳಿದ್ರೂ ಈ ವಿಷಯದಲ್ಲಿ ನಾನು ಬಹಳ ಕಟ್ಟುನಿಟ್ಟು."

ಅವಳ ಹೃದಯ ತುಸು ಕದಲಿತು.

"ಏನು ಹೇಳಿದ್ರು ಸಂತೋಷ?"

"ನಿಂತೇ ಇದ್ದೀಯ. ಕೂತ್ಕೊ ಅಂದೆ."

ಅವಳ ಕುಳಿತಳು.

"ಸಂತೋಷ ಏನೂ ಹೇಳ್ಲಿಲ್ಲ. ನನಗೆ ಕಾರ್ಯದರ್ಶಿಯಿಂದ ಫೋನ್ ಬಂದಾಗ ಸಂತೋಷ ತಾಯಿ ಜೊತೆಯಲ್ಲಿ ಹೊರಗೆ ಹೋಗಿದ್ದ. ನಾನು ಹೊರಟು ಬರೋದಿಕ್ಕೆ ಮೊದಲು ನಿನ್ನ ಮೇಲೆ ಕಳ್ಳತನದ ಆಪಾದನೆ ಬಂದಿದೆ ಅಂತ ಚೀಟಿ ಬರೆದಿಟ್ಟು ಬಂದೆ. ಸಂತೋಷ ನಾಳೆ ಬರ್ತಾನೆ."

"ಸಂತೋಷ ನಿಮ್ಮನ್ನ ತಡೆಯೋದಿಕ್ಕೆ ಮೊದಲು ನನ್ನ ಕೆಲಸದಿಂದ ತೆಗೆದುಹಾಕಬೇಕೂಂತ ಇದ್ದೀರಿ."

"ಅವಳು ರೋಸಿ ನುಡಿದಳು. ಬಾಸ್ ತಲೆ ಹಾಕಿದ."

"ನಿನಗೆ ಮಾರುಹೋದ ಸಂತೋಷ ನಿನ್ನ ಪರವಾಗಿ ಚರ್ಚೆ ಮಾಡ್ತಾನೆ. ಅವನಿಗಾಗಿ ಸಂಸ್ಥೆ ಕಾನೂನು ಸಡಿಲವಾಗೋದಿಲ್ಲ. ನಾನು ವಿಷಾದಪಡ್ತೀನಿ. ನೀನು ಹೋಗಲೇಬೇಕು."

"ನಿರಾಶೆಗೊಂಡಂತೆ ಕಾಣಿಸಿದ."

"ಸಂತೋಷನ್ನ ನಾನು ಬಿಟ್ಟುಬಿಡಲಿ ಅಂತ ನಿಮ್ಮ ಇಚ್ಛೆ."

"ಮತ್ತೇನು ಮಾಡ್ತೀಯ?"

"ಅವರನ್ನು ಬಿಡೋದಿಲ್ಲ. ಅವರೂ ನನ್ನ ಬಿಡೋರಲ್ಲ."

"ವಿಚಿತ್ರ ಪ್ರೀತಿ ! ನೀನು ಅಪರಾಧಿಯೊ, ನಿರಪರಾಧಿಯೋ ಗೊತ್ತಿಲ್ಲ. ನಿನಗೆ ಕಳ್ಳತನಕ್ಕಾಗಿ ಶಿಕ್ಷೆ ಆಗಿದೆ. ನನ್ನ ಮಗ ನಿನ್ನ ಮದುವೆ ಆದ್ರೆ ಅವನ ಹೆಸರು, ಸಂಸ್ಥೆಯ ಕೀರ್ತಿ ಎರಡೂ ಹಾಳಾಗುತ್ತೆ ."

" ಈಗ ನನ್ನ ಜೀವನ ಹಾಳಾಗಿದೆ !... ಆ ಹಣ ನನ್ನ ಚೀಲಕ್ಕೆ ಸೇರಿಸಿದ್ರು. ಯಾರೋ ನನ್ನ ಬದುಕನ್ನ ನಾಶ ಮಾಡೋದಿಕ್ಕೆ ಕಾದಿದಾರೆ."

“ಹುಚ್ಚುಮಾತು ! ಇನ್ನ ಹೆಚ್ಚಿನ ಚರ್ಚೆ ಬೇಡ. ನಿನಗೆ ಆರು ತಿಂಗಳು ಸಂಬಳ ಕೊಡಲಾಗುತ್ತೆ.”

ಚಿತ್ರಾ ಕುಪಿತಳಾಗಿ ಎದ್ದಳು.

“ಮಿಸ್ಟರ್ ಪಂಪಾಪತಿ, ನಿಮ್ಮ ಕೆಟ್ಟ ಹಣ ನನಗೆ ಬೇಕಾಗಿಲ್ಲ!”

ನಿನಗೆ ಸಂತೋಷನೂ ಸಿಗೋದಿಲ್ಲ.

ಪಂಪಾಪತಿ ಎದ್ದು ಬಾಗಿಲು ತೆರೆದು ಹಿಡಿದು ಬಿರುಸಾಗಿ ಅಣತಿ ಕೊಟ್ಟ.

“ಗೆಟ್ ಔಟ್ ! ಈ ಸ್ಟೋರ್‌ನಿಂದ, ನನ್ನ ಮಗನಿಂದ ದೂರ ಇದ್ದು ಬಿಡು. ಇಲ್ಲವಾದ್ರೆ, ನಿನಗೆ ಅಪಾಯ ತಪ್ಪಿದ್ದಲ್ಲ.”

೩

ಚಿತ್ರಾ ತನ್ನ ವಾಸದ ಕೋಣೆಗೆ ಹಿಂತಿರುಗಿದಾಗ ಜ್ಯೋತಿ ಹೇಳಿದುದು ನಿಜ ಎನಿಸಿತು. ಇದೆಲ್ಲಾ ಪಂಪಾಪತಿಯ ಜಾಲ!

ಟೀ ತಯಾರಿಸಲು ಒಲೆಯು ಮೇಲೆ ನೀರಿಟ್ಟಳು. ಕಳೆದ ತಾಸಿನಲ್ಲಿ ಅವಳ ಕನಸಿನ ಪ್ರಪಂಚ ಬಿರುಕು ಬಿಟ್ಟಿತ್ತು. ಅದನ್ನು ಸರಿಪಡಿಸುವುದು ಸಂತೋಷನನ್ನು ಅವಲಂಬಿಸಿತ್ತು. ತಂದೆಯ ನಿರ್ಧಾರಕ್ಕೆ ವಿರೋಧವಾಗಿ ಅವನು ತನ್ನಲ್ಲಿಗೆ ಬರುವನೆ? ಜ್ಯೋತಿಯನ್ನು ಕೈಬಿಟ್ಟಂತೆ ತನ್ನ ಬಗೆಗೆ ನಿರ್ದಯನಾಗುವನೆ? ಅವನಿಗೆ ಪ್ರಣಯ ವ್ಯವಹಾರದಲ್ಲಿ ಮತ್ತೆ ತಪ್ಪು ಮಾಡಿರುವೆ ಎನಿಸಿರಬೇಕು.

ಹೊರಗೆ ಕಾರು ನಿಂತಿತು. ಕಿಟಕಿಯಿಂದ ನೋಡಿದಾಗ ಸಂತೋಷ ಇಳಿದು ಬರುತ್ತಿದ್ದ ! ಹಿಡಿದ ಟೀ ಕಪ್ ಕಂಪಿಸಿತು. ಮುಂದಿನ ಕೆಲವು ನಿಮಿಷಗಳಲ್ಲಿ ನಿರ್ಧಾರಗೊಳ್ಳಲಿದ್ದ ಅದೃಷ್ಟಕ್ಕಾಗಿ ಕಾತರಿಸಿದಳು.

ಬಾಗಿಲು ತಟ್ಟಿ ಒಳಬಂದ ಶ್ರೀಮಂತನ ಮಗ.

“ಚಿತ್ರಾ ಡಾರ್ಲಿಂಗ್.”

ನಯವಾದ ಕರೆ, ತಾಸಿನ ಹಿಂದೆ ನಡೆದ ಕಹಿ ಘಟನೆಗೆ ತೆರೆ ಹಾಕಿತು. ಗಂಟಲು ಒತ್ತಿ ಬಂದ ಕುಸುಕು ಅಳುವಿನಲ್ಲಿ ಅವನ ತೋಳ ಬಂದಿನಿಯಾದಳು.

“ನಾನು ಆ ಕೆಲಸ ಮಾಡ್ಲಿಲ್ಲ, ಸಂತೋಷ. ನಿಜಕ್ಕೂ ಮಾಡ್ಲಿಲ್ಲ.”

ಅವಳ ಬೆನ್ನು ಸವರಿದ.

“ನೀನು ಮಾಡ್ಲಿಲ್ಲ. ಡ್ಯಾಡಿಯ ಚೀಟಿ ನೋಡಿದ ಕೂಡ್ಲೆ ಏನೋ ಅನ್ಯಾಯ ಆಗಿದೇಂತೆ ತಿಳಿದೆ. ತಕ್ಷಣ ಹೊರಟು ಬಂದೆ.”

“ನೀವು ತಂದೇನ ಇನ್ನೂ ಭೇಟಿ ಆಗಿಲ್ಲವೆ?”

“ಇಲ್ಲ, ಏರ್‌ಪೋರ್ಟ್‌ನಲ್ಲಿ ಇಳಿದ ಕೂಡ್ಲೆ ಫೋನ್ ಮಾಡ್ದೆ. ನೀನು ಡ್ಯಾಡೀನ

ಕಂಡು ಹೊರಟುಹೋದೇಂತೆ ಡ್ಯಾಡಿಯ ಕಾರ್ಯದರ್ಶಿ ತಿಳಿಸಿದ. ನೇರವಾಗಿ ನಿನ್ನಲ್ಲಿಗೆ ಬಂದೆ, ಡಿಯರ್."

ಅವಳ ಮುಖ ತನ್ನ ಕಡೆ ತಿರುಗಿಸಿದ. ಅವನ ಕಣ್ಣುಗಳಲ್ಲಿ ತುಂಬಿದ್ದ ಆತ್ಮೀಯತೆ, ಕಾತರ ಅವಳಿಗೆ ಅರ್ಥವಾಯಿತು.

ಮೇಜಿನ ಮೇಲಿದ್ದ ಕಪ್‌ನಿಂದ ಸಾಸರ್‌ಗೆ ಟೀ ಸುರಿದು ತುಟಿಗೆತ್ತಿ ಕಪ್ ಅವಳಿಗೆ ನೀಡಿದ.

"ನಿನ್ನ ಮೇಲೆ ಕಳ್ಳತನದ ಆಪಾದನೆ ಬಂದಿದ್ದು ಡ್ಯಾಡಿಯ ಚೀಟಿಯಿಂದ ಗೊತ್ತಾಯ್ತು. ಕೋರ್ಟು ನಿನ್ನ ತಪ್ಪಿತಸ್ಥೆ ಅಂತ ತೀರ್ಮಾನಿಸಿದ್ದು ಈಗ ಫೋನ್‌ನಲ್ಲಿ ಕೇಳ್ದೆ."

"ನಾನೂ ಅಷ್ಟೇ ಹೇಳೋದು. ನಾನು ಕಳ್ಳತನ ಮಾಡ್ಲಿಲ್ಲ. ನಿಮ್ಮ ತಂದೆಗೆ ನಂಬಿಕೆ ಬರ್ಲಿಲ್ಲ. ನನ್ನ ಕಳಿಸಿಬಿಟ್ರು."

ಅವನ ಮುಖಭಾವ ಅಚಲವಾಗಿತ್ತು. ತಂದೆಯ ವರ್ತನೆಯಿಂದ ಅವನು ತಿರಸ್ಕಾರ, ಕೋಪ ತೋರುವನೆಂದು ನಿರೀಕ್ಷಿಸಿದವಳಿಗೆ ನಿರಾಶೆಯಾಗಿತ್ತು.

"ಸಂಸ್ಥೆಯ ಕಾನೂನು ಪ್ರಕಾರ ಅವರು ಹಾಗೆ ಮಾಡಲೇಬೇಕು. ಸಿಬ್ಬಂದಿಯವರ ಮೇಲಿನ ಬಿಗಿ ಸಡಿಲವಾಗಬಾರದಷ್ಟೆ."

"ಚಕಿತಗೊಂಡಳು ಚಿತ್ರಾ."

"ನನಗೆ ಅನ್ಯಾಯ ಆಗಲಿಲ್ಲವೆ?"

ಅವನ ಮಾತು ಮತ್ತಷ್ಟು ನಯವಾಯಿತು.

"ನಿನ್ನ ಮನಸ್ಸಿಗೆ ಬೇಜಾರಾಗಿದೇಂತ ಬಲ್ಲೆ. ನನ್ನ ಡ್ಯಾಡೀನ ಸುಮ್ಮನೆ ದೂಷಿಸಬಾರದು, ಚಿತ್ರಾ. ಏನು ಅಚಾತುರ್ಯ ನಡೆದಿದೇಂತ ನಾನು ವಿಚಾರಿಸ್ತೀನಿ."

"ಅದು ನಿಮ್ಮಿಂದ ಸಾಧ್ಯವಾಗದೇ ಹೋದರೆ?"

"ಸಾಧ್ಯವಾಗದೇ ಹೋದರೆ ನಾವಿಬ್ರೂ ಸತ್ಯ ಬಯಲಾಗುವವರೆಗೆ ಕಾದಿರಬೇಕು."

"ಅಲ್ಲಿ ತನಕ ನಮ್ಮ ಮದುವೆ ಆಗೋಹಾಗಿಲ್ಲ? ನಿಮ್ಮ ತಂದೆ, ತಾಯಿ, ಸ್ಟೋರ್ ಸಿಬ್ಬಂದಿ ನನ್ನ ಕಳ್ಳಿ ಅಂತ ತಿಳಿದಿರೋವಾಗ ನಮ್ಮ ಮದುವೆ ಹೇಗೆ ಸಾಧ್ಯ?"

"ಡ್ಯಾಡಿ ಜೊತೇಲಿ ಸಿಬ್ಬಂದಿಯೊಂದಿಗೆ ಮಾತಾಡ್ತೀನಿ."

ನಿರಾಶೆಯ ಹೊರೆಯ ತಳಕ್ಕೆ ಸಿಕ್ಕಿದವಳಿಗೆ ಅಳು ಬಂತು.

"ಪ್ರಯತ್ನ ಮಾಡ್ಬೇಡಿ. ಅದರಿಂದ ಪ್ರಯೋಜನ ಇಲ್ಲ. ನಾವಿಬ್ರೂ ಪರಸ್ಪರ ಮರೆತುಬಿಡೋಣ."

ಅವಳನ್ನು ಒತ್ತಿ ಹಿಡಿದ.

"ನಿಮ್ಮಿಬ್ಬರನ್ನು ಬೇರ್ಪಡಿಸೋದು ಯಾರಿಗೂ ಸಾಧ್ಯವಿಲ್ಲ."

ನಕ್ಷತ್ರ ಕಣ್ಣುಗಳಲ್ಲಿ ಭೀತಿ ಕಾಣಿಸಿತು.

"ನಿಮ್ಮ ಪ್ರಣಯ ವ್ಯವಹಾರಗಳು ಯಾಕೆ ಹೀಗೆ ನಿಷ್ಫಲವಾಗ್ತಾ ಇದೇಂತ ನಿಮಗೆ ಆಶ್ಚರ್ಯ ಆತಂಕ ಆಗಿಲ್ಲವೆ?"

"ವಿಷಯವನ್ನು ಹಗುರವಾಗಿ ಪರಿಗಣಿಸಿದ,

"ಹಾಗೇನೂ ಆಗಿಲ್ಲ. ನಿಜವಾದ ಪ್ರೇಮದ ಹಾದಿಯಲ್ಲಿ ಮುಳ್ಳುಗಳು ಇರುತ್ತೇಂತ ಮಾತ್ರ ಕೇಳಿದೀನಿ."

"ನಾನು ಜ್ಯೋತೀನ ಭೇಟಿ ಮಾಡಿದ್ದೆ..."

ಗಾಬರಿಯಿಂದ ಮತ್ತೆ ತಿದ್ದಿದಳು.

"ಉಹುಂ, ಜ್ಯೋತಿ ರೆಸ್ಟೋರೆಂಟ್‌ನಲ್ಲಿ ಸಿಕ್ಕಿದ್ಲು."

ಅವನ ಹುಬ್ಬುಗಳು ಗಂಟೇರಿದವು.

"ಜ್ಯೋತಿಯ ವಿಷಯ ನಾವು ಮಾತಾಡೋದು ಬೇಡ."

"ಸಂಬಂಧಪಟ್ಟ ವಿಷಯ. ಆದ್ದರಿಂದ ಮಾತಾಡೋದು ಒಳ್ಳೇದು. ಅವಳು ನೀತಿಗೆಟ್ಟೋಳು ಅಂತ ಸಾಧಿಸೋದಿಕ್ಕೆ ನಿಮ್ಮ ತಂದೆ, ತಾಯಿ ಸುಳ್ಳು ವಿವರ ಸೃಷ್ಟಿ ಮಾಡಿದ್ರಂತೆ."

"ಸುಳ್ಳು!"

ಬಿರುಸು ಧ್ವನಿಯೊಂದಿಗೆ ಮುಖದ ರಂಗು ಬದಲಿಸಿತು.

"ಸುಳ್ಳೇ ಆಗಿರಬಹುದು. ಅದರಂತೆ ನಾನೂ ಒಂದು ಜಾಲಕ್ಕೆ ಸಿಕ್ಕಿಬಿದ್ದೆ. ಅವಳ ಹಾಗೇ ವಿರೋಧ ತೋರಿಸೋದಿಕ್ಕೆ ಆಗದೇ ಉಳಿದಿದೀನಿ. ಬಹುಶಃ ನಿಮ್ಮ ತಂದೆ ತಾಯಿಗೆ ಜ್ಯೋತಿಯ ಹಾಗೇ ನನ್ನನ್ನೂ ನಿವಾರಿಸಿಕೊಳ್ಳೋ ಚಿಂತೆ ಹತ್ತಿರಬೇಕು."

ಅವಳಿಂದ ಸರಿದು ನಿಂತು ಬೇಸರದಿಂದ ಮುಖ ಅಲುಗಿಸಿದ.

"ಜ್ಯೋತಿ ಹೆಣ್ಣಲ್ಲ. ಹೆಣ್ಣು ರೂಪದ ಪಿಶಾಚಿ! ಅವಳ ಮಾತು ಯಾಕೆ ಅಷ್ಟೊಂದು ತಲೆಗೆ ಹಚ್ಕೊಂಡೆ? ನಮ್ಮ ತಂದೆ, ತಾಯಿ ಅಂಥ ನೀಚ ಕೆಲಸಕೆ ಕೈ ಹಾಕೋರಲ್ಲ."

"ನನ್ನ ಚೀಲದಲ್ಲಿ ನೋಟು ಯಾರೋ ಸೇರಿಸಿದ್ರು" ನಿಖರವಾಗಿ ನುಡಿದಳು.

"ಇರಬಹುದು" ಅವಳತ್ತ ನೋಡಲಿಲ್ಲ.

"ಅದು ಯಾರ ಕೈವಾಡ ಅನ್ನೋದು ಗೊತ್ತಿಲ್ಲ. ಜ್ಯೋತಿ ಆಗುತ್ಲೇ ನನ್ನ ಮೇಲೆ ಸುಳ್ಳು ಆಪಾದನೆ ಅಂದರೆ ವಿಚಿತ್ರ ಅಲ್ಲವೆ?"

ಬಾಗಿಲ ಕಡೆಗೆ ನಡೆದು ಮತ್ತೆ ಕುತ್ತಿಗೆ ಸಮರುತ್ತಾ ಹಿಂದಕ್ಕೆ ಬಂದ.

"ನಿನ್ನ ಮನಸ್ಸು ರೋಸಿದೆ. ಆಘಾತ ತಟ್ಟಿದ ಮೇಲೆ ಹೀಗೇ ಆಗೋದು. ನೀನು ಹೇಳಿದ್ದು ನನ್ನ ತಲೆಗೆ ತುಂಬಿಕೊಳ್ಳೋದಿಲ್ಲ."

"ಆದರೆ ನಾನು ಅದೆಲ್ಲಾ ತಲೆಯಿಂದ ದೂರ ಮಾಡೋದಿಲ್ಲ."

ಪ್ರತಿಭಟನೆಯ ಗಡಸು ಉತ್ತರದಿಂದ ಬೇಸರಿಸಿದ.

"ನನಗೆ, ನಿನ್ನ ಹಿರಿಯರಿಗೆ ಅಪಮಾನ ಮಾಡ್ತಾ ಇದ್ದೀಯ. ಅವರು ತೋರಿಸಿದ ಪ್ರೀತಿ, ಆತಿಥ್ಯಕ್ಕೆ ಅಪಾರ್ಥ ಮಾಡ್ತಿದ್ದೀಯ."

ಅವನ ನಿರಂತರ ಸಹನೆ ಅವಳಿಗೆ ಕಣ್ಣೀರು ತಂದಿತು.

"ನನ್ನ ಮೇಲೆ ಸುಳ್ಳು ಆರೋಪಣೆ ಬಂತು. ನಿಮ್ಮ ಹಿಂದಿನ ಪ್ರಿಯ ತಮಗೂ ಹಾಗೆ ಆಯ್ತು."

"ಹೇಳಿದ್ದೆಲ್ಲಾ ಮತ್ತೆ ಹೇಳ್ತಾ ಇದ್ದೀಯ. ನನ್ನ ಡ್ಯಾಡಿ, ಮಮ್ಮಿ ನಿನ್ನ ಮೇಲೆ ಆರೋಪಣೆ ತಂದ್ರೇನು.?"

"ಇಲ್ಲ, ಆದರೆ..."

"ಅವರು ಜ್ಯೋತಿಯ ಮೇಲೂ ತಪ್ಪು ಹೊರಿಸ್ಲಿಲ್ಲ. ನನ್ನ ಮಾತು ಕೇಳು, ಚಿತ್ರಾ. ನನ್ನ ತಂದೆ, ತಾಯಿ ಬಹಳ ಗೌರವಸ್ಥರು. ಯಾರನ್ನೂ ನೋಯಿಸಿದೋರಲ್ಲ. ನಾನು ಸುಳ್ಳು ಹೇಳ್ತೀನಿ ಅಂತ ಭಾವಿಸ್ತೀಯಾ? ನನ್ನ ಮಾತಿನಲ್ಲಿ ನಂಬಿಕೆ ಇದೆಯೋ, ಇಲ್ಲವೋ ಮನಃಪೂರ್ವಕವಾಗಿ ಹೇಳು."

ಅವಳ ಭುಜಗಳನ್ನು ಅಲುಗಿಸಿದ.

ಇಬ್ಬರ ನಡುವಿನ ಪ್ರೀತಿ, ಆತ್ಮೀಯತೆ ಅವಳ ಉತ್ತರವನ್ನು ಅವಲಂಬಿಸಿತ್ತು. ಅವನನ್ನು ಕಳೆದುಕೊಳ್ಳಲಾಗದು.

"ನಿಮ್ಮ ಮಾತಿನಲ್ಲಿ ನಂಬಿಕೆ ಇದೆ, ಸಂತೋಷ್" ಕಣ್ಣು ಮುಚ್ಚಿ ಉಸುರಿದಳು ಅವಳನ್ನು ಅವಚಿ ಹಿಡಿದ.

"ಮತ್ತೆ ಹೀಗೆಲ್ಲಾ ಮಾತಾಡ್ಬೇಡ. ನಿನ್ನ ಮೇಲಿನ ಪ್ರೀತಿ ಬೇರೆ, ನನ್ನ ತಂದೆ ತಾಯಿಗಳ ಮೇಲಿನ ಪ್ರೀತಿ ಬೇರೆ. ಅವರ ಮೇಲೆ ನೀನು ಸಂಶಯಪಟ್ಟರೆ, ನಿನ್ನ ಮೇಲೆ ನಾನು ಸಂಶಯಪಡಬೇಕು. ಅದಕ್ಕೆಲ್ಲಾ ಆಸ್ಪದ ಕೊಡೋದು ಬೇಡ."

ಅವಳು ಲಘುವಾಗಿ ಕಂಪಿಸಿದಳು. ತಾನು ಆಡಿದುದು ಸುಳ್ಳು ! ಸಂತೋಷ ನನ್ನ ಕಳೆದುಕೊಳ್ಳಲಾಗದೆ ಆಡಿದ ನಾಟಕ !

ಮತ್ತಷ್ಟು ನಯವಾಗಿ ಹೇಳಿದ.

"ನಡೆದಿರೋ ಘಟನೆ ನಿನ್ನ ಸುತ್ತಲೂ ಹತ್ತಾರು ನೆರಳುಗಳನ್ನು ಸೃಷ್ಟಿಸಿವೆ.

ಶತ್ರುಗಳೇ ಹೆಚ್ಚಾಗಿ ಕಾಣ್ತಾರೆ. ದೃಷ್ಟಿ ತಿಳಿಯಾಗಿರಲಿ..."

ಬಾಗಿಲು ಟಕ್ಕನೆ ತೆರೆಯಿತು. ಇಬ್ಬರೂ ಬೆಚ್ಚಿದರು. ಸೌಜನ್ಯ ಮರೆತು ಏಕಏಕಿ ಒಳ ಬಂದ ಬಿಂದು ಅವನನ್ನು ಮೊನಚಾಗಿ ನೋಡಿದಳು.

"ಏನಾಗಿದೆ ನಿನಗೆ?"

ಚಿತ್ರಾ ಅವಳ ವರ್ತನೆ ಸಹಿಸದೆ ಕೇಳಿದಳು.

"ನನ್ನನ್ನೂ ಕೆಲಸದಿಂದ ವಜಾ ಮಾಡಿಬಿಟ್ರು. ನೀಲಂಕಾರ್ ಒಡೆಯರ ವರ್ತನೆ ಬಗ್ಗೆ ನಾನು ಹೇಳ್ತಾ ಇದ್ದಾಗ ಸ್ವಯಂ ಪಂಪಾಪತಿ ನನ್ನ ಮಾತು ಕೇಳಿಸಿಕೊಂಡ್ರು."

ಸಂತೋಷ ತಣ್ಣಗಾಗಿ ನಿಂತ. ಆವರೆಗೆ ಚಿತ್ರಾಳೊಂದಿಗೆ ಆಡಿದ ಮಾತುಗಳು ವ್ಯರ್ಥ!

"ಕಾರಣವಿಲ್ಲದೆ ಡ್ಯಾಡಿ ವಜಾ ಮಾಡೋದಿಲ್ಲ."

ಪ್ರತಿಭಟನೆ ಮೆದುವಾಗಿತ್ತು. ಬಿಂದು ಅವನ ಮುಂದೆ ನಡುವಿಗೆ ಕೈ ಇಟ್ಟು ನಿಂತಳು. ಹಸಿರು ಕಣ್ಣುಗಳು ಪಕ ಪಕ ಆಡಿದವು.

"ಪಂಪಾಪತಿ ತನ್ನ ಮಗನ್ನ ಚಿತ್ರಾಳಿಂದ ದೂರ ಇಡೋದಿಕ್ಕೆ ಯಾವ ಕೀಳು ಮಟ್ಟಕ್ಕಾದರೂ ಇಳಿಯಬಲ್ಲರು. ಆ ಮಗನಿಗೆ ತಂದೆಯ ಕುತ್ಸಿತ ವರ್ತನೆಯನ್ನು ಪ್ರಶ್ನೆ ಮಾಡುವ ಶಕ್ತಿ ಇಲ್ಲ."

ಸಂತೋಷನ ಮುಖದ ರಂಗು ಮಾಯವಾಯಿತು.

"ಸಾಕು ನಿಲ್ಸಿ ! ನನ್ನ ತಂದೆ ಮೇಲೆ ಚಿತ್ರಾಗೆ ಇಲ್ಲದ್ದೆಲ್ಲಾ ಹೇಳಿಕೊಟ್ಟೋರು ನೀವೇನಾ?"

"ಹೌದು, ನಾನೇ. ಮೊದಲು ಅವಳು ನಂಬ್ತಾ ಇರ್ಲಿಲ್ಲ. ಕೆಲಸದಿಂದ ವಜಾ ಆದ ಮೇಲೆ ಚೆನ್ನಾಗಿ ಅರ್ಥವಾಗಿದೆ."

ಅವನ ಸಹನೆ ಕುಗ್ಗಲಿಲ್ಲ.

"ಎಚ್ಚರತಪ್ಪಿ ಮಾತಾಡ್ತಾ ಇದೀರಿ. ನನ್ನ ತಂದೆ ಗೌರವಸ್ಥರು ಅನ್ನೋದು ಚಿತ್ರಾಗೆ ಗೊತ್ತಿದೆ. ಕೀಳು ಶಬ್ದಗಳನ್ನು ನನ್ನ ತಂದೆ ಮೇಲೆ ಬಳಸಿದ್ದಕ್ಕೆ ನಿಮ್ಮನ್ನ ವಜಾ ಮಾಡಿರೋದು ಸರಿ ಅಂತ ಅವಳೂ ಒಪ್ತಾಳೆ. ತಂದೆಯ ಸ್ಥಾನದಲ್ಲಿ ನಾನೂ ಇದ್ದಿದ್ರೂ ಅದೇ ಕೆಲಸ ಮಾಡ್ತಿದ್ದೆ."

ಮತ್ತಷ್ಟು ತೀಕ್ಷ್ಣಗೊಂಡ ಬಿಂದು ಗೆಳತಿಯ ಕಡೆಗೆ ಸರಕ್ಕನೆ ತಿರುಗಿದಳು.

"ಕೇಳಿದೆಯಾ, ಚಿತ್ರಾ. ನಿನಗೆ ನೀಲಂಕಾರರು ಮಾಡಿದ ಅನ್ಯಾಯ ಕಂಡು ನಾನು ಮನಸ್ಸಿನಲ್ಲಿ ಇದ್ದದ್ದು ಹೊರಹಾಕಿದ್ದು ತಪ್ಪೆ? ಹೇಳು, ಸರಿಯೋ, ತಪ್ಪೊ?"

ವಿಗ್ರಹವಾಗಿ ನಿಂತಳು ಚಿತ್ರಾ. ಯಾರ ಮಾತು ಸರಿ ಎಂದು ತಿಳಿಸುವುದು?

ಪರಿಸ್ಥಿತಿಯಿಂದ ಹೊರಬರಲು ಯತ್ನಿಸಿದಳು.

"ಇಬ್ರೂ ಮಾತು ನಿಲ್ಲಿಸಿದರೆ ಸಾಕು. ನನಗೆ ಆಯಾಸ ಆಗಿದೆ."

ಬಿಂದು ಮೊಂಡಾದಳು.

"ನನಗೂ ಆಯಾಸ ಆಗಿದೆ. ನಿನ್ನ ಪರವಾಗಿ ನಿಂತು ನಾನು ಮಾತಾಡ್ತಾ ಇದ್ರೆ ಸರಿ, ತಪ್ಪು ಯಾವುದೂ ಹೇಳದೆ ತಮಾಷೆ ನೋಡ್ತಾ ಇದೀಯಾ?"

ಚಿತ್ರಾ ಅಸಹಾಯಕಳಾಗಿ ಅವನತ್ತ ನೋಡಿದಳು. ಅವಳ ಉತ್ತರಕ್ಕೆ ಅವನೂ ಕಾದಿದ್ದ. ಕಡೆಗೆ ತುಯ್ದಾಟದ ತಂತಿಯನ್ನು ಹರಿದಳು.

"ಬಿಂದು ಹೇಳಿದ್ದು ಸರಿ, ಸಂತೋಷ. ನಿಮ್ಮ ತಂದೆ ನನಗೆ ಅನ್ಯಾಯ ಮಾಡಿದ್ದು..."

ಸಿಡಿಲು ಬಾರಿಸಿತ್ತು. ಅವಾಕ್ಕಾಗಿ ತುಟಿ ಕಂಪಿಸಿದ.

"ಈಗತಾನೆ ನೀನು ಹೇಳಿದ್ದು..."

"ಹೇಳಿದ್ದು ಸುಳ್ಳು! ನಿಮ್ಮ ತಂದೆ, ತಾಯಿ ಬಗ್ಗೆ ನಿಮ್ಮ ಮಾತಿನಲ್ಲಿ ನಂಬಿಕೆ ಇದೇಂತ ಹೇಳಿದ್ದು ಸರಾಸರಿ ಸುಳ್ಳು ! ಹಾಗೆ ಹೇಳಿದ್ದು ನಿಮ್ಮನ್ನ ಉಳಿಸಿಕೊಳ್ಳೋದಿಕ್ಕೆ. ಈ ಗೊತ್ತಾಯ್ತು. ನಿಮ್ಮನ್ನ ಉಳಿಸಿಕೊಳ್ಳಲಾರೆ ಅಂತ."

ಅವಳಿಗೆ ಅಳು ಬಂತು.

"ಅಂದ್ರೆ ನಮ್ಮಿಬ್ಬರ ಮಧ್ಯೆ ಎಲ್ಲಾ ಮುಗಿದುಹೋಯ್ತು!"

ಮೆಲ್ಲನೆ ಉಲಿದ. ಅವಳು ಪ್ರತಿ ಆಡಲಿಲ್ಲ. ಇನ್ನೂ ತಾಳ್ಮೆ ಉಳಿಸಿಕೊಂಡುದು ಅವನಿಗೆ ಅಚ್ಚರಿ.

ಬಿಂದು ಮಧ್ಯೆ ನುಡಿದಳು.

"ಚಿತ್ರಾ ಇನ್ನೂ ಚಿಕ್ಕೋಳು. ಅವಳ ತಾಯಿ ಅವಳನ್ನು ನೋಡಿಕೊಳ್ಳೋ ವಿಷಯ ನನಗೆ ಒಪ್ಸಿದಾಳೆ. ನಿಮ್ಮ ತಂದೆ ಅವಳೊಂದಿಗೆ ವರ್ತಿಸಿದ ಹಾಗೆ ನಾನು ವರ್ತಿಸೋ ಹಾಗಿಲ್ಲ."

ಅಪಮಾನ ಸಹಿಸಿದ ಶ್ರೀಮಂತ ಪ್ರೇಯಸಿಯನ್ನು ಯಾಚಕನಂತೆ ದಿಟ್ಟಿಸಿದ ಚಿತ್ರಾ ಅವನ ನಿರೀಕ್ಷೆಗೆ ಬರಲಿಲ್ಲ. ಮುಖ ತಿರುಗಿಸಿ ಬಾಯಿಗೆ ಕೈಯಿಟ್ಟು ನುಡುದಳು.

"ಎಲ್ಲಾ ಮುಗಿದ ಹಾಗೆ. ದಯವಿಟ್ಟು ಹೋಗ್ಬಿಡಿ."

ಸಂತೋಷ ಮಾತಿಲ್ಲದೆ ತಲೆ ತಗ್ಗಿಸಿ ಹೊರಕ್ಕೆ ನಡೆದ.

* * *

ಕಲ್ಪತರು ಕಾಂಪ್ಲೆಕ್ಸ್‌ನ ಮಾಲೀಕ ಶರಶ್ಚಂದ್ರ ತಲೆಯ ಹಿಂದೆ ಕೈ ಸೇರಿಸಿ ಕುರ್ಚಿಯಲ್ಲಿ ಹಿಂದಕ್ಕೆ ಒರಗಿದ.

'ಎದುರಿಗೆ ನಿಂತವರಿಬ್ಬರೂ ತನ್ನ ವಿರೋಧಿ ವ್ಯಾಪಾರಿ ಸಂಸ್ಥೆಯಾದ' ನೀಲಂಕಾರ್ ಕಾಂಪ್ಲೆಕ್ಸ್‌ನ ಸೇಲ್ಸ್ ಹುಡುಗಿಯರು.

ಬಿಂದು ತನ್ನ ಹಾಗೂ ಚಿತ್ರಾಳ ಹಿಂದಿನ ಹುದ್ದೆಗಳ ವಿವರವನ್ನು ಮುಚ್ಚುಮರೆ ಇಲ್ಲದೆ ಹೇಳಿದ್ದಳು.

ಮಾಲೀಕ ಕೇಕರಿಸಿ ಹೇಳಿದ.

"ಒಬ್ಬಳು ಕಳ್ಳತನದ ತಪ್ಪಿಗಾಗಿ ವಜಾ ಆದೋಳು. ಮತ್ತೊಬ್ಬಳು ಮಾಲೀಕನ ವಿಷಯದಲ್ಲಿ ಕಟುವಾಗಿ ಮಾತಾಡಿ ವಜಾ ಆದೋಳು. ಇಷ್ಟೆಲ್ಲಾ ತಿಳಿದೂ ನನ್ನ ಸ್ಟೋರ್‌ನಲ್ಲಿ ಕೆಲಸಕ್ಕೆ ಸೇರಿಸಿಕೊಳ್ಳಲೆ?."

ನಲವತ್ತೈದು ದಾಟಿದ ಶರಶ್ಚಂದ್ರರ ನಿಧಾನವಾದ ಮಾತಿನಿಂದ ಬಿಂದುಗೆ ಧೈರ್ಯ ಏರಿಬಂತು.

"ಕಲ್ಪತರು ಕಾಂಪ್ಲೆಕ್ಸ್‌ನ ಒಡೆಯರಿಗೆ ಪ್ರಾಮಾಣಿಕ ಸೇಲ್ಸ್ ಹುಡುಗಿಯರು ಬೇಕಾಗಿದೆ ಅಂತ ಕೇಳಿ ಬಂದಿದೀವಿ. ನಾವು ವಜಾ ಆದ ಕೆಲಸದೋರು ಅಂತ ನೇರವಾಗಿ ನಿಮ್ಮಲ್ಲಿ ನಿಜ ಹೇಳಿದ್ದೀವಿ."

ಮಾಲೀಕ ಯೋಚನಾಮಗ್ನ ಕಣ್ಣುಗಳಿಂದ ಅವರನ್ನು ನೋಡಿದ. ಅವನ ಸ್ಟೋರ್ ನಿಧಾನವಾಗಿ ನಷ್ಟ ಅನುಭವಿಸುತ್ತಿತ್ತು.

"ಪಂಪಾಪತಿಯ ಮೇಲೆ ನನಗೆ ವಿರೋಧ ಇರೋದು ನಿಜ. ನಿಮ್ಮ ಮೇಲಿನ ಆರೋಪಣೆಗಳ ಬಗೆಗೆ ಏನು ಹೇಳ್ತೀರಿ?"

ಬಿಂದು ಸ್ನೇಹಿತೆಯ ಕಡೆ ಬೆರಳು ಮಾಡಿದಳು.

"ಇವಳು ಅಪ್ರಮಾಣಿಕಳಾಗಿ ಕಾಣ್ತಾಳೇನು? ನಾನು ವಿಶಾಲ ಭಾವದ ಮಾಲೀಕರನ್ನು ದ್ವೇಷಿಸುವಂತ ದ್ರೋಹಿ ಅಲ್ಲ."

"ಆಲ್‌ರೈಟ್, ಮ್ಯಾನೇಜರ್‌ನ ಭೇಟಿಯಾಗಿ ರಿಪೋರ್ಟ್ ಮಾಡ್ಕೊಳ್ಳಿ."

ಶರಶ್ಚಂದ್ರ ರಿಂಗ್ ಮಾಡಿದ.

ಮ್ಯಾನೇಜರ್ ಜಯಂತ್ ಎತ್ತರದ ದೃಢಕಾಯ, ಸ್ನೇಹ ತೋರುವ ಕಣ್ಣುಗಳು, ಮುಖದಲ್ಲಿ ಸದಾ ನಗೆ.

ಕಲ್ಪತರು ಕಾಂಪ್ಲೆಕ್ಸ್ ನೆಮ್ಮದಿಯ ಹಿತಕರ ಸಂಸ್ಥೆ. ಚಿತ್ರಾಳ ಮನದಿಂದ ಸಂತೋಷ ದೂರ ಸರಿಯುತ್ತಿದ್ದ. ಅವಳ ಮನಸ್ಸು ಮತ್ತಷ್ಟು ತಿಳಿಯಾಗಲೆಂದು ಬಿಂದು ವಾಸಸ್ಥಾನ ಬದಲಾಯಿಸಿದಳು. ಮೂರನೆಯ ಅಂತಸ್ತಿನಲ್ಲಿದ್ದ ಎಡಬಲದ ಎರಡೆರಡು ಕೋಣೆಗಳ ಫ್ಲಾಟ್ ಇಬ್ಬರಿಗೂ ಸರಿಯಾಗಿತ್ತು. ಎರಡು ಫರ್ಲಾಂಗ್ ದೂರಕ್ಕೆ ಜ್ಯೋತಿಯ ವಾಸದ ಕೋಣೆ. ಎರಡು ದಿನಗಳಿಗೊಮ್ಮೆ ಭೇಟಿ ನೀಡುತ್ತಿದ್ದ ಜ್ಯೋತಿಯ ಸ್ನೇಹ, ಹಾಸ್ಯದ ಮಾತುಗಳು ಚಿತ್ರಾಳ ಮನಸ್ಸನ್ನು ಹದಗೊಳಿಸಿದವು.

"ಜ್ಯೋತಿಯ ಹಾಗೆ ಇದ್ದುಬಿಡು, ಚಿತ್ರಾ. ಅವಳು ಸಂತೋಷನ್ನ ಮರೆತ ಹಾಗೆ ನೀನೂ ಮರೆತುಬಿಡು. ನಾವು ಕಲ್ಪತರುವಿನಲ್ಲಿರೋದು ಸಂತೋಷನಿಗೆ ಗೊತ್ತಿಲ್ಲ. ಅವರು ಇತ್ತ ಬರೋದಿಲ್ಲ."

ಬಿಂದು ಉತ್ತೇಜಿಸುತ್ತಿದ್ದಳು. ಚಿತ್ರಾಗೆ ನೋವಿನ ತೀಕ್ಷ್ಣತೆ ನಿಧಾನವಾಗಿ ಇಳಿಯಿತು.

ಮೂರು ವಾರಗಳ ನಂತರ ಕಾಂಪ್ಲೆಕ್ಸ್‌ನ ತಳಭಾಗಕ್ಕೆ ಚಿತ್ರಾಳನ್ನು ವರ್ಗಾಯಿಸಿದರು.

"ನಾನೇ ಬಾಸ್‌ಗೆ ಹೇಳಿ ಹಾಕ್ಸಿದೀನಿ. ನೀವು ಗಿರಾಕಿಗಳೊಂದಿಗೆ ಚೆನ್ನಾಗಿ ವ್ಯವಹರಿಸ್ತೀರಿ ಅಂತ." ಎಂದ ಜಯಂತ.

ಪ್ರತಿ ನುಡಿಯಲಿಲ್ಲ ಅವಳು. ಚೆಂದದ ಮುಖದ, ಹಾಸ್ಯಪ್ರಿಯ ಜಯಂತ ತನ್ನ ಸಮೀಪಕ್ಕೆ ಸರಿಯಲು ಕಾತರನೆಂಬುದನ್ನು ಅರಿತಳು.

ಬಸ್ಸು ನೀಲಂಕಾರ್ ಕಾಂಪ್ಲೆಕ್ಸ್ ಮುಂದೆ ಸರಿಯುವಾಗ ಅಂದು ಕಾರಿನಿಂದ ಇಳಿದು ನಿಧಾನವಾಗಿ ಹೋಗುತ್ತಿದ್ದ ಸಂತೋಷ ಕಾಣಿಸಿದ. ಅವನ ಮೇಲಿನ ಪ್ರೀತಿ ತನ್ನಲ್ಲಿ ಉಳಿದಿದೆ ಎನಿಸಿತು.

ಅವನಲ್ಲಿ ತಪ್ಪಿಲ್ಲ! ತಂದೆಯ ಕೃತ್ರಿಮ ತಿಳಿಯದ ಬಡಪಾಯಿ ಮಗ.

"ಬಸ್ಸಿನಿಂದ ಜಿಗಿದು ಅವನ ಬಳಿಗೆ ಓಡಿ ಕೈಹಿಡಿದು, ಸಂತೋಷ್ ಡಾರ್ಲಿಂಗ್, ನಾನು ಹಿಂದಕ್ಕೆ ಬಂದ್ಬಿಟ್ಟೆ" ಎಂದು ಕೂಗಿಬಿಡಲೇ ಅನಿಸಿತು.

ಆದರೆ ಹಾಗೆ ಮಾಡಲು ಸಾಧ್ಯವಿಲ್ಲ. ಸರಿಯಲ್ಲ.

ಜಯಂತನ ವಿಷಯದಲ್ಲಿ ರಾತ್ರಿ ಬಿಂದು ಹೇಳಿದಳು.

"ಬೆರಳು ತೋರಿದರೆ ಹಸ್ತ ನುಂಗುವ ಮನುಷ್ಯ."

"ತುಸು ಅಪಾಯದ ಮನುಷ್ಯನ ಹಾಗೆ ಕಾಣ್ತಾನೆ. ನೋಡುವಾಗ ಮೈಮೇಲೆಲ್ಲಾ ಕಣ್ಣು ಹರಿಸ್ತಾನೆ."

ಇಬ್ಬರೂ ನಕ್ಕರು.

"ಹಾಗಾದ್ರೆ ಮತ್ತೆ ಮೇಲಕ್ಕೆ ಬಂದ್ಬಿಡು."

"ಅದು ಆಗೋದಿಲ್ಲ. ಜಯಂತ ಬಾಸ್‌ನ ಖಾಸಾ ಸ್ನೇಹಿತ."

"ಆಸಾಮಿ ಸರಿ ಅನಿಸಿದ್ರೆ ಮುಂದಕ್ಕೆ ಹೆಜ್ಜೆ ಹಾಕು. ಜಯಂತನ ಸ್ನೇಹ ಇದ್ರೆ ಸಂತೋಷನ್ನ ಮರೆಯೋದು ಸುಲಭ."

ಮರುದಿನ ಅವಳು ಷೆಲ್ಫ್‌ಗಳಲ್ಲಿ ವಸ್ತು ಜೋಡಿಸುತ್ತಿದ್ದಾಗ ಜಯಂತ ಮೆಲ್ಲನೆ ಅವಳ ಜಡೆ ಹಿಡಿದು ಸವರಿದ. ಚಿತ್ರಾ ಬೆಚ್ಚಿ ಉಸಿರೆಳೆದುಕೊಂಡಳು.

"ನನ್ನ ವರ್ತನೆ ಹೀಗೇಂತ ಬಾಸ್‌ಗೆ ಹೇಳ್ತೀರಾ?" ವಿನಯ ತುಂಬಿತ್ತು ಮಾತಿನಲ್ಲಿ.

"ಇಲ್ಲ"

ಹಾಗೆ ಹೇಳಿದುದೇಕೆಂದು ತಿಳಿಯದು. ಅವನು ಉತ್ತೇಜಿತನಾದ.

ನಿಮ್ಮ ಹಿಂದಿನ ಪ್ರಣಯದ ಕಥೆ ಬಿಂದುವಿನಿಂದ ಹೊರಡಿಸಿದೆ. ನಿಮ್ಮದು ಭಗ್ನಹೃದಯ...! ಸರಿಪಡಿಸಬಲ್ಲೆ."

"ತಪ್ಪು ಕಲ್ಪನೆ ಮಾಡ್ಕೋಬೇಡಿ" ಮಾತು ಗಂಭೀರವಾಗಿ ಹೊಮ್ಮಿ ಬಂತು."

"ಆದರೆ ಪ್ರಯತ್ನಕ್ಕೆ ಅಡ್ಡಿ ಇಲ್ಲ."

ಅವಳ ಸೆರಗಿನ ತುದಿ ತುಟಿಗೊತ್ತಿಕೊಂಡ. ಅವನು ಪ್ರಣಯ ನಿಷ್ಣಾತ!

ಅವಳು ಏಕೊ ಪ್ರತಿಭಟಿಸದಾದಳು. ಮಾತು ಹೊರಡದು. ಹೃದಯ ತುಸು ಗದರಿದರೂ ಅವನಿಗೆ ಸೋತಳು. ಅವಳಿಗೆ ಸಂತೋಷನನ್ನು ಮರೆಯುವುದು ಬೇಕಿತ್ತು. ಎರಡು ಸಂಜೆ ಅವನೊಂದಿಗೆ ಸುತ್ತಾಡಿದಳು.

ಮತ್ತೆರಡು ವಾರಗಳು ಕಳೆದ ಮೇಲೆ ಒಂದು ದಿನ ಜಯಂತ ಸ್ಟೋರ್‌ನಿಂದ ಹೊರ ಹೋಗಿದ್ದ. ಚಿತ್ರಾ ಮೇಲಕ್ಕೆ ಏರಲು ಬಂದಾಗ ಸಂತೋಷ ಮೆಟ್ಟಿಲುಗಳ ಮೇಲೆ ನಿಂತಿದ್ದ!

ಕೆನ್ನೆಗಳಲ್ಲಿ ಕಾವು ಏರಿತು. ಅವನ ಕಣ್ಣುಗಳಲ್ಲಿ ಕಣ್ಣು ಕೂಡಿದಾಗ ಎರಡು ತಿಂಗಳ ಪ್ರೇಮ ಅವರಲ್ಲಿ ಮಿಂಚಿನಂತೆ ಹರಿದು ಪರಸ್ಪರ ತೋಳುಗಳಿಗೆ ಧಾವಿಸುವಂತೆ ಮಾಡಿತು.

ಅವಳ ಹೃದಯ ಕದಲಿತು. ಮರುಕ್ಷಣ ದಡದಡ ಬಾರಿಸಿತು.

ಎರಡು ಹೆಜ್ಜೆ ಮುಂದಕ್ಕೆ ಸರಿಸಿದ ಸಂತೋಷ ಸರಕ್ಕನೆ ಹಿಂದಕ್ಕೆ ತಿರುಗಿ ಮೆಟ್ಟಿಲು ಏರಿ ಮಾಯವಾದ.

"ಷೋಕೇಸ್‌ನಲ್ಲಿರೊ ವಸ್ತುಗಳಿಗೆ ಹೊಸ ಪಟ್ಟಿ ಹಾಕ್ತೀರಾ?"

ಮೆಟ್ಟಿಲುಗಳ ಮೇಲೆ ಸ್ಥಿರ ದೃಷ್ಟಿ ನಾಟಿದವಳು ಸಹೋದ್ಯೋಗಿಯ ಮಾತಿನಿಂದ ಭುಜ ಏರಿಸಿದಳು.

"ದಯವಿಟ್ಟು ನೀವೇ ಹಾಕಿ. ಸ್ವಲ್ಪ ತಲೆನೋವು."

ಹಾಗೆಂದು ವಿಶ್ರಾಂತಿ ಕೋಣೆ ಸೇರಿ ಮೌನವಾಗಿ ಅತ್ತಳು. ನಿಜಕ್ಕೂ ತಲೆನೋವು ಕಂಡಿತ್ತು. ಎರಡು ತಿಂಗಳು ಪ್ರಯತ್ನ ವ್ಯರ್ಥವಾಗಿತ್ತು.

ಸಂತೋಷ ಮಾತನಾಡದೆ ಸರಿದುಹೋದುದೇಕೆ? ಇಲ್ಲಿಗೆ ಬಂದುದು ತನ್ನ ಸಲುವಾಗಿ ಅಲ್ಲ!

"ಬಾಸ್ ಚೇಂಬರ್‌ನಿಂದ ಕರೆ ಬಂದಿದೆ."

ಕೆಲಸದ ಹುಡುಗ ಬಂದು ತಿಳಿಸಿದ.

ಶರಶ್ಚಂದ್ರನ ಕೋಣೆ ಮೂರನೆ ಅಂತಸ್ತಿನಲ್ಲಿತ್ತು. ಬಾಗಿಲು ಮೆಲ್ಲನೆ ತಳ್ಳಿ ಒಳಕ್ಕೆ

ಅಡಿ ಇಟ್ಟಳು.

ದೊಡ್ಡ ಮೇಜಿನ ಮುಂದೆ ಕುಳಿತವನು ಶರಶ್ಚಂದ್ರ ಅಲ್ಲ, ಸಂತೋಷ!

"ಆಹ್ಹಾ ! ನೀನು ಇಲ್ಲಿ ಅಡಗಿದೀಯಾ?"

ಅವಳ ದೃಷ್ಟಿ ನೆಲಕ್ಕೆ ತಿರುಗಿತು.

"ಇಲ್ಲೇ ಕೆಲಸ ಮಾಡ್ತಿರೋದು, ಸಂತೋಷ. ನೀವು ಇಲ್ಲಿ ಏನು ಮಾಡ್ತಾ ಇದೀರಿ?"

"ನಾನು? ನಾನು ಇಲ್ಲಿನ ಹೊಸ ಬಾಸ್ ಆಗಲಿದ್ದೇನೆ, ಇನ್ನೊಂದೆರಡು ತಾಸುಗಳಲ್ಲಿ?"

"ಎಲ್ಲಿ ಶರಶ್ಚಂದ್ರ?" ಗಾಬರಿಯಿಂದ ಕೇಳಿದಳು.

"ಶರಶ್ಚಂದ್ರ ಇಲ್ಲಿಂದ ಹೊರಟುಹೋದ. ಡ್ಯಾಡಿ ಈ ಸಂಸ್ಥೆ ಕೊಂಡಿದ್ದಾಯ್ತು. ಎಷ್ಟೋ ವರ್ಷಗಳಿಂದ ಎರಡೂ ಪೈಪೋಟಿ ಮಾಡ್ತಾ ಇದ್ದ ಸಂಸ್ಥೆಗಳು. ಕೊನೆಗೆ ಡ್ಯಾಡಿ ಗೆದ್ದರು. ಸಾರ್ವಜನಿಕ ಪ್ರಕಟಣೆ ಕೊಡುವ ಮೊದಲು ಒಮ್ಮೆ ನೋಡಿ ಹೋಗೋಣಾಂತ ಬಂದಿದೀನಿ."

ನೀಳ ಉಸಿರು ಹಾಕಿದಳು.

"ನಿಮ್ಮ ತಂದೆ ಯಾವತ್ತಿಗೂ ಗೆಲ್ಲಲೇಬೇಕು! ಅವರ ಹಾದಿಯಲ್ಲಿ ಯಾರೇ ನಿಂತರೂ ನಾಶವಾಗಬೇಕು. ಬಡಪಾಯಿ ಶರಶ್ಚಂದ್ರ!"

"ನನ್ನ ತಂದೇನ ನಾನೇ ಸರಿಯಾಗಿ ಅರ್ಥಮಾಡ್ಕೊಂಡಿಲ್ಲ. ಅವರ ಬಗ್ಗೆ ಮಾತಾಡಿ ಕಾಲ ವ್ಯರ್ಥ ಮಾಡೋದು ಬೇಡ. ನಿನಗೋಸ್ಕರ ಎಲ್ಲೆಲ್ಲಿ ಹುಡುಕಿದೆ ಗೊತ್ತೆ ? ಯಾಕೆ ಹೀಗೆ ಮಾಡ್ದೆ?"

"ನಮ್ಮಿಬ್ಬರ ಮಧ್ಯೆ ಉಳಿದಿದ್ದ ಸಂಬಂಧ ಅಳಿಸೋದಿಕ್ಕೆ" ಉದ್ವೇಗದಲ್ಲಿ ನುಡಿದಳು.

"ಆದರೆ ಅಳಿಸಿಹಾಕ್ಲಿಲ್ಲ. ನಮ್ಮ ಪ್ರೇಮ ಮೊದಲಿನ ಹಾಗೇ ಇದೆ."

"ಇಲ್ಲ!"

"ಹಾಗಾದ್ರೆ ಹೆಚ್ಚಾಗಿರಬೇಕು. ನೀನು ನನ್ನಲ್ಲಿಗೆ ಹಿಂತಿರುಗಲೇಬೇಕು."

ಅವಳ ಕಂಠ ಗದ್ಗದಿತವಾಯಿತು.

"ಆಮೇಲೆ ನಿಮ್ಮ ತಂದೆ, ತಾಯಿ ನಮ್ಮನ್ನ ದೂರ ಮಾಡೋದಿಕ್ಕೆ ತಂತ್ರ ಹೂಡ್ಬೇಕು. ಇಲ್ಲ, ಸಂತೋಷ್, ನನ್ನ ಇಲ್ಲಿ ನೆಮ್ಮದಿಯಾಗಿ ಉಳಿಯೋದಿಕ್ಕೆ ಬಿಡೋದಿಲ್ಲ ನೀವು. ಬೇರೆ ಕಡೆ ಕೆಲಸ ಹುಡುಕ್ತೀನಿ."

"ನೀನು ಎಲ್ಲಿಗೆ ಸೇರಿದೀಯೊ ಅಲ್ಲೇ ಶಾಶ್ವತವಾಗಿ ಉಳಿದಿರ್ತೀಯ... ನೀನು ಸೇರಿರೋದು ನನ್ನ ತೋಳಿನಲ್ಲಿ !"

ಅವಳನ್ನು ತೋಳುಗಳಲ್ಲಿ ಬಂಧಿಸಿದ. ಎಂದಿಗೂ ಬೇರ್ಪಡದವರಂತೆ ಸೇರಿದರು. ತಾನು ಅಳುತ್ತಿರುವುದರ ಅರಿವು ಅವಳಿಗೆ ಹತ್ತಲಿಲ್ಲ.

"ಚಿತ್ರಾ ಡಿಯರ್, ನಮ್ಮನ್ನ ಯಾರೂ ಪ್ರಶ್ನಿಸೊ ಹಾಗಿಲ್ಲ. ಡ್ಯಾಡಿ ನನಗೆ ಸ್ವಾತಂತ್ರ್ಯ ಕೊಟ್ಟಿದ್ದಾರೆ. ಕಲ್ಪತರು ಕಾಂಪ್ಲೆಕ್ಸ್ ನನಗೆ ಒಪ್ಪಿಸಿದ್ದಾರೆ. ನಿನ್ನ ಹಿತೈಷಿ ಅವರು. ನಿನಗೆ ಕೋರ್ಟ್ ನೀಡಿದ ಶಿಕ್ಷೆಯಿಂದ ಸ್ವಲ್ಪ ಅಲುಗಾಡಿ ಹೋಗಿದಾರೆ, ಅಷ್ಟೇ..."

ತೋಳು ಸಡಿಲಿಸಿ ಮತ್ತೆ ಹೇಳಿದ.

"ಇಲ್ಲಿನ ಲೆಕ್ಕ ನೋಡಿ ಮುಗಿಸೊ ಹೊತ್ತಿಗೆ ಮಧ್ಯರಾತ್ರಿ ಆಗಬೋದು. ನೀನು ಏಳರ ಹೊತ್ತಿಗೆ ಇಲ್ಲಿಗೆ ಬಂದ್ರೆ ಒಟ್ಟಿಗೆ ಊಟ ಮಾಡೋಣ."

ಕಣ್ಣುಗಳಲ್ಲಿ ಸಮ್ಮತಿ ಸೂಚಿಸಿದಳು. ತುಟಿಗಳು ಸಮೀಪಿಸಿದವು. ಟೆಲಿಫೋನ್ ಗಂಟೆ ಬಾರಿಸಿತು.

ಅವಳು ನೋಡುತ್ತಿದ್ದಂತೆ ಫೋನ್ ಹಿಡಿದ ಸಂತೋಷನ ಮುಖ ಒಮ್ಮೆಗೇ ತೀವ್ರವಾಗಿ ಬದಲಿಸಿತು.

"ಮೈಗಾಡ್ ! ಈಗಲೇ ಬರ್ತೀನಿ."

ಅದುರುವ ಕೈನಲ್ಲಿ ಫೋನ್ ಕೆಳಗಿಟ್ಟ.

"ಕೆಟ್ಟ ಸುದ್ದಿಯೆ?" ಅಳುಕಿತು ಪ್ರಶ್ನೆ.

"ಪೊಲೀಸ್ ಸ್ಟೇಷನ್‌ನಿಂದ. ಶರಶ್ಚಂದ್ರ ತಲೆಗೆ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡ್ಕೊಂಡಿದಾನೆ! ಡ್ಯಾಡಿಗೆ ಮನಸ್ಸು ಕೆಡತ್ತೆ. ಅವರಿಬ್ಬರೂ ವಿರೋಧಿಗಳಾಗಿದ್ರು. ಆದರೆ ಇಂಥಾದ್ದು ನಿರೀಕ್ಷಿಸಿರಲಿಲ್ಲ."

ಸಂತೋಷ ಅವಳ ಕಡೆ ತಲೆ ಆಡಿಸಿ ಸ್ಥಿಮಿತತೆಯಲ್ಲಿ ನುಡಿದ.

"ಸಂಜೆ ಏಳಕ್ಕೆ ಬರೋದು ತಪ್ಪಿಸಬೇಡ, ಚಿತ್ರಾ."

ಚಿತ್ರಾಗೆ ತನ್ನ ಸುತ್ತಲೂ ನೆರಳುಗಳು ಗಾಢವಾದಂತೆ ಭಾಸವಾಯಿತು.

೪

ಬಿಂದು ಮತ್ತೊಮ್ಮೆ ನೀಲಂಕಾರ್ ಮನೆತನದ ಮೇಲೆ ತನ್ನ ಕಟು ಅಭಿಪ್ರಾಯ ನೀಡುತ್ತಿದ್ದಾಗ ಚಿತ್ರಾ ಸಂಜೆಯ ಸಿದ್ಧತೆ ನಡೆಸಿದ್ದಳು.

"ಇನ್ನೂ ಆ ಮನೆತನದ ಸೆಳೆತ ತಪ್ಪಲಿಲ್ಲ! ರಾತ್ರಿ ಕಂಡ ಬಾವಿಗೆ ಹಗಲಲ್ಲೇ ಬಿದ್ದ ಹಾಗೆ ನೋಡು, ಬಡಪಾಯಿ ಶರಶ್ಚಂದ್ರನಿಗೆ ಅವರು ಮಾಡಿದ್ದು. ಪಂಪಾಪತಿ ನಮ್ಮನ್ನ ಹೊರಗೆ ಅಟ್ಟಿದಾಗ ಶರಶ್ಚಂದ್ರ ಆಶ್ರಯ ಕೊಟ್ರು..."

ಸಂಜೆಯ ಪತ್ರಿಕೆ ಎತ್ತಿ ತೋರಿ ಮತ್ತಷ್ಟು ಹೇಳಿದಳು.

"ಶರಶ್ಚಂದ್ರನ ಮಳಿಗೆ ಖರೀದಿ ಮಾಡಿ ಅವರನ್ನ ವ್ಯಾಪಾರದಿಂದ ಹೊರ

ದೂಡಿ ಸರ್ವನಾಶ ಮಾಡಿದ್ರು. ಶರಶ್ಚಂದ್ರ ಆತ್ಮಹತ್ಯೆ ಮಾಡಿಕೊಂಡ್ರು."

ಚಿತ್ರಾ ಇನಿಯನ ರಕ್ಷಣೆಗೆ ಬಂದಳು.

"ಈ ಘಟನೆ ಸಂತೋಷನಿಗೆ ಯಾವ ರೀತಿಯಲ್ಲೂ ಸಂಬಂಧಿಸಿಲ್ಲ."

"ಸಂಬಂಧ ಇಲ್ಲವಾದರೆ ಕಲ್ಪತರು ಚೇಂಬರ್‌ನಲ್ಲಿ ಯಾಕೆ ಕುಳಿತಿದಾರೆ?

ಚಿತ್ರಾ ಮಾತಿಲ್ಲದೆ ಕಣ್ಣುಗಳಿಗೆ ಕಪ್ಪು ಹಚ್ಚಿದಳು. ಗೆಳತಿಯ ದಾಳಿ ಮುಂದುವರಿಯಿತು.

"ಸಂತೋಷನ ಮೇಲೆ ಇನ್ನೂ ಹುಚ್ಚು ಉಳಿದಿದ್ರೆ ನೀಲಂಕಾರರು ಮೊದಲಿಗಿಂತ ಹೆಚ್ಚು ತೀವ್ರವಾಗಿ ನಿನ್ನ ಮೇಲೆ ಸೇಡು ತೀರಿಸಿಕೊಳ್ತಾರೆ."

"ನನಗೆ ಹುಚ್ಚು ಹಿಡಿಯೋದು ನಿಜ."

ಚಿತ್ರಾಳ ಸೀರೆಯನ್ನು ಓರೆಗಣ್ಣಿನಲ್ಲಿ ನೋಡಿದಳು.

"ಅವರನ್ನು ಕಾಣೋದಿಕ್ಕೆ ಹೋಗ್ತಾ ಇದೀಯ. ಶರಶ್ಚಂದ್ರನ ಸಾವಿಗಾಗಿ ಸಂತೋಷಕೂಟ ಏರ್ಪಟ್ಟಿರಬೇಕು."

"ನೀನು ಕಟುಕಿ ಆಗ್ತಾ ಇದೀಯ."

"ನಿನ್ನ ವಿಷಯದಲ್ಲಿ ಕ್ರೂರವಾಗಿ ವರ್ತಿಸೋರಿಗೆ ನಾನು ಕ್ರೂರವಾಗಿ ಹೇಳ್ತಿದೀನಿ. ನೀನು ಜಯಂತನ ಮೇಲೆ ಯಾಕೆ ಆಸಕ್ತಿ ಹೊಂದಬಾರದು."

ಈ ವಿಷಯ ಸಾಕುಮಾಡು" ಗದರಿಸಿದಳು.

"ವಿಷಯ ಬೇಕು, ಸ್ಟೋರ್ ತಳದಲ್ಲಿ ಒಬ್ಬ, ಮೇಲಿನ ಚೇಂಬರ್‌ನಲ್ಲಿ ಮತ್ತೊಬ್ಬ ಪ್ರೇಮಿ ಇರಬಾರದು ನಿನಗೆ."

ಹುಚ್ಚು ಹಿಡಿದವಳಂತೆ ತಲೆ ಭದ್ರವಾಗಿ ಹಿಡಿದುಕೊಂಡಳು ಚಿತ್ರಾ.

ಕೆಳಕ್ಕೆ ಇಳಿಸುತ್ತಿದ್ದ 'ಕಲ್ಪತರು ಕಾಂಪ್ಲೆಕ್ಸ್' ಫಲಕವನ್ನು ನೋಡುತ್ತಾ ಬರುವಾಗ ಅವಳ ಹೃದಯದಲ್ಲಿ ಸಂಶಯ ಕುಟುಕಿತು. ಶರಶ್ಚಂದ್ರನ ಮರಣಕ್ಕೆ ಪಂಪಾಪತಿ ಕಾರಣನೆ? ಸಂತೋಷನನ್ನು ಕೇಳಿ ಅದನ್ನು ತಿಳಿದುಕೊಳ್ಳಬೇಕು.

ಕಾದಿದ್ದ ಸಂತೋಷನ ತೋಳು ಸೇರಿದಳು. ಅವಳ ಕಿವಿಯಲ್ಲಿ ಉಸುರಿದ.

"ನನ್ನ ಮೇಲೆ ಪ್ರೀತಿ ಇಲ್ಲಾಂತ ಹೇಳ್ತೀಯಾ?"

"ಹಾಗೆಂದೂ ನಾನು ಹೇಳ್ಲಿಲ್ಲ. ನಾವಿಬ್ರೂ ಮತ್ತೆ ಹತ್ತಿರಕ್ಕೆ ಬಂದರೆ ನನಗೆ ಏನು ಆಗುತ್ತೋಂತ ಭಯ ಆಗಿದೆ."

"ನಿನಗೆ ಏನಾಗುತ್ತೇಂತ?" ಅವಳ ಮುಖ ಎತ್ತಿದ.

"ನನ್ನ ಮೇಲೆ ಸುಳ್ಳು ಆಪಾದನೆ ಬಂದು ಶಿಕ್ಷೆ ಆಯಿತು" ಕೊರಳು ಬಿಗಿಯಿತು.

"ಅದೇ ದುಃಸ್ವಪ್ನ! ಅದೇ ನೆರಳು! ಮತ್ತೆ ನಿಖರವಾಗಿ ಹೇಳ್ತೀನಿ. ನನ್ನ ತಂದೆಯ ಕೈವಾಡ ಅದರಲ್ಲಿ ಇರಲಿಲ್ಲಾಂತ."

ಫಕ್ಕನೆ ಕೇಳಿದಳು.

"ಶರಶ್ಚಂದ್ರನ ಮರಣದಲ್ಲೂ ಅವರ ಕೈವಾಡ ಇರಲಿಲ್ವೆ?"

ಕೆಲವು ಕ್ಷಣ ಮೌನವಾಗಿ ನಿಂತ. ನಂತರ ನಿಧಾನವಾಗಿ ಸರಿದು ಕುರ್ಚಿಯಲ್ಲಿ ಕುಳಿತ. ಉಸಿರಾಟ ತೀವ್ರವಾಗಿತ್ತು. ಆದರೂ ಸಹನೆ ಉಳಿಸಿಕೊಂಡಿದ್ದ.

"ಸತ್ತುಹೋದ ವ್ಯಕ್ತಿಯ ರಹಸ್ಯ ಕೇಳಿ ಅವನ ಹೆಸರಿಗೆ ಮತ್ತಷ್ಟು ಕಪ್ಪು ಹತ್ತಲಿ ಅಂತ ನಿನ್ನ ಅಭಿಲಾಷೆ ! ಡ್ಯಾಡಿ ಈ ಸಂಸ್ಥೇನ ಖರೀದಿ ಮಾಡಿದ್ದಕ್ಕೆ ಅವರು ಸಾಯಲಿಲ್ಲ. ಶರಶ್ಚಂದ್ರ ಈ ಸಂಸ್ಥೆಯ ಹಣ ದುರುಪಯೋಗ ಮಾಡಿ ಲೆಕ್ಕದ ಪುಸ್ತಕದಲ್ಲಿ ಹೊಂದಾಣಿಕೆ ಮಾಡ್ತಿದ್ದ. ಪಾಲುದಾರರ ಹಣಕ್ಕೆ ಸಂಚಕಾರ ತರ್ತಿದ್ದ. ಬಹಳ ದೊಡ್ಡ ಮೊತ್ತದ ಹಣ ಅದು. ವಿಷಯ ಸ್ವಲ್ಪ ಬೆಳಕಿಗೆ ಬಂದಾಗ ಮುಂದಿನ ಪರಿಣಾಮ ಗೊತ್ತಾಗಿ ಆತ್ಮಹತ್ಯೆ ಮಾಡ್ಕೊಂಡ."

ಚಿತ್ರಾ ಮೇಜು ಹಿಡಿದು ದಿಟ್ಟತನದಲ್ಲಿ ಕೇಳಿದಳು.

"ಆ ವಿಷಯ ಪತ್ರಿಕೆಯಲ್ಲಿ ಬಂದಿಲ್ಲ."

"ಬರೋದಿಕ್ಕೆ ಕಾರಣ ಇಲ್ಲ. ಡ್ಯಾಡಿಯೇ ಅವನ್ನ ಮುಚ್ಚಿಡ್ತಾ ಇದಾರೆ. ಅವನು ದುರುಪಯೋಗಪಡಿಸಿಕೊಂಡ ಹಣವನ್ನು ತಾವೇ ಭರ್ತಿ ಮಾಡಿದಾರೆ."

"ಹಾಗೆ ಮಾಡಬೇಕಾದ ಅಗತ್ಯ ಏನಿತ್ತು.?"

"ಶರಶ್ಚಂದ್ರ ತನ್ನ ವಿಧವೆ ಹೆಂಡತಿ, ಇಬ್ಬರು ಹೆಣ್ಣುಮಕ್ಕಳನ್ನು ಬಿಟ್ಟು ಹೋಗಿದಾನೆ. ಅವರಿಗೆ ಅನ್ಯಾಯ ಆಗೋದು ಡ್ಯಾಡಿ ಸಹಿಸೋದಿಲ್ಲ. ಡ್ಯಾಡಿಯ ವ್ಯಕ್ತಿತ್ವ ನಿನಗೆ ಗೊತ್ತಿಲ್ಲ. ಕಬ್ಬಿಣದ ನಾಲಗೆ, ಚಿನ್ನದ ಹೃದಯ."

ಅವಳಿಗೆ ವಿಶ್ವಾಸ ಬಂತು. ವಿಧವೆಯರ ಅನಾಥರ ರಕ್ಷಕನಂತೆ ಪಂಪಾಪತಿಯ ಚಿತ್ರ ತಂದುಕೊಂಡಳು. ಅವನ ಮಗ ತಂದೆಯ ಹಿರಿಯ ವ್ಯಕ್ತಿತ್ವ ಕಂಡು ತನ್ನ ವಿಷಯದಲ್ಲಿ ಕುರುಡನಾಗಿದ್ದಾನೆ!

ಅವನು ಹೇಳುತ್ತಿದ್ದ.

"ಯೋಚನೆ ಮಾಡ್ಬೇಡ. ಡ್ಯಾಡಿ, ಮಮ್ಮಿಗೆ ನಿನ್ನ ಮೇಲೆ ಪ್ರೀತಿ ಇದೆ. ಕೋರ್ಟು ತೀರ್ಪಿನಿಂದ ಅವರಿಗೆ ನಿರಾಶೆ ಆಯ್ತು. ನಿನಗೆ ಸಂಶಯದ ಲಾಭ ಕೊಟ್ಟು ಅವರಿಗೆ ಸಮಾಧಾನ ಹೇಳ್ದೆ."

"ನನಗೆ ಸಂಶಯದ ಲಾಭ! ಕೋರ್ಟಿನಲ್ಲಿ ಕೊಡೋ ಹಾಗೆ?"

"ಹಾಗೇ ಅಂದುಕೊ. ನೀನು ತಪ್ಪು ಮಾಡಿಲ್ಲಾಂತ ನನ್ನ ಆತ್ಮ ಹೇಳಿದೆ. ಆ ಮಾತಿರಲಿ. ಈಗ ನಾವು ಊಟಕ್ಕೆ ಹೋಗುವ."

ಅವನ ನಡುವಿಗೆ ಕೈ ಸೇರಿಸಿ ಚೇಂಬರ್‌ನಿಂದ ಒಯ್ದು.

ಮರುದಿನ ಸ್ಟೋರ್ಸ್‌ಗೆ ಬರುತ್ತಲೇ ಜಯಂತ ಎದುರಾದ. ಸದಾ ನಗೆ ಚಿಮ್ಮುವ ಮುಖ ಗಂಭೀರವಾಗಿತ್ತು. ಕಂಠ ಬಿಗಿಯಾಗಿತ್ತು.

"ನಮಗೆ ಈಗ ಹೊಸ ಬಾಸ್. ನೋಡಿರಬೇಕಲ್ಲ?"

ಅವನು ಗತಿಸಿದ ಬಾಸ್ ಬಗ್ಗೆ ಚಕಾರ ಎತ್ತಲಿಲ್ಲ. ಅವನೊಂದಿಗೆ ನೇರ ಮಾತು ಸರಿ ಎನಿಸಿತು.

"ನನಗೆ ಹೇಳಿಕಳಿಸಿದ್ರು, ಜಯಂತ್."

"ವಜಾ ಅಜ್ಞೆ ಕೊಡಲಿಕ್ಕೆ?"

"ಅಲ್ಲ."

"ನೀವೇ ಅವರಿಗೆ ನೋಟಿಸ್ ಕೊಟ್ರಿ?"

"ಇಲ್ಲ."

ಅಚ್ಚರಿಯಿಂದ ತುಟಿ ಉಬ್ಬಿಸಿದ.

"ಹೇಳಿ ಯಾಕೆ ಹೇಳಿ ಕಳಿಸಿದ್ರು?"

ಎಡಬಲ ನೋಡಿ ತುಟಿಗೆ ನಾಲಿಗೆ ಆಡಿಸಿದಳು.

"ನಿಮಗೆ ನನ್ನ ಮಾತು ಹಿಡಿಸೋದಿಲ್ಲ. ಸಂತೋಷ, ನಾನು..."

ಕಣ್ಣು ಮುಚ್ಚಿ ಕೈ ಆಡಿಸಿದ.

"ಹಾಗೆ ಹೇಳ್ಬೇಡಿ. ನನಗೆ ಜೋಡಿ ನಷ್ಟ. ಸ್ಟೋರ್ ಹಾಗೂ ಹುಡುಗೀನ ಕಳೆದುಕೊಳ್ಳೋ ಪ್ರಸಂಗ. ನಾನು ನಿಮ್ಮ ಆರಾಧಕ ಅಂತ ಅವರಿಗೆ ಹೇಳಲಿಲ್ವೆ?"

"ಉಹುಂ" ಕಂಪಿಸಿದಳು.

"ಸರಿ, ಅದನ್ನ ನಾನು ಅವರಿಗೆ ತಿಳಿಸ್ತೀನಿ."

ಸರಸರ ಮೆಟ್ಟಿಲು ಏರಿದ. ಅವನ ಹಿಂದೆ ಏರುತ್ತಾ ಬೇಡಿದಳು.

"ಪ್ಲೀಸ್, ಜಯಂತ್ .....ಹಾಗೆ ಮಾಡ್ಬೇಡಿ. ನಾನು ನಿಮ್ಮನ್ನ ಪ್ರೇಮಿಸಿರಲಿಲ್ಲ. ಸ್ವಲ್ಪ ಸಲಿಗೆ ಕೊಟ್ಟಿದ್ದೆ, ಅಷ್ಟೆ."

ಅವನು ನಿಂತು ಹತಾಶ ಮುಖದಲ್ಲಿ ನೋಡಿದ.

"ಸಲಿಗೆ! ನಿಮಗೆ ಪ್ರಣಯ ಅನ್ನೋದು ಉಗುರಿಗೆ ಬಣ್ಣ ಹಚ್ಚಿದ ಹಾಗೆ."

"ನಾನು ನಿಮ್ಮೊಂದಿಗೆ ಪ್ರಣಯ ನಾಟಕ ಆಡ್ಲಿಲ್ಲ. ನಿಮ್ಮ ಮೇಲೆ ನನಗಿರೋದು ಕೇವಲ ಸ್ನೇಹ."

ಅವನಿಗೆ ಕೋಪ ಉಕ್ಕಿತು.

"ಕಳತನದ ಪಟ್ಟಿ ಹಚ್ಚಿ ಕೆಲಸದಿಂದ ಹೊರಕ್ಕೆ ಹಾಕಿದ ಮೇಲೂ ನೀವು ಸಂತೋಷನಿಗೆ ಅಂಟಿಕೊಂಡಿದ್ದೀರಿ. ಅವರು ಶರಶ್ಚಂದ್ರನಿಗೆ ಮಾಡಿದ್ದೇನು ಗೊತ್ತೆ?"

"ಅದಕ್ಕೂ ಸಂತೋಷನಿಗೂ ಸಂಬಂಧವಿಲ್ಲ. ನನ್ನ ಸ್ನೇಹವನ್ನು ಅಪಾರ್ಥ ಮಾಡಿಕೊಂಡಿದ್ದೀರಿ."

ಘೂತ್ಕರಿಸಿ ಮೇಲೆ ಹೊರಟುಹೋದ. ಸಂತೋಷನೊಂದಿಗೆ ಏನಾದರೂ ಹೇಳಿ ವಿಷಯ ಹದಗೆಡಿಸುತ್ತಾನೆಂದು ಚಿಂತಿಸಿದಳು. ತುಯ್ದಾಟದ ಇಪ್ಪತ್ತು ನಿಮಿಷಗಳು ಕಳೆದ ಮೇಲೆ ಜಯಂತ ಅದೇ ವೇಗದ ಹೆಜ್ಜೆಯಲ್ಲಿ ಹಿಂತಿರುಗಿದ.

ಅವಳತ್ತ ನೋಡದೆ ಹೊರಟ. ಅವನನ್ನು ಅನುಸರಿಸಿ ಬಂದಳು.

"ಸಂತೋಷ ಏನು ಹೇಳಿದ್ರು?" ಹಿಂಜರಿಯುತ್ತಾ ಕೇಳಿದಳು.

"ನಾನು ಹೋಗಿದ್ದು ಅದಕ್ಕಲ್ಲ. ನನ್ನ ನೋಟಿಸ್ ಅವರಿಗೆ ಕೊಟ್ಟೆ. ನಾನು ಇಲ್ಲಿ ಇರ್ತೀನಿ ಅಂತ ಭಾವಿಸಬೇಡಿ. ನೀವಾದರೆ ಒಂದು ಚುಂಬನಕ್ಕೆ ಬೇಕಾದ್ರೂ ಚೇಂಬರ್‌ಗೆ ಹೋಗಿಬರ್ತೀರಿ."

"ಜಯಂತ್!" ಚೀರಿದಳು."

ಅವಳಿಗೆ ರಪ್ಪನೆ ಬಾರಿಸಿದಂತಾಗಿತ್ತು. ಅವನು ಕೈ ಹಿಸುಕಿದ.

"ಕ್ಷಮಿಸಿ. ಒಂದೊಂದು ಸಾರಿ ಅತಿ ಮಾತು ಆಡಿಬಿಡ್ತೀನಿ."

"ಆಯ್ತು. ನೀವು ಇಲ್ಲಿಂದ ಹೊರಟುಹೋಗೋದು ದುಃಖದ ಸಂಗತಿ."

ಸಂತೋಷನಿಗೂ ನನ್ನ ಕಳೆದುಕೊಳ್ಳೋ ಇಚ್ಛೆ ಇಲ್ಲ. ನನಗೆ ಬಡ್ತಿಯ ಆಸೆ ತೋರಿಸಿದ್ರು. ನಾನು ಒಲ್ಲೆ ಎಂದೆ. ಇನ್ನೊಂದು ತಿಂಗಳು ಇರ್ತೀನಿ. ನೀವು ಮನಸ್ಸು ಬದಾಲಾಯಿಸೋದಾದ್ರೆ...

"ಸಾಧ್ಯಾವಿಲ್ಲ." ತೀರ್ಮಾನಿಸಿ ಹೇಳಿದಳು. ಅವಳು ಹೆಜ್ಜೆ ಸರಿಸಿದ.

ಮಧ್ಯಾಹ್ನದ ವಿರಾಮದಲ್ಲಿ ಬಿಂದು ಹೇಳಿದಳು.

"ನೀನು ಅಪಾಯದ ಕಡೆಗೆ ಸಾಗ್ತಾ ಇದೀಯ ಅನ್ನಿಸಿದೆ. ಈ ಸ್ಟೋರ್ ಬಿಟ್ಟುಬಿಡೋಣ."

"ಪದೇ ಪದೇ ಕೆಲಸ ಬದಲಾಯಿಸೋದು ಸರಿಯಲ್ಲ."

ಸಂಜೆಯ ತಿರುಗಾಟಕ್ಕೆ ಚಿತ್ರಾ ಶೃಂಗರಿಸಿಕೊಳ್ಳತೊಡಗಿದಳು. ಅವಳ ಮತ್ತು ಸಂತೋಷನ ನಡುವಿನ ಪ್ರಣಯದ ಕಿನ್ನರ ಲೋಕದ ಮೇಲೆ ಯಾವ ಘಳಿಗೆಯಲ್ಲಾದರೂ ದಾಳಿಯ ಭಯವಿತ್ತು. ತಾವಿಬ್ಬರೂ ಮತ್ತೆ ಒಂದುಗೂಡಿ ಇರುವ ಸುದ್ದಿ ಪಂಪಾಪತಿಗೆ ತಿಳಿದರೆ?"

ಬಾಗಿಲು ತಟ್ಟಿದ ಸದ್ದಿನ ಹಿಂದೆಯೇ ಜ್ಯೋತಿ ಒಳ ಬಂದಳು. ಚಿತ್ರಾ ಸ್ವಾಗತ

ನೀಡಲು ಹಿಂಜರಿದಳು. ಅದು ಸಂತೋಷ ಬರುವ ವೇಳೆ!

"ಪಿಕ್ಚರ್‌ಗೆ ಹೋಗಿಬರೋಣ."

ಜ್ಯೋತಿಯ ಕರೆಯಲ್ಲಿ ಪ್ರೀತಿ ಇತ್ತು.

"ಕ್ಷಮಿಸಿ. ಇನ್ನೊಂದು ದಿನ ಹೋಗೋಣ. ಈಗ ಬೇರೆ ಕೆಲಸ ಇದೆ. ಕ್ಷಮೆ ಕೇಳುವ ಧಾಟಿಯಲ್ಲಿ ಗಾಬರಿ ಕೂಡಿತ್ತು."

"ಅರ್ಥ ಆಯ್ತು. ಹಸಿದ ಕಣ್ಣುಗಳ ಸ್ಟೋರ್ ಒಡೆಯ ಕಾದಿದಾನೆ ಅಲ್ಲವೆ?"

ಬಾಗಿಲು ಬೆರಳಿನಿಂದ ಬಡಿದ ಶಬ್ದ ಕೇಳಿತು. ಆತಂಕವನ್ನು ಭೀತಿ ಅಪ್ಪಳಿಸಿತು. ಸಂತೋಷ ಒಳಬಂದ!

ಹಿಂದಿನ ಪ್ರಿಯತಮೆಯನ್ನು ನೋಡುತ್ತಾ ಮೂಕನಾಗಿ ನಿಂತ. ಅವಳಿಗೂ ಕಸಿವಿಸಿ. ಕಡೆಗೊಮ್ಮೆ ಮೆಲ್ಲನೆ ನಕ್ಕಳು.

"ಸಂತೋಷ, ತಬ್ಬಿಬ್ಬಾಗಿದ್ದೀರಿ. ನಾನು ಹಾರ್ದಿಕವಾಗಿ 'ಹಲೊ' ಅಂತೀನಿ. ನನು ಕಚ್ಚುವ ಪ್ರಾಣಿ ಅಲ್ಲ."

"ನಾನೂ ಹಲೋ ಅಂತೀನಿ. ಹಾಗೆಯೇ ಗುಡ್ ಬೈ!" ಗೊರಗುಟ್ಟಿದ.

"ಎಷ್ಟು ಸುಲಭವಾಗಿ ಹೇಳಿದ್ರಿ! ಒಂದು ಕಾಲದಲ್ಲಿ ನನ್ನ ಇಷ್ಟು ಸುಲಭವಾಗಿ ಹೋಗಲಿಕ್ಕೆ ಬಿಡ್ತಾ ಇರ್ಲಿಲ್ಲ ನೀವು. ಅದೆಲ್ಲಾ ಚಿತ್ರಾ ಮುಂದೆ ಎತ್ತೋದು ಬೇಡ..."

"ಜ್ಯೋತಿ, ದಯವಿಟ್ಟು..." ಕಾತರದಿಂದ ಬೇಡಿದ. ಅವಳು ವಿಕಟ ನಗೆ ಹಾಕಿದಳು.

ಹೋಗ್ತೀನಿ, ಸಂತೋಷ. ನಿಮ್ಮ ಪ್ರೀತಿಯ ತಾಯಿಗೆ ನನ್ನ ನೆನಪು ಕೊಡಿ. ಆ ನುಣುಪು ಮುಖದ ತಾಯಿ, ಹೂಂಕರಿಸುವ ತಂದೆ..."

ಭುಗಿಲೆದ್ದ ಕೋಪವನ್ನು ತಡೆದು ಬಾಗಿಲು ತೆರೆದು ಹಿಡಿದು ನಿಂತ.

"ಗುಡ್ ಬೈ!" ಬಿರುಸಾಗಿ ಆಣತಿ ಕೊಟ್ಟ.

ಅವಳು ಚಿತ್ರಾ ಕಡೆ ಕಣ್ಣು ಮಿಟುಕಿದಳು.

"ಗುಡ್ ಬೈ, ಸಂತೋಷ, ನಿಮ್ಮ ಸೌಜನ್ಯದ ವರ್ತನೆ ಚಿತ್ರಾಗೆ ಗೊತ್ತುಮಾಡಿ ಕೊಟ್ರಿ... ಥ್ಯಾಂಕ್ಸ್."

ಜ್ಯೋತಿ ಹೊರಬೀಳುತ್ತಲೇ ಸಂತೋಷ ಬಾಗಿಲು ರಪ್ಪನೆ ಮುಚ್ಚಿ ಬುಸುಗುಟ್ಟಿದ.

"ನಿನಗೆ ಜ್ಯೋತಿಯೊಂದಿಗೆ ಇಷ್ಟೊಂದು ಸ್ನೇಹ ಯಾವತ್ತಿನಿಂದ?"

ಬಿರುಸಿನಿಂದ ಕೇಳಿದ.

* * *

ಚಿತ್ರಾ ಚೇತರಿಸಿಕೊಂಡಳು.

"ಸ್ನೇಹ ಇತ್ತೀಚಿನದು. ಜ್ಯೋತಿ ಇಲ್ಲೇ ಹತ್ತಿರದಲ್ಲಿ ವಾಸ ಮಾಡ್ತಾಳೆ. ಆಗಾಗ್ಗೆ ನನ್ನ, ಬಿಂದೂನ ನೋಡೋದಿಕ್ಕೆ ಬರ್ತಾಳೆ. ಅವಳಿಂದ ಏನಾದ್ರು ತೊಂದರೆಯೆ?"

ಕೋಪ ಇನ್ನೂ ಇಳಿದಿರಲಿಲ್ಲ.

"ತೊಂದರೆ ಇದೇಂತ ಹೇಳ್ತೀನಿ. ಮತ್ಸರದ ಹೆಣ್ಣು ಅದು. ನಿನ್ನ ತಲೆಗೆ ಏನಾದ್ರು ತುಂಬಬಹುದು. ನಿನಗೆ ಲಾಯಕ್ಕಾದ ಸ್ನೇಹಿತೆ ಅಲ್ಲ."

"ದಡ್ಡರಿಗೆ ಹೇಳೋ ಹಾಗೆ ಹೇಳ್ತಿದೀರಿ. ನನ್ನ ಸ್ನೇಹಿತೆಯರನ್ನು ಆರಿಸಿಕೊಳ್ಳೋದು ನನಗೆ ಗೊತ್ತಿದೆ."

"ಹಾಗೇನು? ಬಿಂದು ವಿಷಯದಲ್ಲೂ ಅದೇ ಮಾತು ಹೇಳಬೇಕಾಗುತ್ತೆ. ಬಿಂದು ನಮ್ಮಿಬ್ಬರ ನಡುವೆ ಕೇಡು ತರುವ ಪ್ರಯತ್ನ ಮಾಡ್ತಿದಾಳೆ."

ಚಿತ್ರಾ ಸೆಟೆದಳು.

"ಬಿಂದು ನನ್ನ ಪ್ರಾಣ ಸ್ನೇಹಿತೆ. ಅವಳ ವಿರುದ್ಧ ನೀವು ಏನೂ ಹೇಳಕೂಡದು."

"ಅವಳೂ ನನಗೆ ವಿರುದ್ಧವಾಗಿ ನಿನ್ನಲ್ಲಿ ಏನೂ ಹೇಳಕೂಡದಷ್ಟೆ? ಅವಳಿಗೆ ನನ್ನ ಮೇಲೆ ತಿರಸ್ಕಾರ ಇದೇಂತ ಬಲ್ಲೆ. ಜ್ಯೋತಿ ನನಗೆ ನಿರಾಶೆ ಉಂಟುಮಾಡಿದ್ಲು ಅನ್ನೋದಕ್ಕಿಂತ ಹೆಚ್ಚಾಗಿ ಹೇಳಲಾರೆ.

"ಎಲ್ಲಾ ಕಥೆಗಳಿಗೂ ಎರಡು ಮುಖ ಇರುತ್ತೆ. ಒಂದು ಮುಖ ನೋಡಿದೀನಿ."

ತುಸು ತಲ್ಲಣಿಸಿದ.

"ನನ್ನ ಕಡೆಯಿಂದ ಕಥೆ ಹೇಳಬೇಕಾಗಿಲ್ಲ. ಅದು ಸತ್ತುಹೋದ ಪ್ರಸಂಗ. ನನ್ನ ಮಾತಲ್ಲಿ ವಿಶ್ವಾಸ ಇಡು. ಜ್ಯೋತಿ ಕೆಟ್ಟ ಹೆಣ್ಣು. ನಿನಗೆ ಅವಳ ಸ್ನೇಹ ಬೇಡ."

"ಇದು ನ್ಯಾಯವಾದ ಮಾತಲ್ಲ."

"ಮೋಸದ ಹೆಣ್ಣಿನ ಪರವಾಗಿ ಮಾತನಾಡೋದು ನಿನಗೂ ನ್ಯಾಯ ಅಲ್ಲ."

"ನಿಮಗೆ ವಿರುದ್ಧವಾಗಿ ಜ್ಯೋತಿ ಒಂದು ಪದವನ್ನೂ ಬಳಸಿಲ್ಲ,"

"ನನ್ನ ತಂದೆ, ತಾಯಿ ವಿರುದ್ಧವಾಗಿ?"

ತುಟಿ ಕಚ್ಚಿ ಮೌನ ತಳೆದಳು. ಸಂತೋಷ ಮತ್ತೆ ಹೇಳಿದ.

"ನನ್ನ ತಂದೆ, ತಾಯಿ ನಿನಗೆ ಶತ್ರುಗಳು ಅನ್ನಿಸಿರೋದು ಅವಳಿಂದಲೇ. ಜ್ಯೋತಿ ಹಾಕ್ತಿರೊ ಬೆಂಕಿಗೆ ನಿನ್ನ ಇನ್ನೊಬ್ಬ ಸ್ನೇಹಿತೆ ಬಿಂದು ಎಣ್ಣೆ ಹುಯ್ತಿದಾಳೆ. ನೀನು ಬೇರೆ ಯೋಗ್ಯ ಸ್ನೇಹಿತೆಯರನ್ನು ಆರಿಸಿಕೊಳ್ಳೋದು ಒಳ್ಳೇದು."

"ಸ್ವಲ್ಪ ಎಚ್ಚರಿಕೆಯಿಂದ ಮಾತಾಡಿ, ಸಂತೋಷ. ನನ್ನ ಸ್ನೇಹಿತೆಯರನ್ನು ಇಷ್ಟು ಕಠಿಣವಾಗಿ ವಿಮರ್ಶೆ ಮಾಡ್ಬೇಡಿ."

ಮಾತು ಅತಿಯಾಯಿತೆಂದು ಅವನಿಗೆ ಅರಿವಾಯಿತು.

"ನಾವು ಹೀಗೆ ಮತ್ತೆ ಯಾವತ್ತೂ ಚರ್ಚೆ ಮಾಡೋದು ಬೇಡ."

ಕಳಕಳಿಯಿಂದ ಬೇಡಿದಳು. ಅವಳ ತುಟಿಗಳ ಮೇಲೆ ಬೆರಳಾಡಿಸಿದ.

"ನನ್ನ ಹೊಸ ಸ್ಟೋರ್‌ಗೆ ಸಂಬಂಧಪಟ್ಟ ಕೆಲಸದ ಮೇಲೆ ನಾಳೆ ಬೊಂಬಾಯಿಗೆ ಹೋಗ್ತಾ ಇದೀನಿ. ಜಯಂತ್ ಒಳ್ಳೆ ಸಹಾಯಕನಾಗಿದ್ದ. ಅವನು ನಮ್ಮನ್ನು ಬಿಟ್ಟುಹೋಗ್ತಿದಾನೆ. ನಾಳೆ ಭೇಟಿ ಆಗು."

ಅಷ್ಟು ಹೇಳಿ ಹೊರಟ. ಉಮ್ಮಳಿಸಿದ ಅಳು ತಡೆದಳು. ಸಂಜೆಯ ತಿರುಗಾಟದ ಕಾರ್ಯಕ್ರಮ ಮುರುಟಿಹೋಯಿತು.

ಮರುದಿನ ಉಪಾಹಾರದ ವೇಳೆಯಲ್ಲಿ ಸಂತೋಷ ಬೊಂಬಾಯಿಗೆ ಹೊರಡುವ ಮೊದಲು ಅರ್ಧ ತಾಸು ಅವನೊಂದಿಗೆ ಕಳೆದು ಲೈಬ್ರರಿಗೆ ಹೊರಟಳು.

ಯಾರೋ ಹಿಂಬಾಲಿಸುತ್ತಿರುವಂತೆ ಭಾಸವಾಯಿತು. ಯಾರೆಂಬುದು ತಿಳಿಯಲಿಲ್ಲ. ನೆರಳಿನ ಭಯ ಮರುಕಳಿಸಿತು.

ಲೈಬ್ರರಿಗೆ ಭೇಟಿ ಕೊಟ್ಟು, ವನಿತಾ ಮಾರ್ಕೆಟ್ ಸೇರಿದ ಚಿತ್ರಾ ಹಣ್ಣಿನ ರಸದ ಡಬ್ಬಗಳನ್ನು ಕೊಂಡು ಹೊರ ಅಂಗಳಕ್ಕೆ ಬರುತ್ತಲೇ ಆಳು ಅವಳನ್ನು ತಡೆದ.

"ಸ್ವಲ್ಪ ಒಳಗೆ ಬರಬೇಕು ನೀವು."

ಮ್ಯಾನೇಜರ್ ಕೋಣೆಗೆ ಕರೆದೊಯ್ದ.

"ನಿಮ್ಮ ಷಾಪಿಂಗ್ ಚೀಲ ಇಲ್ಲಿ ಕೊಡಿ. ನಾನು ಸ್ವಲ್ಪ ನೋಡಬೇಕು. ಕೈ ಚಾಚಿದ ಮ್ಯಾನೇಜರ್. ಅವಳ ಮೈ ಬಿಸಿಯಾಯಿತು.

"ಅದರಲ್ಲಿರೋದು ಇಲ್ಲಿ ಕೊಂಡ ಎರಡು ಫ್ರೂಟ್ ಜ್ಯೂಸ್ ಡಬ್ಬಿಗಳು. ಮತ್ತೆ ಎರಡು ಲೈಬ್ರರಿ ಪುಸ್ತಕಗಳು."

"ಹಾಗಾದರೆ ತೋರಿಸೋದಿಕ್ಕೆ ಅಡ್ಡಿಯೇನು?"

ಮ್ಯಾನೇಜರ್ ಚೀಲದ ವಸ್ತುಗಳನ್ನು ಮೇಜಿನ ಮೇಲೆ ಹರಡಿದ.

ಪುಸ್ತಕ, ಡಬ್ಬಿಗಳೊಂದಿಗೆ ಪ್ಲಾಸ್ಟಿಕ್ ಹೊದಿಕೆಯಲ್ಲಿದ್ದ ಒಂದು ಡಜನ್ ರೇಷ್ಮೆ ಕರವಸ್ತ್ರಗಳು!

ಬಣ್ಣದ ಕರವಸ್ತ್ರಗಳ ಮೇಲೆ ಕಣ್ಣುಗಳು ಪಕಪಕ ಹೊರಳಿದವು.

" ಈ ಕರ್ಚೀಫ್ ಎಲ್ಲೀದು?.... ನನಗೆ ಯಾಕೆ ಇವು?"

ಮೇಲುಸಿರಿನಲ್ಲಿ ಉದ್ಗರಿಸಿದಳು?

"ಅಂದರೆ ನೀವು ಇದಕ್ಕೆ ಹಣ ಕೊಟ್ಟಿಲ್ಲ...?"

ಮ್ಯಾನೇಜರ್ ಹೊಸ ಶೋಧನೆ ನಡೆಸಿದವನಂತೆ ನಡುವಿಗೆ ಕೈಯಿಟ್ಟು ಕಣ್ಣು ಕಿರಿದು ಮಾಡಿ ನಿಂತ.

"ಇಲ್ಲ, ಇವು ಹೇಗೆ ಬಂದ್ವು ಅನ್ನೋದು ಗೊತ್ತಿಲ್ಲ."

"ಕ್ಷಮಿಸಿ, ಮಿಸ್. ನೀವು ಕರ್ಚೀಫ್ ಕದ್ದು ಒಯ್ತಾ ಇದೀರೀಂತ ಯಾರೋ ಫೋನ್ ಮಾಡಿದ್ರು. ನೀವು ಈ ಕಡೆ ಕುಳಿತುಕೊಳ್ಳಿ."

ಚಿತ್ರಾಳ ಮಂಜು ಕಣ್ಣುಗಳ ಮುಂದೆ ನೆರಳು ಅಗಾಧವಾಗಿ ಬೆಳೆದು ನಿಂತಿತು.

"ಯಾರೋ ನನ್ನ ಬಲೆಗೆ ಹಾಕಿದಾರೆ?" ಗದ್ಗದಿತಳಾದ ಚಿತ್ರಾ ತಲೆಗೆ ಕೈ ಹಚ್ಚಿದಳು.

ಹಿ

ತಲೆ ತಗ್ಗಿಸಿ ನಿಂತವಳ ಕಡೆ ನ್ಯಾಯಾಧೀಶ ತುದಿಗಣ್ಣಿನಲ್ಲಿ ನೋಡಿ ತೀರ್ಪು ನೀಡಿದ.

"ಕಳೆದ ಸಾರಿ ನಿನ್ನ ವಿಷಯದಲ್ಲಿ ಕೋರ್ಟು ಉದಾರಭಾವ ತೋರಿತ್ತು. ಈ ಬಾರಿ ಜೈಲು ಶಿಕ್ಷೆ ವಿಧಿಸುವುದನ್ನು ತಪ್ಪಿಸಿ ನೀನು ಪ್ರಾಮಾಣಿಕ ಬದುಕು ನಡೆಸಲು ಇನ್ನೊಂದು ಕೊನೆಯ ಅವಕಾಶ ನೀಡಿದೆ. ನಿನಗೆ ಐವತ್ತು ರೂಪಾಯಿ ಜುಲ್ಮಾನೆ ವಿಧಿಸಿದೆ."

ಚಿತ್ರಾಳ ಜುಲ್ಮಾನೆ ಹಣ ಒಪ್ಪಿಸಿದ ಬಿಂದು ಅವಳನ್ನು ಕಾಫಿ ಬಾರ್‌ಗೆ ಕರೆದೊಯ್ದಳು.

"ಇದರಲ್ಲಿ ನೀಲಂಕಾರರ ಕೈವಾಡ ಇದೇಂತ ನೀನು ಯಾಕೆ ಹೇಳ್ಲಿಲ್ಲ?"

ಸ್ನೇಹಿತೆ ಬೇಸರ ವ್ಯಕ್ತಪಡಿಸಿದಳು.

"ಅದಕ್ಕೆ ಆಧಾರ ಏನಿದೆ? ಹಾಗೆ ಹೇಳಿದ್ರೆ ಇನ್ನೂ ಕೋಟಲೆಗೆ ಸಿಕ್ತಿದ್ದೆ. ಈ ಪ್ರಸಂಗಗಳ ಹಿಂದೆಲ್ಲಾ ನೀಲಂಕಾರರು ಇರೋದು ನಿಜವೆ? ಇಲ್ಲಾ, ನನಗೆ ಬುದ್ಧಿ ಭ್ರಮಣೆ ಆಗಿದೆಯೆ...? ನಾನು ಕಳ್ಳತನ ಮಾಡಿದ್ನೆ?"

ನಿಸ್ಸಹಾಯಕಳಾಗಿ ಸೋತು ಕುರ್ಚಿಗೆ ಒರಗಿದಳು.

"ನಿನಗೆ ಬುದ್ಧಿ ಸರಿಯಾಗಿದೆ, ಕೆಟ್ಟ ತಂದೆ, ತಾಯಿಗಳ ಮಗನಿಗೆ ನೀನು ಹೃದಯ ಅರ್ಪಿಸಿ ಕಂಗಾಲಾಗಿದ್ದೀಯ. ನೀಲಂಕಾರ್ ಮಹಾಶಯ ಮಗನ್ನ ಬೊಂಬಾಯಿಗೆ ಕಳಿಸಿ ನಿನ್ನ ಮೇಲೆ ತಂತ್ರ ಹೂಡಿದ್ರು."

"ವನಿತಾ ಮಾರ್ಕೆಟ್‌ನಲ್ಲಿ ಅವರು ಕೈವಾಡ ಹೇಗೆ ನಡೆಸಿದ್ರು ಅಂತ ಅರ್ಥ ಆಗ್ಲಿಲ್ಲ."

"ಕಳ್ಳತನ ಹೊರಿಸೋದಿಕ್ಕೆ ಅದೇ ಸ್ಥಳ. ಕಣ್ಣೀರು ಹರಿಸಿದಳು ಚಿತ್ರಾ."

"ಊರಿಗೆ ಗೊತ್ತಾದ್ರೆ ಅಮ್ಮ ನೊಂದುಕೊಳ್ತಾಳೆ. ನೀನು ಜೊತೆಗೆ ಬರದಿದ್ರೆ ಜೈಲು ಕಾಣ್ತಿದ್ದೆ."

"ಕೆಟ್ಟದ್ದು ಆಡಬೇಡ." ಅವಳ ಹಸ್ತ ಒತ್ತಿದಳು.

"ಪತ್ರಿಕೆಯಲ್ಲಿ ನನ್ನ ಹೆಸರು ಬಂದುಬಿಡುತ್ತೆ. ಸಂತೋಷ ಈ ಸಾರಿ ನನ್ನ ನಂಬೋದಿಲ್ಲ."

ಬಿಂದು ಮೊಂಡಾದಳು.

"ಚಿಂತೆ ಇಲ್ಲ. ಕೆಟ್ಟ ಶ್ರೀಮಂತನ ಮಗನ್ನ ಮದುವೆ ಆಗಿ ನೀನು ಸುಖ ಪಡೋದೇನಿದೆ?"

ಚಿತ್ರಾ ಮನೆ ಸೇರಿದಳು. ದುಃಸ್ವಪ್ನ ಹಗಲಿನಲ್ಲೇ ಸಾಗಿತು. ಸಂಜೆಯ ಪತ್ರಿಕೆಯ ಮೂರನೆ ಪುಟದಲ್ಲಿ ಪ್ರಕರಣ ಪ್ರಕಟವಾಗಿತ್ತು. ಚಿತ್ರಾ ಅಪಮಾನದಿಂದ ಹಿಡಿ ಗಾತ್ರಕ್ಕೆ ಬಂದಳು.

"ನಾನೂ ಸುದ್ದಿ ಓದಿದೆ."

ಅಕಾಲಿಕವಾಗಿ ಬಂದಿದ್ದ ಜ್ಯೋತಿ ಸೌಹಾರ್ದತೆಯ ಮಾತಾಡಿದಳು.

"ಇದಕ್ಕಿಂತ ಬೇರೆ ಅವಮಾನ ಬೇಕೆ?"

"ಯಾರೋ ಹೂಡಿದ ಕುತಂತ್ರಕ್ಕೆ ಬಲಿಯಾದ್ದು ಅವಮಾನ ಅಲ್ಲ. ನೀಲಂಕಾರರ ಕುತಂತ್ರಕ್ಕೆ ನೀವು ಎರಡನೆ ಸಾರಿ ಬಲಿಯಾದ್ರಿ ಅಂತ ನನಗೆ ಹೇಳಬೇಕಾಗಿಲ್ಲ. ಬಿಂದುವಿಗೂ ಹಣದ ತೊಂದರೆ ಇರಬೋದು ಹಣ ಕೊಡಲೆ?"

"ಬೇಡ, ಥ್ಯಾಂಕ್ಸ್"

"ಬಹುಶಃ ನಿಮ್ಮನ್ನ ಜೈಲಿಗೆ ಕಳಿಸೋವರೆಗೆ ಅವರಿಗೆ ಸಮಾಧಾನ ಇಲ್ಲ. ಮುಂದಿನ ಸಾರಿಗೆ ಯಾವ ಜಾಲ ಹೂಡ್ತಾರೋ?

ಮುಂದಿನ ಸಾರಿಗೆ ಯಾವ ಜಾಲ? ಸಂತೋಷ ದೂರವಾದರೆ ಜಾಲ ಸುಳಿಯಲಿಕ್ಕಿಲ್ಲ. ಅವನನ್ನು ಕಳೆದುಕೊಳ್ಳುವುದು ಸುಲಭವಲ್ಲ!

ಚಿತ್ರಾ ಭೀತಿಯ ಸುಳಿಯಲ್ಲಿ ಸಿಕ್ಕಿದಳು. ಅವಳಿಗೆ ನೀಲಂಕಾರರ ನೆನಪು ಭೀಕರ ನೆರಳಿನಂತೆ! ಸಂತೋಷ ಹಿಂತಿರುಗಿದ ಮೇಲೆ ಅದೃಷ್ಟ ಪರೀಕ್ಷೆ.

ಮೊದಲು ಅವಳು ಜಯಂತನನ್ನು ಎದುರಿಸಬೇಕಾಗಿತ್ತು.

"ಅಪರಾಧಿಯೋ, ನಿರಪರಾಧಿಯೋ?"

ಬೆಳಿಗ್ಗೆ ಬರುತ್ತಲೇ ಜಯಂತ ಆಕಾಶ ನೋಡುತ್ತಾ ಕೇಳಿದ. ಪ್ರಶ್ನೆಯಲ್ಲಿ ಸಹಾನುಭೂತಿ ಇತ್ತು.

"ನನಗೆ ಏನೂ ತೋಚದ ಹಾಗೆ ಆಗಿದೆ. ನನ್ನ ಪಾಡಿಗೆ ನನ್ನ ಬಿಟ್ಟುಬಿಡಿ."

ಸೋತವಳ ಉತ್ತರ ಅದು.

ಮತ್ತೆರಡು ದಿನಗಳು ಕಳೆದವು. ಹಿಂತಿರುಗಿದ ಸಂತೋಷ ಮಧ್ಯಾಹ್ನ ಅವಳನ್ನು

ಫೋನ್‌ನಲ್ಲಿ ಕರೆದ. ಚೇಂಬರ್‌ನಲ್ಲಿ ಹೊಸ ಮೇಜಿನ ಮುಂದೆ ಕುಳಿತವನ ಹುಬ್ಬುಗಳು ಏರಿದ್ದವು. ಅವಳ ಕೋರ್ಟ್ ಕೇಸಿನ ವರದಿ ಮೇಜಿನ ಮೇಲಿತ್ತು. ನೊಂದ ಮುಖದಲ್ಲಿ ಎದ್ದು ಅವಳ ಮುಂದೆ ಬಂದ.

"ನೀನೇ ಎಲ್ಲಾ ಹೇಳಿಬಿಡು."

ನಮ್ರವಾಗಿ ಹೇಳಿದ. ಅವಳನ್ನು ತೋಳಿನಲ್ಲಿ ಬಂಧಿಸಲಿಲ್ಲ.

"ಎಲ್ಲಾ ನಿಮ್ಮ ಮುಂದಿರೋ ವರದಿಯಲ್ಲಿದೆ. ಅದಕ್ಕೆ ನಾನು ಸೇರಿಸೋದು ಏನೂ ಇಲ್ಲ. ಸೇರಿಸಲೇ ಬೇಕಾಗಿದ್ರೆ ಇಷ್ಟು. ನಾನು ಕರ್ಚೀಫ್‌ಗಳನ್ನು ಕದಿಯಲಿಲ್ಲ."

"ಇದೇ ಮಾತು ಹಿಂದೆ ಹಣದ ಬಗ್ಗೆಯೂ ಹೇಳಿದ್ದೆ. ನಾನು ನಂಬಿದ್ದೆ."

"ಈ ಸಾರಿ?"

"ಕೋರ್ಟ್ ತೀರ್ಪಿನ ಪ್ರಕಾರ ನೀನು ಅಪರಾಧಿ ಅಂತ ನಾನೂ ಹೇಳಬೇಕಾಗುತ್ತೆ."

ಚಿತ್ರಾ ಪ್ರತಿಧ್ವನಿಸಿದಳು.

"ಅಪರಾಧಿ!"

"ಮತ್ತೇನು? ಮೂರು ತಿಂಗಳು ಅವಧಿಯಲ್ಲಿ ಒಂದೇ ವ್ಯಕ್ತಿಗೆ ನ್ಯಾಯ ಎರಡನೆ ಸಾರಿಗೆ ತಪ್ಪು ದಾರಿ ಹಿಡೀತು ಅಂತಲೇ?"

"ನ್ಯಾಯ ತಪ್ಪು ದಾರಿ ಹಿಡೀತು ಅಂತ ಹೇಳ್ಳಿಲ್ಲ. ಸಾಕ್ಷಿ, ಆಧಾರಗಳ ಮೇಲೆ ನ್ಯಾಯಾಲಯ ಶಿಕ್ಷೆ ವಿಧಿಸ್ತು. ನನ್ನ ಚೀಲದಲ್ಲಿ ಸಿಕ್ಕಿದ್ದ ಕರವಸ್ತ್ರಗಳು ನಾನು ಕದ್ದದ್ದಲ್ಲ."

"ಮತ್ತೆ ಯಾರು ಮಾಡಿದ್ರು ಆ ಕೆಲಸ?"

"ಗೊತ್ತಿಲ್ಲ."

ನೀನು ಕುತಂತ್ರಕ್ಕೆ ಸಿಕ್ಕಿದೆ ಅಂತ ಕಳೆದ ಸಾರಿ ಹೇಳ್ದೆ."

"ನೀವು ನಂಬದಿದ್ರೆ ಅದನ್ನೇ ಮತ್ತೆ ಹೇಳಿ ಪ್ರಯೋಜನವಿಲ್ಲ. ನನಗೆ ಸಾಧಿಸೋ ಶಕ್ತಿ ಇಲ್ಲ. ನಾನು ಕಳ್ಳಿ ಅಂತ ನೀವು ನಿಶ್ಚಯ ಮಾಡ್ಕೊಂಡಿದೀರಿ."

ತನ್ನ ಕುರಿತು ವಿಶ್ವಾಸದ, ಸಮಾಧಾನದ ಮಾತು ಆಡುತ್ತಾನೆಂದು ಬಗೆದಳು. ಸ್ನೇಹಿತ ಜಯಂತ್‌ಗೆ ತನ್ನಲ್ಲಿ ವಿಶ್ವಾಸವಿದೆ. ಪ್ರೇಮಿಸುವ ವ್ಯಕ್ತಿಗೆ ಏಕೆ ವಿಶ್ವಾಸವಿಲ್ಲ?

ಅವಳ ಮುಂದಲೆ ನೇವರಿಸಿದ.

"ಹೌದು, ನೀನು ಕಳ್ಳಿ ಅಂತ ಭಾವಿಸ್ತೀನಿ. ಆದರೆ ಪ್ರಪಂಚ ಭಾವಿಸೋ ರೀತಿಯಲ್ಲಲ್ಲ, ನಿನಗೆ ಕಳ್ಳತನ ಮಾಡೋ ಉದ್ದೇಶ ಇರ್ಲಿಲ್ಲ. ಆದರೂ ಮಾಡ್ದೆ! ಯಾಕೆ?... ನಿನ್ನ ನೈತಿಕ ನಡತೆಯನ್ನು ಹತೋಟಿಯಲ್ಲಿಟ್ಟಿರೋ ಕೇಂದ್ರದ ಮೇಲೆ ಕತ್ತಲು ಕವಿದಿದೆ. ಆದೊಂದು ರೀತಿಯ ಮಾನಸಿಕ ಬೇನೆ. ವೈದ್ಯರು ಅದನ್ನ 'ಮಾರಲ್ ಬ್ಲಾಕ್ ಔಟ್' ಅಂತಾರೆ."

"ನಿಮ್ಮ ಹಿಂದಿನ ಪ್ರಿಯತಮೆಗೂ ಅದೇ ಬೇನೆ ಇತ್ತೆ?"

ವ್ಯಂಗ್ಯ ಸ್ಪಷ್ಟವಾದರೂ ಪ್ರಶ್ನೆ ಕಂಪಿಸಿತು.

ಸಂತೋಷ ಸಹನೆ ಕಾಪಾಡಿಕೊಂಡಿದ್ದ.

"ನಿನ್ನ ಮೆದುಳಿನ ಮೇಲೆ ಯಾವುದೊ ಯಕ್ಷಿಣಿ ಶಕ್ತಿ ಆವರಿಸಿದೆ. ಅದು ಕತ್ತಲು ಹರಡಿದೆ. ಅದರ ಪ್ರಭಾವ ಜಾಸ್ತಿ ಆದಾಗ ನಿನಗೆ ಸರಿ, ತಪ್ಪು ಎರಡೂ ಒಂದೇ ರೀತಿ ಕಾಣುತ್ವೆ. ಮಾಡಬಾರದ್ದನ್ನ ಮಾಡಿಬಿಡ್ತೀಯ. ಮಿದುಳಿನ ಕೇಂದ್ರದ ಮೇಲಿರೋ ಕತ್ತಲು ನಿಧಾನವಾಗಿ ಕರಗತ್ತೆ. ಆಗ ನಿನಗೆ ಮಾಡಿರೋ ತಪ್ಪಿನ ಅರಿವಾಗತ್ತೆ. ಇಂಥಾ ಪ್ರಕರಣಗಳು ಸಾಮಾನ್ಯ. ಇದು ನನ್ನ ತಂದೆಗೆ ಗೊತ್ತು."

ಚಕಿತಳಾದಳು ಚಿತ್ರಾ.

ತನ್ನನ್ನು ಹೆದರಿಸುತ್ತಿರುವುದು ತನ್ನ ನೆರಳು!

"ನಿಮ್ಮ ತಂದೆ ಜೊತೆ ಇದನ್ನ ಚರ್ಚೆ ಮಾಡಿದೀರ?"

"ತಂದೆ, ತಾಯಿ ಇಬ್ಬರೊಂದಿಗೂ ಚರ್ಚೆ ಮಾಡಿದೀನಿ. ನಿನ್ನ ಮೇಲೆ ಅವರಿಗೆ ಸಹಾನುಭೂತಿ, ಆತಂಕ ಇದೆ. ನನ್ನ ಹಾಗೆ ಅವರೂ ತಬ್ಬಿಬ್ಬಾಗಿದಾರೆ."

"ಹಾಗೇನು ?" ಮುಗ್ಧ ಕಂಠದಲ್ಲಿ ಕೇಳಿದಳು.

ಅವಳಿಗೆ ಸಾಂತ್ವನ ನೀಡಲು ಎರಡು ಕೈಗಳನ್ನು ಭುಜಗಳ ಮೇಲಿಟ್ಟು ಅವಳ ಕಣ್ಣುಗಳಲ್ಲಿ ದೃಷ್ಟಿ ಹೂಡಿದ.

"ನಿನ್ನ ಮನಸ್ಸಿನಲ್ಲಿ ಏನು ನಡೀತಾ ಇದೇಂತ ಊಹಿಸಬಲ್ಲೆ. ನಿನ್ನ ಬೇನೆಯ ಇನ್ನೊಂದು ಲಕ್ಷಣ ಇದು. ನನ್ನ ತಂದೆ, ತಾಯಿ ನಿನ್ನ ವಿರೋಧಿಗಳು ಅನ್ನೋದು ನಿನ್ನಲ್ಲಿ ಬೇರೂರಿದೆ. ನಡೆದಿರೊ ದುರದೃಷ್ಟದ ಘಟನೆಗಳಿಗೆ ಅವರೇ ಕಾರಣ ಅಂತ ಶಾಪ ಹಾಕ್ತಾ ಇದೀಯ. ಅವರು ವಿರೋಧಿಗಳು ಅನ್ನೊ ಸಂಶಯದ ಕೀಟ ನಿನ್ನ ತಲೆಯಲ್ಲಿ ಸುತ್ತಾಡ್ತಾ ಇದೆ."

"ನೀವು ಹೇಳಿದಷ್ಟು ಸಹಜವಲ್ಲ ಅದು."

"ನೀನು ಪರ್ಸಿಕ್ಯೂಷನ್ ಕಾಂಪ್ಲೆಕ್ಸ್... ಅಂದರೆ ಒಂದು ರೀತಿಯ ಪೀಡಿತ ಮನೋಧರ್ಮ ಬೆಳೆಸಿಕೊಂಡಿದೀಯ, ನನ್ನ ತಂದೆ, ತಾಯಿನ ಸಹಜವಾಗಿ ನೋಡದೆ, ನಡೆದಿರೊ ಘಟನೆಗಳ ಮೂಲಕ ಕಾಣ್ತಾ ಇದೀಯ."

"ಈ ಎಲ್ಲ ಘಟನೆಗಳಿಗೆ ಕಾರಣ ಅವರೇ!"

ಕೋಪದಲ್ಲಿ ಅರಚಿದಳು. ಅವಳ ನಿರ್ಧಾರ ಸ್ವಲ್ಪವೂ ಸವೆದಿರಲಿಲ್ಲ ಸಂತೋಷ ಚರ್ಚೆ ಮಾಡಲು ಯತ್ನಿಸಲಿಲ್ಲ.

"ನಿನ್ನ ಬೇನೆ ವಾಸಿಯಾಗೊವರೆಗೆ ಯಾರಿಗೂ ನೆಮ್ಮದಿ ಇಲ್ಲ. ಡ್ಯಾಡಿ ಹೇಳಿದ್ರು,

ನೀನು ಮಾನಸಿಕ ಚಿಕಿತ್ಸೆಗೆ ಕೆಲವು ದಿನ ನರ್ಸಿಂಗ್ ಹೋಮ್ ಸೇರಿದ್ರೆ ಚಿಕಿತ್ಸೆ ವೆಚ್ಚದ ಹಣ ಕೊಡ್ತಾರಂತೆ."

ಮತ್ತೊಮ್ಮೆ ಅರಚಿದಳು.

"ಇಲ್ಲ, ಇಲ್ಲ! ನರ್ಸಿಂಗ್ ಹೋಮ್ ನೆಪದಲ್ಲಿ ನನ್ನ ಕೊನೆಗಾಣಿಸಿಬಿಡ್ತಾರೆ."

"ನಾನ್ಸೆನ್ಸ್ ! ಎರಡು, ಮೂರು ವಾರಗಳಲ್ಲಿ ನಿನ್ನ ಮಿದುಳಿನ ಬೇನೆ ನೇರವಾಗುತ್ತೆ. ಆಮೇಲೆ ನಮ್ಮ ಮದುವೆ!"

ಅವನ ಕಣ್ಣುಗಳಲ್ಲಿ ಕೃತ್ರಿಮ ಕಾಣಲಿಲ್ಲ.

"ಏನೇನೊ ಹೇಳ್ತಾ ಇದೀರಿ, ಸಂತೋಷ. ನಾನು ಕಳ್ಳಿ ಅಲ್ಲ. ನನಗೆ ಯಾವ ಬೇನೆಯೂ ಇಲ್ಲ. ಇನ್ನು ಚಿಕಿತ್ಸೆ ಯಾಕೆ? ನನಗೆ ಬೇಕಾಗಿರೋರು ನೀವೊಬ್ಬರೇ. ನಿಮ್ಮ ತಂದೆ, ತಾಯಿ ನನ್ನಿಂದ ನಿಮ್ಮನ್ನ ಎಳೆದುಕೊಳ್ತಾ ಇದಾರೆ."

"ಹುಚ್ಚು!"

ಅವಳ ಮೈ ಅದುರಿತು. ನೀಲಂಕಾರರು ತನಗೆ ಹೂಡಿರುವ ಮುಂದಿನ ಭೀಕರ ವ್ಯೂಹ ಯಾವುದು? ಶರಚ್ಚಂದ್ರ ಆತ್ಮಹತ್ಯೆ ಮಾಡಿಕೊಂಡ. ಜ್ಯೋತಿಯ ಹೆಸರಿಗೆ ಕಪ್ಪು ಬಣ್ಣ ಹಚ್ಚಿದ್ದಾಯ್ತು. ಬಿಂದು ಕೆಲಸದಿಂದ ವಜಾ ಆದಳು. ತನ್ನ ಮೇಲೆ ಜೈಲಿನ ನೆರಳು ತೂಗಾಡುತ್ತಿದೆ. ಅಷ್ಟರಿಂದ ಅವರಿಗೆ ತೃಪ್ತಿಯೆ?

ತಾನು ಸಂತೋಷನನ್ನು ಮರೆತರೆ, ಇಲ್ಲವೆ ಅವನು ತನ್ನನ್ನು ತ್ಯಜಿಸಿದರೆ ಅಪಾಯ ಸರಿದೀತು. ಅವಳು ಅವನನ್ನು ಮರೆಯಲಿಲ್ಲ. ಕೋರ್ಟು ತೀರ್ಪಿನ ವರದಿಯ ನಂತರವೂ ಅವನು ಅವನನ್ನು ಕೆಲಸದಿಂದ ವಜಾ ಮಾಡಲಿಲ್ಲ.

"ನಾನೇ ಈ ಸಂಸ್ಥೆಯ ಕಾನೂನು ಮಾಡೋದು" ಹುಬ್ಬು ಕುಣಿಸಿದ.

"ನಾನು ಇಲ್ಲಿ ಉಳಿದರೆ ಮತ್ತೇನಾದರೂ ಭೀಕರವಾದ್ದು ಸಂಭವಿಸುತ್ತೆ."

"ಅದು ಸಂಭವಿಸದ ಹಾಗೆ ನೋಡಿಕೊಳ್ಳೊ ಪ್ರಯತ್ನ ಮಾಡ್ತೀನಿ. ನೀನು ಮಾನಸಿಕ ಚಿಕಿತ್ಸೆಗೆ ಒಳಗಾದರೆ ನನಗೆ ಸಂತೋಷ."

ಶತ್ರುವಿನ ವ್ಯೂಹಕ್ಕಾಗಿ ಪ್ರತಿದಿನವೂ ಕಾತರಿಸಿದಲು. ನರಗಳನ್ನು ಶಿಥಿಲಗೊಳಿಸುವ ಅನುಭವ ಅದು. ಸ್ಟೋರ್‌ಗೆ ಬರುವಾಗ, ಸಂಜೆ ಅಲ್ಲಿಂದ ಹಿಂತಿರುಗುವಾಗ ತನ್ನ ಮೈದಡವಿಕೊಂಡು, ಕೈಚೀಲವನ್ನು ಪದೇ ಪದೇ ನೋಡಿಕೊಂಡು ಅದರಲ್ಲಿ ಏನೂ ಇಲ್ಲವೆಂದು ಖಚಿತಪಡಿಸಿಕೊಳ್ಳುವ ಧಾವಂತ.

ಕಾಂಪ್ಲೆಕ್ಸ್ ಕಟ್ಟಡದ ಕೆಳ ವಿಭಾಗ ಅತಿ ವಿಶಾಲವಾಗಿತ್ತು. ಅಲ್ಲಿ ಚಿತ್ರಾ ಒಬ್ಬಳೇ! ಜಯಂತ ಹಾಗೂ ಅವನ ಸಹಾಯಕ ಎದುರು ಭಾಗದ ಸಾರಿಗೆ ಕಂಪೆನಿಯ ಲೆಕ್ಕಗಳನ್ನು ಹಿಂದಿನ ದಿನದಿಂದ ಹದಗೊಳಿಸುತ್ತಿದ್ದರು. ಬಿಂದು ಮೂರನೆಯ ಅಂತಸ್ತಿನಲ್ಲಿದ್ದಳು.

ಹಜಾರದಲ್ಲಿ ಸುತ್ತಲೂ ಕಣ್ಣು ಹರಿಸಿದ್ದಳು ಚಿತ್ರಾ.

ತನಗೇನಾದರೂ ಸಂಭವಿಸಿದಲ್ಲಿ ಅದು ಯಾರಿಗೂ ತಿಳಿಯುವಂತಿಲ್ಲ. ಕೊಲೆಗೆ ಸೂಕ್ತ ಸ್ಥಳ! ಓರೆಕೋರೆ ನೆರಳುಗಳ ಕಡೆಯಿಂದ ಯಾವನಾದರೂ ತನ್ನ ಮೇಲೆ ಜಿಗಿದು, ಕೊಲೆ ಮಾಡಿ ದೇಹವನ್ನು ಎತ್ತರದ ಉಕ್ಕಿನ ಕಪಾಟುಗಳ ನಡುವೆ ಸೇರಿಸಿಬಿಡುತ್ತಾನೆ!...

ಫೋನ್ ಗಂಟೆ ಹಗಲಿನ ದುಃಸ್ವಪ್ನವನ್ನು ಸೀಳಿತು. ಜಯಂತನಿಂದ ಬಂದ ಸುದ್ದಿ ಅದು. ಕಾಗದದ ಟೇಪಿನ ಸುರುಳಿಗಳನ್ನು ಸಾರಿಗೆ ಕಂಪೆನಿಯು ಕಚೇರಿಗೆ ತರುವಂತೆ ಕರೆ. ಅಲ್ಲಿ ಜಯಂತ ಮಾರಾಟದ ಗಣಕಯಂತ್ರಗಳನ್ನು ಪ್ರಯೋಗಿಸಿ ತೋರುತ್ತಿದ್ದ.

ಸ್ಟೋರ್ ಮತ್ತೊಬ್ಬನಿಗೆ ಒಪ್ಪಿಸಿದ ಹೊರತು ಅವಳು ಹೊರಬೀಳುವಂತಿಲ್ಲ. ಆಳು ಯಾವುದೊ ಕೆಲಸದ ಮೇಲೆ ಹೋಗಿದ್ದ. ಮಧ್ಯದ ರಸ್ತೆ ದಾಟಿ ಎದುರಿನ ಕಂಪೆನಿಗೆ ಹೋಗಿ ಬರಲು ಐದು ನಿಮಿಷಗಳು ಸಾಕು.

ಬೆನ್ನಿನ ನೆರಳು ತತ್ಕಾಲಕ್ಕೆ ದೂರವಾದಂತೆ ಕಂಡಿತು. ಪೇಪರ್ ಟೇಪ್ ಸುರುಳಿಗಳನ್ನು ತಬ್ಬಿ ಹಿಡಿದು ರಸ್ತೆ ದಾಟಿದಳು. ಎದುರಿನಿಂದ ಬರುತ್ತಿದ್ದ ಜಯಂತನ ದಿಕ್ಕಿಗೆ ಓಡಿದಳು.

"ಚಿತ್ರಾ, ಡಿಪಾರ್ಟ್‌ಮೆಂಟ್ ಬಿಟ್ಟು ಇಲ್ಲಿಗೇಕೆ ಬಂದ್ರಿ?" ಗದರಿಕೆಯಿಂದ ಕೇಳಿದ.

"ನೀವು ಈ ಟೇಪ್‌ಗಳಿಗೆ ಹೇಳಿ ಕಳಿಸಿದ್ರಿ. ಹುಡುಗ ಅಂಚೆ ಕಚೇರಿಗೆ ಹೋಗಿದಾನೆ. ನಾನೇ ಬಂದೆ."

"ನಾನು ಟೇಪ್ ಸುರುಳಿಗೆ ಹೇಳಿ ಕಳಿಸಲಿಲ್ಲ! ಯಾರು ಹೇಳಿದ್ದು ಹಾಗಂತ?"

"ಯಾರೋ ಈ ಸಾರಿಗೆ ಕಂಪೆನಿಯಿಂದ ಐದು ನಿಮಿಷಗಳ ಹಿಂದೆ ಫೋನ್ ಮಾಡಿದ್ರು."

ಇಬ್ಬರೂ ಆತುರದಿಂದ ಸ್ಟೋರ್‌ಗೆ ಹಿಂತಿರುಗಿದರು. ಹಜಾರ ಅವಳು ಬಿಟ್ಟು ಬಂದಾಗ ಇದ್ದಂತೆ ಬಿಕೊ ಎನ್ನುತ್ತಿತ್ತು."

ಜಯಂತ ಸುತ್ತಲೂ ನೋಡಿದ.

"ಯಾರೊ ನಿಮ್ಮನ್ನ ಇಲ್ಲಿಂದ ಸ್ವಲ್ಪ ಕಾಲ ಹೊರಕ್ಕೆ ಹೋಗೊ ಹಾಗೆ ಮಾಡಿದಾರೆ..."

ಅವನ ದೃಷ್ಟಿ ಏಕಾಏಕಿ ಪ್ರದರ್ಶನದ ಗಾಜಿನ ಕೇಸ್ ಕಡೆ ಹರಿಯಿತು. ಅತ್ತ ಬೆರಳು ಮಾಡಿದ.

"ಷೋಕೇಸ್‌ನಲ್ಲಿದ್ದ ಕ್ಯಾಮರಾನ ನೀವು ಮಾರಾಟ ಮಾಡಿದ್ರಾ?"

ನಕ್ಷತ್ರ ಕಣ್ಣುಗಳು ಕ್ಷಣದಲ್ಲಿ ಕಾಂತಿಹೀನವಾದವು.

ಪ್ರದರ್ಶನದ ಗಾಜಿನ ಹಿಂದೆ ಖಾಲಿಯಾದ ಭಾಗ ಅವಳ ಕಣ್ಣುಗಳನ್ನು ಇರಿಯಿತು.

"ಅದು ಅಲ್ಲೇ ಇತ್ತು. ತಾಸಿನ ಹಿಂದೆ ನಾನೇ ನೋಡಿದ್ದೆ."

ನೀವು ಸಾರಿಗೆ ಕಂಪೆನಿ ಮುಂದೆ ಬರುವಷ್ಟರಲ್ಲಿ ಯಾರೊ ಹಾರಿಸಿದ್ದಾರೆ."

ಅವಳ ನರಗಳು ಪಟಪಟಿಸಿದವು.

"ನನ್ನ ವಶದಲ್ಲಿದ್ದ ವಿದೇಶಿ ಕ್ಯಾಮರಾ?... ಯಾರೊ..."

"ತಪ್ಪು ನಿಮ್ಮದೇ. ನಾನು ಈ ಬಗ್ಗೆ ಈಗಲೇ ರಿಪೋರ್ಟ್ ಮಾಡಬೇಕು...."

"ಹಾಗೆ ಮಾಡ್ಬೇಡಿ, ಜಯಂತ್. ಬೇಡ..."

ಗೋಗರೆಯುತ್ತಾ ಬಿಕ್ಕಳಿಸಿದಳು.

ಅವನು ಸುತ್ತಲೂ ನೋಡಿದ. ತಲೆ ನೇವರಿಸುತ್ತಾ ಯೋಚಿಸಿದ.

"ನೀವು ಅದನ್ನ ಕದಿಯಲಿಲ್ಲ ಅಂತ ನನ್ನ ಮನಸ್ಸು ಹೇಳತ್ತೆ. ಇದು ಇನ್ನೊಂದು ಕುತಂತ್ರ. ನಿಮ್ಮ ಮೇಲೆ ಕಳ್ಳತನದ ಪಟ್ಟಿ ಹಾಕೋದು ಇಲ್ಲಿ ಕಷ್ಟವಲ್ಲ. ಹಾಂ, ಹಾರಿಸಿದ ಕ್ಯಾಮರಾನ ನಿಮ್ಮ ಕೋಣೆಯಲ್ಲಿಟ್ಟು ಹುನ್ನಾರು ನಡೆಸಿದ್ರೆ..."

ಕುರ್ಚಿಗೆ ಕುಸಿದಳು.

"ಈಗೇನು ಮಾಡ್ಲಿ?"

"ಕುಳಿತಿರೋ ಸ್ಥಳದಿಂದ ಕದಲಬೇಡಿ. ನಿಮ್ಮ ಕೋಣೆಯ ಬೀಗದ ಕೈ ಕೊಡಿ. ನಾನು ನಿಮ್ಮ ಕೋಣೆಯಲ್ಲಿ ಹುಡುಕಿ ಬರ್ತೀನಿ."

ಕೀಲಿ ಕೈ ಹಿಡಿದು ಹೊರಕ್ಕೆ ಧಾವಿಸಿದ. ಚಿತ್ರಾ ನಿತ್ರಾಣಳಾಗಿ ಕುರ್ಚಿಯಲ್ಲಿ ಸೋತು ಕಣ್ಣು ಮುಚ್ಚಿದಳು.

೬

ಚಿತ್ರಾ ಭಯದಲ್ಲಿ ತೊಯ್ದು ಕಾಯುತ್ತಾ ಕುಳಿತಳು. ಅರ್ಧ ಗಂಟೆಯಲ್ಲಿ ಜಯಂತ ವಿದೇಶೀ ಕ್ಯಾಮರಾ ಹಿಡಿದು ಬಂದಾಗ ಅವಳು ನಿರಾಳವಾಗಿ ಉಸಿರಾಡಿದಳು.

"ನಿಮ್ಮ ಹಾಸಿಗೆ ದಿಂಬಿನ ಪಕ್ಕದಲ್ಲಿತ್ತು. ಯಾರೋ ಮಿಂಚಿನ ವೇಗದಲ್ಲಿ ಕೆಲಸ ಮಾಡಿದ್ದಾರೆ. ಅಲ್ಲಿ ಯಾರೂ ಕಾಣಿಸ್ಲಿಲ್ಲ" ಎಂದು ಮೆಲ್ಲನೆ ಉಸುರಿದ.

ಫೋನ್ ಗಂಟೆ ಕೇಳಿ ಜಯಂತ ಸರಿದ. ಮಾತಾಡುತ್ತಿದ್ದಂತೆ ಅವನ ಮುಖಭಾವ ಬದಲಿಸುತ್ತಿತ್ತು.

"ಏನು, ಕ್ಯಾಮರಾ ಕಳುವಾಗಿದೆಯೇ?... ಇಲ್ಲಿ?"

ಪ್ರಶ್ನೆ ಪುನರುಚ್ಚರಿಸಿ ಅವಳ ಕಡೆ ಕಣ್ಣು ಮಿಟುಕಿಸಿ ಫೋನ್‌ನಲ್ಲಿ ನೀಡಿದ.

“ಮಿಸ್ಟರ್ ಚೆರಿಯನ್, ಹಾಗೇ ಹಿಡಿದಿರಿ ಫೋನ್... ನೋಡಿ ಬರ್ತೀನಿ.”

“ನೀಲಂಕಾರ್ ಕಾಂಪ್ಲೆಕ್ಸ್‌ನ ಪತ್ತೇದಾರ?”

ಚಿತ್ರಾ ಬಾಯಿಗೆ ಕೈ ಅಡ್ಡ ಇರಿಸಿ ಕೇಳಿದಳು. ಅವಳತ್ತ ತಲೆ ಆಡಿಸಿ ಫೋನ್‌ನಲ್ಲಿ ಉತ್ತರಿಸಿದ.

“ಕ್ಯಾಮರಾ ಸುರಕ್ಷಿತವಾಗಿದೆ. ಇಲ್ಲಿ ಯಾವುದೂ ಕಳುವಾಗಿಲ್ಲ. ಯಾರೋ ಹುಡುಗಾಟಕ್ಕೆ ಫೋನ್ ಮಾಡಿದಾರೆ.”

ಹಣೆ ಒರೆಸಿ ಎದೆಗೆ ಗಾಳಿ ಊದಿದ.

“ಯಾರೋ ನೀಲಂಕಾರ್ ಕಾಂಪ್ಲೆಕ್ಸ್‌ಗೆ ಫೋನ್ ಮಾಡಿದ್ರಂತೆ, ಒಬ್ಬ ಹುಡುಗಿ ಕ್ಯಾಮರಾನ ಅರ್ಧ ಬೆಲೆಗೆ ಮಾರೋದಿಕ್ಕೆ ಬಂದಿದಾಳೆ ಅಂತ. ಅದರ ಮೇಲೆ ನೀಲಂಕಾರ್ ಸಂಸ್ಥೆಯ ಚೀಟಿ ಇತ್ತಂತೆ.”

ಕಲ್ಪತರು ಕಾಂಪ್ಲೆಕ್ಸ್‌ನ ವಸ್ತುವಿಗೆ ನೀಲಂಕಾರ್ ಕಾಂಪ್ಲೆಕ್ಸ್‌ನ ಚೀಟಿ? ಚಿತ್ರಾಗೆ ಏನೊಂದೂ ಅರ್ಥವಾಗಲಿಲ್ಲ.

“ಆ ಹುಡುಗಿಯ ಗುರುತೂ ಹೇಳಿರಬೇಕು.”

ತುಸು ಯೋಚಿಸಿ ನುಡಿದಳು.

“ಉದ್ದನೆಯ ಜಡೆ, ಹಸಿರು ಸೀರೆ, ನಕ್ಷತ್ರ ಕಣ್ಣುಗಳು, ನಯವಾದ ಮಾತು.”

ಹಸಿರು ಸೀರೆ ನೇವರಿಸಿ ನೀಳ ಉಸಿರು ಎಳೆದುಕೊಂಡಳು. ಜಯಂತನ ನೆರವು ಇಲ್ಲವಾಗಿದ್ದರೆ ಈ ಹೊತ್ತಿಗೆ ಮೂರನೆಯ ಬಾರಿ ಕಳ್ಳತನದ ಆರೋಪಣೆ ಬರುತ್ತಿತ್ತು. ಈ ಬಾರಿ ಜೈಲು ಸೇರುತ್ತಿದ್ದೆ.

“ಸಂತೋಷನಿಗೆ ವಿಷಯ ತಿಳಿಸಬೇಕು. ಅವರಿಗೆ ಈ ಸಾರಿ ನಂಬಿಕೆ ಬರುತ್ತೆ. ಕ್ಯಾಮರಾ ನನ್ನ ಕೋಣೆಗೆ ಯಾರೋ ಒಯ್ದಿದ್ರು ಅಂತ ನೀವು ಹೇಳಬೇಕು.”

ಜಯಂತ ಪೂರ್ಣವಾಗಿ ನಿರಾಕರಿಸಿದ.

“ಇಲ್ಲಿ ಮಾಯವಾದ ವಸ್ತು ಕೋಣೇಲಿ ಸಿಗ್ತು ಅಂತ ಹೇಳಲೆ? ನಿಮ್ಮ ಕೋಣೆಗೆ ನಾನು ಹೋಗಿದ್ದು ತಿಳಿದರೆ ಸಂತೋಷನ ಹೊಟ್ಟೆ ಕುದಿಯುತ್ತೆ. ತಲೆ ಸಂಶಯದ ಗುಡಾಣ ಆಗತ್ತೆ.”

ಮಾತಿನಲ್ಲಿ ಅರ್ಥವಿತ್ತು.

“ಏನು ಮಾಡೋದೂಂತ ಗೊತ್ತಾಗ್ತಾ ಇಲ್ಲ.”

“ಕಲ್ಪತರು ಕಾಂಪ್ಲೆಕ್ಸ್ ಬಿಟ್ಟುಹೋಗೊದು ನೋಡಿ. ಇನ್ನೊಂದು ವಾರಕ್ಕೆ ನಾನೂ ಬಿಟ್ಟುಹೋಗ್ತೀನಿ. ಮೂರು ಸಾರಿ ಕುತಂತ್ರಕ್ಕೆ ಒಳಗಾಗಿದೀರಿ. ನಾಲ್ಕನೆಯ ಸಾರಿ ತಪ್ಪಿಸಿಕೊಳ್ಳೋದು ಕಷ್ಟ. ಸಂತೋಷನ್ನ ಮದುವೆ ಆಗೋದಿಕ್ಕೆ ಅವರ ಡ್ಯಾಡಿ ಅವಕಾಶ

ಕೊಡೋದಿಲ್ಲ. ನಾನು ಸಿದ್ಧವಾಗಿದ್ದೀನಿ. ನನ್ನ ಮದುವೆ ಆಗಿ!"

"ನಿಮ್ಮಲ್ಲಿ ನನಗೆ ಪ್ರೀತೀನೆ ಇಲ್ಲವಲ್ಲಾ."

"ಪ್ರೀತಿಸೋ ಹಾಗೆ ಮಾಡಬಲ್ಲೆ. ನಾನು ಒಳ್ಳೇ ಸೇಲ್ಸ್‌ಮನ್. ನಿಮಗೆ ನನ್ನನ್ನ ಮಾರಿಕೊಳ್ಳಬಲ್ಲೆ."

ಮಾತು ವಿನೋದಕರವಾಗಿತ್ತು. ಅವಳ ಕಣ್ಣುಗಳು ಮಿನುಗಿದವು. ಅವಳನ್ನು ಎದೆಗೆ ಒತ್ತಿಕೊಂಡ. ಕ್ಷಣದಲ್ಲಿ ಅವಳ ತುಟಿಗಳನ್ನು ಚುಂಬಿಸಿದ!

ಏಕಾಏಕಿ ಮುಖ ತಿರುಗಿಸಿದಳು. ಚೀತ್ಕರಿಸಿದಳು. ಕಣ್ಣುಗಳಿಗೆ ರಾಚುವಂತೆ ದಿಟ್ಟಿಸುತ್ತಾ ಮೆಟ್ಟಿಲುಗಳ ಮೇಲೆ ನಿಂತಿದ್ದ ಸಂತೋಷ! ಮರುಕ್ಷಣದಲ್ಲಿ ಹೊರಟುಹೋಗಿದ್ದ.

"ನಿಮ್ಮನ್ನು ಪ್ರೀತಿಸ್ತೀನಿ, ಚಿತ್ರಾ."

ಜಯಂತ ಕಂಪಿಸುತ್ತಾ ಹೇಳಿದ. ಅವಳಿಗೆ ಹೇಳಲು ಏನೂ ಉಳಿದಿರಲಿಲ್ಲ.

"ದಯವಿಟ್ಟು ಇನ್ನೊಂದು ಸಾರಿ ಹೀಗೆ ಮಾಡ್ಬೇಡಿ. ನಿಮ್ಮನ್ನು ಪ್ರೀತಿಸಲಾರೆ. ನಿಮ್ಮೊಂದಿಗೆ ಎಲ್ಲಿಗೂ ಬರಲಾರೆ."

"ಈ ವಾರದಲ್ಲಿ ಯೋಚನೆ ಮಾಡಿ ಹೇಳಿ."

ಸಾರಿಗೆ ಕಂಪೆನಿಯ ಕಡೆ ಹೆಜ್ಜೆ ಹಾಕಿದ.

ಹತ್ತು ನಿಮಿಷ ಕಳೆದ ಮೇಲೆ ಧೈರ್ಯವಹಿಸಿ ಸಂತೋಷನಿಗೆ ರಿಂಗ್ ಮಾಡಿದಳು. ವಿಷಯ ತಿಳಿಸಲು ನಿರ್ಧರಿಸಿದ್ದಳು. ಅವಳ ಧ್ವನಿ ಕೇಳುತ್ತಲೇ ಸಂತೋಷ ಗದರಿಕೆಯಲ್ಲಿ ಹೇಳಿದ.

"ಕೆಲಸದಲ್ಲಿ ತೊಡಗಿದೀನಿ. ಹೇಳಬೇಕಾದ್ದೇನೂ ಇಲ್ಲ."

ಅವನ ಕೋಪ ಶಮನವಾಗಲು ಮತ್ತೊಂದು ತಾಸು ಬಿಟ್ಟು ಫೋನ್ ಮಾಡಿದಳು.

"ನಿನ್ನ ಹೇಳಿಕೆಯಲ್ಲಿ ನನಗೆ ಆಸಕ್ತಿ ಇಲ್ಲ. ಮತ್ತೆ ರಿಂಗ್ ಮಾಡ್ಬೇಡ."

ಮೊಟಕಾಗಿ ಹೇಳಿ ಫೋನ್ ಕೆಳಗಿಟ್ಟ.

ಜಯಂತ ಉದ್ರೇಕದಲ್ಲಿ ಕೊಟ್ಟ ಚುಂಬನ ತಮ್ಮಿಬ್ಬರ ಪ್ರೇಮದಲ್ಲಿ ಬಿರುಕು ತರುವುದಿಲ್ಲ ಎಂಬುದನ್ನು ಅವನಿಗೆ ಮನದಟ್ಟು ಮಾಡಿಕೊಡಲು ಹತಾಶಳಾಗಿ ಕಾದಳು. ಹೊರಗಡೆ ಅವನ ಕಾರಿನ ಬಳಿ ಐದೂವರೆಯಿಂದ ಏಳರವರೆಗೆ ದಾರಿ ನೋಡಿದಳು. ಕಡೆಗೊಮ್ಮೆ ಸಂತೋಷ ಸ್ಟೋರ್‌ನ ಇಬ್ಬರು ಹೊಸ ವ್ಯಕ್ತಿಗಳೊಂದಿಗೆ ಮಾತನಾಡುತ್ತಾ ಹೊರಬಂದ. ಚಿತ್ರಾಳನ್ನು ನೋಡಿದ. ಅವಳು ಅವನಿಗೆ ಸನ್ನೆ ಮಾಡುವುದರಲ್ಲಿ ಕಾರು ಹೊರಟುಹೋಯಿತು.

* * *

ಮರುದಿನ ಬೆಳಗ್ಗೆ ಅವಳನ್ನು ಕೆಲಸದಿಂದ ವಜಾ ಮಾಡಿದ ನೋಟಿಸ್ ಕಾದಿತ್ತು. ಅವಳಿಗೆ ಸಂಬಳ ತೆಗೆದುಕೊಳ್ಳಲು ಸೂಚನೆ. ಅವಳ ಸೇವೆಯ ಆಗತ್ಯವಿಲ್ಲವೆಂದು ಹೇಳಲು ನಯವಾದ ಪದಗಳು. ಅಡಿಯಲ್ಲಿ ಸಂತೋಷನ ಸಹಿ.

ಜಯಂತನೂ ತನ್ನ ವಜಾ ಆಜ್ಞೆ ಹಿಡಿದು ಬಂದ.

"ಅವಧಿಯ ಎಂಟು ದಿನಕ್ಕೆ ಮೊದಲೇ ನನ್ನ ಹೊರಹಾಕಿದಾರೆ. ಹೊಸ ಮ್ಯಾನೇಜರ್ ನೇಮಿಸಿದ್ದಾಗಿದೆ... ನೀವು ಒಪ್ಪೋದಾದ್ರೆ ನನ್ನನ್ನ ನಿಮಗೆ ಮಾರಾಟ ಮಾಡ್ಕೊಳ್ತೀನಿ."

ಅವನ ಕಡೆ ನೋಡದೆ ಕಟುವಾಗಿ ಉತ್ತರಿಸಿದಳು.

"ಕೇವಲ ಸ್ನೇಹಿತರಾಗಿ ಉಳಿಯಬಹುದು."

ಅತ್ತ ಬಂದ ಹೊಸ ಮ್ಯಾನೇಜರ್ ಅವಳ ಕೈಗೆ ಯಾವುದೋ ಕಾಗದ ನೀಡಿದ.

"ಮಿಸ್ ಚಿತ್ರಾ, ಇದಕ್ಕೆ ಬಾಸ್ ರುಜು ಹಾಕಿಸಿಕೊಂಡು ಬನ್ನಿ."

ಹೃದಯ ಹಿಗ್ಗಿತು. ಸಂತೋಷನನ್ನು ಕಾಣಲು ಅವಕಾಶ ಒದಗಿಬಂದಿತ್ತು.

ಸಂತೋಷನ ಕೋಣೆಯ ಮುಂದೆ ನಿಮಿಷ ಪೂರ್ತಿ ನಿಂತು ಮಾತುಗಳನ್ನು ಅಭ್ಯಾಸ ಮಾಡಿಕೊಂಡವಳಿಗೆ ಒಳಗೆ ಹೋಗುತ್ತಲೇ ನಾಲಿಗೆ ಒಣಗಿತು. ಕಣ್ಣೀರು ಹೊರಬರಲು ಕಾದಿತ್ತು.

ಸಂತೋಷ ಅವಳತ್ತ ನೋಡದೆ ಕಾಗದಗಳ ಮೇಲೆ ರುಜು ಹಾಕಿ ಕೈ ಆಡಿಸಿ ಹೊರಡುವಂತೆ ಸೂಚಿಸಿದ. ಅತೀವ ನಿರಾಶೆಯಲ್ಲಿ ಅವಳು ಬಾಗಿಲು ಸಮೀಪಿಸಿದಾಗ ತಟ್ಟನೆ ಹೇಳಿದ.

"ನಿನಗೆ ಕೊಟ್ಟ ವಜಾ ನೋಟಿಸ್ ಹಿಂದಕ್ಕೆ ತೊಗೊಂಡಿದೆ."

ಅವಳು ತಿರುಗಿದಳು?"

"ಯಾಕೆ ಸಂತೋಷ?"

"ನಿನ್ನ ಕೆಲಸದ ಬಗ್ಗೆ ದೂಷಣೆ ಇರ್ಲಿಲ್ಲ. ನೀನು ಸ್ಟೋರ್ ಬಾಗಿಲಲ್ಲಿ ಸಹೋದ್ಯೋಗಿಯೊಂದಿಗೆ ಹೇಗೆ ವರ್ತಿಸ್ತೀಯ ಅನ್ನೋದು ನನಗೆ ಅಗತ್ಯವಿಲ್ಲದ ವಿಷಯ."

ಅವಳ ಕಣ್ಣುಗಳು ತುಂಬಿದವು.

"ಮಾತಿಗೆ ಅವಕಾಶ ಕೊಡಿ" ಬೇಡಿದಳು.

ಅವಳಿಂದ ಮುಖ ತಿರುಗಿಸಿ ಫೋನ್ ಎತ್ತಿಕೊಂಡ. ಸ್ವಲ್ಪ ಕಾದು ಮೆಲ್ಲನೆ ಹೊರಬಿದ್ದಳು.

ಹೊಸ ಮ್ಯಾನೇಜರ್‌ಗೆ ಸಹಾಯ ಮಾಡುತ್ತಾ ಹೆಚ್ಚು ಹೊತ್ತು ಉಳಿದಳು.

ಸ್ಟೋರ್‌ನಿಂದು ಹೊರಟಾಗಿ ಏಳು ಗಂಟೆ. ಸಂತೋಷನ ಕಾರು ಇನ್ನೂ ಅಲ್ಲೇ ಇತ್ತು. ಅವನು ಅದರಲ್ಲಿ ಕುಳಿತಿದ್ದ.

"ಬಾ ಇಲ್ಲಿ..."

ಕೋಪದ ಕರೆ ಅವಳನ್ನು ಚಕಿತಗೊಳಿಸಿತು. ಕಾರಿನಲ್ಲಿ ಅವನ ಪಕ್ಕದಲ್ಲಿ ಕುಳಿತುಕೊಳ್ಳುತ್ತಿದ್ದಂತೆ ಅಳು ಬಂತು. ಕಟುವಾಗ ಹೇಳಿದ.

"ಅಳು ನಿಲ್ಸು! ನಾನು ಕಂಡ ದೃಶ್ಯಕ್ಕೆ ಈಗ ವಿವರಣೆ ಕೊಡೋದಾದ್ರೆ ಕೊಡು. ಇಲ್ಲದಿದ್ರೆ ಮನೆಗೆ ಹೋಗು."

ಕಂಪಿಸುತ್ತಾ ತೊದಲಿದಳು.

"ಇಲ್ಲಿ ಬಂದು ಸೇರಿದ ದಿನದಿಂದ ಜಯಂತ ನನ್ನ ಪ್ರೀತಿಸೋದಿಕ್ಕೆ ಪ್ರಯತ್ನ ಮಾಡಿದಾರೆ. ನಾನು ಅವರನ್ನು ಪ್ರೀತಿಸಿಲ್ಲ. ಸ್ವಲ್ಪ ಮಾತಿನ ಸಲಿಗೆ ಕೊಟ್ಟಿದ್ದ..."

"ಸಲಿಗೆ ಅಂದ್ರೆ...?"

"ಅವರೊಂದಿಗೆ ತಿರುಗಾಡೋದಿಕ್ಕೆ ಹೋಗಿದ್ದೆ."

"ಆಮೇಲೆ?"

"ನೀವು ನನ್ನಿಂದ ದೂರವಾದ್ರಿ ಅನ್ನಿಸ್ತು. ಅವರು ಸ್ವಲ್ಪ ಹೆಚ್ಚು ಸಲಿಗೆ ತೊಗೊಂಡಿದ್ರು."

"ನಿನ್ನೆ ಮಧ್ಯಾಹ್ನ ನಾನು ಕಂಡಿದ್ದು ಸಲಿಗೆ ಅಲ್ಲ. ಪ್ರೇಮದ ಅಸಲಿ ನಾಟಕ !"

"ನಿನ್ನೆ ಮಧ್ಯಾಹ್ನ ಸ್ಟೋರ್‌ನಿಂದ ಕ್ಯಾಮರಾ ಕಾಣೆಯಾಗಿತ್ತು. ಮತ್ತೆ ಅದು ಸಿಕ್ತು. ನಾನು ತಬ್ಬಿಬ್ಬಾಗಿದ್ದೆ. ಏನಾಗ್ತಿವೆ ಅಂತ ತಿಳಿಯೋ ಮೊದಲೇ ಜಯಂತ ಹಾಗೆ ಮಾಡಿದ್ರು !... ನನಗೆ ಸಮಾಧಾನ ಆಗಲಿ ಅಂತ ಅವರ ಉದ್ದೇಶ. ಇನ್ನೇನೂ ಹೆಚ್ಚಿನ ಸಲಿಗೆ, ಸ್ವಾತಂತ್ರ್ಯ ತೆಗೆದುಕೊಂಡಿಲ್ಲ ಅವರು."

"ನಾನು ಇದನ್ನು ನಂಬಲೆ?"

"ಇದು ಸತ್ಯ. ನೀವು ಈವರೆಗೆ ನನ್ನ ಮಾತು ನಂಬಿಲ್ಲ. ಇದನ್ನೂ ನಂಬೋದಿಲ್ಲ. ಜಯಂತನಿಗೆ ನನ್ನ ಮದುವೆ ಆಗೊ ಆಸೆ. ನಾನು ಅದ್ಕೆ ಒಪ್ಪಲಿಲ್ಲ."

"ಒಪ್ಪಲಿಲ್ಲ ಯಾಕೆ?"

ಅವಳನ್ನು ಆಳವಾಗಿ ನೋಡಿದ. ಆ ಕಣ್ಣುಗಳು ಅವನ ತಂದೆಯ ಹದ್ದು ಕಣ್ಣುಗಳನ್ನು ಅವಳಿಗೆ ನೆನಪು ತಂದವು.

"ಯಾಕೇಂದ್ರೆ ಅದನ್ನೂ ವಿವರಿಸಿ ಹೇಳಬೇಕೆ ನಿಮಗೆ."

ನೋವಿನಿಂದ ಉತ್ತರಿಸಿದಳು. ಅಚಲನಾಗಿ ಕುಳಿತ"

"ನಾನು ಕೇಳಿರೋ ಸುದ್ದಿ ನಿಜವಾಗಿದ್ರೆ ನೀನು ಅವನ್ನ ಕೂಡಲೇ ಮದುವೆ

ಆಗೋದು ಒಳ್ಳೇದು."

ಅವಳ ಉಸಿರು ಉಮ್ಮಳಿಸಿತು.

"ನೀವು ಹೇಳೋದೇನು?"

"ನನ್ನ ಬೆಪ್ಪು ಮಾಡ್ತಾ ಇದೀಯ. ನನ್ನ ಕಚೇರಿಗೆ ನಿನ್ನೆ ಯಾರಿಂದ್ಲೋ ಟೆಲಿಫೋನ್ ಬಂತು. ಗಂಡಸಿನ ಧ್ವನಿ ಅದು. ನಾನು ನಿನ್ನನ್ನೇ ಕೇಳಿಬಿಡುವ ಅಂತ ಕೂಡಲೇ ಇಳಿದು ಬಂದೆ. ಅದೇ ಹೊತ್ನಲ್ಲಿ ನೀನು ಜಯಂತನ ತೋಳಿನಲ್ಲಿದ್ದೆ..."

"ನಿಮಗೆ ಜಯಂತನ ಬಗ್ಗೆ ಮೊದಲೇ ಹೇಳದೆ ತಪ್ಪು ಮಾಡ್ದೆ."

"ನೀನು ಭಾನುವಾರ ಅವನ ಮನೆಯಲ್ಲಿ ಕಳೆದೆ."

ಅವನು ಅನುಭವಿಸಿದ ನೋವಿನ ಆಳ ಅವಳಿಗೆ ಅರಿವಾಯಿತು.

"ಫೋನ್‌ನಲ್ಲಿ ಬಹುಶಃ ಇದನ್ನೇ ಹೇಳಿರಬೇಕು ಆ ವ್ಯಕ್ತಿ."

"ಹೌದು, ಭಾನುವಾರ ಪೂರ್ತಿ ಅವನ ಮನೆಯಲ್ಲಿದ್ದೆ. ಗ್ಯಾರೇಜಿನ ಆಳು ಅದನ್ನು ಖಚಿತಪಿಡಿಸ್ತಾನೆ."

"ಅಷ್ಟೆ ತಾನೆ? ಸಂತೋಷ, ಭಾನುವಾರ ಜಯಂತ ಅವರ ಮನೆಗೆ ಕರೆದೊಯ್ದಿದ್ದು ಅವರ ತಾಯೀನ ಭೇಟಿ ಮಾಡಿಸೋದಿಕ್ಕೆ. ಆ ಸಂಜೆಯೇ ಅಲ್ಲಿಂದ ಹೊರಟು ಬಂದೆ. ಸಂಶಯ ಇದ್ರೆ ಅವರ ತಾಯೀನ ಭೇಟಿ ಮಾಡಿ. ಅಂದಹಾಗೆ ನನ್ನ ವಜಾ ನೋಟಿಸ್ ಯಾಕೆ ರದ್ದು ಮಾಡಿದ್ರಿ?"

ತುಸು ಮೌನ ಸಾಧಿಸಿ ಭಾರವಾಗಿ ಹೇಳಿದ.

"ನೀನು ಏನೇ ಮಾಡಿದ್ರೂ ನಿನ್ನ ಬಿಡೋಕೆ ಮನಸ್ಸು ಬರ್ಲಿಲ್ಲ."

ಧ್ವನಿಯ ನೋವು ಅವಳ ಹೃದಯ ಇರಿಯಿತು. ಅನಾಮಿಕನ ಫೋನ್ ಕರೆಯೂ ಅವನನ್ನು ತನ್ನಿಂದ ಕದಲಿಸಿರಲಿಲ್ಲ!

ಅವನಿಗೆ ಮತ್ತಷ್ಟು ಸಮೀಪ ಜರುಗಿದಳು.

"ಆ ಫೋನ್ ಕರೆ ನನ್ನ ಮರ್ಯಾದೆಗೆ ಧಕ್ಕೆ ತರೋದಿಕ್ಕೆ ಮಾಡಿರೊ ಸನ್ನಾಹ."

ಅವನು ಎದುರು ಗೋಡೆ ನೋಡುತ್ತಿದ್ದ.

"ಅಂತಾ ಕೆಲಸಾ ಯಾರು ಮಾಡಿದ್ರು? ನನ್ನ ತಂದೆ, ತಾಯಿ ಮೇಲೆ ದೂರು ಹೇಳೋದ್ರಾದೆ ನಾನು ಕೇಳೋದಿಲ್ಲ."

ನೀವು ಕೇಳೋದಿಕ್ಕೆ ಹೆದರ್ತೀರಿ. ನನಗೆ ಮಿದುಳು ಬೇನೆ ಅಂತ ಅದಕ್ಕೊಂದು ಹೆಸರು ಕೊಡ್ತೀರಿ. ನನಗೊಬ್ಬ ಶತ್ರು ಇದಾನೇಂತ ಮನಸ್ಸಿಗೆ ತೆಗೊಂಡು ಅದನ್ನೇ ಪತ್ತೆ ಮಾಡೋದಿಕ್ಕೆ ಪ್ರಯತ್ನ ಮಾಡಿ. ಟೆಲಿಫೋನ್‌ನಲ್ಲಿ ನಿಮ್ಮ ಮನಸ್ಸು ಕೆಡಿಸಿದೋನು ನನ್ನ ಶತ್ರು. ಜ್ಯೋತಿಗೆ ಮಾಡಿದ್ದನ್ನೇ ನನಗೂ ಮಾಡೋದಿಕ್ಕೆ ಪ್ರಯತ್ನ ಮಾಡಿದಾನೆ

ಆ ಶತ್ರು."

ಸಶಬ್ದವಾಗಿ ಉಸಿರೆಳೆದುಕೊಂಡ.

"ನಿನಗೆ ತಲೆ ಕೆಟ್ಟಿರೋದು ನಿಜ."

ಕ್ರುದ್ಧಳಾದಳು ಚಿತ್ರಾ.

"ನನಗೆ ವಿರುದ್ಧವಾಗಿ ಹೇಳೋ ಮಾತಿನಲ್ಲಿ ನಿಮಗೆ ನಂಬಿಕೆ ಇದೆ. ನಿಮ್ಮ ತಂದೆ, ತಾಯಿಗಳ ವಿರುದ್ಧ ನಾನು ಹೇಳೋದನ್ನು ನೀವು ನಂಬೋಲ್ಲ. ನಾನು ಕಳ್ಳಿ! ನಾನು ಹೇಳೋದು ಸುಳ್ಳು! ನಾನು ನೀತಿಗೆಟ್ಟ ಹುಡುಗಿ!.... ನಿಮ್ಮ ಮನೆಯವರು ನನಗೆ ಮಾಡ್ತಾ ಇರೋದರ ಕಡೆ ನಿಮಗೆ ಕುರುಡು. ಇದು ಸರಿಯಲ್ಲ, ಸಂತೋಷ. ನಾನು ನಿಮ್ಮನ್ನ ಪ್ರೇಮಿಸ್ತೀನಿ ಆದರೆ ನಿಮ್ಮ ತಂದೆ, ತಾಯಿ ವಿರುದ್ಧ ಹೋರಾಡೋ ಶಕ್ತಿ ನನಗಿಲ್ಲ. ನನ್ನ ಪಾಡಿಗೆ ನನ್ನ ಬಿಟ್ಟುಬಿಡಿ!"

"ಆಮೇಲೆ ನೀನು ಏನು ಮಾಡ್ತೀಯ?"

ನೀವೇ ಸೂಚಿಸಿದ ಹಾಗೆ ನಾನು ಜಯಂತನ್ನ ಮದುವೆ ಆಗ್ತೀನಿ! ನಿಮ್ಮ ತಂದೆ, ತಾಯಿಯರಿಂದ ಸುರಕ್ಷಿತವಾಗಿರ್ತೀನಿ."

ಕಾರಿನ ಬಾಗಿಲು ತೆರೆದು ಹೊರಬೀಳಲು ಯತ್ನಿಸಿದಳು. ಅವಳನ್ನು ಎಳೆದುಕೊಂಡ. ತೋಳಿನಿಂದ ಬಳಸಿ ಉದ್ವೇಗದಲ್ಲಿ ಚುಂಬಿಸಿದ. ಇಬ್ಬರನ್ನೂ ದೂರ ಮಾಡಿದ ಪ್ರಸಂಗಗಳನ್ನು ಮರೆತು ಅವನಿಗೆ ಅರ್ಪಿಸಿಕೊಂಡಳು.

ಉದ್ವೇಗದ ಕಾವು ಇಳಿದ ಮೇಲೆ ಅವನ ಅಪ್ಪುಗೆಯಿಂದ ಬಿಡಿಸಿಕೊಂಡು ಸರಿದು ಕುಳಿತಳು.

"ನಿಮಗೆ ನನ್ನಲ್ಲಿ ನಂಬಿಕೆ ಬಂದ ಹೊರತು ಇನ್ನೊಂದು ಸಾರಿ ಹೀಗೆಲ್ಲಾ ಮಾಡ್ಬೇಡಿ."

ವಿಷಾದಪಡ್ತೀನಿ" ಅವನು ಗೊಣಗಿದ.

"ನಾವೇನು ಮಾಡ್ಬೇಕು?"

"ಸದ್ಯಕ್ಕೆ ಏನೂ ಮಾಡುವಂತಿಲ್ಲ. ಒಬ್ಬರನ್ನೊಬ್ಬರು ನೋಯಿಸುತ್ತಾ ಕಾಲ ತಳ್ಳಬೇಕು."

ತುಟಿ ಬಿಗಿಸಿ ಕಾರಿನಿಂದ ಇಳಿದಳು.

* * *

ಚಿತ್ರಾ ತಾನಾಗಿ ಹೇಳಲು ಇಚ್ಛೆಸದಿದ್ದರೂ ಆ ರಾತ್ರಿ ಬಿಂದು ಹಾಗೂ ಜ್ಯೋತಿ ಅವಳಿಂದ ವಿಷಯ ಹೊರತೆಗೆದರು. ಬಿಂದು ಕೋಪದಲ್ಲಿ ಗುಡುಗಿದಳು.

"ಸಂತೋಷ ನೋಟಿಸ್ ಹಿಂದಕ್ಕೆ ತೊಗೊಂಡ್ರೆ ಏನಾಯ್ತು? ನೀನು ಅಲ್ಲಿ

ನಿಲ್ಲಬಾರದಿತ್ತು. ಮದ್ರಾಸಿಗೆ ಹೋಗೋಣ. ನೀನು ಇಲ್ಲಿರೋದು ಸುರಕ್ಷಿತವಲ್ಲ."

ಚಿತ್ರಾ ನಿರ್ವಿಕಾರವಾಗಿ ಮರುನುಡಿದಳು.

"ನಿಮ್ಮಿಷ್ಟ ಬಂದಹಾಗೆ ಮಾಡಿ. ನಾನು ಇಲ್ಲಿಂದ ಕದಲೋದಿಲ್ಲ."

ಜ್ಯೋತಿ ಮಾತಿನ ಹಾದಿ ಬದಲಿಸಿದಳು.

"ಹೆಚ್ಚಿನ ತೊಂದರೆಗೆ ಸಿಗದಹಾಗೆ ಉಳಿದುಕೊಂಡಿದ್ದಕ್ಕೆ ದೇವರಿಗೆ ಕೈ ಮುಗಿದೆ ನಾನು. ನಿಮಗೆ ಇನ್ನಷ್ಟು ಕೋಟಲೆಗೆ ತಲೆ ಕೊಡೋ ಚಪಲ. ನಿಮಗೆ ರೇಖಾ ವಿಷಯದಲ್ಲಿ ಸಂತೋಷಾ ಎಂದೂ ಹೇಳಲಿಲ್ಲವೆ?

"ರೇಖಾ! ಅದು ಯಾರು?"

ಮತ್ತೊಂದು ಹೊಸ ಸಮಸ್ಯೆಗೆ ಸಿಕ್ಕವಳಂತೆ ಚಕಿತಳಾಗಿ ಕೇಳಿದಳು ಚಿತ್ರಾ.

"ನಮ್ಮಿಬ್ಬರಿಗೂ ಮೊದಲು ಸಂತೋಷನಿಗೆ ಪ್ರೇಯಸಿಯಾಗಿದ್ದೋಳು. ಸಂತೋಷನ ಪ್ರಥಮ ಪ್ರಣಯ ವಿಚಿತ್ರ ರೀತಿಯಲ್ಲಿ ಕೊನೆಗೊಂಡಿತು. ರೇಖಾ ನೀಲಂಕಾರರ ಮನೆಯಲ್ಲಿ ಒಂದು ತಿಂಗಳು ಇದ್ದೋಳು ಏಕಾಏಕಿ ಮಾಯವಾಗಿಬಿಟ್ಟಳು."

"ಮಾಯವಾಗಿಬಿಟ್ಲು!" ಬಿಂದು ಉದ್ಗಾರ ಎತ್ತಿದಳು.

"ಒಂದು ರಾತ್ರಿ ಮಾಯವಾದೋಳು ಮತ್ತೆ ಕಾಣಿಸಿಕೊಳ್ಳಲಿಲ್ಲ. ನೀಲಂಕಾರರು ಹೇಳಿದ್ದು ಅವಳು ಉತ್ತರದ ಕಡೆಗೆ ಹೊರಟುಹೋದಳು ಅಂತ. ಶ್ರೀಮತಿ ಪಂಪಾಪತಿಗೆ ಅವಳು ತಲೆನೋವು ಆಗಿದ್ಲು."

ಚಿತ್ರಾಗೆ ಮೈಯಲ್ಲಿ ಚಳಿ ಆಡಿತು.

"ನನ್ನ ಹೆದರಿಸೋದಿಕ್ಕೆ ಪ್ರಯತ್ನ ಮಾಡ್ತಾ ಇದೀರಿ."

"ತಿಳಿವಳಿಕೆ ಇರೋರು ಹೆದರಬೇಕಾದ ಸಂಗತಿಯೇ. ನಾಗರತ್ನ ನಾಗಿಣಿ ಅನ್ನೋದು ಉತ್ಪ್ರೇಕ್ಷೆ ಅಲ್ಲ."

ಬಿಂದು ಗೆಳತಿಗೆ ಕಳಕಳಿಯಿಮದ ಹೇಳಿದಳು.

"ಸಂತೋಷ ಪರಿಚಯ ಆಗೊ ಮೊದಲು ನಾಬಿಬ್ರೂ ಎಷ್ಟು ನೆಮ್ಮದಿಯಿಂದ ಇದ್ವಿ ! ಈಗ ನೀನು ನರ ರೋಗಿ. ಒಂದು ಸಾರಿ ಉತ್ಸಾಹ, ಮತ್ತೊಂದು ಸಾರಿ ಶಂಕೆ. ಒಂದು ವಸ್ತು ಕೊಳ್ಳಲಿಕ್ಕೆ ಅಂಗಡಿಗೆ ಹೋಗಲಿಕ್ಕೂ ಭಯ. ಕೋರ್ಟಿನ ಚಿಂತೆ. ಜೈಲಿನ ಭಯ! ನಿನ್ನ ನೋಡಿ ನನಗೂ ನೆಮ್ಮದಿ ಇಲ್ಲ."

"ಅಷ್ಟೊಂದು ಚಿಂತೆ ಪಟ್ಕೋಬೇಡ."

"ನಿನ್ನ ಚಿಂತೆ ಹೊತ್ಕೊಳ್ತೀನಿ ಅಂತ ನಿಮ್ಮ ಅಮ್ಮನಿಗೆ ಮಾತು ಕೊಟ್ಟಿದ್ದೀನಿ. ಚಿತ್ರಾ, ನಿನಗೆ ಸ್ವಲ್ಪ ಸ್ಥಳ ಬದಲಾವಣೆ ಬೇಕು. ನಮ್ಮೊಂದಿಗೆ ಬಂದ್ಬಿಡು."

"ನನ್ನ ಪಾಡಿಗೆ ಇಲ್ಲೇ ಇರ್ತೀನಿ" ಮುಕ್ತಾಯ ಮಾಡಿದಳು.

ಬಿಂದು, ಜ್ಯೋತಿ ಒಬ್ಬರನ್ನೊಬ್ಬರು ನೋಡಿದರು.

ಚಿತ್ರಾ ಒಂಟಿತನ ಬಯಸಿ ಕೆಲಸಕ್ಕೆ ಜಾಗ್ರತೆಯಾಗಿ ಹೊರಟಳು. ಈ ದಿನ ತನಗೇನು ಕಾದಿದೆಯೆಂಬ ಚಿಂತೆ. ಸಂತೋಷ ತನಗೆ ಹೇಳಿ ಕಳುಹಿಸಬಹುದು.

ಒಮ್ಮೆಗೆ ವಿಚಾರ ತಲೆಗೆ ಬಂತು...ರೇಖಾ! ಕಾಣೆಯಾದ ಸಂತೋಷನ ಪ್ರಣಯಿನಿ. ಸಂತೋಷನಿಗೆ ಹೆಣ್ಣಿಂದ ಹೆಣ್ಣಿಗೆ ಹಾರುವ ಚಪಲ!

ಚಿತ್ರಾ ಬಾಸ್ ಚೇಂಬರ್‌ನಿಂದ ಇಳಿಸಿದ್ದ ಮೇಜಿನ ಮುಂದೆ ಕುಳಿತಳು. ಹಾಳೆಯ ಮೇಲೆ ಏನೋ ಗುರುತು ಹಾಕುತ್ತಾ ಡ್ರಾ ಎಳೆದಳು. ಖಾಲಿ ಇರಬೇಕಾಗಿದ್ದ ಡ್ರಾನಲ್ಲಿ ಹಳೆಯ ಪತ್ರಗಳ ಕಟ್ಟು ಕಾಣಿಸಿತು.

ಚಿತ್ರಾ ಕಟ್ಟು ಹೊರಗೆಳೆದಳು. ಎಲ್ಲಾ ಪತ್ರಗಳಲ್ಲೂ ಒಂದೇ ಬಗೆಯ ಸುಂದರ ಕೈಬರಹ. ಹೆಣ್ಣಿನ ಬರಹ!

ಹರಡಿದ ಪತ್ರದ ಮೇಲೆ ಕಣ್ಣು ಹರಿಯಿತು. ಉಸಿರು ನೀಳವಾಗಿ ಹುಬ್ಬೇರಿತು. ಹತ್ತು ವರ್ಷಗಳಿಂದ ಶರಶ್ಚಂದ್ರನೊಡನೆ ಪ್ರಣಯ ವ್ಯವಹಾರ ಹೊಂದಿದ ಹೆಣ್ಣಿನ ಪತ್ರಗಳು!

ಆತ್ಮಹತ್ಯೆ ಮಾಡಿಕೊಂಡ ಹಿಂದಿನ ಮಾಲೀಕನ ರಹಸ್ಯ ಉಳಿಸಬಾರದೆಂಬ ಅದನ್ನು ನಾಶಪಡಿಸುವ ನಿರ್ಧಾರ ತಳೆದಳು. ಅವು ಯಾವ ಹೆಣ್ಣಿನದು ಎಂದು ತಿಳಿಯುವ ಚಪಲ.

ಪುಟದ ಅಂತ್ಯದಲ್ಲಿ ಓದಿದಳು:

"... ಮುಂದಿನ ಭೇಟಿಯಲ್ಲಿ ಹೆಚ್ಚಿನದು ಹೇಳುವೆ...ನಿನ್ನ ಒಲವಿನ ನಾಗರತ್ನ."

ಅದೇ ಪುಟದ ಮೇಲಿನ ವಾಕ್ಯಗಳು ಅವಳ ಕಣ್ಣ ಮುಂದೆ ಜಿಗಿದು ಬಂತು.

"... ಪಂಪಾಪತಿಯೊಂದಿಗೆ ಇರುವಾಗ ನಾವು ಎಚ್ಚರಿಕೆಯಿಂದ ಇರಬೇಕು. ಅವರಿಗೆ ಸಂಶಯ ಬಂದಹಾಗಿದೆ..."

ಶರಶ್ಚಂದ್ರ !... ನಾಗರತ್ನ!

ಹಾಂ ! ಪತಿಯ ವಿರೋಧಿಯಾದ ಶರಶ್ಚಂದ್ರನೊಂದಿಗೆ ನಾಗಿಣಿ ನಾಗರತ್ನಳ ಅನೈತಿಕ ವ್ಯವಹಾರ!

ಪತ್ರಗಳನ್ನು ನಿಧಾನವಾಗಿ ಓದಿದಳು.

ಕಾಗದಗಳ ಒಕ್ಕಣೆಯಂತೆ ಶರಶ್ಚಂದ್ರ ಕನ್ನಿಂಗ್‌ಹ್ಯಾಂ ರಸ್ತೆಯಲ್ಲಿ ಒಂದು ಫ್ಲ್ಯಾಟ್ ಬಾಡಿಗೆಗೆ ಹೊಂದಿದ್ದ. ಪಂಪಾಪತಿ ಸಿಟಿಯಿಂದ ಹೊರಕ್ಕೆ ಹೊರಟಾಗ ಆ ಫ್ಲ್ಯಾಟ್‌ನಲ್ಲಿ ಶರಶ್ಚಂದ್ರ ಹಾಗೂ ನಾಗರತ್ನ ತಾಸುಗಟ್ಟಲೆ ಮೋಜಿನಲ್ಲಿ ಕಳಿಯುತ್ತಿದ್ದರು.

ಪಂಪಾಪತಿಗೆ ಹೆಂಡತಿಯ ರಹಸ್ಯ ವ್ಯವಹಾರ ಗೊತ್ತಾಯಿತೆ? ಶರಶ್ಚಂದ್ರನ

ಬದುಕು ನಾಶ ಮಾಡಿ ಅವನ ಆತ್ಮಹತ್ಯೆಗೆ ಕಾರಣನಾದನೆ?

ಮತ್ತೊಂದು ಪತ್ರ ಓದಿದಳು.

"... ಇತ್ತೀಚೆಗೆ ನಾನೂ ನನ್ನ ಪತಿಯಿಂದ ದೂರ ಇರತೊಡಗಿದ್ದೀನಿ. ಅದಕ್ಕೆ ಕಾರಣ, ನಾನು ನಿಮ್ಮನ್ನ ಅಷ್ಟೊಂದು ಪ್ರೀತಿಸ್ತೀನಿ. ಆದರೆ ಅವರನ್ನು ಬಿಡುವ ಹಾಗಿಲ್ಲ. ನನ್ನ ಮಗ ಸಂತೋಷನ ಸಲುವಾಗಿ ನಾನು ಈ ಮನೆಗೆ ಸೇರಿರಲೇಬೇಕು. ಮುಂದಿನ ವಾರ ಅವನಿಗೆ ಹದಿನಾಲ್ಕು ವರ್ಷ ತುಂಬತ್ತೆ. ಅವನು ತಂದೆಯ ಹಾಗಲ್ಲ. ಚುರುಕು ಬುದ್ಧಿಯವ, ಕನಸುಗಾರ ... ನಾನು ನಿಮ್ಮೊಂದಿಗೆ ಎಲ್ಲಿಗಾದರೂ ಓಡಿಹೋಗುವುದಾದರೆ ಅವನ ಗತಿ..."

ತಾಯಿಗೆ ಮಗನ ಮೇಲಿದ್ದ ಪ್ರೀತಿ, ತೊಳಲಾಟ ಬರಹದಲ್ಲಿ ಚೆನ್ನಾಗಿ ಕಾಣಿಸಿತು.

ಕಡೆಯ ಪತ್ರದಲ್ಲಿ ಪ್ರಣಯ ವ್ಯವಹಾರದ ಮುಕ್ತಾಯವಾಗಿತ್ತು.

"...ನಾವು ಮತ್ತೆ ಭೇಟಿಯಾಗುವುದು ಸರಿಯಲ್ಲವೆಂದು ಒತ್ತಿ ಹೇಳುತ್ತಿರುವೆ. ನಾವು ಅನ್ಯೋನ್ಯವಾಗಿರುವಾಲೇ ಈ ವಿಷಯ ಕೂಡಲೆ ಮುಕ್ತಾಯವಾಗುವುದು ಸರಿ. ಸಂಗತಿ ತಿಳಿದರೆ ನನ್ನ ಪತಿ ನಮ್ಮಿಬ್ಬರನ್ನೂ ಕೊಂದುಬಿಡ್ತಾರೆ. ಆಗ ತೊಂದರೆಗೆ ಈಡಾಗುವವನು ನನ್ನ ಸಂತೋಷ. ಪತಿ ನನ್ನ ಪ್ರೀತಿಸ್ತಾರೆ. ನಾನು ಅವರಿಗೆ ಅನ್ಯಾಯ ಮಾಡಿರುವೆ. ನಿಮಗೂ ಒಂದು ರೀತಿಯಲ್ಲಿ ಅನ್ಯಾಯ ಆಗಿದೆ..."

ಮನ ಕರಗಿಸುವ ಪತ್ರ ಅದು. ಆದರೆ ಶತ್ರುವಿಗೆ ಮರುಕ ತೋರಲು ತಾನು ಸಡಿಲವಾಗುವಂತಿಲ್ಲ.

ಪತ್ರಗಳನ್ನು ಕೈಲಿ ತೂಗಿದಳು. ಭೀಕರ ಆಯುಧ ಕೈಲಿ ಸೇರಿತ್ತು! ಅದನ್ನು ಬಳಸುವ ಶಕ್ತಿ ಇದೆಯೇ? ತನ್ನ ಹಾಗೂ ಸಂತೋಷನ ಸುಖದ ಮಾರ್ಗದಲ್ಲಿ ನಿಂತಿರುವ ಅಡ್ಡಿಯನ್ನು ನಿವಾರಿಸಲು ಅದರ ಬಳಕೆ ಅಗತ್ಯ, ಸಕಾಲಿಕ.

ಪತ್ರಗಳನ್ನು ಕೈಚೀಲಕ್ಕೆ ಸೇರಿಸಿದಳು. ನೆರಳು ಇಣುಕಿದಂತಾಯಿತು. ಹೌದು, ಕೈಚೀಲವನ್ನು ಈಗ ಯಾರಾದರೂ ಹುಡುಕಿದರೆ!

ದೊಡ್ಡ ಲಕೋಟೆಯಲ್ಲಿ ಪತ್ರಗಳನ್ನು ಸೇರಿಸಿ ತನ್ನ ವಿಳಾಸ ಅದರ ಮೇಲೆ ಬರೆದು ಕೈಲಿ ತೂಗಿ ನೋಡಿದಳು. ತುಸು ಅಧಿಕ ಮೊತ್ತದ ಸ್ಟಾಂಪ್ ಹಚ್ಚಿ ಸ್ಟೋರ್ ಹುಡುಗನ ಮೂಲಕ ಪೋಸ್ಟ್ ಮಾಡಲು ಕಳುಹಿಸಿದಳು. ನಾಳೆ ಅಂಚೆಯಲ್ಲಿ ಪತ್ರ ತನ್ನ ಕೋಣೆ ಸೇರುತ್ತದೆ.

ಹೊತ್ತು ಬೇಗ ಸರಿಯಲಿಲ್ಲ. ಪ್ರತಿ ನಿಮಿಷದಲ್ಲೂ ಸಂತೋಷನ ಕರೆಗಾಗಿ ಕಾದಳು. ಕರೆ ಬರಲಿಲ್ಲ.

ಮರುದಿನ ಬೆಳಗ್ಗೆ ತರಕಾರಿ ಕೊಂಡು ಬರುವುದರಲ್ಲಿ ಅಂಚೆಯವ ಬಂದು ಹೋದುದು ತಿಳಿಯಿತು. ಬಾಗಿಲು ಸರಿಸಿ ಅಕ್ಕಪಕ್ಕ ಕಣ್ಣಾಡಿಸಿದಳು. ಲಕೋಟೆ

ಎಲ್ಲೂ ಕಾಣಿಸಲಿಲ್ಲ. ಸ್ಟೋರ್ ಹುಡುಗನನ್ನು ನಂಬಿ ಅಂಚೆಗೆ ಹಾಕಿದುದು ತಪ್ಪು.

ಮತ್ತಷ್ಟು ತಳಮಳಗೊಳ್ಳುವುದರಲ್ಲಿ ಪಕ್ಕದ ಕೋಣೆಯಿಂದ ಬಿಂದು ಬಂದಳು.

"ಚಿತ್ರಾ, ನಿನಗೊಂದು ಕವರ್ ಬಂದಿದೆ. ನಿನ್ನ ಕೋಣೆ ಬಾಗಿಲಿನ ಸಂದಿನಲ್ಲಿ ಹಿಡಿಸದಿದ್ದುದರಿಂದ ನನ್ನಲ್ಲಿ ಕೊಟ್ಟುಹೋದ ಪೋಸ್ಟ್‌ಮನ್. ಕವರ್ ಮೇಲಿನ ವಿಳಾಸ ನಿನ್ನ ಕೈ ಬರಹದಲ್ಲಿದೆ. ಏನು ವಿಷಯ?"

ಚಿತ್ರಾಳಿಗೆ ಹೊಗೆಯ ಕೋಣೆಯಿಂದ ಹೊರಬಂದಂತಾಯಿತು.

"ಹೇಳ್ತೀನಿ, ಬಾ."

ಎಂದು ಗೆಳತಿಯನ್ನು ಬೆಡ್‌ರೂಂಗೆ ಕರೆದೊಯ್ದಳು. ಹೆಚ್ಚಿನ ಚರ್ಚೆ ಇಲ್ಲದೆ ಅವಳ ಸಲಹೆ ಪಡೆಯಲು ಇಚ್ಛಿಸಿದಳು.

"ಒಂದು ಅಸಾಧ್ಯ ಕಲ್ಪನೆ ನಿಜವಾಗಿದೆ. ನಾಗರತ್ನ ಬರೆದ ಒಂದು ಕಟ್ಟು ಪ್ರೇಮಪತ್ರ..."

"ಯಾರಿಗೆ?"

ಆತುರದಿಂದ ಅವಳ ಲಕೋಟೆಗೆ ಕೈ ಹಾಕಿದಳು. ಚಿತ್ರಾ ಅವಳಿಗೆ ಸಿಗದಂತೆ ದೂರಕ್ಕೆ ಹಿಡಿದಳು.

"ಶರಶ್ಚಂದ್ರನಿಗೆ ಬರೆದದ್ದು... ಅದನ್ನು ನಾಗರತ್ನಳ ವಿರುದ್ಧ ಬಳಸಲೆ ಅಥವಾ ಸುಟ್ಟುಹಾಕಲೆ?"

ಬಿಂದುವಿಗೆ ಮೈ ಪರಚಿಕೊಳ್ಳುವಷ್ಟು ಅಚ್ಚರಿ.

"ಸುಟ್ಟುಹಾಕೋದು ! ನಿನಗೆ ಹುಚ್ಚೇನು? ನಾಗರತ್ನಳನ್ನ ಕಡಾಯಿಯಲ್ಲಿ ಹಾಕಿ ಬೇಯಿಸಬಹುದು ಅದರಿಂದ."

"ಅವಳನ್ನು ಬೇಯಿಸೋದು ಬೇಕಿಲ್ಲ ನನಗೆ. ನನ್ನ ಚರಿತ್ರೆ ಸ್ವಚ್ಛ ಅನ್ನೋದು ಸಂತೋಷನಿಗೆ ಮನದಟ್ಟಾದರೆ ಸಾಕು. ಅವಳೂ ತನ್ನ ತಪ್ಪು ಒಪ್ಪಿದರೆ ಸರಿ."

"ಅವಳು ತಪ್ಪು ಒಪ್ಪಿಕೊಳ್ಳೋ ಹಾಗೆ ಮಾಡಬೋದು ನೀನು ನನ್ನ ಸಹಾಯ ಪಡೆಯೋದಾದ್ರೆ. ನಿನ್ನ ಪ್ರಕಾರ ನೀನು ನಡೆಯೋದಾದ್ರೆ ಆ ಲಕೋಟೆ ಒಡೆಯೋಕೆ ಮುಂಚೆ ನಿನ್ನ ಇಕ್ಕಳಕ್ಕೆ ಸಿಕ್ಕಿಹಾಕ್ತಾಳೆ. ಪತ್ರಗಳನ್ನುಕೊಡು. ನಾನು ಓದಿ ನೋಡ್ತೀನಿ."

ನಕಾರದಲ್ಲಿ ತಲೆ ಕೊಡವಿದಳು ಚಿತ್ರಾ.

"ಸಾಧ್ಯವಿಲ್ಲ. ಅವು ರಹಸ್ಯ ಪತ್ರಗಳು."

ಸ್ನೇಹಿತೆಗೆ ಕುತೂಹಲ ತಡೆಯಲಾಗಲಿಲ್ಲ.

"ನೀನು ಓದಿದ್ದು ನಾನೇಕೆ ಓದಬಾರದು? ನನ್ನ ಸಹಾಯ ಬೇಕೋ, ಬೇಡವೊ?"

ಚಿತ್ರಾಗೆ ಮೈಯಲ್ಲಿ ಚಳಿ ಹುಟ್ಟಿತು, ತಾಯಿಯ ಅಕ್ರಮ ವ್ಯವಹಾರವನ್ನು

ಬಯಲು ಮಾಡಿದರೆ ಸಂತೋಷನ ಪ್ರತಿಕ್ರಿಯೆ!

"ನಿನ್ನ ಇಷ್ಟ ಬಂದಹಾಗೆ ಮಾಡು."

ಬಿಂದು ಸಿಡಿದು ತನ್ನ ಕೋಣೆ ಸೇರಿದಳು. ಚಿತ್ರಾ ತಾನೇ ವಿಷಯ ನಿಭಾಯಿಸಲು ನಿಶ್ಚಯಿಸಿದಳು. ಬಾಗಿಲಿಗೆ ಬೀಗ ಹಾಕಿ ರಸ್ತೆ ದಾಟಿದಳು. ಸಮೀಪದ ಅಂಗಡಿಯಿಂದ ನೀಲಂಕಾರ್ ನಿಲಯಕ್ಕೆ ಫೋನ್ ಮಾಡಿದಳು.

ಅತ್ತ ಫೋನ್ ಎತ್ತಿದವಳು ನಾಗರತ್ನ.

"ಯಾರು?... ಓ, ಚಿತ್ರಾ ! ಏನು ಬೇಕು?" ಸವಿದನಿ ಗಂಭೀರವಾಗಿತ್ತು.

"ನಿಮ್ಮನ್ನ ತುರ್ತಾಗಿ ಭೇಟಿ ಆಗ್ಬೇಕು... ಫೋನ್‌ನಲ್ಲಿ ಹೇಳೋ ಮಾತಲ್ಲ."

"ನಾಳೆ ಟೀಗೆ ಬರಬಹುದು" ಗೊಣಗಿದಳು ಶ್ರೀಮಂತೆ.

"ನಾಳೆ ಅಲ್ಲ, ಈ ಸಂಜೆಗೆ."

"ಈಗ ಬರೋದಾದ್ರೆ ಹತ್ತು ನಿಮಿಷ ಅವಕಾಶ ಮಾಡ್ಕೊತೀನಿ. ಅದೂ ನಿಜವಾಗಿಯೂ ತುರ್ತಾಗಿದ್ರೆ ಮಾತ್ರ..."

"ಅತಿ ತುರ್ತಾದ ವಿಷಯ. ನಿಮ್ಮ ಮನೆಗೆ ಬರೋದಿಲ್ಲ ನಾನು. ಸಂಜೆ ಆರೂವರೆ ಹೊತ್ತಿಗೆ ಕಬ್ಬನ್ ಪಾರ್ಕ್ ಬ್ಯಾಂಡ್ ಸ್ಟ್ಯಾಂಡ್‌ನಿಂದ ಹಿಂದಕ್ಕೆ ಬಂದು ಕಾದಿರಿ."

"ಹುಡುಗಾಟ ಆಡ್ತೀಯ? ನನ್ನ ಯಜಮಾನ್ರು ಮನೆಗೆ ಬರೋ ಹೊತ್ತು ಅದು. ನಿನಗೆ ಬುದ್ಧಿಭ್ರಮಣೆ ಆಗಿರೋದು ನಿಜ..."

ಚಿತ್ರಾ ಬಿರುಸಾದ ಮಾತನ್ನು ಮತ್ತಷ್ಟು ಬಿರುಸಾಗಿ ಕತ್ತರಿಸಿದಳು.

"ನೀವು ಶರಶ್ಚಂದ್ರನಿಗೆ ಬರೆದ ಕೆಲವು ಪತ್ರಗಳು ನನ್ನಲ್ಲಿವೆ..."

ಅತ್ತಣ ತುದಿಯಲ್ಲಿ ಏಕಾಏಕಿ ಉಸಿರು ಎಳೆದುಕೊಂಡುದು ಕೇಳಿಬಂತು.

"ಬ್ಲಾಕ್ ಮೇಲ್ !" ಕಂಪಿಸಿತು ನಾಗರತ್ನಳ ಕಂಠ.

"ಆ ಪದ ಬಳಸಬೇಡಿ, ಶ್ರೀಮತಿಜಿ, ನಾನು ಹೇಳಿದ ಹಾಗೆ ಕೇಳಿ." ಉತ್ತರಕ್ಕೆ ಕಾಯದೆ ಫೋನ್ ಕೆಳಗಿಟ್ಟಳು.

## ೭

ಕಬ್ಬನ್ ಪಾರ್ಕ್ ಬ್ಯಾಂಡ್ ಸ್ಟ್ಯಾಂಡಿನ ಹಿಂಭಾಗಕ್ಕೆ ಇನ್ನೂ ಉಳಿದಿದ್ದ ಸಂಜೆಯ ಬೆಳಕಿನಲ್ಲಿ ಬೆಂಚಿನ ಮೇಲೆ ಕುಳಿತಳು ಚಿತ್ರಾ. ಪತ್ರಗಳನ್ನು ಕೋಣೆಯ ಮೇಜಿನ ಡ್ರಾನಲ್ಲಿ ಸೇರಿಸಿ ಒಂದು ಪತ್ರವನ್ನು ಮಾತ್ರ ಕೈಚೀಲದಲ್ಲಿ ತಂದಿದ್ದಳು.

ಆರೂವರೆಗೆ ಸರಿಯಾಗಿ ಚಿಲುಮೆಯ ವೃತ್ತದ ಕಡೆಯಿಂದ ಮಾಸಲು ಬಣ್ಣದ

ಸೀರೆಯುಟ್ಟ ಆಕೃತಿ ಸುತ್ತಲೂ ನೋಡುತ್ತಾ ಅವಳನ್ನು ಸಮೀಪಿಸಿತು. ಇಬ್ಬರೂ ಬೋಗೇನ್‌ವಿಲ್ಲಾ ಪೊದೆಯ ಪಕ್ಕದ ಸಿಮೆಂಟ್ ಬೆಂಚ್ ಮೇಲೆ ಕುಳಿತರು.

ನಾಗರತ್ನಳ ಬಾದಾಮಿ ಆಕಾರದ, ನುಣುಪಾದ ಮುಖದಲ್ಲಿ ಕಣ್ಣುಗಳು ಕಾಂತಿಹೀನವಾಗಿದ್ದವು.

"ಅರ್ಧ ಮಾತಿನಲ್ಲಿ ನೀನು ಫೋನ್ ಕೆಳಗಿಟ್ಟುಬಿಟ್ಟೆ" ನಾಗರತ್ನ ಸ್ಥಿಮಿತ ಕಂಠದಲ್ಲಿ ಕೇಳಿದಳು.

"ನೀವು ಶರಶ್ಚಂದ್ರನಿಗೆ ಬರೆದ ಪ್ರೇಮಪತ್ರ ಅಂತ ಹೇಳ್ದೆ."

"ಅವು ನಿನ್ನಲ್ಲಿವೆ ಅಂತ ಹೇಗೆ ನಂಬೋದು?"

ಚಿತ್ರಾ ಕೈಚೀಲದಿಂದ ಎಳೆದ ಪತ್ರವನ್ನು ಅವಳ ಮುಂದೆ ಎರಡು ಕ್ಷಣ ಅಲುಗಾಡಿಸಿ ಸರಕ್ಕನೆ ಹಿಂತೆಗೆದುಕೊಂಡಳು.

"ಶರಶ್ಚಂದ್ರನ ಚೇಂಬರ್‌ನಿಂದ ನನ್ನ ವಿಭಾಗಕ್ಕೆ ಬಂದ ಹಳೆಯ ಡೆಸ್ಕ್‌ನಲ್ಲಿ ಅವು ಸಿಕ್ಕಿದವು."

"ನಿನಗೆ ಎಷ್ಟು ಹಣ ಬೇಕು?" ಮೊನಚಾಗಿತ್ತು ಪ್ರಶ್ನೆ.

"ನನಗೆ ಹಣ ಬೇಡ, ಶ್ರೀಮತಿ ಪಂಪಾಪತಿ."

"ಮತ್ತೇನು?" ಬಾದಾಮಿ ಮುಖ ಸಮೀಪಕ್ಕೆ ಬಂತು.

"ನಿಮ್ಮ ಪತ್ರಗಳನ್ನು ನಿಮಗೇ ಹಿಂದಿರುಗಿಸ್ತೀನಿ. ನೀವು ನನ್ನ ಮೇಲೆ ಆರೋಪಣೆ ಹೊರಿಸಿದೀರಿ. ನಾನು ಹಣ ಕದ್ದಿದ್ದು, ಕರ್ಚೀಫ್ ಎತ್ತಿದ್ದು, ನಾನು ನೀತಿಗೆಟ್ಟ ಹುಡುಗಿ ಅಂತ ಹೇಳೋದು ಇವೆಲ್ಲಾ ಆಪಾದನೆಗಳು ಸುಳ್ಳು ಅಂತ ಸಂತೋಷನಿಗೆ ಮನದಟ್ಟು ಮಾಡ್ಬೇಕು ನೀವು. ಅಷ್ಟೇ ಅಲ್ಲ, ಆ ಸಂಚುಗಳ ಹಿಂದೆ ಇರೋರು ನೀವು ಅಂತ ಒಪ್ಪಿಕೊಳ್ಳಬೇಕು."

ನಾಗರತ್ನ ಅವಳನ್ನು ಅಳೆಯುವಂತೆ ನೋಡಿದಳು.

"ನೀನು ಹೇಳೋದು ಅರ್ಥವಾಗ್ತಾ ಇಲ್ಲ."

"ಅರ್ಥವಾಗ್ತಾ ಇದೆ. ನೀವು ಸಂತೋಷನಿಗೆ ನಿಜಸಂಗತಿ ತಿಳಿಸದೆ ಇದ್ರೆ ಆ ಪತ್ರಗಳನ್ನು ನಿಮ್ಮ ಪತಿಗೆ ಕಳಿಸಿಕೊಡ್ತೀನಿ."

ಸಂಜೆಯ ನೆರಳುಗಳ ನಡುವೆಯೂ ನಾಗರತ್ನಳ ಮುಖ ಕಂಗೆಟ್ಟುದು ಗೋಚರವಾಯಿತು. ದೂರದಲ್ಲಿ ಆಡುತ್ತಿದ್ದ ಹುಡುಗರ ಕಡೆ ನೋಡುತ್ತಾ ಹೇಳಿದಳು.

"ನೀನು ಅಂಥಾ ಹುಡುಗಿ ಅಲ್ಲಾಂತ ನನಗೆ ಗೊತ್ತು. ನಾನು ಮಾಡದೇ ಇರೊ ಆಪಾದನೆಗಳನ್ನು ಹಿಂದಕ್ಕೆ ಹೇಗೆ ತೆಗೆದುಕೊಳ್ಳಲಿ? ನಿನಗಾಗಿರೋ ತೊಂದರೆಗಳಿಗೆ ನನ್ನ ಸಂಬಂಧ ಇಲ್ಲ. ನೀನು ತಪ್ಪು ಕಲ್ಪನೆ ಮಾಡಿಕೊಂಡಿದ್ದೀಯ."

"ನಾನಾಗಲಿ ಮತ್ತೊಬ್ಬಳಾಗಲಿ ಸಂತೋಷನ್ನ ಪಡೆಯೋದು ನಿಮಗೆ ಇಷ್ಟವಿಲ್ಲ."

ಕಣ್ಣುಗಳು ಅರಳಿದವು.

"ನಿನಗೆ ಹುಚ್ಚು. ನಮ್ಮ ಮನೆಯವರು ಹೇಳಿದ ಹಾಗೆ ನಿನಗೆ ಮಿದುಳಿನ ಚಿಕಿತ್ಸೆ ಇಲ್ಲದೆ ವಾಸಿಯಾಗೋದಿಲ್ಲ. ನಿನ್ನ ಬೇನೆ ಅವರು ತಿಳಿದಿರೋದಕ್ಕಿಂತ ತೀವ್ರವಾಗಿದೆ. ಬಡಪಾಯಿ ಹುಡುಗಿ !"

"ನಾನು ಹೇಳಿದ ಹಾಗೆ ಮಾಡ್ತಿರೊ, ಇಲ್ಲವೊ?"

ಚಿತ್ರಾ ಅಧಿಕಾರಯುತವಾಗಿ ಕೇಳಿದಳು.

"ಇಲ್ಲ. ಆಪಾದನೆಯನ್ನೇ ಮಾಡದವಳು ಮಗನಿಗೆ ಸುಳ್ಳು ಯಾಕೆ ಹೇಳ್ಲಿ?... ನಿನಗಾಗಿ ಮರುಕಪಡ್ತೀನಿ. ಮಿದುಳು ಕೆಟ್ಟ ಹುಡುಗಿನ ನನ್ನ ಮಗ ಮದುವೆ ಆಗೋದು ಇನ್ನೂ..."

"ನನ್ನ ಮಿದುಳಿಗೆ ಯಾವ ಕೊಂಕೂ ಹತ್ತಿಲ್ಲ."

"ಕೊಂಕು ಇರಲೇಬೇಕು. ಇಲ್ಲದಿದ್ರೆ ಬ್ಲಾಕ್‌ಮೇಲ್ ಯಾಕೆ ಮಾಡ್ತಿದ್ದೆ? ನಿನಗೆ ವಿರೋಧಿಯಾಗಿ ನಾನು ಎಂದೂ ಸಂಚು ಮಾಡಿಲ್ಲ. ಸಂತೋಷ ನಿನ್ನ ಮನೆಗೆ ಕರಕೊಂಡು ಬಂದಾಗ ನನಗೆ ಸಂತೋಷ ಆಯ್ತು. ನಿಮ್ಮಿಬ್ಬರ ಪ್ರೀತಿ ಅರ್ಥಮಾಡ್ಕೊಂಡೆ... ನೀನು ಆ ಪತ್ರಗಳನ್ನು ನನ್ನ ಪತಿಗೆ ಕಳಿಸೋದ್ರಿಂದ ನಿನಗಾಗಲಿ ಸಂತೋಷನಿಗಾಗಲಿ ಸಹಾಯ ಆಗತ್ತೇನು?"

ಶ್ರೀಮತಿ ನಮ್ರವಾಗಿ ಕೇಳಿದಳು.

"ನೀವು ನನಗೆ ಮಾಡಿರೊ ಅನ್ಯಾಯಕ್ಕೆ ಅದು ಶಿಕ್ಷೆ ವಿಧಿಸುತ್ತೆ."

"ನಾನು ಅನ್ಯಾಯ ಮಾಡಿರೋದೇನು ಹೇಳು?"

ಕೈಚೀಲದಲ್ಲಿ ನೂರರ ನೋಟು ಸಿಕ್ಕಿದ್ದು, ಕರವಸ್ತ್ರ ಹಾಗೂ ಕ್ಯಾಮರಾ ಪ್ರಕರಣ, ಅನಾಮಧೇಯ ಫೋನ್ ಕರೆ ಎಲ್ಲವನ್ನೂ ಚಿತ್ರಾ ಚಾಚೂ ತಪ್ಪದೆ ತಿಳಿಸಿದಳು.

"ಅವೆಲ್ಲಾ ನಡೆದಿರೋದು ಒಬ್ಬ ಹೆಂಗಸಿನಿಂದ."

"ಆ ಹೆಂಗಸು ನಾನು ಅಂತ ಭಾವಿಸ್ತೀಯ?"

ಶ್ರೀಮಂತೆಯ ಕಣ್ಣುಗಳಲ್ಲಿ ನೋವು, ಅಚ್ಚರಿ ತುಂಬಿತ್ತು.

"ನನ್ನ ಸ್ನೇಹಿತೆಯರು ಹಾಗಂತ ಭಾವಿಸ್ತಾರೆ. ಅವರಿಗಂತೂ ಹುಚ್ಚು ಹಿಡಿದಿಲ್ಲ" ಉತ್ತರ ಬಾಣದಂತೆ ಬಂತು.

"ಪತ್ರಗಳನ್ನು ಅವರಿಗೂ ತೋರಿಸಿದ್ದೀಯಾ?"

ಪ್ರಶ್ನೆಯಲ್ಲಿ ಗಾಬರಿ ಸೇರಿತ್ತು.

"ನಾನೊಬ್ಬಳೇ ಅವನ್ನ ಓದಿರೋದು. ನಿಮಗೆ ಅವು ಬೇಕೆ?...ನಿಮ್ಮ ಪತಿ

ಓದಿಕೊಂಡರೂ ಚಿಂತೆ ಇಲ್ಲಾಂತ ನಿರ್ಧಾರ ಮಾಡಿದ್ದಿರೊ?"

ನಾಗರತ್ನ ನಿಟ್ಟುಸಿರು ಹಾಕಿದಳು. ಒಮ್ಮೆಗೇ ವಯಸ್ಸಾದವಳಂತೆ ಕಂಡಳು.

"ಹತ್ತು ವರ್ಷಗಳಿಂದ ನನಗೆ ನೆಮ್ಮದಿ ಇತ್ತು. ಪತಿ ನನ್ನ ಪ್ರೀತಿಸ್ತಾರೆ. ನಾನು ಅವರನ್ನ ಪ್ರೀತಿಸೋದಿಲ್ಲ ಅನ್ನೋದು ಅವರಿಗೆ ಗೊತ್ತಿಲ್ಲ. ಅವರು ಹೊಟ್ಟೆಕಿಚ್ಚಿನ ವ್ಯಕ್ತಿ. ಆ ಪತ್ರಗಳನ್ನು ನೋಡಿಬಿಟ್ರೆ ನನ್ನ ಕೊಂದು ಹಾಕ್ತಾರೆ. ಬಹುಶಃ ಅದರಿಂದ ನಿನಗೆ ತೃಪ್ತಿ ಆಗಬೋದು."

"ನಿಮಗೆ ಏನಾದರೂ ಅವೆಲ್ಲಾ ನಿಮ್ಮ ತಪ್ಪಿನಿಂದ ಆಗಿರೋದು."

ನಾಗರತ್ನ ಒಣ ನಗೆ ಬೀರಿದಳು.

"ನಿನಗೆ ಈವರೆಗೆ ಆಗಿರೋದಿಲ್ಲಾ ನಿನ್ನ ತಪ್ಪಿನಿಂದಲೇ? ನನ್ನ ವಿಷಯದಲ್ಲಿ ಹೇಳೋದಾದ್ರೆ ಒಂದು ಭಾಗದ ತಪ್ಪು ನನ್ನ ತಾಯಿದು. ಪ್ರಣಯದ ಗಂಧವೇ ಇಲ್ಲದ ನಲವತ್ತು ದಾಟಿದ ಶ್ರೀಮಂತ ವ್ಯಾಪಾರಿಗೆ ಹದಿನೆಂಟು ವರ್ಷದ ಮಗಳನ್ನು ಮದುವೆ ಮಾಡಿಸಿದ್ಲು. ಹುಡುಗಿಯ ಕನಸು ನುಚ್ಚುನೂರಾಯ್ತು!"

ಅವಳ ಕಣ್ಣುಗಳು ಸಜಲಗೊಂಡವು. ಮತ್ತೆ ಹೇಳಿದಳು.

"ನನ್ನ ವಯಸ್ಸಿಗೆ ಸೂಕ್ತವಾದ ಪ್ರೀತಿಯನ್ನು ನಾನು ಕಂಡುಕೊಳ್ಳಬೇಕಾಯ್ತು. ನನಗೆ ಶರಶ್ಚಂದ್ರ ಭೇಟಿಯಾದ."

ಚಿತ್ರಾ ಅನುಕಂಪದಲ್ಲಿ ನೋಡಿದಳು. ಅದು ಸತ್ಯಸಂಗತಿ. ನಡೆದು ಎಷ್ಟೋ ವರ್ಷಗಳು ಸಂದಿವೆ. ತನಗೆ ಈಗ ಸಂಭವಿಸುತ್ತಿರುವುದರೊಂದಿಗೆ ಅದರ ಸಂಬಂಧವೇನಿದೆ?

ನಾಗರತ್ನ ಚಾಣಾಕ್ಷಮತಿ. ಶತ್ರುವಿನಿಂದಲೂ ಮರುಕ ಪಡೆಯುವವಳು.

"ನನ್ನ ಪ್ರೇಮದ ವಿಷಯದಲ್ಲಿ ನಾನು ಆಸಕ್ತಿವಹಿಸಿದೀನಿ. ಶ್ರೀಮತಿ ನಿಮ್ಮ ಪ್ರಣಯ ಕಥೆ ನನಗೆ ಬೇಕಿಲ್ಲ."

ತೇಜೋಭಂಗಕ್ಕೆ ಒಳಗಾದವಳು ತಾಳ್ಮೆಗೆಡದೆ ಹೇಳಿದಳು.

"ಸಂತೋಷ ಸುಖವಾಗಿ ಇರೋದಾದ್ರೆ ಅವನು ಯಾರನ್ನು ಮದುವೆ ಆದ್ರೂ ನನ್ನ ಅಭ್ಯಂತರ ಇಲ್ಲ."

ಭೇಟಿ ನಿರೀಕ್ಷಿತ ರೀತಿಯಲ್ಲಿ ಸಾಗುತ್ತಿರಲಿಲ್ಲ. ನಾಗರತ್ನಳ ಬಗೆಗೆ ಇದ್ದ ಸಂಶಯ ಏರುತ್ತಿತ್ತು. ಚಿತ್ರಾ ಮಾತಿನ ಹಾದಿ ತಿರುವಿದಳು.

"ಸಂತೋಷನಿಂದ ನನ್ನ ದೂರ ಮಾಡೋದಿಕ್ಕೆ ನೀವು ಪ್ರಯತ್ನ ಮಾಡಿಲ್ಲವಾದರೆ, ಆ ಕೆಲಸ ನಿಮ್ಮ ಪತಿ ಮಾಡಿರ್ಬೇಕು."

ನಾಗರತ್ನಳ ಮುಖದಲ್ಲಿ ಅದೇ ಒಣ ನಗೆ.

"ಅದೂ ಅಸಂಭವ. ಅವರೇ ಹೇಳಿದ್ರು ನೀನು ಸಂತೋಷನಿಗೆ ಸರಿಯಾದ ಜೋಡಿ ಅಂತ. ನನ್ನ ಪತಿ ಉಗ್ರವಾಗಿ ಕಾಣಿಸಬಹುದು. ಆದರೆ ವಂಚಕರಲ್ಲ. ನಾನು, ನನ್ನ ಪತಿ ಇಬ್ಬರಲ್ಲಿ ಯಾರೂ ನಿನ್ನ ಶತ್ರುಗಳಲ್ಲ... ನಿನಗೆ ಹಚ್ಚು ಇಲ್ಲವಾಗಿದ್ರೆ, ನಿನ್ನ ಕಥೆಗಳು ನಿಜವಾಗಿದ್ರೆ ಬೆದರಿಕೆ ಹಾಕೋದು ಬಿಟ್ಟು ಬೇರೆ ರೀತಿಯಲ್ಲಿ ನಿನ್ನ ಹಾದಿ ಸರಿಪಡಿಸಿಕೊಬೇಕು... ನನ್ನ ಮಾತು ಕೇಳು, ಚಿತ್ರಾ. ಆ ಪತ್ರಗಳನ್ನು ನನಗೆ ಒಪ್ಪಿಸಿಬಿಡು. ನಿನ್ನ ಹಾದಿ ಸರಿಪಡಿಸೋದಿಕ್ಕೆ ಶಕ್ತಿಮೀರಿ ಪ್ರಯತ್ನಪಡ್ತೀನಿ."

"ಪತ್ರ ಕೈಸೇರಿದ ಮೇಲೆ ನೀವು ಮನಸ್ಸು ಬದಲಾಯಿಸ್ತೀರಿ."

"ನಾನು ಸತ್ಯ ಆಡ್ತೀನಿ."

ಚಿತ್ರಾ ಸೋಲಲಿಲ್ಲ.

"ಸ್ವಲ್ಪ ಯೋಚಿಸಿ ತೀರ್ಮಾನ ಕೈಗೊಳ್ತೀನಿ. ನಿಮಗೆ ಇನ್ನೊಂದು ಅವಕಾಶ ಕೊಟ್ಟು. ಆ ಮೇಲೆ ಪತ್ರಗಳನ್ನು ಉಪಯೋಗಿಸಿಕೊಳ್ತೀನಿ.... ಹದಿನೈದು ದಿನಗಳ ನಂತರ."

ನಾಗರತ್ನ ಮುಖದಲ್ಲಿ ಕೋಪ ಸುಳಿದಾಡಿತು.

"ನನ್ನ ವಸ್ತುನ ನನಗೆ ಹಿಂತಿರುಗಿಸಿಬಿಡು!"

ಕೋಪಕ್ಕೆ ಮಣಿಯದೆ ವಿಷಯ ತಿರುಗಿಸಿದಳು.

"ಜ್ಯೋತಿ ಮತ್ತೆ ಅವಳಿಗೂ ಮೊದಲಿನ ರೇಖಾಗೆ ಯಾಕೆ ಅನ್ಯಾಯ ಮಾಡಿದ್ರಿ?"

"ಜ್ಯೋತಿ ಕಲ್ಪನೆಗೂ ಮೀರಿದ ನೀತಿಗೆಟ್ಟ ಹುಡುಗಿ. ರೇಖಾ ಸಂತೋಷನ ಬಂಧು. ಅವಳಿಗೆ ನಾವು ಅನ್ಯಾಯ ಮಾಡ್ಲಿಲ್ಲ. ಅವಳಿಗೆ ನಾವೇ ಮದುವೆ ಮಾಡ್ಸಿದ್ವಿ. ಉತ್ತರಪ್ರದೇಶದಲ್ಲಿ ಸುಖವಾಗಿದ್ದಾಳೆ. ಪತ್ರಗಳ ವಿಷಯ ಗಂಭೀರವಾದದ್ದು. ಚೆನ್ನಾಗಿ ಯೋಚನೆ ಮಾಡು. ಆಮೇಲೆ ಪಶ್ಚಾತ್ತಾಪಪಡ್ಬೇಡ."

ಮುಂದೇನೂ ಹೇಳದೆ ನಾಗರತ್ನ ಹೊರಟುಹೋದಳು.

ಮನೆಗೆ ಹಿಂತಿರುಗಿದ ಮೇಲೆ ಚಿತ್ರಾ ಮತ್ತೊಮ್ಮೆ ಪತ್ರಗಳನ್ನು ಓದಿದಳು.

ನಾಗರತ್ನ ಸೋತ ಹೆಂಗಸು. ಪ್ರಣಯ ಅವಳ ಬದುಕಿನಲ್ಲಿ ವಿಳಂಬವಾಗಿ ಪ್ರವೇಶಿಸಿದೆ. ಹೆಂಗಸು ಪತ್ರ ಹಿಂದಕ್ಕೆ ಪಡೆಯಲು ವಿಶೇಷ ಪ್ರಯತ್ನ ಮಾಡಲಾರಳು. ನಿರಪರಾಧಿನಿ ಆಗಿದ್ದಲ್ಲಿ ಪ್ರಯತ್ನದ ಪ್ರಶ್ನೆಯೇ ಇಲ್ಲ. ಅಪರಾಧಿನಿ ಆಗಿದ್ದಲ್ಲಿ ಹದಿನೈದು ದಿನಗಳಲ್ಲಿ ಅವನ್ನು ಪಡೆಯಲು ಯತ್ನಿಸಲೇಬೇಕು.

ಸಂತೋಷನೂ ಒಪ್ಪಂದಕ್ಕೆ ಬರಬೇಕಾದ ಮನುಷ್ಯ. ಇಲ್ಲವಾದರೆ ಸಂಶಯ ಅವನ ಪ್ರೇಮವನ್ನು ವಿಷಮಯಗೊಳಿಸುತ್ತದೆ.

ರಾತ್ರಿ ಎಂಟರ ವೇಳೆಯಲ್ಲಿ ಸಂತೋಷ ಅವಳ ಕೋಣೆಗೆ ಬಂದುದು ಅವಳಿಗೆ ಅಚ್ಚರಿ ತಂದಿತು.

"ಈ ಹೊತ್ನಲ್ಲಿ ಬಂದ್ರಿ, ಸಂತೋಷ..."

"ಕ್ಷೇಮ ಕೇಳೋಣಾಂತ ಬಂದೆ. ನೀನು ಜಯಂತನ ಮನೆಗೆ ಅವನ ತಾಯಿನ ನೋಡೋಕೆ ಹೋಗಿದ್ದು ನಿಜ ಅಂತ ತಿಳೀತು. ತನಿಖೆ ಮಾಡಿದ್ದು ನಿನಗೆ ಬೇಜಾರಾಗಿರಬೋದು....ಏನು ಮಾಡೋದು? ನಿನ್ನ ಬಹಳವಾಗಿ ಪ್ರೀತಿಸ್ತೀನಿ. ನೀನು ಇನ್ನೊಬ್ಬ ಗಂಡಸಿನೊಂದಿಗೆ ಇರೋದು ನನಗೆ ಹುಚ್ಚು ಹಿಡಿಸುತ್ತೆ."

ಅವಳ ತೋಳು ಹಿಡಿದು ಕಣ್ಣುಗಳಲ್ಲಿ ದೃಷ್ಟಿ ಹೂಡಿ ಮತ್ತೆ ನುಡಿದ.

"ಸ್ನೇಹಿತರು, ತಂದೆ, ತಾಯಿ ಯಾರಿಗೂ ತಿಳಿಸದೆ ಜಾಗ್ರತೆಯಾಗಿ ಮದುವೆ ಆಗಿಬಿಡೋಣ. ಇಲ್ಲಿಂದ ದೂರಕ್ಕೆ ಹೋಗಿ ಯಾವುದಾದ್ರು ಹೊಸ ಊರಲ್ಲಿ ಬದುಕು ಪ್ರಾರಂಭಿಸೋಣ. ಸೊಗಸಾಗಿ ಬದುಕೋಣ. ನನ್ನಲ್ಲಿ ಸ್ವಲ್ಪ ಹಣ ಇದೆ. ಮನೆ ಜಮೀನು..."

ಅವನ ಮಾತು ಮುಂದೆ ಕೇಳಿಸಲಿಲ್ಲ. ಅವಳಿಗೆ ಭವ್ಯವಾದ ಮನೆ ಕಣ್ಣ ಮುಂದೆ ಬಂತು. ಶತ್ರುವಿನ ಹಿಡಿತಕ್ಕೆ ಸಿಗದ ತಾಣ.

ಅವಳಿಗಾಗಿ ಸಂತೋಷ ಮನೆ, ಕುಟುಂಬ, ಭವಿಷ್ಯ ಎಲ್ಲವನ್ನೂ ತ್ಯಜಿಸಲು ಸಿದ್ಧನಾಗಿದ್ದ. ಅದು ಅವನ ಪ್ರೇಮಕ್ಕೆ ಸಾಕ್ಷಿ.

ಬಾಗಿಲ ಮೇಲೆ ಸದ್ದಾಯಿತು. ಪಕ್ಕದ ಮನೆಯವನು ಅವಳಿಗೆ ಫೋನ್ ಕರೆ ಬಂದಿದೆಯೆಂದು ತಿಳಿಸಿದ. ಮುಂದಿನ ಬದುಕಿನ ಚಿತ್ರ ಕಾಣುತ್ತಾ ಚಿತ್ರಾ ಇಳಿದುಹೋದಳು. ಫೋನ್ ಎತ್ತಿದಾಗ ಕೇಳಿಸಿದ್ದು ಗುರುತಿಸಲಾಗದ ಕಂಠ.

"ನಿನ್ನ ಶತ್ರು ಪಂಪಾಪತಿ. ಅವನ ಹೆಂಡತಿ ಅಲ್ಲ. ಅವಳ ಪತ್ರಗಳನ್ನು ಹಿಂದಕ್ಕೆ ಕೊಡು... ಹೇಳಿದ್ದು ಕೇಳಿಸ್ತೆ? ಆ ಪತ್ರಗಳನ್ನು ಹಿಂತಿರುಗಿಸು!"

ರಕ್ತ ತಣ್ಣಗಾಯಿತು. ತನ್ನ ಹೊರತಾಗಿ ಪತ್ರಗಳ ಬಗೆಗೆ ತಿಳಿದವರು ಇಬ್ಬರೇ...ನಾಗರತ್ನ ಮತ್ತು ಬಿಂದು.

ಫೋನ್‌ನಲ್ಲಿ ಕೇಳುತ್ತಿರುವುದು ವಿಚಿತ್ರ ಧ್ವನಿ. ಗಂಡು, ಹೆಣ್ಣು ಎರಡರ ಮಧ್ಯದ ಕೃತಕ ಸ್ವರ. ಬಹುಶಃ ನಾಗರತ್ನ ಕಂಠ ಬದಲಾಯಿಸಿರಬಹುದು!

"ಮಾತಾಡ್ತಾ ಇರೋದು ಯಾರು?" ಮೊನಚಾಗಿ ಕೇಳಿದಳು.

"ಯಾರಾದ್ರೇನು? ನಿನ್ನ ಮೇಲೆ ವ್ಯೂಹ ಹೂಡಿರೋದು ಯಾರೂಂತ ನಾಗರತ್ನಳಿಗೆ ಗೊತ್ತು. ಪತ್ರಗಳನ್ನು ಒಪ್ಪಿಸಿದರೆ ಅವಳು ಸಹಾಯ ಮಾಡ್ತಾಳೆ."

ಮತ್ತೆ ಅದೇ ಕೃತಕ ದನಿ. ಫೋನ್ ಮಾತು ನಿಂತುಹೋಯಿತು.

ಒಪ್ಪಂದಕ್ಕೆ ಕಾದಿರುವ ನಾಗರತ್ನಳಿಗೆ ಇದೂ ಒಂದು ಚಾತುರ್ಯ.

ಚಿತ್ರಾ ಕೋಣೆಗೆ ಹಿಂತಿರುಗಿದಾಗ ಸಂತೋಷ ಚಡಪಡಿಸುತ್ತಿದ್ದ.

"ನನ್ನ ಮಾತಿಗೆ ಉತ್ತರ ಹೇಳ್ಲಿಲ್ಲ ನೀನು."

ಫೋನ್ ಮಾತಿನ ಗುಂಗಿನಲ್ಲಿದ್ದವಳು ಎಚ್ಚೆತ್ತಳು.

"ನಾನು ಕಳ್ಳಿ ಅಲ್ಲಾಂತ ನೀವು ನಂಬಿದ ಕೂಡಲೇ ನಿಮ್ಮನ್ನ ಮದುವೆ ಆಗ್ತೀನಿ. ಇಲ್ಲದಿದ್ರೆ ನಮ್ಮಿಬ್ಬರ ನಡುವೆ ಅದೇ ಅಂತರ."

"ಆಲ್‌ರೈಟ್, ನಿನ್ನ ಮಾತು ನಂಬ್ತೀನಿ..."

ಅವಳನ್ನು ಆತ್ಮೀಯವಾಗಿ ಒತ್ತಿ ಹಿಡಿದವನು ಮತ್ತೆ ಸರಿಸಿದ.

"ಇಲ್ಲ, ನನ್ನ ಮನಸ್ಸಿಗೆ ವಿರೋಧಿ ಆಗೋದಿಲ್ಲ. ನಿನಗೆ ಆಧಾರಗಳ ಮೇಲೆ ಎರಡು ಬಾರಿ ಶಿಕ್ಷೆ ಆಗಿದೆ."

ಅವಳ ಕಣ್ಣುಗಳಲ್ಲಿ ಬೆಳಕು ಆರಿತ್ತು. ದಿಟ್ಟ ಮಾತು ಹೊರಗೆಡಹಿದಳು.

"ನೀವು ಹೇಳಿದ್ದು ಬೇಕಾದಷ್ಟಾಯ್ತು, ಸಂತೋಷ...ನೀವು ಹೊರಡಬಹುದು !"

"ಕಾರಣ... ನಾನು ಪ್ರಾಮಾಣಿಕ."

"ಕಾರಣ...ನೀವು ನನ್ನ ಅಪ್ರಮಾಣಿಕಳು ಅಂತ ಕರೆದಿರೋದು. ನಿಮ್ಮ ಮನಸ್ಸು ನನ್ನ ಪರವಾಗಿ ಅಭಿಪ್ರಾಯ ಕೊಡೋವರೆಗೆ ನನ್ನಿಂದ ದೂರ ಇರಿ."

ಅವಳೇ ಬಾಗಿಲು ತೆರೆದಳು. ಅವಳತ್ತ ನೋಡದೆ ಹೊರಟುಹೋದ. ನಿರ್ವಿಕಾರವಾಗಿ ಬಾಗಿಲು ಮುಚ್ಚಿದಳು.

ಮುಷ್ಟಿ ಬಿಗಿಯಿತು. ತಾನು ತಪ್ಪಿತಸ್ಥೆ ಅಲ್ಲ. ಕಳೆದುಹೋದ ಪ್ರಸಂಗಗಳ ಕಡೆಗೆ ಬೆನ್ನು ತಿರುಗಿಸುವುದು ಪ್ರಸ್ತುತ ಸಮಸ್ಯೆಗಳಿಗೆ ಪರಿಹಾರವಲ್ಲ. ಫೋನ್ ಕರೆ ತಲೆಯಲ್ಲಿ ಝೇಂಕರಿಸಿತು.

ನಾಗರತ್ನಳಿಗೆ ಪತ್ರಗಳನ್ನು ಒಪ್ಪಿಸಬೇಕು. ಕ್ಷಣದ ಒತ್ತಾಯದ ಮೇಲೆ ಕೈಗೊಂಡ ತೀರ್ಮಾನ ಅದು. ಪತ್ರಗಳಿಂದ ಪ್ರಯೋಜನವಿಲ್ಲ. ನಾಗರತ್ನ ಹೇಗೇ ಇರಲಿ, ಅವಳ ವಿರುದ್ಧ ಪತ್ರಗಳನ್ನು ಆಯುಧವಾಗಿ ಬಳಸಕೂಡದು. ಅವಳು ತನ್ನ ಮಾತು ಉಳಿಸಿಕೊಂಡು ಸಹಾಯಕಳಾಗಬಹುದು.

ಚಿತ್ರಾ ಮೇಜಿನ ಡ್ರಾ ಎಳೆದಳು.

ಪತ್ರಗಳು ಇರಲಿಲ್ಲ!

ಕಣ್ಣುಗಳು ನಂಬಲಿಲ್ಲ. ಮತ್ತೊಮ್ಮೆ ಚೆನ್ನಾಗಿ ಹುಡುಕಿದಳು. ಪತ್ರಗಳು ಕಾಣೆಯಾಗಿವೆ!

ಕಣ್ಣುಗಳ ಮುಂದೆ ಅಸ್ಪಷ್ಟ ನೆರಳುಗಳು ಹರಿದಾಡಿದವು. ತಲೆ, ಎದೆ ಕೇಳುವಷ್ಟು ತೀವ್ರವಾಗಿ ಬಾರಿಸತೊಡಗಿದವು.

ಯಾರು ಪತ್ರಗಳ ಲಕೋಟೆ ಒಯ್ದುವರು?

ಉತ್ತರ ಮನದಲ್ಲಿತ್ತು... ಸಂತೋಷ!

ಸಂತೋಷ ಕದ್ದೊಯ್ದನೆಂಬುದು ನಂಬಿಕೆಗೆ ಬರಲೊಲ್ಲದು.

ಆದರೂ ಸಾಧ್ಯ. ನಾಗರತ್ನ ನಿರ್ವಾಹವಿಲ್ಲದೆ ಮಗನಿಗೆ ತನ್ನ ಹಳೆಯ ಅಕ್ರಮ ವ್ಯವಹಾರವನ್ನು ತಿಳಿಸಿದ್ದಾಳೆ. ಪತಿಗೆ ವಿಷಯ ಬಹಿರಂಗವಾಗದಿರಲು ಮಗನ ಮೊರೆಹೊಕ್ಕಿದ್ದಾಳೆ. ಮಗನನ್ನು ಮದುವೆಯಾಗುವವಳು ಬ್ಲಾಕ್ ಮೇಲರ್ ಎಂದು ತಿಳಿಸಿರಬೇಕು.

ಚಿತ್ರಾ ಗಂಭೀರವಾಗಿ ಯೋಚಿಸಿದಳು. ವಂಶದ ಗೌರವ ಕಾಪಾಡಲು ಸಂತೋಷ ಪತ್ರಗಳಿಗಾಗಿಯೇ ತನ್ನ ಕೋಣೆಗೆ ಬಂದ. ತಾನು ಫೋನ್ ಕರೆಯ ಮೇಲೆ ಇಳಿದು ಹೋದಾಗ ಅವನಿಗೆ ಲಕೋಟೆ ಎತ್ತಿಕೊಳ್ಳಲು ಸೊಗಸಾದ ಅವಕಾಶ. ಅಂತಹ ಅವಕಾಶ ಕಲ್ಪಿಸಲು ಸಮಯಕ್ಕೆ ಸರಿಯಾಗಿ ಫೋನ್ ಮಾಡಿದವಳು ಅವನ ತಾಯಿ.

ಸರ್ಪಿಣಿ ನಾಗರತ್ನ ಒಂದು ಬಾಣದಲ್ಲಿ ಎರಡು ಹಕ್ಕಿಗಳನ್ನು ಹೊಡೆದ ಚತುರೆ. ತನಗೆ ಘಾತಕವಾಗಿ ಪತ್ರಗಳನ್ನು ವಶಪಡಿಸಿಕೊಂಡಳು. ಮಗನನ್ನು ಪ್ರಿಯತಮೆಯಿಂದ ಶಾಶ್ವತವಾಗಿ ದೂರ ಮಾಡಿದಳು. ಸಂತೋಷ ಕಳ್ಳತನಕ್ಕೆ ಶಿಕ್ಷೆಯಾದವಳನ್ನು, ನೀತಿಗೆಟ್ಟವಳನ್ನು ಮದುವೆಯಗಲು ಸಿದ್ಧನಿರಬಹುದು. ಆದರೆ ತಾಯಿಗೆ ಬ್ಲಾಕ್‌ಮೇಲ್ ಮಾಡುವವಳನ್ನು  ಮದುವೆಯಾಗುವಂತಿಲ್ಲ!

ಅವನು ಮದುವೆಯ ಮಾತು ಆಡಿದುದೇಕೆ? ಪತ್ರಗಳನ್ನು ಹಾರಿಸುವ ಮುನ್ನ ತನ್ನ ಚಿತ್ರವನ್ನು ತಳಮಳಗೊಳಿಸುವ ತಂತ್ರ ಅದು.

ಆಲೋಚನೆಯ ಗೊಂದಲದಲ್ಲೇ ಬಿಂದು ಬಂದಳು.

"ನೀಲಂಕಾರ್ ರಾಣಿಯನ್ನ ನೋಡಿ ಬಂದಾಯ್ತೇನು? ನಿನ್ನ ಹಾದಿ ಸರಿಮಾಡ್ತಾಳಂತೇನು?"

ಬಹುಶಃ ಹಾದಿ ಇನ್ನೂ ಹದಗೆಡಬೋದು."

"ಪತ್ರಗಳು ಗಂಡನ ಕೈಗೆ ಸಿಗದ ಹಾಗೆ ಮಾಡಲು ಅವಳು ಏನು ಬೇಕಾದ್ರು ಮಾಡ್ತಾಳೆ."

"ಪತ್ರಗಳು ಕಳೆದು ಹೋಗಿವೆ!"

ಹಣೆ ಚಚ್ಚಿಕೊಂಡಳು ಸ್ನೇಹಿತೆ.

"ಸರ್ವನಾಶವಾಯ್ತು! ಆ ಹೆಂಗಸು ನಿನ್ನ ಮುಂದೆ ಕೈಜೋಡಿಸಿ ನಿಲ್ಲುವಂತಹ ಪ್ರಸಂಗ ತಪ್ಪಿಹೋಯ್ತು... ನಿನ್ನ ಜಾಗದಲ್ಲಿ ನಾನು ಇದ್ದಿದ್ರೆ ಅವಳನ್ನು ಸೂತ್ರದ ಬೊಂಬೆ ಹಾಗೆ ಕುಣಿಸ್ತಿದ್ದೆ. ನೀನು ಏನು ಮಾಡಿದ್ರೂ ಗಡಿಬಿಡಿ ಮಾಡಿಬಿಡ್ತೀಯ. ನಾನು ಜೊತೆಗೆ ಇಲ್ಲದಿದ್ರೆ ಅದೇನು ಬದುಕು ನಡೆಸ್ತಿದ್ದೆಯೋ!"

"ನನ್ನ ಮೂದಲಿಸೋದೊಂದೇ ನಿನಗೆ ಗೊತ್ತಿರೋದು. ನಿನ್ನ ಜೊತೆ ಇಲ್ಲವಾಗಿದ್ರೆ

ಸೊಗಸಾದ, ನೆಮ್ಮದಿ ಬದುಕೇ ನಡೆಸ್ತಿದ್ದೆ."

ರೋಸಿ ಹೇಳಿದಳು. ಸ್ನೇಹಿತೆ ಸಿಡಿದಳು.

"ಸರಿ, ನಾನು ದೂರವಾಗ್ತೀನಿ."

"ಆ ಕೆಲಸ ಈಗಲೆ ಮಾಡು. ನನ್ನ ತಲೆ ಚಿಟ್ಟು ಹಿಡ್ಡಿದೆ."

ಗರಬಡಿದು ನಿಂತ ಸ್ನೇಹಿತೆ ನೆಲಕ್ಕೆ ಕಾಲುತಾಡಿಸಿ ರೋಷದಿಂದ ಹೊರಟು ಹೋದಳು.

ಅತಿ ಮಾತಿನ ತಪ್ಪು ಅರಿವಾಗಿ ಅವಳ ಕ್ಷಮೆ ಬೇಡಲು ಬಾಗಿಲು ತೆರೆದಳು. ಹೊರಗೆ ಜಯಂತ ನಿಂತಿದ್ದ ! ಅವನ ಕೈಲಿ ಕೆಂಪು ಗುಲಾಬಿ ಹೂಗಳ ರಟ್ಟಿನ ಪೆಟ್ಟಿಗೆ.

"ನಾಳೆ ಬೊಂಬಾಯಿಗೆ ಹೊರಡ್ತಾ ಇದೀನಿ. ಜ್ಞಾಪಕ ಇರಲಿ."

"ಜ್ಞಾಪಕ ಇರಲಾರದು" ಎಂಬಂತೆ ತಲೆ ನಿಧಾನವಾಗಿ ಎಡಬಲ ಆಡಿಸಿದಳು.

"ನೀವು ಸಮ್ಮತಿ ಕೊಡೋವರೆಗೆ ಪ್ರಣಯದ ಮಾತು ಎತ್ತೋದಿಲ್ಲ.... ನೀವು ಕಾಲ ವ್ಯರ್ಥ ಮಾಡ್ತಾ ಇದೀರಿ. ನಿಮಗೆ ಸಂತೋಷ ಸಿಗೋರಲ್ಲ."

"ಅವರು ಸಿಗದೆ ಹೋದ್ರೂ ನಾನು ನಿಮ್ಮನ್ನ ಪ್ರೀತಿಸೋದಿಲ್ಲ ಜಯಂತ್. ನನ್ನೊಂದಿಗೆ ಬಹಳ ಸಹಕರಿಸಿದ್ದೀರಿ. ನಿಮಗೆ ಥ್ಯಾಂಕ್ಸ್."

"ಯಾವತ್ತು ಜ್ಞಾಪಿಸಿಕೊಂಡ್ರೂ ಸರಿ. ಈ ವಿಳಾಸ ನಿಮ್ಮಲ್ಲಿ ಇರಲಿ."

"ಚೀಟಿ ಅವಳಿಗಿತ್ತು ನಡೆದ."

ಅವನು ಬಿಟ್ಟುಹೋದ ಕೆಂಪು ಗುಲಾಬಿಗಳನ್ನು ನೋಡುತ್ತಾ ಕುಳಿತಳು. ಜಯಂತನನ್ನು ಕಳೆದುಕೊಂಡಿದ್ದಳು. ಅಂತೆಯೇ ಬಿಂದು, ಸಂತೋಷ ಇಬ್ಬರೂ ದೂರವಾಗಿದ್ದರು.

ದಿನ ಕಳೆಯಿತು. ಸ್ಟೋರ್‌ನಲ್ಲಿ ಪತ್ರಗಳ ಚಿಂತೆ ಒಂದೇ ಸಮನೆ ಬೇಯಿಸಿತು. ಸಂತೋಷನಿಂದ ಕರೆ ಬಂತು.

"ನನ್ನ ತಾಯಿಯ ಪತ್ರಗಳನ್ನು ಒಪ್ಪಿಸಿ, ನಿನ್ನ ಸಂಬಳ ತೊಗೊಂಡು ಹೋಗಬಹುದು."

ಬೆಚ್ಚಿದಳು. ಅಂದರೆ ಪತ್ರಗಳನ್ನು ಸಂತೋಷ ಕದ್ದಿಲ್ಲ!

"ನಿಮ್ಮ ತಾಯಿಯ ಸ್ವತ್ತು ನನ್ನಲ್ಲಿದೆ ಅಂತ ಯಾಕೆ ತಿಳೀತೀರಿ?"

ಬಿಗಿಮುಷ್ಟಿಯನ್ನು ಮೇಜಿಗೆ ಗುದ್ದಿದ.

"ಮಮ್ಮಿ ಎಲ್ಲಾ ಹೇಳಿದ್ದಾಗಿದೆ. ಈಗ ನಿನ್ನದೇನಾದ್ರು ಇದ್ರೆ ಹೇಳು. ನೀಚ ಹುಡುಗಿ! ನಿನಗೆ ಸಹಾಯ ಮಾಡ್ತಾ ಇರೋ ಆ ಗಂಡಸು ಯಾರು!"

"ಯಾವ ಗಂಡಸು?" ಸ್ವರ ಸೀಳಿತು.

"ಇನ್ನೂ ಅಭಿನಯ? ಆ ಗಂಡಸು ಈ ಬೆಳಿಗ್ಗೆ ಫೋನ್ ಮಾಡಿದ್ದ ನನ್ನ ತಾಯಿಗೆ... ಪಕ್ಕಾ ಬ್ಲಾಕ್ ಮೇಲರ್! ಹತ್ತು ಸಾವಿರ ರೂಪಾಯಿ ಕೇಳ್ದ ಆ ಪತ್ರಗಳನ್ನು ಒಪ್ಪಿಸಲಿಕ್ಕೆ."

"ಸಂತೋಷ, ನೀವು ಏನು ಹೇಳ್ತಾ ಇದೀರಿ?"

ಉಸಿರು ಏರಿತು. ಅವನು ಎದ್ದು ಅವಳ ಮುಖ ಒರಟಾಗಿ ಎತ್ತಿ ದೃಷ್ಟಿ ಇರಿದ. ಅವಳು ಥರಗುಟ್ಟಿದಳು.

"ನಾನೇ ನೆನಪು ಮಾಡಿಕೊಡ್ತೀನಿ. ಕಬ್ಬನ್ ಪಾರ್ಕ್‌ನಲ್ಲಿ ನನ್ನ ತಾಯಿನ ಭೇಟಿ ಮಾಡಿ, ಆ ಪತ್ರಗಳಿಗೆ ಬದಲಾಗಿ ಏನೋ ಕೇಳ್ದೆ, ಹೌದು ತಾನೆ?"

"ಹೌದು, ಆದರೆ ಹಣ ಕೇಳಿಲ್ಲ. ನಿಮ್ಮ ತಾಯಿನ ಕೇಳಿದ್ದು, ನಾನು ಅಪರಾಧಿನಿ ಅಲ್ಲಾಂತ ಒಪ್ಕೊಂಡು ನಿಮ್ಮನ್ನೂ ಒಪ್ಪಿಸಿ ಅಂತ."

"ಹಾಗೆ ಹೇಳಿ ನನ್ನ ಮದುವೆ ಆಗಿ, ನಮ್ಮ ಮನೆ ಹಣ ಸೂರೆ ಮಾಡಬೇಕೂಂತ ನಿನ್ನ ಸನ್ನಾಹ...ನೀನು ಕೇಳಿರೊ ಹಣ ಕೊಡ್ತೀನಿ. ಯಾರು ಆ ಗಂಡಸು?"

"ಯಾವ ಗಂಡಸೂ ಸಹಾಯಕ್ಕೆ ನಿಂತಿಲ್ಲ."

ಕುರ್ಚಿಯಲ್ಲಿ ಕುಳಿತು ತಲೆಗೆ ಕೈಕೊಟ್ಟ.

"ಬೆಳಗ್ಗೆ ಮಮ್ಮಿ ಅಳ್ತಿದ್ರು. ಅವರು ಕಣ್ಣೀರು ಸುರಿಸಿದ್ದು ಯಾವತ್ತೂ ನೋಡಿರ್ಲಿಲ್ಲ. ಆ ಹೊತ್ತಿಗೆ ಫೋನ್ ಬಂದಾಗಿತ್ತು. ನನ್ನ ಒತ್ತಾಯಕ್ಕೆ ಎಲ್ಲಾ ಹೇಳಿದ್ರು. ತಾಯಿ ತನ್ನ ಅಕ್ರಮ ಸಂಬಂಧವನ್ನು ಮಗನಿಗೆ ಹೇಳೋ ಪರಿಸ್ಥಿತಿ ! ಕಥೆ ಹೇಳುವಾಗ ಅವಳಿಗೆ ಹೇಗಾಗಿರಬೋದು ಯೋಚನೆ ಮಾಡು. ಇಷ್ಟಕ್ಕೆಲ್ಲಾ ನೀನು ಕಾರಣ!"

"ಇಲ್ಲ !ಇಲ್ಲ !" ಕಿರಿಚಿದಳು.

ಹಲ್ಲು ಕಚ್ಚಿ ಕೇಳಿದ.

"ಎಲ್ಲಿ ಆ ಪತ್ರಗಳು? ಅವನ್ನ ಕೂಡಲೇ ಒಪ್ಪಿಸಿಬಿಡು. ಇಲ್ದಿದ್ರೆ ಬ್ಲಾಕ್‌ಮೇಲ್ ಆಪಾದನೆ ಮೇಲೆ ನಿನ್ನ ಹಿಡಿದುಕೊಡ್ತೀನಿ. ನಿನ್ನ ಹಳೇ ಅಪರಾಧಗಳ ಚರಿತ್ರೆಯೊಂದಿಗೆ ನಿನಗೆ ಸಿಗೋದು ಏಳು ವರ್ಷ ಜೈಲು!"

## ೮

ನಕ್ಷತ್ರ ಕಣ್ಣುಗಳು ಅವನ ಮುಖ ನಿಟ್ಟಿಸಿದವು. ಸಂತೋಷನದು ಇಷ್ಟು ಬಿರುಸಿನ ಮುಖವೆ? ಹೃದಯವನ್ನು ಗೆದ್ದ ಆ ಕನಸುಗಾರ ಎಲ್ಲಿ?

ಮೌನವಾಗಿ ಕುಳಿತವಳ ತೋಳು ಬಲವಾಗಿ ಹಿಡಿದು ಅಲುಗಿಸಿದ.

"ಪತ್ರಗಳು ಎಲ್ಲಿ?"

ಅವನ ಕೈ ಸರಿಸಿದಳು.

"ಅವು ನನ್ನಲ್ಲಿಲ್ಲ. ನಿಮ್ಮಲ್ಲಿದೆ ಅಂತ ಭಾವಿಸ್ದೆ."

ನುಂಗುವಂತಿತ್ತು ಅವನ ನೋಟ.

"ನನ್ನಲ್ಲಿ? ನನ್ನ ತಾಯಿ ತಿಳಿದಿದ್ದು ನೀನು ಸಾಮಾನ್ಯ ಮಿದುಳು ರೋಗಿ ಅಂತ. ನೀನು ಅಪಾಯಕಾರಿ ಹುಚ್ಚಿ! ನನ್ನಲ್ಲಿ ಪತ್ರ ಹೇಗೆ ಬರುತ್ತೆ?

"ನನ್ನ ಕೋಣೆಯ ಡ್ರಾನಲ್ಲಿದ್ವು. ನೀವು ಅಲ್ಲಿಂದ ಹೊರಟ ಮೇಲೆ ನೋಡಿದಾಗ ಇರಲಿಲ್ಲ."

"ಚಿತ್ರಾ, ನಿಜ ಹೇಳು" ಸೋತು ಕೇಳಿದ.

ಕಣ್ಣೀರು ಚಿಮ್ಮಿ ಹರಿಯಿತು.

"ಹೇಳ್ತಾ ಇರೋದು ಸತ್ಯ. ಪತ್ರಗಳು ಕಳುವಾಗಿವೆ. ನನಗೆ ಬ್ಲಾಕ್‌ಮೇಲ್ ವಿಷಯ ತಿಳೀದು."

ಅವಳ ಕಣ್ಣೀರು ಅವನನ್ನು ಕದಲಿಸಲಿಲ್ಲ.

"ನಿನ್ನ ಮಾತಿನಲ್ಲಿ ವಿಶ್ವಾಸ ಇಲ್ಲ. ನೀನು, ನನ್ನ ತಾಯಿ ಇಬ್ಬರನ್ನು ಬಿಟ್ಟು ಆ ಪತ್ರಗಳ ವಿಷಯ ಯಾರಿಗೆ ತಿಳಿದಿತ್ತು?"

"ಬಿಂದುಗೆ..." ಹಿಂಜರಿಯುತ್ತಾ ತಿಳಿಸಿದಳು.

ಕೋಪ ಏರಿತು.

"ಪತ್ರಗಳನ್ನು ಅವಳು ಓದಿದ್ಲಾ?"

"ಇಲ್ಲ ! ನನಗೆ ಅವು ಸಿಕ್ಕಿವೆ ಅಂತ ಮಾತ್ರ ಹೇಳ್ದೆ... ಬಿಂದು ಕದಿಯೋಳಲ್ಲ. ನನ್ನ ಪ್ರಾಣ ಸ್ನೇಹಿತೆ."

ಅವನು ಫೋನ್ ಎತ್ತಿಕೊಂಡು ಅಪ್ಪಣೆ ನೀಡಿದ.

"ಬಿಂದುನ ಚೆಂಬರ್‌ಗೆ ಕಳಿಸು."

"ಎರಡು ನಿಮಿಷಗಳ ನಂತರ ಫೋನ್ ಮರುಗಂಟೆ ಬಾರಿಸಿತು. ಬಿಂದು ಕೆಲಸಕ್ಕೆ ಬಂದಿಲ್ಲವೆಂಬ ಉತ್ತರ."

ಚಿತ್ರಾಳ ಮೇಲೆ ಸಂಶಯದ ದೃಷ್ಟಿ ಹರಿಸಿದ.

"ನಿನ್ನ ಪ್ರಾಣ ಸ್ನೇಹಿತೆಯ ವಿಷಯ ನಿನಗೆ ಗೊತ್ತಿರಬೇಕು. ಅವಳು ಕೆಲಸಕ್ಕೆ ಯಾಕೆ ಬಂದಿಲ್ಲ?"

ಉಸಿರೆಳೆದುಕೊಂಡಳು.

"ನಿನ್ನೆ ರಾತ್ರಿ ನಮ್ಮಿಬ್ಬರಿಗೂ ಮಧ್ಯೆ ಪತ್ರಗಳ ವಿಷಯಕ್ಕೆ ಮಾತು ನಡೀತು.

ಕಾಗದಗಳನ್ನು ಕಳೆದುಕೊಂಡಿದ್ದಕ್ಕೆ ನನ್ನ ಬಗ್ಗೆ ಹಗುರವಾಗಿ ಮಾತಾಡಿದಳು. ಅವಳ ಮೈ ಸರಿಯಿಲ್ಲಾಂತ ಭಾವಿಸ್ತೀನಿ."

"ನನಗೆ ಆ ಕಾಗದಗಳು ಸಿಕ್ಕೋವರೆಗೆ ನಿನ್ನ ಮೇಲೆ ಸಂಶಯ ತಪ್ಪೋದಿಲ್ಲ. ಬಿಂದು ಅಲ್ಲವಾದರೆ ನೀನೇ ತಪ್ಪಿತಸ್ಥೆ. ಅವಳಿಗೆ ಮೈ ಸರಿ ಇಲ್ಲವೆ ಅನ್ನೋದು ನೋಡೋಣ. ನಿಮ್ಮಿಬ್ಬರ ಕೋಣೆ ಹುಡುಕಬೇಕು. ನಡಿ. ಹೋಗೋಣ. ನನ್ನ ತಂದೆ, ತಾಯಿನ ಬೇರೆ ಮಾಡುವ ಪತ್ರಗಳು ಅವು."

ಬಿಂದುವಿನ ಕೋಣೆ ಬಾಗಿಲಿಗೆ ಬೀಗ ಹಾಕಿತ್ತು. ಚಿತ್ರಾಳ ಕೋಣೆ ತರೆದಾಗ ಬಾಗಿಲ ಬಳಿ ಕಾಗದ ಬಿದ್ದಿತ್ತು. ಬಿಂದು ಬರೆದಿದ್ದಳು.

"ನಿನ್ನೆ ರಾತ್ರಿ ನೀನು ಹಾಗೆ ಮಾತಾಡಿದ ಮೇಲೆ ನಿನ್ನೊಂದಿಗೆ ವಾಸ, ಕೆಲಸ ಎರಡೂ ಬೇಡವೆನ್ನಿಸಿತು. ಮುಚ್ಚು ಮನಸ್ಸಿನ ಮೋಸಗಾರರನ್ನು ನಾನು ತಿರಸ್ಕರಿಸ್ತೀನಿ ಅಂತ ಗೊತ್ತು ನಿನಗೆ...ಸಂತೋಷನಿಗೆ ಸೋತ ದಿನದಿಂದ ನಿನಗೆ ತೊಂದರೆಗಳು ಹೆಚ್ಚಾ ಇವೆ. ನೀನು ಅವನ್ನ ಬಿಡೋತನಕ ತೊಂದರೆ ತಪ್ಪಿದ್ದಲ್ಲ."

ಅವಳ ಭುಜದ ಕಡೆ ನಿಂತುಕೊಂಡು ಪತ್ರ ಓದಿದ.

"ನಿನ್ನ ಪ್ರಾಣಸ್ನೇಹಿತೆ ನಿನ್ನ ಚೆನ್ನಾಗಿ ಅರ್ಥ ಮಾಡ್ಕೊಂಡಿದಾಳೆ. ಮುಚ್ಚು ಮನಸ್ಸು ! ಮೋಸ!"

"ಏನು ಅರ್ಥ ಬೇಕಾದ್ರೂ ಕೊಡಬಹುದು."

ಅವಳಿಂದ ತಿರುಗಿ ನಿಂತ.

"ನಿನ್ನ ಸ್ನೇಹಿತೆ ಬ್ಲಾಕ್‌ಮೇಲರ್ ಜೊತೆ ಸೇರಿ ನಿನ್ನ ತೊಂದರೆಗೆ ಸಿಕ್ಕಿ ಹಾಕಿರಬೋದು. ನೀನು ಕೆಟ್ಟೋಳಲ್ಲ ಅಂತ ತಾಯಿ ಹೇಳ್ತಾರೆ. ನಿನಗೆ ಬೇನೆಯಂತೆ. ನಾನು ಹೇಳ್ತೀನಿ ನಿನಗೆ ಬೇನೆ ಇಲ್ಲ. ಮುಚ್ಚು ಮನಸ್ಸಿನ ಮಹಾ ಮೋಸಗಾತಿ!"

ಅತೀವ ಬೇಸರ, ಧಾವಂತದಲ್ಲಿ ಅವಳು ಉತ್ತರಿಸಲಿಲ್ಲ.

ಅವನು ಕೋಣೆಯಲ್ಲಿ ಶೋಧನೆ ನಡೆಸಿದ. ಪತ್ರಗಳು ಸಿಗಲಿಲ್ಲ. ಕಾರು ಸ್ಟೋರ್ಸ್ ಕಡೆಗೆ ಸಾಗದೆ ಅವನ ಮನೆಯ ದಿಕ್ಕು ಹಿಡಿಯಿತು.

"ನೀನು ಹೇಳಿದ ಕತೆಯನ್ನು ಮಮ್ಮಿಗೆ ಹೇಳೋಣ. ನೋಡೋಣ ಏನು ಹೇಳ್ತಾರೇಂತ."

ನಿರಾಸಕ್ತಿಯಿಂದ ಹೇಳಿದ. ಅವನ ಮುಖ ಶಿಲೆಯಾಗಿತ್ತು. ಸಹಾಯ ನಿರೀಕ್ಷಿಸುವುದು ವ್ಯರ್ಥವೆಂದು ತಿಳಿದಳು. ಅವನದೂ ಏರುಪೇರುಗಳ ಮೂರು ಪ್ರಣಯ ಪ್ರಕರಣಗಳು. ಅದರ ಮೇಲೆ ತಾಯಿಯ ಅಪ್ರಾಮಾಣಿಕತೆಯ ಬಗೆಗೆ ಕೇಳಿ ತಟ್ಟಿದ ಆಘಾತ.

ನಾಗರತ್ನಳಿಗೆ ಪ್ರಣಯಪತ್ರಗಳನ್ನು ಒಪ್ಪಿಸಿದ್ದರೆ ಅವನಿಗೆ ತಾಯಿಯ ರಹಸ್ಯ

ತಿಳಿಯುತ್ತಿರಲಿಲ್ಲ. ಮೇಜಿನ ಡ್ರಾಗೆ ಬೀಗ ಹಾಕದೆ ಬಿಟ್ಟುದು ದೊಡ್ಡ ತಪ್ಪು.

ಮಿತಭಾಷಿಯಾದ ಗಂಭೀರ ಶ್ರೀಮಂತೆಯನ್ನು ಎದುರಿಸುವುದು ಹೇಗೆಂಬ ಚಿಂತೆ. ಮನೆ ಸೇರಿದ ಮೇಲೆ ಮಾತಿನ ಹೆಚ್ಚು ಭಾಗ ವಹಿಸಿಕೊಂಡವನು ಸಂತೋಷ. ತಾಯಿಗೆ ಅವಳ ಕಥೆ ಒಪ್ಪಿಸಿದ.

ನಾಗರತ್ನಳ ಮುಖದಲ್ಲಿ ಸೌಮ್ಯತೆ ಕುಗ್ಗಲಿಲ್ಲ.

"ನನ್ನ ಭೇಟಿ ಮಾಡ್ದಾಗ ಹಣ ಬೇಡವೆಂದೆ. ನಾನು ನಿನ್ನ ನಂಬಿದೆ. ಈಗಲೂ ನಂಬ್ತೀನಿ. ನೀನು ಬ್ಲಾಕ್‌ಮೇಲ್ ಮಾಡೋ ತರಹ ಕಾಣಿಸೋದಿಲ್ಲ."

ಚಿತ್ರಾಗೆ ನಿಧಿ ಕಂಡಷ್ಟು ಸಂತೋಷವಾಯಿತು. ತೊದಲಿದಳು.

"ನಾನು ಬ್ಲಾಕ್‌ಮೇಲರ್ ಅಲ್ಲ. ಪತ್ರಗಳ ನಷ್ಟಕ್ಕಾಗಿ ವಿಷಾದಪಡ್ತೀನಿ."

"ನನ್ನ ಪತಿಯ ಕೈಗೆ ಅವು ಸಿಕ್ಕಿದರೆ ಏನೇನು ಸಂಭವಿಸುತ್ತೋ ಹೇಳಲಾರೆ."

ಸಂತೋಷ ಮಧ್ಯೆ ನುಡಿದ.

"ಅವು ಡ್ಯಾಡಿ ಕೈಗೆ ಸಿಗಕೂಡದು. ಮುಂದಿನ ಸಾರಿ ಬ್ಲಾಕ್‌ಮೇಲರ್ ರಿಂಗ್ ಮಾಡಿದ್ರೆ ನಾನು ಹತ್ತು ಸಾವಿರ ಒಪ್ಪಿಸಿಬಿಡ್ತೀನಿ. ಅದೊಂದೇ ಮಾರ್ಗ."

"ಹಾಗೇ ಮಾಡೋದು. ಇಲ್ಲವಾದರೆ ಪೋಲೀಸ್‌ಗೆ ತಿಳಿಸೋದು" ಎಂದಳು ತಾಯಿ.

"ಪೋಲೀಸ್ ಬೇಡ! ಪತ್ರಗಳು ರಹಸ್ಯವಾದ ಖಾಸಗಿ ಸ್ವತ್ತು. ಅವು ಬಹಿರಂಗವಾಗಕೂಡದು. ಫೋನ್ ಕರೆ ಬಂದರೆ ನನ್ನ ಸ್ಟೋರ್‌ಗೆ ಫೋನ್ ಮಾಡಲು ಹೇಳು. ನಾನು ಹಣ ಕೊಡ್ತೀನಿ. ಅವನಿಗೆ ಪತ್ರ ಯಾರು ಕೊಟ್ಟರು ಅಂತ ತಿಳಿದುಕೊಡ್ತೀನಿ."

ಚಿತ್ರಾ ಕಡೆ ನೋಡಿದ ತಾಯಿಯ ಕಣ್ಣುಗಳೂ ಅವಳ ಕಡೆಗೆ ತಿರುಗಿದವು.

"ಅವಳ ತೊಂದರೆಗಳಿಗೆ ನಾನು, ನಿಮ್ಮ ತಂದೆ ಕಾರಣ ಅನ್ನೋ ಅರ್ಥ ಹೀನಭಾವನೆ ಅವಳಿಗೆ ಬಂದುಬಿಟ್ಟಿದೆ. ಆದರೂ ಅವಳು ಕೆಟ್ಟೋಳಲ್ಲ ಅಂತ ನನಗೆ ಅನ್ನಿಸುತ್ತೆ."

ಅವನ ತೀಕ್ಷ್ಣ ದೃಷ್ಟಿ ಅವಳನ್ನು ಇರಿಯಿತು.

"ನನ್ನ ತಾಯೀನ ಈಗಲಾದ್ರೂ ನಂಬ್ತೀಯೋ, ಇಲ್ಲಾ ಅವರೇ ನಿನ್ನ ದುರದೃಷ್ಟಕ್ಕೆ ಕಾರಣ ಅಂತೀಯೋ?"

"ನನಗೆ ಗೊತ್ತಿಲ್ಲ" ಪದ ಹಿಂಜಿದಳು.

"ಅದು ಉತ್ತರ ಅಲ್ಲ."

ತಾಯಿ ನಡುವೆ ಬಂದಳು.

"ಅವಳು ತಪ್ಪು ಮಾಡಿಲ್ಲಾಂತ ಹೇಳುವಾಗ ಒತ್ತಾಯ ಮಾಡ್ಬೇಡ."

"ಅವಳ ತಪ್ಪುಗಳನ್ನು ಕೋರ್ಟು ತೀರ್ಮಾನಿಸಿದೆ. ಕಳ್ಳತನ ಮಾಡಿದವಳಿಗೆ ಬ್ಲಾಕ್‌ಮೇಲ್ ಮಾಡೋದು ಕಷ್ಟವಲ್ಲ."

ಸ್ಟೋರ್‌ಗೆ ಹಿಂತಿರುಗುವಾಗ ಮಾತಿಲ್ಲದೆ ಆಲೋಚನೆಯಲ್ಲಿ ಮಗ್ನನಾಗಿದ್ದ. ಮೌನ ಭಂಗಿಸಿದಳು.

"ನಿಮ್ಮ ತಾಯಿ ವಿಷಯದಲ್ಲಿ ತಪ್ಪು ಮಾಡಿರುವೆ ಎನ್ನಿಸಿದೆ. ಅವರನ್ನ ಅರ್ಥ ಮಾಡ್ಕೊಂಡೆ. ನೀವು ನನ್ನ ನಿರಪರಾಧಿನಿ ಅಂತ ನಂಬಿದರೆ ನಿಮ್ಮ ತಾಯಿ ವಿಷಯದಲ್ಲಿ ತಪ್ಪೆಣಿಸಿದ್ದಕ್ಕೆ ಪಶ್ಚಾತ್ತಾಪಪಡ್ತೀನಿ."

"ನಿನ್ನೊಂದಿಗೆ ವ್ಯಾಪಾರ ಮಾಡ್ತಿಲ್ಲ ನಾನು. ಪತ್ರಗಳು ಕೈಸೇರೋವರೆಗೆ ನನಗೆ ಯಾವುದರಲ್ಲೂ ಅಸಕ್ತಿ ಇಲ್ಲ."

"ಹಾಗಾದ್ರೆ ನಾನು ಊರಿಗೆ ಹೋಗ್ತೀನಿ."

ಅವಳತ್ತ ಬಿರುಸಾಗಿ ತಿರುಗಿದ.

"ಈ ಬ್ಲಾಕ್‌ಮೇಲ್ ವ್ಯವಹಾರ ಇತ್ಯರ್ಥ ಆಗೋತನಕ ನೀನು ಎಲ್ಲಿಗೂ ಹೋಗುವ ಹಾಗಿಲ್ಲ. ನಿನ್ನ ಸ್ನೇಹಿತೆ ತರಹ ನೀನು ಮಾಯವಾಗೋದಿಕ್ಕೆ ಬಿಡೋದಿಲ್ಲ. ಈ ಪ್ರಕರಣದಲ್ಲಿ ನೀನು, ಬಿಂದು ಇಬ್ಬರಲ್ಲಿ ಒಬ್ಬರು ಕೈವಾಡ ನಡೆಸಿದ್ದೀರಿ ಯಾರೂಂತ ಪತ್ತೆ ಮಾಡ್ತೀನಿ."

* * *

ಸ್ಟೋರ್ ಕೆಲಸ ಮುಗಿಯುತ್ತಲೇ ಸಂಜೆ ನೇರವಾಗಿ ಮನೆಗೆ ಬಂದ ಚಿತ್ರಾ, ಬಿಂದುವಿನ ಕೋಣೆ ಬಾಗಿಲು ತೆರೆದಿರುವುದನ್ನು ಕಂಡು ಆಸೆ, ಆತುರದಿಂದ ಒಳಕ್ಕೆ ಅಡಿಯಿಟ್ಟಳು. ಕೋಣೆ ಶುಚಿಗೊಳಿಸುತ್ತಿದ್ದ ಹೆಣ್ಣಾಳು ಕಾಣಿಸಿದಳು. ಕೋಣೆಯನ್ನು ಯಾರಿಗೋ ಬಾಡಿಗೆಗೆ ಕೊಡಲು ಸಿದ್ಧತೆ ನಡೆದಿತ್ತು. ಬಿಂದು ಹಿಂತಿರುಗುವುದಿಲ್ಲ!

ಚಿತ್ರಾ ಮರುಗಿದಳು. ಮಾತಿನ ವಿರಸ ತಮ್ಮಿಬ್ಬರ ಸ್ನೇಹವನ್ನು ಹೀಗೆ ಅಂತ್ಯಗೊಳಿಸುವುದೆಂದು ಕಲ್ಪನೆಗೂ ತಂದುಕೊಂಡಿರಲಿಲ್ಲ. ಬಹುಶಃ ಶತ್ರುವಿನಂತೆ ವರ್ತಿಸುತ್ತಿದ್ದವನು ಸಂತೋಷ ಒಬ್ಬನೇ. ಅವನ ಅಭಿಪ್ರಾಯದಂತೆ ಅವನ ತಂದೆ, ತಾಯಿಗಳ ಮದುವೆಯನ್ನು ತಾನು ವಿಷಾದಾಂತದ ಕಡೆಗೆ ಒಯ್ಯುತ್ತಿರುವ ನೀಚ ಹೆಣ್ಣು! ಪತ್ರಗಳ ಮೂಲಕ ತನ್ನ ಹಾದಿ ಸುಗಮಗೊಳಿಸಲು ಹೊರಟವಳು ಪತ್ರಗಳನ್ನು ನಿಜವಾದ ಬ್ಲಾಕ್‌ಮೇಲರ್ ಕೈಗೆ ಸಿಗುವಂತೆ ಮಾಡಿದೆ.

ಸಂತೋಷ ತನ್ನನ್ನು ತಿರಸ್ಕರಿಸಿದ. ಆದರೂ ತನ್ನಿಂದ ದೂರ ಸರಿಯಲಾರ!

ಬಾಗಿಲು ತೆರೆದ ಸದ್ದು ಕೇಳಿ ಧಾವಿಸಿ ಬಂದಳು. ಹಿಂತಿರುಗಿಸಿರಬಹುದಾದ

ಬಿಂದುವನ್ನು ಕಾಣುವ ಆಸೆ. ತನ್ನ ಕೋಣೆಯ ಪ್ರವೇಶದಲ್ಲಿ ನಿಂತಿದ್ದವನು ನೀಲಂಕಾರ್ ಕಾಂಪ್ಲೆಕ್ಸ್‌ನ ಪತ್ತೇದಾರ ಚೆರಿಯನ್!

"ನಿಮಗೆ ಆಶ್ಚರ್ಯ ಆಗ್ತಾ ಇದೆ ನಾನು ಏಕೆ ಬಂದೆ ಅಂತ. ನಾನು ಸಂತೋಷ್‌ರ ಆದೇಶದ ಮೇಲೆ ಬಂದಿದೀನಿ. ನಿಮ್ಮ ತೊಡಕಿಗೆ ನನ್ನಿಂದ ಸಹಾಯ ಆಗಬಹುದು. ನಿಮ್ಮ ಮೇಲೆ ನನಗೆ ಸಹಾನುಭೂತಿ ಇದೆ. ಎಲ್ಲವೂ ನೀವೇ ತಂದುಕೊಂಡದ್ದು. ಎಲ್ಲಿ ನಿಮ್ಮ ಸ್ನೇಹಿತೆ ಬಿಂದು?"

ಅವನನ್ನು ಒಳಕ್ಕೆ ಕರೆತಂದಳು.

"ಮಿಸ್ಟರ್ ಚೆರಿಯನ್. ನನಗೂ ಬಿಂದುವಿಗೂ ಮಾತಿನಲ್ಲಿ ಜಗಳ ಆಯ್ತು. ಅವಳು ಇಲ್ಲಿಂದ ಹೊರಟುಹೋದ್ಲು.

ಪತ್ತೇದಾರ ಚಕಿತಗೊಂಡ.

"ಅದು ಒಳ್ಳೆಯದಕ್ಕೆ ಅಂತ ಭಾವಿಸಲೆ?"

"ಒಳ್ಳೆಯದು ! ನನ್ನ ತಲೆ ಕೆಟ್ಟಿದೆ. ಯಾವ ವ್ಯಕ್ತಿ ಎಂತೋರು ಅಂತ ತೀರ್ಮಾನಿಸೊ ವಿವೇಚನಾಶಕ್ತಿಯೇ ಹೋಗಿಬಿಟ್ಟಿದೆ."

ಬಿಂದು ಬಿಟ್ಟುಹೋದ ಕಾಗದವನ್ನು ಅವನಿಗೆ ಕೊಟ್ಟಳು. ನಿಧಾನವಾಗಿ ಓದಿದ.

"ಮುಚ್ಚು ಮನಸ್ಸು! ಮೋಸಗಾರರು! ಇಂತಾ ಪದಗಳನ್ನು ಉಪಯೋಗಿಸುವಷ್ಟು ದೊಡ್ಡ ಜಗಳ ನಡೀತೇನು? ನಿಮ್ಮ ಸ್ವಭಾವ ಬಲ್ಲೆ, ಮಿಸ್ ಚಿತ್ರಾ, ನೀವು ಯಾರನ್ನೂ ನೋಯಿಸೋರಲ್ಲ.

ಅವಳ ಮುಖದಲ್ಲಿ ನೋವು ತುಂಬಿತು.

"ಅದು ಜಗಳವೇ ಅಲ್ಲ. ನನಗೆ ಆಗ ನರಗಳು ಕೆರಳಿರಬೇಕು. ಅವಳಿಗೆ ಸಂತೋಷನ್ನ ಕಂಡರೆ ಆಗದು. ನನಗೆ ಸಂತೋಷ ಅಂದ್ರೆ...."

"ಅದು ಗೊತ್ತು ನನಗೆ... ಬಿಂದುಗೆ ನಿಮ್ಮನ್ನು ಕಂಡರೂ ಆಗದು ಅಂದ್ರೆ ನನ್ನ ಮೇಲೆ ನಿಮ್ಮ ನರಗಳು ಈಗ ಇನ್ನೂ ಹೆಚ್ಚಾಗಿ ಕೆರಳಬಹುದು."

"ಬಿಂದು ನನ್ನ ಅತ್ಯುತ್ತಮ ಸ್ನೇಹಿತೆ. ಅವಳ ವಿರುದ್ಧವಾಗಿ ನಾನು..."

"ಒಂದು ಮಾತೂ ಕೇಳಲಾರಿರಿ, ನಿಜ. ಆದರೆ ಕೇಳಲೇಬೇಕಾಗಿದೆ. ಈಗಲಾದ್ರೂ ಎಚ್ಚೆತ್ತುಕೊಂಡು ನಿಮ್ಮನ್ನು ಕಾಪಾಡಿಕೋಬೇಕು. ನಿಮ್ಮ ಅತ್ಯುತ್ತಮ ಸ್ನೇಹಿತೆ ನಿಮ್ಮ ಶತ್ರುವಾಗಿದ್ದರೆ?"

ಕಲ್ಲಾಗಿ ನಿಂತಳು.

"ನೀವು ಏನು ಹೇಳಲಿಕ್ಕೆ ಹೊರಟಿದೀರಿ?"

ಸ್ಟೋರ್ ಡಿಟೆಕ್ಟಿವ್ ಸಿಗರೇಟ್ ಹೊತ್ತಿಸಿದ.

"ನನ್ನಲ್ಲೇ ಇರಬೇಕಾದ ವಿಷಯ ಹೊರಗೆಡಹಬೇಕಾಗಿ ಬಂದಿದೆ. ಬಿಂದು ನಿಮ್ಮ ಮೇಲೆ ಮಾಡಿರೊ ದೂಷಣೆ ಕೇಳಿ ನನಗೆ ಬೇಸರ ಬಂದಿದೆ. ಅವಳ ಮಾತಿನಂತೆ ನೀವು ಸ್ವಾರ್ಥಿ, ಅಪ್ರಮಾಣಿಕ ಹುಡುಗಿ. ನೀಲಂಕಾರರ ಆಸ್ತಿಗಳ ಮೇಲೆ ದುರಾಸೆಪಟ್ಟಿರೊ ಕುಯುಕ್ತಿಯ ಹೆಣ್ಣು."

"ತಮಾಷೆಗೂ ಅವಳು ಹಾಗೆ ಹೇಳಿರ್ಲಿಲ್ಲ."

ಎದೆ ಬಾರಿಸತೊಡಗಿತ್ತು.

"ನಿಮ್ಮ ಮುಂದೆ ಹೇಗೆ ಹೇಳ್ತಾಳೆ. ಅವು ನನ್ನ ಮುಂದೆ, ಸ್ಟೋರ್‌ನ ಕೆಲವು ಆತ್ಮೀಯರ ಮುಂದೆ ಆಡಿದ ಪದಗಳು... ಬಿಂದು ವಿಷಯದಲ್ಲಿ ನೀವು ಈಗಲಾದ್ರು ಕೆಲವು ಪ್ರಶ್ನೆಗಳನ್ನು ನಿಮ್ಮನ್ನೇ ಕೇಳಿಕೊಂಡು ಉತ್ತರ ಪಡೆಯಬೇಕಾದ ಕಾಲ ಇನ್ನೂ ಮೀರಿಲ್ಲ."

"ಎಂಥಾ ಪ್ರಶ್ನೆಗಳು?"

ಚಿತ್ರಾ ತಬ್ಬಿಬ್ಬಾಗಿ ಕೇಳಿದಳು.

"ನೀವು ಡ್ರೆಸ್ ಏಜೆನ್ಸಿಗೆ ಇಪ್ಪತ್ತೈದು ರೂಪಾಯಿ ಬಾಡಿಗೆ ಹಣ ಕೊಡಬೇಕು ಅನ್ನೋದು ಬಿಂದು ಹೊರತಾಗಿ ಇನ್ನು ಯಾರಿಗೆ ಗೊತ್ತಿತ್ತು?"

"ಯಾರಿಗೂ ಇಲ್ಲ."

"ನಿಮ್ಮ ಕೈಚೀಲವನ್ನು ಕೌಂಟರ್ ಮೇಜಿನ ಕೆಳಡ್ರಾನಲ್ಲಿ ಇಡೋದು ಯಾರು ಬಲ್ಲರು?"

"ಅವಳೇ...ಬಿಂದು..."

"ನೀವು, ವನಿತಾ ಮಾರ್ಕೆಟ್‌ಗೆ ಷಾಪಿಂಗ್‌ಗೆ ಹೋಗೋದು ಅವಳಿಗೆ ತಿಳಿಸಿದ್ರಾ?"

"ಹುಂ, ಆಗಾಗ್ಗೆ ನಾವಿಬ್ರೂ ಅಲ್ಲಿಗೆ ಹೋಗ್ತಾ ಇದ್ವಿ."

"ನಿಮ್ಮ ಗೆಳತಿ ಆ ದಿನ ನಿಮ್ಮನ್ನು ಹಿಂಬಾಲಿಸಿ ಕರವಸ್ತ್ರಗಳನ್ನು ನಿಮ್ಮ ಚೀಲಕ್ಕೆ ಸೇರಿಸುವ ತಂತ್ರ ಹೂಡಿರಬೋದು. ವನಿತಾ ಮಾರ್ಕೆಟ್‌ನ ಸೇಲ್ಸ್‌ಮನ್ ಒಬ್ಬನಿಗೆ ಯಾವಳೊ ಹುಡುಗಿ ಲಂಚ ಕೊಟ್ಟು ಹೋಗಿದ್ದು ನನ್ನ ಗಮನಕ್ಕೆ ಬಂದಿದೆ."

"ಮಿಸ್ಟರ್ ಚೆರಿಯನ್..."

"ನನ್ನ ಮಾತು ಮುಗಿದಿಲ್ಲ. ಸ್ಟೋರ್‌ನ ಷೋಕೇಸ್‌ನಿಂದ ಯಾರೊ ಕ್ಯಾಮರಾ ಎತ್ತಿದ ಮೇಲೆ ನಿಮಗೆ ಸಾರಿಗೆ ಸಂಸ್ಥೆಗೆ ಹೋಗುವಂತೆ ಯಾರಿಂದಲೊ ಸೂಚನೆ ಬಂತು. ಆ ಧ್ವನಿ ಒಬ್ಬ ಹೆಂಗಸಿನದು ಅಂತ ನೀವು ಹೇಳಿದ್ರಂತೆ."

ಹೇಳ್ದೆ... ಹೇಳಿದ್ದು ಜಯಂತನಿಗೆ. ಅಂದರೆ ಜಯಂತ ನನ್ನ ಮೇಲೆ... ಅಂದಿನ ಧ್ವನಿ ಬಿಂದುವಿನ ಧ್ವನಿ ಅಲ್ಲ!"

"ಧ್ವನಿ ಬದಲಾಯಿಸಿ ಮಾತಾಡೋದು ಕಷ್ಟವಲ್ಲ. ನೀವು ಜಯಂತನೊಂದಿಗೆ ಭಾನುವಾರ ಕಳೆದ್ರಿ ಅಂತ ಸಂತೋಷನಿಗೆ ಫೋನ್ ಮಾಡಿದ ಧ್ವನಿಯೂ ಅದೇ."

"ನಿಮಗೆ ಇವೆಲ್ಲಾ ಯಾರು ಹೇಳಿದ್ರು?"

"ನೀಲಂಕಾರರ ಪತ್ತೇದಾರನಿಗೆ ಇವೆಲ್ಲಾ ತಿಳಿದುಕೊಳ್ಳೋದು ಕಷ್ಟವಲ್ಲ... ಇವೆಲ್ಲಾ ನಡೆಸಿದ್ದು ನಿಮ್ಮ ಅತ್ಯುತ್ತಮ ಸ್ನೇಹಿತ ಬಿಂದು! ನಿಮ್ಮ ಮೇಲೆ ಮೊದಲನೆ ಕುತಂತ್ರದಲ್ಲೇ ಅವಳನ್ನು ಹಿಡಿದೆ. ಕಾಲ ವಿಳಂಬವಾಗಿತ್ತು. ನಿಮ್ಮ ಮೇಲೆ ಆಪಾದನೆ ಬಂದಾಗಿತ್ತು. ನನಗೂ ಹೆಚ್ಚಿನ ಅಧಿಕಾರ ಇಲ್ಲ. ಎಷ್ಟಾದರೂ ಖಾಸಗಿ ಸಂಸ್ಥೆಯ ಪತ್ತೇದಾರ."

ಪ್ರತಿಮೆಯಂತೆ ನಿಂತಳು ಚಿತ್ರಾ. ಪ್ರಿಯ ಸ್ನೇಹಿತೆ ತನ್ನ ಶತ್ರು!

"ನೀಲಂಕಾರರು ನನ್ನ ಶತ್ರುಗಳು ಅಂತ ಬಿಂದು ನಿಮಗೆ ಹೇಳಿಲ್ಲವೆ?

"ಪದೇ ಪದೇ ಹೇಳಿದ್ಲು. ಈಗಲೂ ಅವರು ನಿಮ್ಮ ಶತ್ರುಗಳಾಗಿಯೇ ಉಳಿದಿರೋದು..."

"ಮಿಸ್ಟರ್ ಚೆರಿಯನ್, ನಿಮ್ಮ ಬಾಸ್ ವಿರುದ್ಧ ಹೇಳ್ತಾ ಇದೀರಿ!"

"ಸಂಗತಿ ನಾನು ಹೇಳ್ದೇಂತ ನೀವು ಯಾರಲ್ಲೂ ಬಾಯಿ ಬಿಡೋದಿಲ್ಲ. ಆ ವಿಶ್ವಾಸ ನನಗಿದೆ... ಸಂತೋಷ ನಿಮ್ಮ ಶತ್ರು ಅಲ್ಲ. ನೀಲಂಕಾರರಿಗೆ ತಮ್ಮ ಮಗನ್ನ ನಿಮ್ಮಿಂದ, ಜ್ಯೋತಿಯಿಂದ ದೂರ ಇಡುವ ಸನ್ನಾಹ. ಬಿಂದುಗೆ ನೀವು ಸಂತೋಷನ್ನ ಎಲ್ಲಿ ಮದುವೆ ಆಗಿಬಿಡ್ತೀರೊ ಅನ್ನೊ ಚಿಂತೆ."

"ನನ್ನ ಶತ್ರು ಯಾರು?" ತುಟ್ಟಿ ಕಚ್ಚಿ ಕೇಳಿದಳು.

'ಒಬ್ಬರಿಗಿಂತ ಹೆಚ್ಚು ಮಂದಿ. ನೀಲಂಕಾರ್ ದಂಪತಿಗಳು ಮತ್ತು ಬಿಂದು ಮೂವರು ಒಟ್ಟಾಗಿ ಸಂಚು ನಡೆಸಿದಾರೆ."

"ಅರ್ಥವಾಗೋದಿಲ್ಲ. ಬಿಂದು ನನ್ನ ಪರವಾಗಿ ನಿಂತಿದ್ದಕ್ಕೆ ಪಂಪಾಪತಿ ಅವಳನ್ನು ವಜಾ ಮಾಡಿದ್ರು."

"ಅದೂ ಒಂದು ನಾಟಕ. ಅವಳು ನಿಮ್ಮೊಂದಿಗೆ ಉಳೀತಾಳೊ ಇಲ್ಲವೊ ಅಂತ ಪರೀಕ್ಷೆ ಮಾಡಿದ್ರು. ವಜಾ ಮಾಡಿದ ಮೇಲೆ ಅವಳಿಗೆ ಬೇಕಾದಷ್ಟು ಹಣ ಕೊಟ್ರು."

ಚಿತ್ರಾ ಆಳವಾದ ನೀರಿಗೆ ಇಳಿಯುತ್ತಿದ್ದಳು. ನಿಲ್ಲಲು ಹಿಡಿತವೇ ಇರಲಿಲ್ಲ.

"ನನ್ನ ಪ್ರಕರಣಗಳಲ್ಲಿ ನಾಗರತ್ನ ಸೇರಿಲ್ಲಾಂತ ಭಾವಿಸಿಕೊಂಡಿದ್ದೆ."

ಪತ್ತೇದಾರ ಭುಜಗಳನ್ನು ಎತ್ತಿದ.

"ಗಂಡನ ತಪ್ಪಿನಲ್ಲಿ ಹೆಂಡತಿಗೂ ಪಾಲು. ನಾಗರತ್ನಳ ಪರಿಸ್ಥಿತಿ ಅದು."

"ಬಿಂದು ಮಾಯವಾಗಿದ್ದೇಕೇಂತ ಅರ್ಥವಾಗಲಿಲ್ಲ."

"ಕೇವಲ ಎರಡು ವಿರಸದ ಮಾತುಗಳಿಗೆ ಅತ್ಯುತ್ತಮ ಸ್ನೇಹಿತೆ ಹೀಗೆ

ಮಾಯವಾಗ್ತಾಳೆಯೆ? ಸಂತೋಷ ನಿಮ್ಮನ್ನ ಪೂರ್ತಿಯಾಗಿ ತ್ಯಜಿಸೊ ಹಾಗೆ ಅಂತಿಮ ಸನ್ನಾಹ ಮಾಡ್ತಿದಾಳೆ. ಬಹುಶಃ ಹಿಂತಿರುಗಿ ನಿಮ್ಮನ್ನ ದೂರಕ್ಕೆ ಒಯ್ತಾಳೆ."

ಚಿತ್ರಾಗೆ ಕಳುವಾದ ಚಿತ್ರಗಳ ನೆನಪಾಯಿತು. ಅವು ಗೊತ್ತಿದ್ದುದು ಬಿಂದುವಿಗೆ ಮಾತ್ರ. ತನ್ನ ಹೆಸರಿನಲ್ಲಿ ಅವನ್ನು ಬ್ಲಾಕ್‌ಮೇಲ್ ಮಾಡಲು ಬಳಸುತ್ತಿದ್ದಾಳೆ!

ಚೆರಿಯನ್ ಮಾತು ಮುಗಿಸಿದ.

"ಹೆಣ್ಣಿನ ಹೊಟ್ಟೆಕಿಚ್ಚು ಅಪಾಯಕಾರಿ. ನಿಮ್ಮ ರೂಪು, ಜನಪ್ರಿಯತೆ ಬಿಂದುಗೆ ಆಗ್ತಾ ಇರ್ಲಿಲ್ಲ. ನೀವು ಸಂತೋಷನ್ನ ಮದುವೆ ಆಗಿ ನೀಲಂಕಾರರ ಆಸ್ತಿಗೆ ಒಡತಿ ಆಗೋದನ್ನ ಅವಳು ಸಹಿಸೋದು ಹೇಗೆ?"

"ಹೌದು, ಸಹಿಸೋದು ಹೇಗೆ?" ಪ್ರತಿಧ್ವನಿಸಿದಳು.

ಒಂದು ವಾರ ಕಳೆದರೂ ಬಿಂದುವಿನ ಸುಳಿವಿರಲಿಲ್ಲ. ಅದಕ್ಕೂ ಅಚ್ಚರಿಯ ಸಂಗತಿ ಎಂದರೆ ಬ್ಲಾಕ್‌ಮೇಲರ್ ಮತ್ತೆ ಟೆಲಿಫೋನ್ ಮಾಡಿರಲಿಲ್ಲ. ಸಂತೋಷ ತಳಮಳಗೊಂಡಿದ್ದ.

ಚಿತ್ರಾಳನ್ನು ಕೋಣೆಗೆ ಕರೆದ. ಅವನ ಮುಖದಲ್ಲಿ ಪ್ರಣಯದ ನರಳಾಟ ಸ್ಪಷ್ಟವಾಗಿತ್ತು.

"ಏನೂಂತ ತಿಳೀತಾ ಇಲ್ಲ. ಎಂಟು ದಿನಗಳಿಂದ ಆಫೀಸಿನ ಪೆಟ್ಟಿಗೆಯಲ್ಲಿ ಹತ್ತು ಸಾವಿರ ತೆಗೆದಿಟ್ಟಿದೀನಿ ನಿನ್ನ ಸ್ನೇಹಿತೆಗೆ ಹಣದ ಮೇಲೆ ಆಸೆ ಹೋಗಿಬಿಟ್ಟಿದೆ."

ಚಿತ್ರಾ ಉತ್ತರವನ್ನು ತನ್ನಲ್ಲಿಯೇ ತಿರುವಿ ಹಾಕಿದಳು. ಬಿಂದು ಬೆದರಿಕೆ ಹಾಕಿದ್ದರೂ ಹಣ ಪಡೆಯುವ ಇಚ್ಛೆ ಹೊಂದಿದವಳಲ್ಲ. ಅವಳ ಗುರಿ ಬೇರೆ. ತನ್ನ ವಿರುದ್ಧ ಸಂತೋಷನ ಕೋಪ, ವೈಷಮ್ಯ ಏರಿಸುವುದು. ಅವನ ಪ್ರೇಮವನ್ನು ಪೂರ್ತಿಯಾಗಿ ಬತ್ತಿಸುವುದು!

ಸಂತೋಷ ಮೌನಿಯನ್ನು ವ್ಯಂಗ್ಯದಲ್ಲಿ ಕುಟುಕಿದ.

"ಅವಳು ತಪ್ಪು ಮಾಡಿದ್ದರೂ ನಿನ್ನ ಪ್ರಾಣ ಸ್ನೇಹಿತೆ. ಅವಳ ಪರವಾಗಿ ವಾದಿಸೋದು ನಿನ್ನ ಕರ್ತವ್ಯ. ಅವಳಿಂದ ಮತ್ತೊಂದು ಬ್ಲಾಕ್‌ಮೇಲ್ ಕರೆ ಬರದಿದ್ದರೆ ಅವಳು ನಮ್ಮಿಬ್ಬರ ನಡುವೆ ಸಿಡಿಮದ್ದು ಹೂಡ್ತಾ ಇದಾಳೆ ಅನ್ನೋದು ನಿಜ."

"ಬಿಂದುಗೆ ಹಣ ಬೇಕಿಲ್ಲ."

ಬೆರಗಾದ ಸಂತೋಷ.

"ಗೆಳತಿಯ ವಿಷಯದಲ್ಲಿ ಅಭಿಪ್ರಾಯ ಕದಲಿಸಿದ್ದಕ್ಕೆ ಥ್ಯಾಂಕ್ಸ್. ನಮ್ಮ ತಾಯಿ ಬಗ್ಗೆಯೂ..."

"ಆ ಬಗ್ಗೆ ವಿಷಾದಪಡ್ತೀನಿ ಅಂತ ಹೇಳ್ದೆ."

"ತಂದೆಯ ವಿಷಯದಲ್ಲಿ?"

ತುಟಿ ಕಚ್ಚಿ ಮೌನ ತಾಳಿದಳು.

"ನಾನು ಈಚೆಗೆ ಭಾವಿಸ್ತಾ ಇರೊ ಹಾಗೆ ನಿಮ್ಮ ತಂದೆ, ಬಿಂದು ಇಬ್ಬರೂ ಸೇರಿ ನಮ್ಮಿಬ್ಬರನ್ನು ಬೇರೆ ಮಾಡ್ತಾ ಇದಾರೆ."

'ಇನ್ನೂ ನಿನಗೆ ಹುಚ್ಚು ಬಿಟ್ಟಿಲ್ಲ."

ಟೆಲಿಫೋನ್ ಗಂಟೆ ಬಾರಿಸಿತು. ಫೋನ್‌ನಲ್ಲಿ ಮಾತಾಡುತ್ತಿದ್ದಂತೆ ಅವನ ಮುಖ ಕಳೆಗುಂದಿತು. ಕಣ್ಣುಗಳಲ್ಲಿ ಆತಂಕ ತುಂಬಿತು.

"ಸಂತೋಷ್, ಏನದು?"

ಮೇಲುಸಿರು ಬಿಟ್ಟು ಫೋನ್ ಸಶಬ್ದವಾಗಿ ಸ್ಟ್ಯಾಂಡಿಗೆ ಹಾಕಿದ.

"ಮಮ್ಮಿ ವಿಪರೀತ ನಿದ್ರೆಗುಳಿಗೆ ಸೇವನೆ ಮಾಡಿದ್ರಂತೆ. ಸರಿಹೋಗುತ್ತೇಂತ ಡಾಕ್ಟರು ಹೇಳ್ತಾರೆ...ನಡಿ, ಹೋಗೋಣ."

ಕಾರು ಮನೆಯ ದಿಕ್ಕು ಹಿಡಿಯಿತು.

"ನೀನು ಕಳೆದುಕೊಂಡ ಪತ್ರಗಳ ನೇರವಾಗಿ ಹೊಡೆತ ಇದು. ಶರಶ್ಚಂದ್ರನ ಹಾಗೆ ತಾಯಿಯೂ ಆತ್ಮಹತ್ಯೆಗೆ ಪ್ರಯತ್ನ ಮಾಡಿದಾಳೆ. ಬ್ಲಾಕ್‌ಮೇಲರ್ ಅವಳ ಮನಸ್ಸಿನ ಮೇಲೆ ಚೂರಿ ಆಡ್ಸಿದಾಳೆ."

ಮನೆ ಸೇರುತ್ತಲೇ ಡಾಕ್ಟರ್ ಹೇಳಿದ.

"ನಿಮಗೆ ಮಾತ್ರ ತಿಳಿಸಲಿಕ್ಕೆ ಹೇಳಿದ್ರು ನಿಮ್ಮ ತಾಯಿ. ನಿಮ್ಮ ತಂದೆಗೆ ತಿಳಿಸಿಲ್ಲ. ಈಗ ಚೇತರಿಸಿಕೊಂಡಿದಾರೆ, ಅವರ ಮನಸ್ಸಿನಲ್ಲಿ ದೊಡ್ಡ ಚಿಂತೆ ಏನಾದ್ರು ಇದೆಯೆ?"

"ಗೊತ್ತಿಲ್ಲ" ಮರೆಮಾಚಿದ ಸಂತೋಷ.

"ಈಚೆಗೆ ನಿದ್ರೆ ಇಲ್ಲಾಂತ ಅವರು ಹೇಳಿದ್ದಕ್ಕೆ ನಾನು ನಿದ್ರೆಗುಳಿಗೆ ಸೂಚಿಸಿದ್ದೆ. ಎರಡು ಗುಳಿಗೆಗೆ ಬದಲು ಸ್ವಲ್ಪ ಹೆಚ್ಚಾಗಿ ಸೇವಿಸಿದ್ರಂತೆ.ಅವರೇ ವಾಂತಿ ಮಾಡಿದ್ದು ಒಳ್ಳೇದಾಯ್ತು. ಅವರಿಗಿರೊ ಚಿಂತೆ ಏನೂಂತ ತಿಳಿದು ಹೇಳಿ."

ಡಾಕ್ಟರ್ ಹೊರಟ ಮೇಲೆ ತಾಯಿಯ ಕೋಣೆಗೆ ಬಂದ.

ನಿದ್ರೆಯ ಜೋಂಪು ಉಳಿದಿದ್ದ ನಾಗರತ್ನಳ ಮುಖ ಕಳೆಗುಂದಿತ್ತು.

"ಯಾಕೆ ಹೀಗೆ ಮಾಡ್ದೆ?" ತಾಯಿಯ ತಲೆ ಸವರಿದ.

"ನಿದ್ರೆ ಬರಲಿಲ್ಲಾಂತ ಎರಡು ಗುಳಿಗೆ ಜಾಸ್ತಿ ನುಂಗಿದೆ. ತಲೆನೋವು ಜಾಸ್ತಿ ಇತ್ತು. ವಾಂತಿ ಆಯ್ತು... ಸಂತೋಷ, ನಾನು ಸಾಯೋದಿಕ್ಕೆ ಗುಳಿಗೆ ಸೇವಿಸಿದೆ ಅಂತ ತಿಳಿದೆಯೇನು? ನಾನು ಅಂಥೋಳಲ್ಲ ಅನ್ನೋದು ನಿನಗೆ ಗೊತ್ತಿದೆ. ಇವತ್ತು ನನ್ನ ಮದುವೆಯ ಬೆಳ್ಳಿಹಬ್ಬ. ಅದನ್ನೇ ಯೋಚನೆ ಮಾಡ್ತಾ ಏನೇನೋ ಮಾಡ್ಬಿಟ್ಟೆ. ಚಿತ್ರಾನ ಯಾಕೆ ಕರಕೊಂಡು ಬಂದೆ? ಮದುವೆ ನಿಶ್ಚಯ ಮಾಡ್ಕೊಂಡಿದ್ದು ಆಯ್ತೆ?"

ಮಗ ಗಂಭೀರನಾದ.

“ಇನ್ನೂ ಇಲ್ಲ. ನಿನ್ನ ಪರಿಸ್ಥಿತಿಗೆ ಇವಳೇ ಕಾರಣ. ನಿನ್ನ ಪತ್ರಗಳನ್ನು ಕಳಕೊಂಡಿದ್ದಾಳೆ.”

ತಾಯಿಯ ಮುಖ ವಿವರ್ಣಗೊಳ್ಳಲಿಲ್ಲ.

“ಅವಳ ತಲೆ ಕೆಡಿಸಿದಾರೆ ಯಾರೊ. ಕೆಟ್ಟ ಹುಡುಗಿ ಅಲ್ಲ ಅವಳು.... ನೀನೂ ಅವಳ ಮೇಲಿನ ಪ್ರೀತಿ ಕಳಕೊಂಡಿಲ್ಲ.”

“ಅವಳ ಅಪರಾಧಗಳು ಇಷ್ಟೆಲ್ಲಾ ಇದ್ರೂ ಪರವಾಗಿಲ್ಲ ಅಂತಲೆ?”

“ನೀನು ಅವಳನ್ನು ಪ್ರೀತಿಸೋದಾದ್ರೆ ಅವಳು ನಿಜವಾದ ಅಪರಾಧಿನಿ ಆಗಿದ್ರೂ ಪರವಾಗಿಲ್ಲ.”

ಚಿತ್ರಾಳ ಕಣ್ಣುಗಳಿಂದ ನೀರು ಇಳಿಯಿತು.

“ನಿಮ್ಮ ಮೇಲೆ ಹೊಂದಿದ್ದ ಭಾವನೆಗೆ ನಾಚಿಕೆಪಡ್ತೀನಿ. ಹೆಚ್ಚಾಗಿ ಹೇಳಲಾರೆ.”

ನಾಗರತ್ನ ಎದ್ದು ಕುಳಿತಳು.

“ನಾನು ಕೇಳೋದಿಷ್ಟೆ. ನಾನು, ನನ್ನ ಪತಿ ನಿನಗೆ ಶತ್ರುಗಳು ಅಂತ ಮೊದಲು ನಿನ ತಲೆಗೆ ತುಂಬಿದೋರು ಯಾರು?”

ಚಿತ್ರಾ ನಿಟ್ಟುಸಿರು ಹಾಕಿದಳು.

“ನನ್ನ ಪ್ರಿಯ ಸ್ನೇಹಿತೆ ಬಿಂದು.”

ಸಂತೋಷ ತಟ್ಟನೆ ಹೇಳಿದ.

“ಅವಳೇ ಬ್ಲಾಕ್‌ಮೇಲರ್ ಹಿಂದಿರೋಳು. ಅವಳನ್ನ ಹಿಡಿದು ಪೋಲೀಸಿಗೆ ಒಪ್ಪಿಸ್ತೀನಿ. ವಿಷಯದ ಶೋಧನೆಗೆ ಪತ್ತೇದಾರರನ್ನು ಹಾಕಿದೀನೀ.”

ನಾಗರತ್ನ ಅವಳ ಕೈ ಹಿಡಿದಳು.

“ಹುಚ್ಚು ಹುಡುಗ ಏನಾದ್ರು ಹೇಳಿಕೊಳ್ಳಲಿ. ಇವತ್ತು ನೀನು ನಮ್ಮೆಲ್ಲರ ಜೊತೆ ಊಟ ಮಾಡಿ ಹೋಗುವಿಯಂತೆ.”

ಹೊರಗಡೆ ಕಾರು ನಿಂತ ಸದ್ದು ಕೇಳಿಸಿತು. ಕಿಟಕಿಯಿಂದ ನೋಡಿದ ಸಂತೋಷ ಹಿಂದಕ್ಕೆ ತಿರುಗದೆ ಹೇಳಿದ.

“ಡ್ಯಾಡಿ ಬಂದ್ರು.”

ತಾಯಿ, ಮಗ ಪರಸ್ಪರ ನಿಟ್ಟಿಸಿದರು.

ನಾಗರತ್ನ ಗೊಂದಲಕ್ಕೆ ಸಿಕ್ಕಿದವಳಂತೆ ತುಟಿ ಅದುರಿಸಿದಳು.

“ಮಧ್ಯಾಹ್ನದ ಹೊತ್ತಿನಲ್ಲಿ ಯಾವತ್ತೂ ಅವರು ಬರೋರಲ್ಲ. ಡಾಕ್ಟರು

ತಿಳಿಸಿರಬೇಕು."

ಹೆಂಡತಿಯ ಅನಾರೋಗ್ಯ ತಿಳಿಯದ ಪಂಪಾಪತಿ ದೃಢವಾಗಿ ಹೇಳುತ್ತಾ ಒಳಬಂದ.

"ನನ್ನ ಮದುವೆ ಬೆಳ್ಳಿಹಬ್ಬದ ಊಟಕ್ಕೆ ಬರಬೇಡವೆ?"

ಮೇಜಿನ ಮೇಲಿದ್ದ ಗಾಜಿನ ಹೂಜಿಯಿಂದ ಲೋಟಕ್ಕೆ ನೀರು ಬಗ್ಗಿಸಿ ಕುಡಿದ. ಚಿತ್ರಾ ಕಿರುನೋಟ ಹಾಕಿದಳು. ಅವನ ಕಣ್ಣುಗಳು ರಕ್ತವರ್ಣಕ್ಕಿದ್ದವು. ಕೈಗಳು ಕಂಪಿಸುತ್ತಿದ್ದವು.

ಅವನ ದೃಷ್ಟಿ ಚಿತ್ರಾ ಕಡೆ ತಿರುಗಿತು.

"ಇವಳೇನು ಮಾಡ್ತಾ ಇದಾಳೆ ಇಲ್ಲಿ? ಸಂತೋಷ, ಇವಳನ್ನ ಕೆಲಸದಿಂದ ವಜಾ ಮಾಡಿದೆಯಾ ಇಲ್ಲಾ ಮದುವೆ ಆದೆಯಾ?"

"ಎರಡೂ ಇಲ್ಲ."

ಮಗನಿಗೂ ತಂದೆಯ ಮುಖ ಲಕ್ಷಣ, ಮಾತು ಲಘುವಾಗಿ ತರಗುಟ್ಟಿಸಿತು.

"ಈ ಹೊತ್ನಲ್ಲಿ ಅವಳೂ, ನೀನೂ ಕೆಲಸದ ಮೇಲಿರಬೇಕು. ನಾನು ಕಲ್ಪತರು ಸ್ಟೋರ್ ಕೊಂಡಿದ್ದು ನೀವು ಹೀಗೆ ಮೋಜು ಮಾಡೋದಿಕ್ಕಲ್ಲ."

"ಹನ್ನೆರಡೂವರೆ ಹೊತ್ನಲ್ಲಿ ನೀವೂ ಆಫೀಸಿನಿಂದ ಬಂದು ಏನು ಮಾಡ್ತಾ ಇದೀರಿ?"

ತಂದೆಗೆ ಮಗನ ಪ್ರಶ್ನೆ ಕಿರುನಗೆ ತಂದಿತು.

"ನನ್ನ ವಿವಾಹೋತ್ಸವಕ್ಕೆ ಎರಡು ಗಂಟೆ ಬಿಡುವು ಪಡೆಯೋದಿಕ್ಕೆ ನನಗೆ ಅವಕಾಶ ಇದೆ."

ಹೆಂಡತಿ ಹಾಗೂ ಮಗನನ್ನು ಮೊನಚಾಗಿ ನೋಡಿ ಜೇಬಿನಿಂದ ಒಂದು ಪ್ಯಾಕೆಟ್ ತೆಗೆದು ಹೆಂಡತಿಗೆ ನೀಡಿ ಹೇಳಿದ.

"ನಮ್ಮ ವಿವಾಹದ ಇಪ್ಪತ್ತೈದು ವರ್ಷಗಳ ಸವಿನೆನಪಿಗೆ ನಿನಗೊಂದು ಬೆಲೆಬಾಳುವ ಕಾಣಿಕೆ. ನೀನು ತುಂಬ ಮೆಚ್ಚಿಕೊಳ್ತೀಯ."

ಹೆಂಡತಿ ಮೌನವಾಗಿ ನಸುನಕ್ಕು ನೀಲಿ ಟೇಪ್ ಕಟ್ಟಿದ್ದ ಪ್ಯಾಕೆಟ್ ಬಿಚ್ಚಿ ಕೈಲಿ ಹರಡಿಕೊಂಡಳು.

ಚಿತ್ರಾಳ ಹತೋಟಿ ಮೀರಿ ಚೀತ್ಕಾರ ಹೊರಬಂತು.

ಪ್ರಣಯ ಪತ್ರಗಳು! ನಾಗರತ್ನ ಶರಶ್ಚಂದ್ರನಿಗೆ ಬರೆದ ಪ್ರೇಮದ ಓಲೆಗಳು.!

ನಾಗರತ್ನ ಹಿಮಗಟ್ಟಿ ಕುಳಿತಳು. ತಲೆ ಸುತ್ತಿತು.

"ನಿನಗೆ ಸಂತೋಷ ಆಗಲಿಲ್ಲವೆ?"

ಪಂಪಾಪತಿಗೆ ಈಟಿಯ ಮೊನೆಯಂತೆ ಇರಿಯಿತು. ಹೆಂಡತಿ ತುಟಿಗಳಿಗೆ ನಾಲಿಗೆ ಆಡಿಸಿದಳು.

"ಆಮೇಲೆ... ನಾವಿಬ್ಬರೇ ಇದರ ವಿಷಯ ಮಾತಾಡೋಣ."

"ಇಲ್ಲ!"

ಅಬ್ಬರಿಸಿದ ಶ್ರೀಮಂತ ಚಿತ್ರಾಳ ಕಡೆ ತಿರುಗಿದ.

"ನಿನಗೇನು ಗೊತ್ತು ಇದರ ವಿಷಯ? ಯಾಕೆ ಹಾಗೆ ಕೂಗ್ದೆ?"

ಚಿತ್ರಾ ನಡುಗಿದಳು.

"ಅವು ನನಗೆ ಶರಚ್ಚಂದ್ರನ ಡೆಸ್ಕ್‌ನಲ್ಲಿ ಸಿಕ್ಕಿದ್ವು. ಅವನ ಶ್ರೀಮತಿಯೋರಿಗೆ ಹಿಂತಿರುಗಿಸೋದ್ರಲ್ಲಿ ಕಳುವಾಗಿ ಹೋದ್ವು."

"ಅವನ್ನೆಲ್ಲಾ ಓದಿರಬೇಕು."

ಕ್ಷಣ ಹಿಂಜರಿದ ಅವನತ್ತ ನೋಡದೆ ಹಲ್ಲು ಕಚ್ಚಿ ಉಸುರಿದಳು.

"ಇಲ್ಲ."

ಪಂಪಾಪತಿ ತಿರಸ್ಕಾರದಿಂದ ಘೂತ್ಕರಿಸಿದ.

"ಸುಳ್ಳು! ಪ್ರಣಯಪತ್ರಗಳನ್ನು ಒಂದು ಹೆಣ್ಣು ಓದದೆ ಇರೋದುಂಟೆ? ಅದರಲ್ಲೂ ಮದುವೆಯಾಗದ ಯುವತಿಗೆ ಅದರಿಂದ ಉತ್ಕರ್ಷ ಸಿಗಲೇಬೇಕು... ಸಂತೋಷ, ನಿನಗೆ ಈ ವಿಷಯ ಹೇಳಿದಳೇ ಈ ಹುಡುಗಿ?"

ಸಂತೋಷ ಆತುರದಿಂದ ಕೈ ಆಡಿಸಿದ.

"ಮಮ್ಮಿ ಹೇಳಿದ್ಲು... ನನ್ನ ಮಾತು ಕೇಳಿ. ಇವೆಲ್ಲಾ ನಡೆದಿದ್ದು ಬಹಳ ಹಿಂದೆ."

ಬುಸುಗುಟ್ಟಿದ ತಂದೆ.

"ಅದರಿಂದ ವ್ಯತ್ಯಾಸ ಏನಾಯ್ತು? ನಿನ್ನ ತಾಯಿಯ ಅಪ್ರಮಾಣಿಕತೆಯನ್ನು ಕಾಲ ಬದಲಾಯಿಸೋದಿಲ್ಲ."

ನಾಗರತ್ನಳ ಕೆನ್ನೆಗಳಿಗೆ ತುಸು ಬಣ್ಣ ಏರಿತು.

"ನಾನು ಮಾಡಿದ್ದನ್ನ ನನ್ನ ಮಗನ ಸಂಗಡ ಯಾಕೆ ಚರ್ಚೆ ಮಾಡ್ತೀರಿ? ಸಂತೋಷನ್ನ, ಚಿತ್ರಾನ ದಯವಿಟ್ಟು ಕಳಿಸಿಬಿಡಿ."

ಹಠವಾದಿಯ ತುಟಿ ಮತ್ತಷ್ಟು ತಿರಸ್ಕಾರದಲ್ಲಿ ಉಬ್ಬಿತು.

"ಅವರಿಬ್ಬರೂ ಇಲ್ಲೇ ನಿಂತಿರಲಿ. ಅವರಿಗೆ ಈಗಾಗ್ಲೇ ಎಷ್ಟೋ ಗೊತ್ತಿರುವಾಗ ಉಳಿದದ್ದೂ ಗೊತ್ತಾಗಲಿ. ಹೆಂಗಸು ಐಶ್ವರ್ಯದ ಆಸೆಗೆ ಮದುವೆ ಆದ್ರೆ ಪರಿಣಾಮ ಏನು ಅನ್ನೋದು ಈ ಹುಡುಗಿಗೆ ಪಾಠ ಆಗಲಿ."

"ನಾನು ಆಗ ಹೆಂಗಸಾಗಿರಲಿಲ್ಲ. ಚಿತ್ರಾಗಿಳಿಂತ ಚಿಕ್ಕೋಳು. ಹದಿನೆಂಟು ವರ್ಷದ ಹುಡುಗಿ ಆಗಿದ್ದೆ."

ಸೌಮ್ಯವಾಗಿ ನುಡಿದಳು.

"ಕ್ಷಮೆಗೆ ತಕ್ಕ ಮಾತಲ್ಲ. ನೀನು ಮೊದಲಿನಿಂದ ನನ್ನ ಪ್ರೀತಿಸಲಿಲ್ಲ."

"ನಿಮ್ಮ ಮೇಲೆ ನನಗೆ ಪ್ರೀತಿ ಇತ್ತು."

"ಪ್ರೀತಿ! ಅದನ್ನ ಯಾವನಿಗೊ ಮೀಸಲಿಟ್ಟು ನನ್ನೊಂದಿಗೆ ಪ್ರೀತಿಯ ನಾಟಕ ಆಡಿದೋಳು ನೀನು. ನಿನ್ನ ವರ್ತನೆ ತಿಳಿಯದೆ ಹತ್ತು ವರ್ಷ ಸಂಶಯದಲ್ಲಿ ಬೆಂದೆ. ಈಗ ಚರಿತ್ರೆ ಬೆಳಕಿಗೆ ಬಂತು."

ಅವಳು ಹಿಡಿದ ಪತ್ರಗಳ ಕಡೆ ಬೆರಳು ಮಾಡಿದ.

"ನನ್ನ ಪರವಾಗಿ ಏನೂ ಹೇಳೋದಿಲ್ಲ."

ನಮ್ರತೆಯನ್ನು ಉಳಿಸಿಕೊಂಡೇ ಹೇಳಿದಳು.

"ಹೇಳೋಕ್ಕೆ ಏನೂ ಉಳಿದಿಲ್ಲ. ನನಗೆ, ನನ್ನ ಮಗನಿಗೆ ವಂಚನೆ ಮಾಡಿದೀಯ. ತೊಲಗು! ಬದುಕಿಗೆ ಏನು ಗತಿ ಅಂತ ಚಿಂತೆಪಡಬೇಡ. ಒಂದು ಪ್ರಾಣಿಗೆ ಮಾಡುವ ಖರ್ಚಿನ ಹಣ ನಿನಗೆ ಕೊಡ್ತೀನಿ."

ಚಿತ್ರಾ ಬಾಯಿಗೆ ಕೈಹಚ್ಚಿ ಕೂಗು ತಡೆದಳು. ಸಂತೋಷ ತಾಯಿಯ ಪಕ್ಕಕ್ಕೆ ನಿಂತು ಗರ್ಜಿಸಿದ.

"ಸಾಕುಮಾಡಿ ಮಾತು! ಮತ್ತೆ ಮಮ್ಮಿನ ಬೈಯೋಕೆ ಬಿಡೋದಿಲ್ಲ. ಅವಳ ಜೊತೆಗೆ ನಾನೂ ಹೋಗ್ತೀನಿ."

"ಅವಳ ಜೊತೆಗೇ ಹೋಗು!" ಅಬ್ಬರಿಸಿದ.

ಮತ್ತೆ ಧ್ವನಿ ಅಡಗಿಸಿ ಚಿತ್ರಾ ಕಡೆ ಬೆರಳು ಹಿರಿದ.

"ಇವಳು ಕಂಡುಹಿಡಿದ ಈ ಪತ್ರಗಳಿಗೆ ಇಪ್ಪತ್ತು ಸಾವಿರ ತೆತ್ತೆ."

ನಿಮಿಷದ ಮೂಕ ಮೌನವನ್ನು ಸಂತೋಷ ಮುರಿದ.

"ಇಪ್ಪತ್ತು ಸಾವಿರ! ಯಾರಿಗೆ ಕೊಟ್ರಿ, ಡ್ಯಾಡಿ."

ಪಂಪಾಪತಿ ಏನೂ ಹೇಳದೆ ಸರಸರ ನಡೆದು ಕೋಣೆ ಬಾಗಿಲಲ್ಲಿ ನಿಂತ ಮಗ ಒಡನೆ ಹೇಳಿದ.

"ಡ್ಯಾಡಿ, ಆ ಪತ್ರಗಳಿಗೆ ಬ್ಲಾಕ್‌ಮೇಲರ್ ಹತ್ತು ಸಾವಿರ ಕೇಳಿದ್ದ. ಮತ್ತೆ ಅವನ ಕಡೆಯಿಂದ ಎರಡನೆ ಕರೆ ಬರ್ಲಿಲ್ಲ."

"ಅವನು ಅಲ್ಲ... ಬಹುಶಃ ಅವಳು ಇರ್ಬೇಕು. ಬದಲಾಯಿಸಿದ ಧ್ವನಿ...ಆ ಧ್ವನಿ ನಾನು ಕೇಳಿದ ನೆನಪು."

ಚಿತ್ರಾ ಅವನ ನೋಟಕ್ಕೆ ಸಿಕ್ಕಿದಳು.

"ನಾನಲ್ಲ!" ಒಂದೇ ಉಸಿರಿನಲ್ಲಿ ಒರಲಿದಳು ಚಿತ್ರಾ.

ಶ್ರೀಮಂತ ಮಗನತ್ತ ತಿರುಗಿದ.

"ಬ್ಲಾಕ್‌ಮೇಲರ್ ಹೇಳಿದ ಹಾಗೆ ಮಾಡ್ದೆ. ಇಪ್ಪತ್ತು ಸಾವಿರವನ್ನು ಎಲ್ಲಾ ಹತ್ತರ ನೋಟಗಳಲ್ಲಿ ಚರ್ಮದ ಚೀಲಕ್ಕೆ ಸೇರಿಸ್ದೆ. ಕಬ್ಬನ್ ಪಾರ್ಕ್ ಲೈಬ್ರರಿ ಪಕ್ಕದ ಮಾವಿನ ಮರಗಳ ಮಧ್ಯೆ ಬೆಂಚಿನ ಮೇಲಿಟ್ಟು ಹಿಂದಕ್ಕೆ ನೋಡದೆ ಚಿಲುಮೆ ಸರ್ಕಲ್ ದಿಕ್ಕಿಗೆ ನಡೆದೆ. ಲೈಬ್ರರಿ ಕಡೆಯಿಂದ ಕಾರು ಹೊರಟ ಶಬ್ದ ಕೇಳಿಸಿತು. ಎರಡು ನಿಮಿಷ ಕಳೆದ ಮೇಲೆ ಹಿಂದಿನ ಬೆಂಚಿಗೆ ಬಂದೆ. ಪತ್ರಗಳು ಅಲ್ಲಿದ್ವು."

ಚಿತ್ರಾಳ ಕೈಗಳನ್ನು ಸಮೀಪದಿಂದ ನೋಡಿದ ಪಂಪಾಪತಿ.

"ಖಂಡಿತ ನಾನಲ್ಲ, ಬಾಸ್."

ಅಳುಕಿನಲ್ಲಿ ನುಡಿದಳು.

"ನೀನಲ್ಲವಾದ್ರೆ ಅಳು ಯಾಕೆ? ಸರಿಯಾಗಿ ನಾಲ್ಕು ಗಂಟೆ ಹೊತ್ತಿಗೆ ಬ್ಲಾಕ್‌ಮೇಲರ್‌ನ ಪತ್ತೆ ಮಾಡ್ತೀನಿ."

ಕೈಗಡಿಯಾರ ನೋಡಿಕೊಂಡು ಹುಬ್ಬೇರಿಸಿದ.

"ಸಂತೋಷ, ನಾಲ್ಕು ಗಂಟೆಗೆ ಇವಳೊಂದಿಗೆ ಇರೋದಾದ್ರೆ ನಿನ್ನ, ಇವಳ ವೈವಾಹಿಕ ಭವಿಷ್ಯ ನಿರ್ಧಾರವಾಗುತ್ತೆ."

"ಇರ್‍ತೀನಿ."

ಏನೂ ಅರ್ಥವಾಗದೆ ಗಂಭೀರವಾಗಿ ಉತ್ತರಿಸಿದ ಸಂತೋಷ.

"ನಾಗರತ್ನ, ಆ ಪತ್ರಗಳನ್ನು ನೋಡಿ ಹಳೆಯದನ್ನು ನೆನಪಿಗೆ ತಂದುಕೊಳ್ತೀಯ?"

ಮಡದಿಗೆ ಚುಚ್ಚು ಮಾತು ಒಗೆದ.

"ಇದಕ್ಕೆ ಇಪ್ಪತ್ತು ಸಾವಿರ ಕೊಟ್ಟಿದ್ದು ವ್ಯರ್ಥ, ನೆಲ ನೋಡುತ್ತಾ ಹೇಳಿದಳು."

"ವ್ಯರ್ಥ ಅಲ್ಲ..."

ಗಹಗಹಿಸಿದ ಪಂಪಾಪತಿ. ಅರ್ಥ ಮಾಡಿಕೊಂಡ ಮಗ.

"ಡ್ಯಾಡಿ, ನೀವು ಅಷ್ಟು ಹಣ ಕೊಟ್ಟು ಅವನ್ನ ಪಡೆದಿದ್ದು ನಿಮಗೆ ಮಮ್ಮಿ ಮೇಲಿರೋ ಪ್ರೀತಿ ಎಷ್ಟೂಂತ ತಿಳಿಸುತ್ತೆ. ಅವಳ ರಕ್ಷಣೆಯೂ ಮುಖ್ಯ ಅಂತ ನಿಮಗೆ ಗೊತ್ತು."

"ನೀನೊಬ್ಬ ಸೆಂಟಿಮೆಂಟಲ್ ಫೂಲ್. ಆ ಪತ್ರಗಳನ್ನು ಪಡೆದಿದ್ದು ನನ್ನ ರಕ್ಷಣೆಗೋಸ್ಕರ. ಅವು ಪೊಲೀಸ್ ಕೈ ಸೇರಿದ್ರೆ ಶರಶ್ಚಂದ್ರನ ಮರಣದ ತನಿಖೆ ಪ್ರಾರಂಭ ಆಗತ್ತೆ. ನಾನು ನನ್ನ ಹೆಂಡತಿಯ ಪ್ರೇಮಿನ ಕೊಲೆ ಮಾಡ್ದೆ ಅನ್ನೋ

ಸಂಶಯ ಎದ್ದುಬರುತ್ತೆ."

"ನೀವು ಆ ಕೆಲಸ ಮಾಡಿದ್ರಾ?"

ಮಡದಿಯ ನೋವಿನ ಪ್ರಶ್ನೆ ಬಂತು.

"ನಾನು ಕೊಲೆ ಮಾಡ್ಲಿಲ್ಲ. ಆ ಕೆಲಸ ಚಿಟಿಕಿ ಹೊಡೆದಷ್ಟು ಸುಲಭವಾಗಿ ಮಾಡ್ತಿದ್ದೆ. ನಿನಗೂ ಅದೇ ಗತಿ ಕಾಣಿಸ್ತಿದ್ದೆ !... ನಿನ್ನ ಪ್ರೀತಿಸ್ದೆ. ಸಮಾಜದಲ್ಲಿ ದೊಡ್ಡ ಸ್ಥಾನಕ್ಕೆ ಏರಿಸ್ದೆ... ಆದರೆ ನೀನು..."

ಆಗರ್ಭ ಶ್ರೀಮಂತ ಕುರ್ಚಿಯಲ್ಲಿ ಭಾರವಾಗಿ ಕುಳಿತು ತಲೆಯನ್ನು ಬಿಗಿಯಾಗಿ ಹಿಡಿದ. ಮತ್ತೆ ತಲೆಎತ್ತಿ ಕೆಂಗಣ್ಣು ಬಿಟ್ಟು ಕೂಗಿದ.

"ಹೊರಟ್ಹೋಗಿ! ಗೆಟ್ ಔಟ್!!"

ಮೂವರು ಸದ್ದಿಲ್ಲದೆ ಹೊರಬಂದರು.

೯

ಸಂತೋಷನೊಂದಿಗೆ ಕಾರಿನಲ್ಲಿ ಹಿಂತಿರುಗುತ್ತಿದ್ದಾಗ ಚಿತ್ರಾ ತಲೆ ತಗ್ಗಿಸಿ ಮೆಲ್ಲನೆ ಮಾತು ತೆಗೆದಳು.

"ಇದರಲ್ಲಿ ನನ್ನದೇನಾದ್ರೂ ಪಾತ್ರ ಇದ್ದರೆ ಅದಕ್ಕೆ ವಿಷಾದಪಡ್ತೀನಿ. ಆ ಪತ್ರಗಳು ನನ್ನ ಕೈಗೆ ಸಿಗದೆ ಇದ್ದಿದ್ರೆ! ಅವುಗಳನ್ನು ಸುಟ್ಟುಹಾಕಬೇಕಾಗಿತ್ತು..."

"ನೀನು ಸುಡಲಿಲ್ಲ" ಗಡಸು ಪ್ರತಿಕ್ರಿಯೆ.

"ನೀವಿನ್ನೂ ನನ್ನ ಕ್ಷಮಿಸಿಲ್ಲ."

"ಮಧ್ಯಾಹ್ನ ನಾಲ್ಕು ಗಂಟೆ ಕಳೆಯೋತನಕ ಕ್ಷಮೆಯ ಮಾತಿಲ್ಲ."

"ತಂದೆಯ ಮಾತಿನಲ್ಲಿ ಮಾತ್ರ ನಿಮಗೆ ನಂಬಿಕೆ."

"ಇರಬಹುದು. ನಿನ್ನ ಧೈರ್ಯ ನೋಡಿ ನಿನ್ನ ಸ್ನೇಹಿತೆ ಅಪರಾಧಿನಿ ಅಂತ ತೋರುತ್ತೆ."

"ಬಾಸ್ ಅದರ ಪತ್ತೆ ಮಾಡ್ತೀನಿ ಅಂತ ಹೇಳಿದಾರೆ. ಅವರ ಮೇಲೂ ಕಾನೂನು ಸಂದೇಹ ಪಡಬಹುದು."

"ಡ್ಯಾಡಿಗೆ ಕೊಲೆ ಆಪಾದನೆಯ ಭಯ ಅಲ್ಲ. ಶರಚ್ಚಂದ್ರ ಆತ್ಮಹತ್ಯೆ ಮಾಡಿಕೊಂಡ ಸಮಯದಲ್ಲಿ ಅವರು ಬೋರ್ಡ್ ಮೀಟಿಂಗ್‌ನಲ್ಲಿ ಭಾಗವಹಿಸಿದ್ರು."

ಇಬ್ಬರೂ ಸುಮ್ಮನಾದರು. ಸ್ಟೋರ್‌ಗೆ ಹಿಂತಿರುಗುವ ಬದಲು ಕಾರು ಗುರಿ ಇಲ್ಲದೆ ಎಲ್ಲೆಲ್ಲಿಗೊ ಚಲಿಸುತ್ತಿತ್ತು. ನಾಲ್ಕು ಗಂಟೆಯವರೆಗೆ ಕಾರಿನ ಗತಿ ಹೀಗೆಯೇ ಎಂದು ತಿಳಿದಳು. ಕೋಪ ಬಂತು.

"ಇನ್ನೂ ನನ್ನ ಮೇಲೆ ಪ್ರೀತಿ ಉಳಿದಿದೆಯೆ?"

ಒಮ್ಮೆಗೇ ಕೇಳಿದಳು.

"ಅದಕ್ಕೆ ಉತ್ತರ ನಾಲ್ಕು ಗಂಟೆ ಮೇಲೆ."

ನಾಲ್ಕು ಗಂಟೆ! ಏನು ಕಾದಿದೆ ಆ ಹೊತ್ತಿಗೆ?

ರೋಸಿದಳು ಚಿತ್ರಾ. ಕಾರು ತಿರುಗಿಸಿ ವೇಗ ಹೆಚ್ಚಿಸಿದ.

"ನನ್ನ ಎಲ್ಲಿಗೆ ಒಯ್ತಾ ಇದೀರಿ?"

"ನಿನ್ನ ಕೋಣೆಗೆ."

ಎರಡು ಗಂಟೆ ದಾಟಿತ್ತು. ಇಬ್ಬರಿಗೂ ಊಟವಿಲ್ಲ. ಕಾರು ಇಳಿದು ಮೂರನೆ ಅಂತಸ್ತಿನ ಕೋಣೆಯ ಕಡೆ ಸಾಗಿದಾಗ ಅವಳಲ್ಲಿ ವಿಚಿತ್ರ ಉದ್ರೇಕ ಶರೀರಾದ್ಯಂತ ಹರಿದಾಡಿತು. ಅವಳ ಭುಜ ಹಿಡಿದು ನಡೆದ.

ಕೋಣೆಯ ಬಾಗಿಲು ತೆರೆಯುತ್ತಿದ್ದಂತೆ ಪಕ್ಕದ ಕೋಣೆ ಬಾಗಿಲು ತೆರೆಯಿತು. ಬಿಂದು ಹೊರಬಂದಳು!

"ಓ, ಚಿತ್ರಾ! ನನ್ನ ಹಳೆ ಕೋಣೆ ಇದೇ ತಾನೆ ಮತ್ತೆ ಪಡೆದೆ. ಈ ಹೊತ್ನಲ್ಲಿ ನೀನು ಕೋಣೆಗೆ ಬಂದಿರೋದು ಆಶ್ಚರ್ಯ."

ಮಾತಿನಲ್ಲಿ ಏರುಪೇರು ಇರಲಿಲ್ಲ. ಅದರ ಧಾಟಿಯಲ್ಲಿ ಎರಡು ವಾರಗಳ ಗೈರುಹಾಜರಿ ಎರಡು ತಾಸುಗಳಂತ್ತಿತ್ತು.

ಚಿತ್ರಾಗೆ ಉತ್ತರ ಹೊಳೆಯಲಿಲ್ಲ. ಸಂತೋಷನಂತೆಯೇ ಭಾವೋದ್ರೇಕಗಳಿಗೆ ಒಳಗಾದವಳು ಮತ್ತೆ ಎಚ್ಚರಗೊಂಡಳು.

ಅವನೇ ಉತ್ತರಿಸಿದ.

"ನೀವು ಬಂದಿರೋದು ಹೆಚ್ಚಿನ ಆಶ್ಚರ್ಯ, ಬಿಂದು ಚಿತ್ರಾಗೆ ಬಿಟ್ಟುಹೋದ ಚೀಟಿ ನೋಡಿದ್ರೆ ನೀವು ಮತ್ತೆ ಹಿಂತಿರುಗುವುದೇ ಇಲ್ಲಾಂತ ತಿಳಿದ್ವಿ."

"ಓ, ಅದು ಆತುರದಲ್ಲಿ ಬರೆದ ಚೀಟಿ... ಕ್ಷಮೆ ಕೇಳಲಿಕ್ಕೆ, ಕ್ಷಮಿಸೋದಿಕ್ಕೆ, ವಿಷಯ ಮರೆಯೋದಿಕ್ಕೆ ತೀರ್ಮಾನ ಮಾಡ್ಕೊಂಡಿದ್ದೀನಿ."

ಮೂವರೂ ಚಿತ್ರಾಳ ಕೋಣೆ ಪ್ರವೇಶಿಸಿದರು. ಸ್ನೇಹಿತ ಹಿಂತಿರುಗಿದ ಷಾಕ್ ಅವಳಲ್ಲಿ ಇನ್ನೂ ಉಳಿದಿತ್ತು.

"ಎಲ್ಲಿಗೆ ಹೋಗಿದ್ದೆ, ಬಿಂದು?"

ಚಿತ್ರಾ ಟವೆಲ್‌ನಿಂದ ಮುಖ ಒರೆಸಿಕೊಳ್ಳುತ್ತಾ ಕೇಳಿದಳು.

"ವಿರಾಮ ಬೇಕಿತ್ತು. ಅವತ್ತು ಮಾತಿಗೆ ಮಾತು ಬೆಳೆದಾಗ ಚೀಟಿ ಬರೆದು ಆತುರದಲ್ಲಿ ಹೊರಟುಬಿಟ್ಟೆ. ನಂಜನಗೂಡಿಗೆ ಹೋದೆ. ಚಿಕ್ಕಮ್ಮನ ಮನೇಲಿ ನೆಮ್ಮದಿ ಬದಲು ಬೇಸರವೇ ಹತ್ತಿಬಿಡ್ತು. ಆ ಗಲಾಟೆ ಹುಡುಗರು, ದನಗಳು, ಕೋಳಿಗಳು,

ರಾತ್ರಿಯೆಲ್ಲಾ ಬೊಗಳ್ತಾ ಇದ್ದ ನಾಯಿ ಎಲ್ಲಾ ನನ್ನ ಕೊಂದುಬಿಟ್ವು... ನಿನಗೆ ಈಗ ನನ್ನ ನೋಡಿ ಸಂತೋಷ ಆಗಲಿಲ್ವೆ?"

"ವಿಪರೀತ ಸಂತೋಷ ಆಗಿದೆ."

ಸಂತೋಷನ ತಿರಸ್ಕಾರದ ಗಡಸು ಮಾತು ಅವಳನ್ನು ಬೆದರಿಸಿತು.

"ಏನಾದ್ರೂ ತಪ್ಪಾಗಿದೆಯೇ ನನ್ನಿಂದ ?"

ಗೆಳತಿ ಚಿತ್ರಾಳ ಕೈಹಿಡಿದಳು, ಚಿತ್ರಾ ಎಚ್ಚರಿಕೆಯಿಂದ ಮಾತೆತ್ತಿದಳು.

"ಬಿಂದು, ನೀನು ಇಲ್ಲಿಂದ ಹೋಗುವಾಗ ಯಾವುದಾದ್ರು ನನ್ನ ವಸ್ತು ತೊಗೊಂಡು ಹೋದೆಯಾ?"

ಕಣ್ಣು ಒತ್ತಿಕೊಂಡಳು ಬಿಂದು.

"ಹೌದು, ತೊಗೊಂಡು ಹೋದೆ. ಊರಲ್ಲಿ ಪೆಟ್ಟಿಗೆ ತೆಗೆಯೋವರೆಗೆ ಅದು ನಿನ್ನದು ಅಂತ ಗೊತ್ತಾಗಲಿಲ್ಲ."

"ಸ್ವೆಟರ್ ಅಲ್ಲ... ಪತ್ರಗಳು."

ಸಂತೋಷ ಮಧ್ಯೆ ಹೇಳಿದ.

"ಪತ್ರಗಳು?" ತಬ್ಬಿಬ್ಬಾದಳು ಬಿಂದು.

"ನನ್ನ ತಾಯಿಯ ಪತ್ರಗಳು. ಚಿತ್ರಾಳ ಡ್ರಾನಿಂದ ಅದನ್ನು ಕದ್ದು ಬ್ಲಾಕ್‌ಮೇಲ್ ನಡೆಸಿ ನನ್ನ ತಂದೆಯಿಂದ ಇಪ್ಪತ್ತು ಸಾವಿರ ಕಿತ್ತರು. ನೀವು, ಚಿತ್ರಾ ಇಬ್ಬರಿಗೇ ಅವು ಗೊತ್ತಿದ್ದಿದ್ದು."

"ನನ್ನ ಮೇಲೆ ತಪ್ಪು ಹೊರಿಸ್ತೀರಾ?" ಕೋಪದಲ್ಲಿ ಕೇಳಿದಳು.

"ಚಿತ್ರಾ ಬ್ಲಾಕ್‌ಮೇಲರ್ ಅಲ್ಲಾಂತ ಭಾವಿಸಿದ್ದೀನಿ. ಆದ್ದರಿಂದ ನೀವೇ ತಪ್ಪಿತಸ್ಥೆ ಆಗಿರಬೇಕು."

"ಮಿಸ್ಟರ್ ಸಂತೋಷ್!" ಮುಷ್ಟಿ ಬಿಗಿಸಿದಳು.

"ಕೂಗ್ಬೇಡಿ. ಚಿತ್ರಾ ಕೂಡ ನೀವೇ ಬ್ಲಾಕ್‌ಮೇಲರ್ ಅಂತ ನಿರ್ಧರಿಸಿದಾಳೆ."

"ಹೌದೇನು, ಚಿತ್ರಾ?" ಬೆರಗಾಗಿ ಕೇಳಿದಳು.

ಚಿತ್ರಾ ಮೌನವಾಗಿ, ಮ್ಲಾನವದನಳಾಗಿ ಕುಳಿತಾಗ ಬಿಂದು ಅಚ್ಚರಿಯ ಪರಮಾವಧಿಗೆ ಬಂದಳು.

"ನಿಜವಾಗಿ ನಿರ್ಧಾರಕ್ಕೆ ಬಂದೆಯಾ?"

ನೋವಿನಲ್ಲಿ ಕೇಳಿದಳು ಗೆಳತಿ, ಚಿತ್ರಾ ತಲೆ ಎತ್ತಿದಳು.

"ಬಿಂದು, ನಿರ್ಧಾರಕ್ಕೆ ಬರಬಾರದೂಂತ ಇದ್ದೆ. ಬರಲೇಬೇಕಾಯ್ತು.

ಪ್ರತಿಯೊಂದೂ ನಿನ್ನ ಕಡೆಗೇ ಬೆರಳು ಮಾಡಿವೆ. ಪತ್ರಗಳು, ನೀನು ಒಂದೇ ಕಾಲಕ್ಕೆ ಮಾಯವಾಗಿದ್ದು."

ಬಿಂದು ಸರಸರ ಬಾಗಿಲಿಗೆ ನಡೆದಳು.

"ಆಗ ಆತುರದಲ್ಲಿ ನಿನ್ನಿಂದ ಬೇರೆಯಾಗಿದ್ದೆ. ಈಗ ಶಾಶ್ವತವಾಗಿ ಬೇರೆ ಆಗ್ತೀನಿ."

ಸಂತೋಷ ಕೈಚಾಚಿ ಅವಳನ್ನು ತಡೆದ.

"ಬಿಂದು, ನಾಲ್ಕು ಗಂಟೆಯವರೆಗೆ ನೀವು ಇಲ್ಲಿಂದ ಹೊರಡೋಹಾಗಿಲ್ಲ."

"ನನಗೆ ಅಡ್ಡ ಬರಬೇಡ, ನೀಚ ಶ್ರೀಮಂತ!"

ಅಬ್ಬರಿಸಿದಳು. ಸಂತೋಷ ಅವಾಕ್ಕಾಗಿ ಬಾಯಿ ತೆರೆದು ನಿಂತ, ಏಕವಚನ ಸಂಬೋಧನೆ ಅವನನ್ನು ಅಪ್ಪಳಿಸಿತು. ಆದರೂ ತಾಳ್ಮೆಗೆಡಲಿಲ್ಲ.

ಹಗರಣ ತಪ್ಪಿಸಲು ಚಿತ್ರಾ ಅಡ್ಡ ಬಂದಳು.

"ಬಿಂದು, ಅವರ ಮೇಲಿನ ಗೌರವ ಯಾಕೆ ಒಂದೇ ಸಾರಿಗೆ ಇಳಿಸಿಬಿಟ್ಟೆ?"

"ಕ್ಷಮಿಸು, ಚಿತ್ರಾ...ಕ್ಷಮಿಸಿ, ಸಂತೋಷ. ಆಶ್ರಯ ಕೊಟ್ಟೋರಿಗೆ ಅಗೌರವ ತೋರಿಸಿ ಮಹಾ ತಪ್ಪು ಮಾಡ್ದೆ."

ಚಿತ್ರಾ ಗಂಭೀರವಾಗಿ ಬೇಡಿದಳು.

"ದಯವಿಟ್ಟು ಅವರು ಹೇಳಿದ ಹಾಗೆ ಮಾಡು. ನಾಲ್ಕು ಗಂಟೆ ಆಗುತ್ಲೇ ಹೊರಟುಬಿಡು."

"ನಾಲ್ಕು ಗಂಟೆಯ ವಿಶೇಷ ಏನದು?"

"ಅದು ಹಿರಿಯ ಬಾಸ್ ಒಬ್ಬರಿಗೇ ಗೊತ್ತು."

ಬಿಂದುವಿನ ಮುಖದಲ್ಲಿ ನಿಧಾನವಾಗಿ ಭಯ ಹತ್ತಿಬಂತು. ಕುರ್ಚಿಯಲ್ಲಿ ಮೆಲ್ಲನೆ ಕುಳಿತಳು.

"ನನ್ನ ಬಲವಂತವಾಗಿ ಕೂಡಿಸಿದ್ರೂ ನಿಮಗೆ ಪ್ರಯೋಜನ ಆಗೋದಿಲ್ಲ."

ಸಂತೋಷನೂ ಕುರ್ಚಿಯಲ್ಲಿ ಅವಳ ಮುಂದೆ ಕುಳಿತ.

"ಐದು ಮಂದಿಯ ಬದುಕು ಈ ವಿಷಯದ ಮೇಲೆ ನಿಂತಿರೋವಾಗ ಬಲವಂತವಾಗಿ ಕೂಡಿಸಬೇಕಾಗಿದೆ."

ಮೂರು ಗಂಟೆಯ ಹೊತ್ತಿಗೆ ಚಿತ್ರಾಗೆ ತಾಳ್ಮೆ ಕೆಟ್ಟಿತ್ತು.

"ನನ್ನ ತಲೆಯಲ್ಲಿ ಸಂಶಯ ಕುಟುಕ್ತಾ ಇದೆ, ಸಂತೋಷ. ಈ ಬ್ಲಾಕ್‌ಮೇಲ್ ಬಹುಶಃ ನಿಮ್ಮ ತಂದೆಯ ನಾಟಕ ಆಗಿರಬಹುದೆ? ನಮ್ಮಿಬ್ಬರನ್ನೇ ಇಲ್ಲಿ ಯಾಕೆ ಬಂಧಿಸಿದ್ದೀರಿ? ನಿಮ್ಮ ತಂದೆ, ತಾಯೀನ ಇಲ್ಲಿಗೆ ಕರೆಸಿ, ಅವರನ್ನು ನಾನು ಪ್ರಶ್ನೆ ಮಾಡೊ ಕಾಲ, ಧೈರ್ಯ ಬಂದಿದೆ."

"ಕರೆಸ್ತೀನಿ."

ಎಂದು ಕೈಗಡಿಯಾರ ನೋಡಿದ.

## ೧೦

ಮೂರೂವರೆಯ ಹೊತ್ತಿಗೆ ಕಟ್ಟಡದ ಮುಂದೆ ಕಾರು ನಿಂತಿತು. ನೀಲಂಕಾರ್ ಸಂಸ್ಥೆಯ ಪತ್ತೇದಾರ ಚೆರಿಯನ್ ಕಾಣಿಸಿದ. ಅವನ ಹಿಂದೆ ಸ್ಟೋರ್ ವಿಭಾಗದ ಮುಖ್ಯಸ್ಥ ಥಾಮಸ್ ನಡೆದು ಬಂದ.

"ಇನ್ನು ಹದಿನೈದು ನಿಮಿಷದಲ್ಲಿ ಬಾಸ್ ಬರ್ತಾರೆ. ಅವರ ಸಹಾಯಕ್ಕೆ ನಾನು ಬಂದಿದೀನಿ."

ಎನ್ನುತ್ತಾ ಚೆರಿಯನ್ ಮೇಜು ಒರಗಿ ನಿಂತ.

ಚಿತ್ರಾ ತಿರಸ್ಕಾರದಲ್ಲಿ ಸಂತೋಷನನ್ನು ನೋಡಿದಳು.

"ಇದು ಪತ್ತೆ ಮಾಡೋ ರೀತಿ ಅಲ್ಲ. ಇದು ಸಂಚು... ಬಹಿರಂಗ ಅಪಮಾನ! ಒಂದು ಸಂಸ್ಥೆಯೋರು ಒಟ್ಟಾಗಿ ಸೇರಿ ಒಬ್ಬ ಬಡಪಾಯಿ ಹೆಣ್ಣನ್ನು ಹಿಡಿದು ಆರೋಪ ಹೊರಿಸೋ ಪಿತೂರಿ ! ಆ ದಿನ ಚೆರಿಯನ್‌ನ ನೀವು ಕಳಿಸಿದ್ರಿ. ಈ ದಿನ ನಿಮ್ಮ ತಂದೆ ಕಳಿಸಿದಾರೆ. ಅವರ ಸಹಾಯಕ್ಕೆ ಥಾಮಸ್. ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ!

ಸಂತೋಷ ಅವಳ ಕಡೆ ಕೈ ಎತ್ತಿದ.

"ಡ್ಯಾಡಿ ಮನಸ್ಸಿನಲ್ಲೇನಿದೆ ಅನ್ನೋದು ನನಗೆ ಗೊತ್ತಿಲ್ಲ. ಅವರೇ ಬರಲಿ."

ನಾಲ್ಕು ಗಂಟೆಗೆ ಹತ್ತು ನಿಮಿಷ ಉಳಿದಿದ್ದಾಗ ಪಂಪಾಪತಿ ತನ್ನ ಮಡದಿಯೊಂದಿಗೆ ಮೆಟ್ಟಿಲು ಏರಿ ಠೀವಿಯಿಂದ ಬಂದ. ಐವರೂ ಎದ್ದು ಗೌರವ ತೋರಿದರು.

"ನಾನು ನನ್ನ ಶ್ರೀಮತಿ ನಿನ್ನಲ್ಲಿಗೆ ಬರೊ ಆಗಿದ್ದು ನಿನ್ನ ಅದೃಷ್ಟಕ್ಕೆ ದಾರಿ ಆಗಿರಬಹುದು..."

ಚುಟ್ಟಾ ತೆಗೆದು ಹದ್ದು ಕಣ್ಣುಗಳನ್ನು ವಿಶಾಲಗೊಳಿಸಿದ.

"ಅಥವಾ ಅದು ನಿನಗೆ ನೇಣುಗಂಬವನ್ನೇ ತೋರಿಸಬಹುದು."

ನಾಗರತ್ನ ಪತಿಯ ಮಾತಿಗೆ ಪೂರೈಕೆ ಕೊಟ್ಟಳು.

ಬಾಸ್ ಕುಳಿತ. ಉಳಿದವರು ವಿಶಾಲವಾದ ಎರಡು ಕೋಣೆಗಳಲ್ಲಿ ಮೌನವಾಗಿ ನಿಂತರು. ಗಡಿಯಾರ ನಾಲ್ಕು ಗಂಟೆ ತೋರುತ್ತಲೇ ಬಾಸ್ ಗೊಣಗುತ್ತಾ ಎದ್ದು ಹೆಂಡತಿಯ ಹಸ್ತಗಳನ್ನು ತೆರೆದು ನೋಡಿದ. ಉಳಿದವರೆಲ್ಲರೂ ಚಕಿತರಾದರೂ ಅರ್ಥವಾಗದೆ ತೆರೆದ ಹಸ್ತಗಳನ್ನು ಚಾಚಿದರು.

"ನೀನು ಬ್ಲಾಕ್‌ಮೇಲರ್ ಅಲ್ಲ... ನೀನು ಅಲ್ಲ..."

ಚಿತ್ರಾ ಹಾಗೂ ಬಿಂದುವಿಗೆ ನಿರಾಶೆಯಿಂದ ಹೇಳಿದ ಪಂಪಾಪತಿ ಹದ್ದು

ಕಣ್ಣುಗಳನ್ನು ಮುಂದಕ್ಕೆ ಸರಿಸಿದ. ಸ್ವಚ್ಛವಾದ ಹಸ್ತಗಳನ್ನು ನೋಡುತ್ತಾ ಬಂದವನು ಊದುಬಣ್ಣದ ಗುರುತು ಹತ್ತಿದ ಬೆರಳುಗಳನ್ನು ಫಕ್ಕನೆ ಹಿಡಿದು ಉದ್ಗರಿಸಿದ.

"ಚೆರಿಯನ್, ನೀನೇ ಬ್ಲಾಕ್‌ಮೇಲರ್!"

ಚೆರಿಯನ್ ತನ್ನ ಕೈಗಳನ್ನು ಹಿಂದಕ್ಕೆ ತೆಗೆದುಕೊಂಡು ತಲೆ ಆಡಿಸುತ್ತಾ ಗಾಬರಿಯಿಂದ ಗೋಡೆ ಒರಗಿದ.

ಪಂಪಾಪತಿ ಆಣತಿ ಕೊಟ್ಟ.

"ಈ ಕೆಟ್ಟ ಪತ್ತೇದಾರನನ್ನು ತಪ್ಪಿಸಿಕೊಳ್ಳದ ಹಾಗೆ ಹಿಡಿದಿಡಿ!"

ಸಂತೋಷ ಥಾಮಸ್ ಸಹಾಯದಿಂದ ಚೆರಿಯನ್ ಕೈಗಳನ್ನು ಟವಲ್‌ನಿಂದ ಕಟ್ಟಿದ.

"ಚೆರಿಯನ್ ನಿಮ್ಮ ವಿಶ್ವಾಸದ ಪತ್ತೇದಾರ ಅಲ್ಲವೇ?" ಸೊಲ್ಲಡಗಿದವರ ಮಧ್ಯದಿಂದ ನಾಗರತ್ನ ಕೇಳಿದಳು.

"ವಿಶ್ವಾಸಿ ಅಂತ ಭಾವಿಸಿ ಇಲ್ಲಿರೋ ಮೂವರು ಹೆಣ್ಣುಗಳನ್ನೂ ಗಮನಿಸಲಿಕ್ಕೆ ಹೇಳಿದ್ದೆ. ಆದರೆ ಆದದ್ದು ಅನಾಹುತ. ತಪ್ಪು ಅಭಿಪ್ರಾಯಗಳ ಗೊಂದಲ."

"ಹಸ್ತದ ಬಣ್ಣದ ರಹಸ್ಯವೇನು, ಬಾಸ್?"

ಅಚ್ಚರಿಯಿಂದ ಮುಕ್ತಳಾಗದೆ ಚಿತ್ರಾ ಕೇಳಿದಳು.

"ಅದೊಂದು ವಿಶೇಷ ರೀತಿಯ ಪುಡಿ. ನಾನು ಒಯ್ದ ಇಪ್ಪತ್ತು ಸಾವಿರದ ನೋಟುಗಳಿಗೆ ಅದನ್ನ ಪೋಲೀಸರಿಂದ ಹಚ್ಚಿಸಿದ್ದೆ. ಯಾರು ಅವನ್ನ ಮುಟ್ಟಿದರೂ ಐದು ತಾಸುಗಳಲ್ಲಿ ಕೈ ಬೆರಳುಗಳು ಊದುಬಣ್ಣಕ್ಕೆ ತಿರುಗಬೇಕು! ಎಷ್ಟು ತೊಳೆದರೂ ಒಂದು ವಾರ ಕಾಲ ಸವೆಯದ ಬಣ್ಣ ಅದು. ಹಣ ಎತ್ತಿದ ಬ್ಲಾಕ್‌ಮೇಲರ್ ನಾಲ್ಕು ಗಂಟೆ ಹೊತ್ತಿಗೆ ಬಣ್ಣ ಹತ್ತಿದ ಕೈ ಹೊಂದಿರಬೇಕಿತ್ತು. ಈಗ ಹೊಂದಿದಾನೆ... ಚೆರಿಯನ್, ನಿನ್ನ ವಿಶ್ವಾಸಕ್ಕೆ ತೊಗೊಂಡಿದ್ದೆ. ನೀನು ಆಗಾಗ್ಗೆ ಥಾಮಸ್ ವಿರುದ್ಧ ಹೇಳಿ ನನ್ನ ತಲೆ ಕೆಡಿಸಿದ್ದೆ. ಈಗ ಒಂದು ಕೆಲಸ ಮಾಡಬೇಕಾಗಿದೆ ನೀನು..."

ಪಂಪಾಪತಿ ತನ್ನ ಮಗನ ಕಿವಿಯಲ್ಲಿ ಏನೋ ಸೂಚನೆ ಕೊಟ್ಟ. ಸಂತೋಷ ಚೆರಿಯನ್ ತೋಳು ಹಿಡಿದು ಕೋಣೆಯಿಂದ ಹೊರಕ್ಕೆ ಸಾಗಿದ. ಹದಿನೈದು ನಿಮಿಷಗಳಲ್ಲಿ ಇಬ್ಬರೂ ಹಿಂತಿರುಗಿದರು.

ಮತ್ತೆ ಹದಿನೈದು ನಿಮಿಷ ಕಳೆಯುತ್ತಲೇ ಬಾಗಿಲು ಒಳಕ್ಕೆ ಸರಿಯಿತು. ಜ್ಯೋತಿ ಬಂದಿದ್ದಳು. ಚಿತ್ರಾಳ ಜೋಡಿ ಕೋಣೆಯಲ್ಲಿ ಸಮುದಾಯವನ್ನು ಅನಿರೀಕ್ಷಿತವಾಗಿ ಕಂಡು ಅಚಲಳಾಗಿ ನಿಂತವಳು ಬಂಧಿಸಿದ ಚೆರಿಯನ್‌ನ ಕಡೆ ದೃಷ್ಟಿ ಹರಿಸಿ ಎರಡೂ ಕೈ ಬಾಯಿಗೆ ಹಚ್ಚಿದಳು. ಅವುಗಳೆರಡೂ ಊದು ಬಣ್ಣದ ಮಚ್ಚೆಗಳಿಂದ ತುಂಬಿದ್ದವು!.

ಹೊಸ ಚುಟ್ಟಾ ಏರಿಸಿದ ಪಂಪಾಪತಿ ಜ್ಯೋತಿಯನ್ನು ತೋಳು ಹಿಡಿದು

ಗಹಗಹಿಸಿದ.

"ಬ್ಲಾಕ್‌ಮೇಲರ್ ಒಂದು ವ್ಯಕ್ತಿ ಅಲ್ಲ... ಒಂದು ಜೊತೆ! ಒಂದು ಗಂಡು, ಒಂದು ಹೆಣ್ಣು!"

"ಇಲ್ಲ, ಬಾಸ್...ಜ್ಯೋತಿಯೇ ಎಲ್ಲಕ್ಕೂ ಕಾರಣ. ನಾನು ಕೇವಲ ಅವಳ ಸಹಾಯಕ..." ಅರಚಿದ ಚೆರಿಯನ್.

"ನಿನ್ನ ಪ್ರಿಯತಮೆಯ ಅಪರಾಧದಲ್ಲಿ ನಿನಗೆ ಅರ್ಧಪಾಲು, ಚೆರಿಯನ್"

"ನನ್ನ ಬಿಟ್ಟುಬಿಡಿ... ಪ್ಲೀಸ್."

ಚೆರಿಯನ್ ತನ್ನ ಪ್ರಿಯತಮೆ ಜ್ಯೋತಿಯನ್ನು ನುಂಗುವಂತೆ ನೋಡಿದ. ಅವನು ಕೊಟ್ಟ ವಿವರವನ್ನು ಮೌನವಾಗಿ ಕೇಳಿದರು.

ಜ್ಯೋತಿ ಮೊದಲಿನಿಂದ ಚೆರಿಯನ್‌ನ ಪ್ರೇಯಸಿ! ಸಂತೋಷನನ್ನು ಆಕರ್ಷಿಸಿದಳು. ಅವನ ಮೇಲೆ ಪ್ರೇಮವಿರಲಿಲ್ಲ. ನೀಲಂಕಾರ್ ಮನೆತನದ ಐಶ್ವರ್ಯಕ್ಕೆ ಒಡತಿಯಾಗಲು ಚೆರಿಯನ್‌ನೊಂದಿಗೆ ಹುನ್ನಾರು ನಡೆಸಿದಳು. ಮಗನೊಂದಿಗೆ ನಿಶ್ಚಿತಾರ್ಥ ನಡೆದ ಮೇಲೆ ಪಂಪಾಪತಿಗೆ ಜ್ಯೋತಿ ಚರಿತ್ರೆಹೀನೆ ಎಂಬುದು ಸ್ಪಷ್ಟವಾಯಿತು. ವಿವಾಹ ನಿಂತುಹೋಯಿತು. ನೀಲಂಕಾರರ ಮೇಲೆ ಸೇಡು ತೀರಿಸಲು ಕಾದು ನಿಂತಳು. ಚಿತ್ರಾ ಸಂತೋಷನ ಪ್ರೇಯಸಿಯಾಗುತ್ತಲೇ ಸಂಚು ಪ್ರಾರಂಭ. ಚಿತ್ರಾಳ ಪ್ರೇಮ ವಿವಾಹದ ಹಂತಕ್ಕೆ ಬರುವುದು ತಿಳಿಯುತ್ತಲೇ ಹೆಣ್ಣಿನ ಈರ್ಷ್ಯೆ ಉಕ್ಕಿತು. ಚಿತ್ರಾ ಆಟದ ದಾಳವಾದಳು. ನೀಲಂಕಾರ್ ದಂಪತಿಗಳ ಸ್ವಭಾವ ಅರ್ಥಮಾಡಿಕೊಳ್ಳದೆ ಗೆಳತಿ ಬಿಂದು ಶ್ರೀಮಂತ ಜೋಡಿಯನ್ನು ತೆಗಳಿದಳು. ಜ್ಯೋತಿಗೆ ಚೆರಿಯನ್ ಬೆಂಬಲ. ಅಂದು ವ್ಯಾಪಾರಕ್ಕೆ ಬಂದ ಹೆಂಗಸಿನ ಚೀಲದಿಂದ ನೂರರ ನೋಟನ್ನು ತೆಗೆದು ಚಿತ್ರಾಳ ಕೈ ಚೀಲಕ್ಕೆ ಸೇರಿಸಿದವನು ಚೆರಿಯನ್. ಮತ್ತೆ ಅವನ ಕೈವಾಡದಿಂದಲೇ ವನಿತಾ ಮಾರ್ಕೆಟ್‌ನಲ್ಲಿ ಕರವಸ್ತ್ರಗಳು ಚಿತ್ರಾಳ ಷಾಪಿಂಗ್ ಚೀಲದಲ್ಲಿ ಸೇರಿದ್ದು. ಸಂಚುಗಳೆಲ್ಲವೂ ನೀಲಂಕಾರ್ ದಂಪತಿಗಳು ನಡೆಸಿದಂತೆ ಕಂಡವು. ಸಂತೋಷನ ಅತಿ ತಾಳ್ಮೆ ನಾಟಕೀಯವಾಗಿ ಕಂಡದ್ದು ಸಹಜ. ಗೆಳತಿಯರಿಬ್ಬರೂ ಹುದ್ದೆಯಿಂದ ವಜಾ ಆದುದಕ್ಕೆ ಪಂಪಾಪತಿಯ ತತ್ವನಿಷ್ಠೆ ಕಾರಣ.

ಸಂತೋಷ ಪ್ರೇಯಸಿಯ ಭೀತಿ, ಸಂಶಯ, ಅನಿಶ್ಚಿತ ಮನೋಭಾವ ಗಮನಿಸಿ ಅವಳಿಗೆ ಮಿದುಳು ಬೇನೆಯೆಂದು ತಿಳಿದ. ಮೂರನೆ ಸಂಚಿನಲ್ಲಿ ಕ್ಯಾಮರಾ ಎತ್ತಿದಾಗ ಜ್ಯೋತಿ ವಿಫಲಳಾದಳು. ಜಯಂತನ ಸಹಾಯದಿಂದ ಚಿತ್ರಾಗೆ ಆರೋಪಣೆ ತಪ್ಪಿತು. ಆಗ ಚಿತ್ರಾಗೆ ಜಯಂತನ ಮೇಲೆಯೂ ಶಂಕೆ! ಧ್ವನಿ ಬದಲಿಸಿ ಫೋನ್‌ನಲ್ಲಿ ಮಾತನಾಡುವುದರಲ್ಲಿ ಜ್ಯೋತಿ ನಿಷ್ಣಾತೆ. ನಾಗರತ್ನ ಶರಚ್ಚಂದ್ರನಿಗೆ ಬರೆದ ಪ್ರಣಯ ಪತ್ರಗಳು ಎಲ್ಲರಿಗೂ ಅನಿರೀಕ್ಷಿತ. ಚೆರಿಯನ್ ಅಂದು ರಾತ್ರಿ ಚಿತ್ರಾಗೆ ಗೆಳತಿಯ ಬಗ್ಗೆ ತಲೆ ಕೆಡಿಸಲು ಬಂದ. ಚಿತ್ರಾಳ ಡ್ರಾನಲ್ಲಿದ್ದ ಪ್ರಣಯದ ಪತ್ರಗಳನ್ನು ಒಯ್ದು. ಬದಲಿ

ಕೀಲಿ ಕೈ ಅವನಲ್ಲಿತ್ತು. ಜ್ಯೋತಿಗೆ ನೀಲಂಕಾರ್ ವಂಶದ ಮೇಲೆ ಕಪ್ಪು ಹಚ್ಚಲು ಸೊಗಸಾದ ಅವಕಾಶ! ಅವಳಿಂದ ಹತ್ತು ಸಾವಿರಕ್ಕೆ ಬ್ಲಾಕ್‌ಮೇಲ್. ಚೆರಿಯನ್‌ನ ದುರಾಶೆ ಇಪ್ಪತ್ತು ಸಾವಿರಕ್ಕೆ ಏರಿತು. ಪರಿಸ್ಥಿತಿ ಬಿಂದುವನ್ನು ಸಂಶಯಿಯಾಗಿ ಮಾಡಿತು. ಪಂಪಾಪತಿ ಬ್ಲಾಕ್‌ಮೇಲರ್ ಜೋಡಿಯನ್ನು ಹಿಡಿದ.

ಚೆರಿಯನ್ ಹೇಳಿದ ಕಥೆಯನ್ನು ಸೊಲ್ಲಡಗಿ ಕೇಳಿದರು. ಜ್ಯೋತಿ ತಲೆ ತಗ್ಗಿಸಿ ನಿಂತಿದ್ದಳು.

ಬಿಂದು ಗೆಳತಿಯ ಕಿವಿಯಲ್ಲಿ ನುಡಿದಳು.

"ನನಗೆ ಜ್ಯೋತಿಯ ಸ್ನೇಹ ಹಿಡಿಸಿರಲಿಲ್ಲ. ಅವಳನ್ನು ಕುರಿತೇ ನಾನು ಪತ್ರದಲ್ಲಿ ಮುಚ್ಚುಮನಸ್ಸು, ಮೋಸಗಾರರು ಅನ್ನೋ ಪದಗಳನ್ನು ಬಳಸಿದ್ದು."

ಸಂತೋಷ ಏನೋ ಹೇಳಲು ತಿರುಗಿದ. ಸನ್ನಿವೇಶದ ಲಾಭ ಪಡೆದು ಜ್ಯೋತಿ ಏಕಾಏಕಿ ಮಿಂಚಿನ ವೇಗದಲ್ಲಿ ಬಾಗಿಲು ತೆರೆದು ಧಾವಿಸಿದಳು. ಥಾಮಸ್ ಅಷ್ಟೇ ವೇಗದಲ್ಲಿ ಅವಳ ಹಿಂದೆಯೇ ಹಾರಿ ಮೆಟ್ಟಿಲುಗಳ ಮೇಲೆ ಹಿಡಿದ. ರಕ್ತ ತೊಟ್ಟಿಕ್ಕುವಂತೆ ಬಲವಾಗಿ ಅವನ ಕೈ ಕಚ್ಚಿದಳು. ಮೂವರೂ ಒಟ್ಟಾಗಿ ಸಿಂಹಿಣಿಯನ್ನು ಹಿಡಿದು ಬಿಂದುವಿನ ಕೋಣೆಗೆ ಸೇರಿಸಿ ಬೀಗ ಹಾಕಿದರು.

ಸಂತೋಷ ಪೊಲೀಸರಿಗೆ ಫೋನ್ ಮಾಡಲು ಇಳಿಯುವ ಮೊದಲೇ ಪೊಲೀಸರು ಆಗಮಿಸಿದರು. ಕೋಣೆಯ ಬಾಗಿಲು ತೆರೆದರು. ಜ್ಯೋತಿ ಕಾಣೆಯಾಗಿದ್ದಳು.

ಸ್ನಾನದ ಕೋಣೆಯ ವೆಂಟಿಲೇಟರ್ ತೆರೆದಿತ್ತು. ನಾಗಿಣಿ ಅದರಿಂದ ಹೊರಳಿ ಹೋಗಿದ್ದಳು.

ಕೆಳಗಿನ ರಸ್ತೆಯಿಂದ ಗಲಭೆ ಕೇಳಿಸಿತು. ಎಲ್ಲರೂ ಇಳಿದು ಬಂದರು. ನೆರೆದಿದ್ದ ಜನಸಮೂಹ ಮೂರನೆ ಅಂತಸ್ತಿನಿಂದ ಮಳೆ ನೀರು ಕೊಳವೆ ಹಿಡಿದು ವಿಧಾನವಾಗಿ ಜಾರುತ್ತಿದ್ದ ವ್ಯಕ್ತಿಯ ಕಡೆಗೆ ಕುತೂಹಲದಿಂದ ನೋಡುತ್ತಿತ್ತು.

ಜಾರಿ ಇಳಿಯುತ್ತಿದ್ದವಳು ಜ್ಯೋತಿ!

"ಅಷ್ಟು ಸಣ್ಣ ವೆಂಟಿಲೇಟರಿನಿಂದ ಹಾವಿನಂತೆ ನುಸುಳಿ ಹೋಗ್ತಾಳೇಂತ ತಿಳಿದಿರಲಿಲ್ಲ."

ಸಂತೋಷ ಹೆಣ್ಣಿನ ಸಾಹಸಕ್ಕೆ ಅಚ್ಚರಿ, ಮೆಚ್ಚುಗೆ ಸೂಚಿಸಿದ.

"ಹಾಂ!" ಸಾಮೂಹಿಕವಾಗಿ ಉದ್ಗರಿಸಿತು ಜನಸ್ತೋಮ.

ಕಿತ್ತುಬಂದ ಸಿಮೆಂಟ್ ಕೊಳವೆಯೊಂದಿಗೆ ಜ್ಯೋತಿ ಧೊಪ್ಪನೆ ನೆಲಕ್ಕೆ ಅಪ್ಪಳಿಸಿದ್ದಳು.

ಚಿತ್ರಾಗೆ ಅವಳ ಚೀತ್ಕಾರ ಕೇಳಿತ್ತು. ಗುಂಪು ನಾಲ್ಕು ಕಡೆಯಿಂದ ಮುತ್ತಿತು. ಸಂತೋಷ ಅವಚಿದ ದೇಹದ ಮುಂದೆ ಮೊಣಕಾಲೂರಿ ಕುಳಿತ.

ಜ್ಯೋತಿ ಉಸುರಿದಳು.

"ಕ್ಷಮಿಸಿ, ಸಂತೋಷ..."

ಎರಡು ಪದಗಳಲ್ಲಿ ಅವಳ ತಪ್ಪೊಪ್ಪಿಗೆ. ಪಶ್ಚಾತ್ತಾಪ ನಿರೂಪಿತವಾಗಿತ್ತು.

ಚೆಲುವಿನ ಮುಖ ಪಕ್ಕಕ್ಕೆ ಹೊರಳಿತು. ಚಿತ್ರಾಳ ಭೀತಿಯ ನೆರಳಾಗಿ ಕಾಡಿದವಳು ಆಕಾರ ತಳೆದು ನಿಶ್ಚಲವಾಗಿದ್ದಳು. ಊದುಬಣ್ಣ ಹತ್ತಿದ್ದ ಮೃತಳ ಹಸ್ತಗಳನ್ನು ನೋಡುತ್ತಾ ಚಿತ್ರಾಳ ನಕ್ಷತ್ರ ಕಣ್ಣುಗಳು ತುಂಬಿ ಬಂದವು.

ಸಂತೋಷ ಆತ್ಮೀಯವಾಗಿ ಅವಳ ಕೈ ತಟ್ಟಿದ.

* * *